ನೋಂದಣಿ ಸಂಖ್ಯೆ: KRSBKS-00483

ಡಾ. ಸೋಮನಾಥ ಯಾಳವಾರ ಅವರ ಬದುಕು-ಬರಹ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ
ಎಂ.ಫಿಲ್. ಅಂತಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು
ಸುನೀಲಕುಮಾರ ರೇವಣಸಿದ್ದಪ್ಪಾ

ಮಾರ್ಗದರ್ಶಕರು
ಡಾ. ಜಗನ್ನಾಥ ಹೆಬ್ಬಾಳೆ
ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂತೋಧನಾ ಕೇಂದ್ರ ಬೀದರ

904

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೧

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

904

ಅಕ್ಷರ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

AKSHARA GRANTHALAYA
ACC.NO. 048713

904

904
ನೋಂದಣಿ ಸಂಖ್ಯೆ: KRSBKS-00463

ಡಾ. ಸೋಮನಾಥ ಯಾಳವಾರ ಅವರ ಬದುಕು-ಬರಹ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಕನ್ನಡ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ಗ್ರಂಥಾಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರು
ಸುನೀಲಕುಮಾರ ರೇವಣಸಿದ್ದಪ್ಪಾ

ಮಾರ್ಗದರ್ಶಕರು
ಡಾ. ಜಗನ್ನಾಥ ಹೆಬ್ಬಾಳೆ
ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನಾ ಕೇಂದ್ರ ಬೀದರ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೧೧

920
SOM
048713

ಪ್ರಮಾಣ ಪತ್ರ

ಶ್ರೀ ಸುನೀಲಕುಮಾರ ರೇವಣಸಿದ್ದಪ್ಪಾ ಇವರು ಕನ್ನಡ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಸಂಶೋಧನೆ ಕೈಗೊಂಡು **"ಡಾ. ಸೋಮನಾಥ ಯಾಳವಾರ ಅವರ ಬದುಕು-ಬರಹ"** ಎಂಬ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದು ಇವರ ಮೂಲ ನಿಬಂಧವಾಗಿದ್ದು, ಈ ಮೊದಲು ಇದು ಇಡಿಯಾಗಿ ಇಲ್ಲವೇ ಬಿಡಿಯಾಗಿ, ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ.

ಕನ್ನಡ ಗ್ರಂಥಾಲಯ, ಹಂಪಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ಬೀದರ

ದಿನಾಂಕ: 13/06/2011

ಡಾ. ಜಗನ್ನಾಥ ಹೆಬ್ಬಾಳೆ
ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನಾ ಕೇಂದ್ರ ಬೀದರ

ಘೋಷಣಾ ಪತ್ರ


"ಡಾ. ಸೋಮನಾಥ ಯಾಳವಾರ ಅವರ ಬದುಕು-ಬರಹ"

ಎಂಬ ನಿಬಂಧವನ್ನು ನಾನು ಡಾ. ಜಗನ್ನಾಥ ಹೆಬ್ಬಾಳೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಇದನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಪ್ರಮಾಣಿಕರಿಸುತ್ತಾ, ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಸಾದರ ಪಡಿಸುತ್ತಿದ್ದೇನೆ.

ಸುನೀಲಕುಮಾರ ರೇವಣಸಿದ್ದಪ್ಪಾ

ಸ್ಥಳ: ಹಂಪಿ

ದಿನಾಂಕ: 13/06/2011



ಡಾ. ಸೋಮನಾಥ ಯಾಳವಾರ



ಪರಿವಿಡಿ

ಅಧ್ಯಾಯ–೧
ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವಿಧಾನಗಳು.

ಕನ್ನಡ ಸಾಹಿತ್ಯಕ್ಕೆ ಕಲ್ಯಾಣ ಕರ್ನಾಟಕದ ಕೊಡುಗೆ ಅನುಪಮವಾದ್ದುದು. ಹಲವು ದೃಷ್ಟಿಗಳಲ್ಲಿ ವೈಶಿಷ್ಟ್ಯ ಪೂರ್ಣ ಸಾಂಸ್ಕೃತಿಕ ಪರಂಪರೆ ಹೊಂದಿರುವ ಈ ಪ್ರದೇಶವು ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತಿಕ ಸಮೃದ್ಧಿಯ ಕನ್ಯೆನೆಲ. ಕೆಂಪು ಭೂಮಿ, ಧರಿನೆಲ, ಕರ್ನಾಟಕದ ಉತ್ತಮಾಂಗವೆಂದು ಕರೆಯಲ್ಪಡುವ ಇದಕ್ಕೆ ತನ್ನದೇ ಆದ ಇತಿಹಾಸ ವಿದೆ. ಸಾಮ್ರಾಟ ಮೌರ್ಯರಿಂದ ಆರಂಭಿಸಿ ಶಾತವಾಹನ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯರು, ಕಲಚೂರಿಯರು, ಕಾಕತಿಯರು, ಖಿಲ್ಜಿ, ಬಹುಮನಿ, ಮೊಗಲ ಹಾಗೂ ಹೈದ್ರಾಬಾದ ನಿಜಾಂ ಶಾಹಿ ಅರಸು ಮನೆತನಗಳು ಈ ಪ್ರದೇಶವನ್ನು ಆಳಿದ್ದಾರೆ.

ಧಾರ್ಮಿಕ ಹಾಗೂ ಅಧ್ಯಾತ್ಮಿಕ ರಂಗಗಳಿಗೆ ಬಹುಮೂಲ್ಯವಾದ ಕಾಣೀಕೆ ನೀಡಿರುವ ಈ ನೆಲದಲ್ಲಿ ಬೌದ್ಧ, ಜೈನ, ಶೈವ, ವೀರಶೈವ, ಲಿಂಗಾಯತ, ಹಿಂದೂ, ಸೀಖ ಧರ್ಮದ ಅನುಯಾಯಿಗಳು ಸಾಕಷ್ಟು ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಜನಪದರ 'ಸಾಂಸ್ಕೃತಿಕ' ವೈವಿಧ್ಯವು ಇಲ್ಲಿ ಅಪಾರವಾಗಿ ಕಾಣಸಿಗುತ್ತಿದ್ದು, 'ಜನಪದ ಸಾಹಿತ್ಯದ ಹುಲ್ಲುಗಾವಲು' ಈ ಪ್ರದೇಶವೆಂದು ಹೇಳಲಾಗುತ್ತದೆ. ಇದರೊಂದಿಗೆ ವಾಸ್ತು ಶಿಲ್ಪ, ಶಿಲ್ಪ ಕಲೆ, ಸಾಹಿತ್ಯ, ಸಂಗೀತಕ್ಕೆ ಈ ನಾಡಿನವರು ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ. ಕ್ರಿ.ಶ.೯ನೇ ಶತಮಾನದಿಂದಲೇ ಇಲ್ಲಿ ಸಾಹಿತ್ಯ ಕೃತಿಗಳು ರಚನೆಯಾದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಕನ್ನಡದ ಮೊದಲ ಉಪಲಬ್ದ ಗದ್ಯ ಗ್ರಂಥವಾಗಿರುವ 'ವಡ್ಡಾರಾಧನೆ'ಯು ಬೀದರ ಜಿಲ್ಲೆಯ 'ಹಳ್ಳಿಖೇಡ'ದಲ್ಲಿ ರಚನೆಯಾಗಿದೆ ಎಂಬುದು ಹಂಪನಾ ಅವರ ಅಭಿಪ್ರಾಯವಾಗಿದೆ. ೧೨ ನೇ ಶತಮಾನದ ಬಸವಾದಿ ಶಿವಶರಣರ ಕೊಡುಗೆ ಅತ್ಯಂತ ಸ್ಮರಣೀಯವಾಗಿದ್ದು, 'ವಚನ ಸಾಹಿತ್ಯ' ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಸಾಹಿತ್ಯವೆಂಬ ಹೆಗ್ಗಳಿಕೆಗೆ ಗುರಿಯಾಗಿದೆ. ಅಷ್ಟೇ ಅಲ್ಲ 'ವಚನ ವಾಙ್ಮಯವು ವಿಶ್ವ ಸಾಹಿತ್ಯಕ್ಕೆ ಕನ್ನಡ ಕೊಟ್ಟಿರುವ ಮಹಾನ ಕೊಡುಗೆ ಎಂದು ಹೇಳಲಾಗುತ್ತದೆ.

ಬಿಲ್ಹಣ ಕವಿಯ 'ವಿಕ್ರಮಾಂಕ ದೇವ ಚರಿತೆ' ವಿಜ್ಞಾನೇಶ್ವರನ 'ಮೀತಾಕ್ಷರ', ಸುಲ್ತಾನರ ಕಾಲದ ಆಧರಿಯ 'ಬಹುಮನ್‌ನಾಮ' ಮೋದಲಾದ ಕೃತಿಗಳು ಇಲ್ಲಿ ಹುಟ್ಟಿವೆ. ಭಜನೆ ಪದಕಾರರು, ಸ್ವರ ವಚನಕಾರರು, ಕವಿಗಳು, ಕಲಾವಿದರು, ಅಪಾರಸಂಖ್ಯೆಯಲ್ಲಿ ಇಲ್ಲಿ ಆಗಿಹೊಗಿದ್ದಾರೆ. ಬೀದರ ಜಿಲ್ಲೆಯು ಜನಪದ ಹಾಗೂ ವಚನಸಾಹಿತ್ಯ 'ಖಣಿ' ಎನಿಸಿದ್ದು, ಹಲವು ಕಲೆಗಳ ತವರು ಮನೆಯಾಗಿದೆ. ವಿಶಿಷ್ಟ ಕನ್ನಡ ಭಾಷೆಯ ಸೊಡಗಿರುವ ಈ ಪ್ರದೇಶವು ಉರ್ದು, ತೆಲುಗು, ಮರಾಠಿ, ಹಿಂದಿ ಹಾಗೂ ಆಂಗ್ಲ ಭಾಷೆಯ ಪ್ರಭಾವಕೊಳ್ಳಪಟ್ಟಿದ್ದು, ತುಂಬಾ ನವೀನತೆಯಿಂದ ಗಮನಾರ್ಹವಾಗುತ್ತದೆ. 'ಬಿದ್ರಿ' ಕಲೆಯ ದೃಷ್ಟಿಯಿಂದ ಬೀದರ ಜಿಲ್ಲೆಯು ವಿಶ್ವ ಮಾನ್ಯತೆ ಹೊಂದಿ ನಿಂತಿದೆ. ಕಾರಂಜಾ ಮಾಂಜಿರಾ ನದಿಗಳ ಈ ಭೂಮಿಯು ಅತ್ಯಂತ ಫಲವತ್ತಾಗಿದ್ದು, ಸಮಶೀತೋಷ್ಣ ಹವಮಾನಕ್ಕೆ ಹೆಸರಾಗಿದೆ. ಹಸಿರಾದ ಸೃಷ್ಟಿ, ಸಿಹಿ ನೀರಿನ ತಾಣ, ಪಶು-ಪಕ್ಷಿಗಳ ಕಲರವದಿಂದ ಕಣ್ಮನ ಸೇಳೆಯುವ ಇದು ಸಾಹಿತ್ಯ ಸೃಷ್ಟಿಗೆ ವೇದಿಗೆ ನಿರ್ಮಿಸಿದಂತಿದೆ. ಅಂತೆಯೇ ಈ ನೆಲದಲ್ಲಿ ಅನೇಕ ಜನ ಶಿವಶರಣರು, ತತ್ವ ಪದಕಾರರು, ಜನಪದ ಕಲಾವಿದರು, ಸಾಹಿತಿಗಳು, ಸಂಶೋಧಕರು, ವಿಮರ್ಶಕರು, ಪ್ರಬಂಧಕಾರರು, ವಚನಕಾರರು, ಕವಿಗಳು ಆಗಿಹೊಗಿದ್ದಾರೆ ಹಾಗೂ ಆಗುತ್ತಿದ್ದಾರೆ. ಇಂತಹ ಪರಿಸರವನ್ನು ಅರಗಿಸಿಕೊಂಡು ಗಮನಾರ್ಹಸಾಹಿತಿಗಳಾಗಿ ಬದುಕಿಬಾಳಿದವರು ಸೋಮನಾಥ ಯಾಳವಾರ ರವರು. ಸಾಹಿತ್ಯವು ಹೆಚ್ಚು ಜನಪರವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಬದುಕು-ಬರಹಗಳ ಸಾವಯವ ಸಂಬಂಧ ಇರಿಸಿಕೊಂಡಿರುವ ಯಾಳವಾರರ ಕುರಿತಾಗಿ ಸಮಗ್ರ ಅಧ್ಯಯನ ನಡೆಯಬೇಕಾಗಿದ್ದು ಇಂದು ಅತ್ಯವಶ್ಯ ವೆನಿಸುತ್ತದೆ.

ಕಳೆದ ೩೦ ವರ್ಷಗಳಿಂದ ಕನ್ನಡಕ್ಕಾಗಿ ದುಡಿಯುತ್ತಿರುವ ಸೋಮನಾಥ ಯಾಳವಾರರು ಉರ್ದು,ಮರಾಠಿ,ಹಿಂದಿ, ಪ್ರಭಾವವುಳ್ಳ ಈ ನೆಲದಲ್ಲಿ ಕನ್ನಡ ಬೆಳೆಸಲು ಬಹಳ ಶ್ರಮಿಸಿದ್ದಾರೆ. ವಿದ್ಯಾರ್ಥಿಗಳ ಮನದಲ್ಲಿ ಕನ್ನಡ ಜಾಗೃತಿಯನ್ನು ಉತ್ತಿ ಬಿತ್ತಿದ್ದಾರೆ. ಅವರ ಅನೇಕ ಶಿಷ್ಯರು ಯಾಳವಾರರ ಕನ್ನಡಪರ ವಿಚಾರಗಳನ್ನು ಸದಾ ಮೆಲಕು ಹಾಕುತ್ತಾರೆ. ಅಂತಹ ಸಂದರ್ಭಗಳನ್ನು ದಾಖಲಿಸುವುದು ಇಲ್ಲಿಯ ಉದ್ದೇಶಗಳಲ್ಲಿ ಒಂದಾಗಿದೆ.

ಡಾ.ಸೋಮನಾಥ ಯಾಳವಾರರವರು ೧೯೮೦ ರಿಂದಲೇ ಸಂಶೋಧನಾತ್ಮಕ ಲೇಖನ ಬರೆಯಲು ಆರಂಭಿಸಿದ್ದಾರೆ. ಅವರ ವಿಮರ್ಶಾ ಕೃತಿಗಳು, ಸಂಶೋಧನೆಗಳು, ಜೀವನಚರಿತ್ರೆಗಳು, ಸಂಪಾದನೆಗಳು, ಜಾನಪದ ಲೇಖನಗಳು, ಕಾವ್ಯ ರಚನೆಗಳು, ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತ ಗೊಳಿಸಲು ಮಹತ್ವದ ಕೊಡುಗೆ ನೀಡುತ್ತವೆ. ಬೀದರ ಜಿಲ್ಲೆಯ ಪ್ರಮುಖ ಬರಹಗಾರರಲ್ಲಿ ಒಬ್ಬರೆನಿಸಿ ಕವಿಯಾಗಿ, ಸಂಶೋಧಕರಾಗಿ, ಚಿಂತಕರಾಗಿ ಗಮನ ಸೇಳೆದಿದ್ದಾರೆ. ಕಳೆದ ಎರಡು ದಶಕಗಳಿಂದ ಸಾಹಿತಿಕ ರಚನೆಗೆ ತೊಡಗಿರುವ ಇವರು ಬೀದರ ಜಿಲ್ಲೆಯ ಹಿರಿಯ ಸಾಹಿತಿಗಳೆನಿಸಿದ್ದಾರೆ. ಅಪ್ಪಟ ಬಸವ ಪ್ರೇಮಿಯಾಗಿರುವ ಇವರ ಬದುಕು-ಬರಹಗಳು ಮುಂದಿನ ಜನಾಂಗಕ್ಕೆ ಮಾರ್ಗದರ್ಶಕವಾಗಿ ನಿಲ್ಲುತ್ತಿದ್ದು ಅವುಗಳ ಅಧ್ಯಾಯನ ನಡೆಯಬೇಕಾಗಿದೆ.

ಸೃಜನಶೀಲ ಬರಹಗಾರರು ಹಾಗೂ ಸಂಶೋಧನಾ ದೃಷ್ಟಿವುಳ್ಳ ಲೇಖಕರು ಲೇಖಕರು ಆಗಿರುವ ಡಾ॥ ಸೋಮನಾಥ ಯಾಳವಾರ ಅವರ ಜೀವನ ವಿಧಾನ ಹಾಗೂ ಅವರ ಬರಹಗಳಲ್ಲಿ ಮೂಡಿನಿಂತಿರುವ ವಿವರಗಳನ್ನು ಗಮನಿಸಿದರೆ ಅವರ ಬದುಕು ಬರಹ ಒಂದೇ ಅನಿಸುತ್ತದೆ. ಅತ್ಯುತ್ತಮ ಪ್ರಧ್ಯಾಪಕರಾಗಿರುವ ಅವರು ಬದುಕಿದಂತೆ ಬರೆದ್ದಿದ್ದಾರೆ. ಹಾಗೂ ಬರೆದಂತೆ ಬದುಕುತ್ತಿದ್ದಾರೆ. ಈ ಮೂಲಕ ಸೋಮನಾಥರು ನಮ್ಮ ಸಂಸ್ಕೃತಿಯ ಹರಿಕಾರರಾಗಿ ನಿಲ್ಲುತ್ತಾರೆ. ಹೀಗಾಗಿ ಇವರ ಬದುಕು-ಬರಹದ ಮೂಲಕ ಅವರ ಜೀವನ ಚರಿತೆಯನಷ್ಟೆ ಅಲ್ಲ ಆ ಮೂಲಕ ಕನ್ನಡ ನಾಡಿನ ಒಂದು ಪ್ರದೇಶದ ಚರಿತ್ರೆಯನ್ನು ಕಟ್ಟಿಕೊಳ್ಳಬೇಕಾಗಿರುವುದರಿಂದ ಇವರ ಸಾಹಿತ್ಯದ ಅಧ್ಯಯನ ತುಂಬಾ ಪ್ರಸ್ತುತವಾಗುತ್ತದೆ.

'ಲೋಚನಾ ಪ್ರಿಯಾ ಶಿವಾ' ಎಂಬ ಅಂಕಿತವನ್ನಿಟ್ಟುಕೊಂಡು ಕೇಲವು ವಚನಗಳನ್ನು ಹಾಗೂ ಒಂದು ಕವನ ಸಂಕಲನವನ್ನು ಪ್ರಕಟಿಸಿರುವ ಡಾ॥ ಯಾಳವಾರರು ಒಬ್ಬ ಶ್ರೇಷ್ಠ ಕವಿ ಹಾಗೂ ಆಧುನಿಕ ವಚನಕಾರರೆನಿಸಿದ್ದಾರೆ. ಇದರೊಂದಿಗೆ ಹುಮನಾಬಾದ ತಾಲ್ಲೂಕು ದರ್ಶನ, ಆದಯ್ಯ, ಬೀದರ ಜಿಲ್ಲೆಯ ಶರಣ ಸ್ಮಾರಕಗಳು, ಹಾಗೂ ಹುಮನಾಬಾದ ಶ್ರೀ ವೀರಭದ್ರೇಶ್ವರ, ಶರಣ ಸಿರಿ, ಎಂಬ ಸಂಶೋಧನಾ ಕೃತಿಗಳನ್ನು ಹರೀಶ್ಚಂದ್ರ ಕಾವ್ಯ ಮತ್ತು ಮೌಲ್ಯಗಳು, ಗಿರಿಜಾ

ಕಲ್ಯಾಣ ಮತ್ತು ಕುಮಾರ ವ್ಯಾಸವೆಂಬ ವಿಮರ್ಶಾ ಕೃತಿಗಳನ್ನು, ಕುಂಬಾರ ಗುಂಡಯ್ಯಾ, ಕರಕನಳ್ಳಿ ಬಕ್ಕಪ್ರಭು, ಮಾಣಿಕ ಪ್ರಭು, ಉರಿಲಿಂಗ ಪೆದ್ದಿಗಳೆಂಬ ಜೀವನ ಚರಿತ್ರೆಗಳನ್ನು ಹಲವು ಸಂಪಾದನಾ ಕೃತಿಗಳನ್ನು ರಚಿಸಿದ್ದಾರೆ. ಇವು ವೈವಿಧ್ಯ, ವೈಚಾರಿಕತೆ, ತಾತ್ವಿಕ, ಅಧ್ಯಾತ್ಮಿಕ, ಸಾಮಾಜಿಕ, ಕೌಟುಂಬಿಕ, ರಾಷ್ಟ್ರೀಯತೆಯಂತಹ ಅಂಶಗಳ ದೃಷ್ಟಿಯಿಂದ ಗಮನಾರ್ಹವಾಗಿದ್ದು ಅಧ್ಯಯನಕ್ಕೆ ಯೋಗ್ಯವಾಗಿವೆ. ಒಬ್ಬ ಶ್ರೇಷ್ಠ ಸಾಹಿತಿಯ ಜೀವನಾನುಭವಗಳು ಅವನಿಗರಿವಿಲ್ಲದೆ ಆತನ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುವುದರಿಂದ ಆತನ ಬದುಕಿನ ಹಲವು ಸಂದರ್ಭಗಳು ರೀತಿ ನೀತಿಗಳು ಕೃತಿಯಲ್ಲಿ ಮೂಡಿಬರುತ್ತವೆ. ಈ ಹಿನ್ನೆಲೆಯಲ್ಲಿ ಸಾಹಿತಿಯೋರ್ವನ ವ್ಯಕ್ತಿತ್ವವನ್ನು ಕಾಣಲು ಪ್ರಯತ್ನಿಸಲಾಗುತ್ತದೆ.

ಇನ್ನು ಬೀದರ ಜಿಲ್ಲೆಯ ಸಾಹಿತಿಗಳ ಬದುಕು ಬರಹಕ್ಕೆ ಸಂಬಂಧಿಸಿದಂತೆ ಹಲವು ಅಧ್ಯಯನಗಳು ಜರುಗಿದ್ದು ಯಾಳವಾರ ಸೋಮನಾಥರನ್ನು ಕುರಿತು ಅಧ್ಯಯನ ನಡೆದಿಲ್ಲ. ಅವರ ಕೇಲವು ಕೃತಿಗಳನ್ನು ಕುರಿತು ಎರಡು-ಮೂರು ಕಡೆ ಪುಟ್ಟ-ಪುಟ್ಟ ಲೇಖನಗಳು ಬಂಧಿವೆ. ಅವು ಸಹ ಸಂಶೋಧನೆ ದೃಷ್ಟಿಯಿಂದ ಬರೆದ ಲೇಖನಗಳಾಗಿಲ್ಲ. ಆ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ ಅವುಗಳಲ್ಲಿರುವ ವೈಚಾರಿಕತೆಯನ್ನು ಬೆಳಕಿಗೆ ತರಲು ಪ್ರಯತ್ನಿಸುವುದು ಈ ಪ್ರಬಂಧದ ಉದ್ದೇಶವಾಗಿದೆ.

ವೈವಿಧ್ಯಮಯವಾದ ಸಾಹಿತ್ಯ ರಚಿಸಿರುವ ಸೋಮನಾಥ ಯಾಳವಾರರ ಸಾಹಿತ್ಯದ ಶ್ರೇಷ್ಠತೆಯನ್ನು ಗುರುತಿಸುವುದರ ಜೊತೆಗೆ ಕನ್ನಡ ಪ್ರೇಮ ಹಾಗು ಸಾಮಾಜಿಕ ಪ್ರಜ್ಞೆಯನ್ನು ಅರಿಯುವುದು ಯುಗಧರ್ಮದ ಹಿನ್ನೆಲೆಯಲ್ಲಿ ಮೂಡಿ ನಿಂತಿರುವ ಬಹುಕಿನ ರೀತಿ ನೀತಿ ಸಾಧನೆಗಳ ಜೋತೆಗೆ ಅವರು ತಮ್ಮ ಸಂಶೋಧನೆಗಳ ಮೂಲಕ ಕಂಡು ಕೊಂಡಿರುವ ಹಲವು ಅಂಶಗಳನ್ನು ಎತ್ತಿ ತೋರಿಸಲು ಪ್ರಯತ್ನಿಸುವುದು ಇಲ್ಲಿ ಮುಖ್ಯವಾಗಿದೆ.

ಡಾ.ಸೋಮನಾಥ ಯಾಳವಾರರ ಶೈಕ್ಷಣಿಕ ಬದುಕಿನ ದಾರಿಯು ಕುತುಹಲ ಕಾರಿಯಾಗಿದ್ದು ಅವರ ಶಿಕ್ಷಣವು ಹೆಚ್ಚಾಗಿ ಗ್ರಾಮಿಣ ಪ್ರದೇಶಗಳಲ್ಲಿ

ಜರುಗಿದ್ದು, ಧಾರವಾಡದಂತಹ ನಗರದಲ್ಲೂ ಅದು ವಿಕಾಸಗೊಂಡಿದೆ. ಧಾರವಾಡದ ಮುರಗಾ ಮಠದಲ್ಲಿದ್ದು ಸ್ನಾತಕೊತರ ಪದವಿಯನ್ನು ಪೂರೈಸಿದ್ದುದ್ದರಿಂದ ಅಲ್ಲಿ ಅವರಿಗೆ ಹಲವು ತರಹದ ಬಹುದಿಕ ಸಂಪರ್ಕವನ್ನು ತಂದೊದಗಿಸಿದೆ. ಅಲ್ಲಿ ಪಡೆದ ಜ್ಞಾನ ಅವರ ಸಾಹಿತ್ಯ ಕೃಷಿಗೆ ನಾಂದಿ ಹಾಡಿತು. ನಂತರದಲ್ಲಿಯ ಹಲವು ಸಮಸ್ಯಗಳ ಎದುರಾಟವು ಬರಹಕ್ಕೆ ಹಬ್ಬಿತು. ವಚನ ಸಾಹಿತ್ಯದ ಅಧ್ಯಯನ ಪರಿಣಾಮವನ್ನು ಅವರ ಹಲವು ಕೃತಿಗಳಲ್ಲಿ ಕಾಣಬಹುದಾಗಿದೆ.

ಡಾ.ಸೋಮನಾಥ ಯಾಳವಾರ ಅವರು ಕನ್ನಡ ಪ್ರೇಮಿಗಳು, ಬಸವಾದಿ ಶರಣಾಭಿಮಾನಿಗಳಾಗಿದ್ದಾರೆ. ನಾಡು ನುಡಿಯನ್ನು ಕುರಿತಂತೆ ಹಾಗೂ ಬೀದರ ಜಿಲ್ಲೆಯ ಸಾಹಿತ್ಯ ಸಂಸ್ಕೃತಿ ಕಲಾವಿಧರನ್ನು ಕುರಿತಂತೆ ಹಲವಾರು ಚಿಂತನಾತ್ಮಕ ಲೇಖನಗಳನ್ನು ರಚಿಸಿದ್ದಾರೆ. ಸಭೆ ಸಮಾರಂಭಗಳಲ್ಲಿ ಇವರು ಮಾಡಿದ ಭಾಷಣಗಳು ಹಲವು ಯುವ ಕವಿಗಳ ಕೃತಿಗಳಿಗೆ ಬರೆದ ಮುನ್ನುಡಿಗಳು ಚಿಂತನಾಪರವಾಗಿದ್ದು ಜಿಲ್ಲೆಯ ಐತಿಹಾಸಿಕ ಪರಂಪರೆ ಹಾಗೂ ಒಳ ಶಿಸ್ತಿನ ಅಧ್ಯಯನಕ್ಕೆ ಪ್ರಚೋದನೆ ನೀಡುತ್ತಿದ್ದು ಇವುಗಳ ಅಧ್ಯಯನ ಮಾಡಬೇಕಾಗಿದೆ.

ಡಾ.ಸೋಮನಾಥ ಯಾಳವಾರರ ನಾಡು-ನುಡಿ ಸೇವೆಯು ಗಮನಾರ್ಹವಾಗಿದೆ. ಕನ್ನಡ ಜಾಗೃತಿ ಸಮಿತಿಯ ಸದಸ್ಯರಾಗಿ ಗಡಿ ಭಾಗದ ಹಲವು ಕಾರ್ಯ ಕ್ರಮಗಳಲ್ಲಿ ಭಾಗವಹಿಸಿ ಕನ್ನಡದ ಜಾಗೃತಿ ತಂದಿದ್ದಾರೆ. ಕನ್ನಡ ಪುಸ್ತಕಗಳನ್ನು ಕನ್ನಡ ಪತ್ರಿಕೆಗಳನ್ನು ಕೊಂಡು ಓದಬೇಕೆಂಬ ಪ್ರಜ್ಞೆಯನ್ನು ಸದಾ ತಮ್ಮ ವಿದ್ಯಾರ್ಥಿಗಳ ಮನದಲ್ಲಿ ಮೂಡಿಸುತ್ತಿರುವರು. ಹಲವಾರು ಕನ್ನಡ ಪರ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವರು. ಹುಮನಾಬಾದಿನಲ್ಲಿ 'ನಾದವೇದಿಕೆ' ಎಂಬ ಸಂಗೀತದ ವೇದಿಕೆಯನ್ನು ನಿರ್ಮಿಸಲು ಕಾರಣರಾದ ಕೆಲವರಲ್ಲಿ ಇವರು ಒಬ್ಬರಾಗಿದ್ದಾರೆ. ಅಂತೆಯೇ ಕನ್ನಡ ಪರವಾದ ಹಾಗೂ ಶರಣ ಸಂಸ್ಕೃತಿ ಪರವಾದ ಸಭೆ ಸಮಾರಂಭಗಳನ್ನು ಏರ್ಪಡಿಸುವ ಮೂಲಕ ತಮ್ಮ ಕನ್ನಡಾಭಿಮಾನವನ್ನು ಎತ್ತಿ ತೋರಿದ್ದಾರೆ. ಇವೆಲ್ಲವೂಗಳ ಪರಿಚಯ ಮುಂದಿನ ತಲೆಮಾರಿನವರಿಗೆ ಸಿಗಬೇಕಲ್ಲವೇ?

ಇವರ ಸಾಹಿತ್ಯ ಕೃತಿಯು ಹುಲಸಾಗಿದ್ದು ಈ ವರೆಗೆ ಅವರ ೨೧ ಕೃತಿಗಳು ಪ್ರಕಟವಾಗಿವೆ. ಇನ್ನೂ ೯ ಕೃತಿಗಳು ಪ್ರಕಟನೆಗಾಗಿ ಕಾಯುತ್ತಿವೆ. ಕವಿಯಾಗಿ ಇವರು ಪ್ರಸಿದ್ಧರಾಗುವುದಕ್ಕಿಂತ ಹೆಚ್ಚಾಗಿ ಸಂಶೋಧಕರಾಗಿ, ವಿಮರ್ಶಕರಾಗಿ, ಸಂಪಾದಕರಾಗಿ, ಜೀವನಚರಿತ್ರೆಗಾಗಿ ಗಮನ ಸೇಳೆದಿದ್ದ ಈ ನಿಟ್ಟಿನಲ್ಲಿ ಅವರ ಸಾಹಿತ್ಯ ಗಣನೀಯವಾಗಿದೆ. ಹಿಂದುಳಿದ ಬೀದರ ಜಿಲ್ಲೆಯ ಮರಾಠಿ, ಹಿಂದಿ, ಉರ್ದು, ಇಂಗ್ಲೀಷ ಭಾಷೆಗಳ ದಟ್ಟ ಪ್ರಭಾವದಲ್ಲಿ ಇವರು ಗಮನಾರ್ಹ ಲೇಖಕರಾಗಿ, ಕವಿಯಾಗಿ, ಚಿಂತಕರಾಗಿ ಪ್ರಸಿದ್ಧರಾಗಿದ್ದು ಅವರ ಸಾಹಿತ್ಯವನ್ನು ಅರಿಯುವ ದೃಷ್ಟಿಯಿಂದ ಎಂ.ಫಿಲ್. ಸಂಶೋಧನಾ ಅಧ್ಯಯನಕ್ಕಾಗಿ ಡಾ.ಸೊಮನಾಥ ಯಾಳವಾರರ ಬದುಕು ಬರಹಗಳನ್ನು ಸಂಶೋಧನೆಗೆ ಎತ್ತಿಕೊಂಡಿರುತ್ತೇನೆ.

ಅಧ್ಯಾಯ -೨

ಅಧ್ಯಯನ ಪೂರ್ವ ಪ್ರವೇಶಿಕೆ, ಸಾಹಿತ್ಯದ ಹಿನ್ನೆಲೆ

ವಿಶಾಲವಾದ ಕನ್ನಡನಾಡನ್ನು ಬಿಟ್ರೀಷರು ತಮ್ಮ ಆಡಳಿತದ ಅನುಕೂಲಕ್ಕಾಗಿ ಮೈಸೂರ ಕರ್ನಾಟಕ, ಮುಂಬೈಕರ್ನಾಟಕ, ಮದ್ರಾಸ ಕರ್ನಾಟಕ ಮತ್ತು ಹೈದರಾಬಾದ ಕರ್ನಾಟಕವೆಂದು ನಾಲ್ಕು ಮುಖ್ಯ ಪ್ರಾದೇಶಿಕ ವಿಭಾಗಗಳಲ್ಲಿ ಗುರುತಿಸಿದ್ದರು. ಉತ್ತರ ಕರ್ನಾಟಕದ ತಿರುಗಳಗನ್ನಡ ಪ್ರದೇಶಗಳಾಗಿದ್ದ ಬೀದರ, ಗುಲಬರ್ಗಾ, ರಾಯಚೂರ ಹಾಗೂ ಕೊಪ್ಪಳ ಜಿಲ್ಲೆಗಳು ಹೈದ್ರಾಬಾದ ಕರ್ನಾಟಕದ ವ್ಯಾಪ್ತಿಯಲ್ಲಿ ಸೇರಿದವು. ನಿಜಾಮಶಾಹಿ ಅರಸರ ಆಳ್ವಿಕೆಗೆ ಒಳಪಟ್ಟಿದ ಈ ಪ್ರದೇಶವನ್ನು ಇಂದು 'ಕಲ್ಯಾಣ ಕರ್ನಾಟಕ'ವೆಂದು ಕರೆಯಲಾಗುತ್ತದೆ.

೧೨ನೆಯ ಶತಮಾನದಲ್ಲಿ 'ಕಲ್ಯಾಣ'ವೆಂದು ಕರೆಯಲ್ಪಡುತ್ತಿದ್ದ ಈ ಪಟ್ಟಣ ಇಂದು 'ಬಸವ ಕಲ್ಯಾಣ'ವೆಂದು ಹೆಸರುವಾಸಿಯಾಗಿದೆ ಮಹಾಮಾನವತಾವಾದಿ, ಜಗತ್ತಿನ ಪ್ರಸಿದ್ಧ ವಿಚಾರವಾದಿಗಳಲ್ಲಿ ಪ್ರಮುಖವಾಗಿ ನಿಲ್ಲುವ 'ಬಸವಣ್ಣ'ನ ಕಾರ್ಯಕ್ಷೇತ್ರ ಈ ಪ್ರದೇಶ. ಆತನು ಮಾನವಕಲ್ಯಾಣ ಹಾಗೂ ಲೋಕಕಲ್ಯಾಣಕ್ಕಾಗಿ ಮಾಡಿರುವ ಅನೇಕ ರಚನಾತ್ಮಕ ಕಾರ್ಯಗಳು ಜರುಗಿದ್ದು ಇದೇ ನೆಲದಲ್ಲಿ ಅಂತೆಯೇ ಈ ಪ್ರದೇಶವನ್ನು 'ಕಲ್ಯಾಣ ಕರ್ನಾಟಕ'ವೆಂದು ಕರೆಯಲಾಗುತ್ತಿದೆ. ವಚನ ಸಾಹಿತ್ಯ, ದಾಸ ಸಾಹಿತ್ಯಗಳ ಸಿರಿ ಫಸಲು ಮೂಡಿದ್ದು ಇಲ್ಲಿಯೇ. ಭಕ್ತಿ, ಆಧ್ಯಾತ್ಮಗಳ ತವರೂರು ಎನಿಸಿರುವ ಈ ಪ್ರದೇಶವು 'ಕಾಯಕ ಕ್ಷೇತ್ರ'ವೆಂದೇ ಕರೆಯಿಸಿಕೊಳ್ಳುವುದು.

ಅನೇಕ ಪುಣ್ಯ ಪುರುಷರು, ಸಂತರು, ತಪಶ್ವಿಗಳು, ಕಲಾವಿದರು ಬಾಳಿ ಹೋಗಿರುವ ನಾಡಿದು. ಪ್ರತಿಭಾವಂತ ಜನಪದ ಕಲಾವಿದರು ಇಲ್ಲಿದ್ದ ಬಗ್ಗೆ 'ಕವಿರಾಜ ಮಾರ್ಗ'ದಲ್ಲಿ ಉಲ್ಲೇಖವಿದೆ. ಇಡೀ ಕನ್ನಡ ನಾಡನ್ನು ಗುರುತಿಸಿದ 'ಕವಿರಾಜಮಾರ್ಗ' ಕೃತಿಯು ರಚನೆಗೊಂಡಿದ್ದು ಇದೇ ಪ್ರದೇಶದಲ್ಲಿ. ಕನ್ನಡಿಗರಿಗೆ ಹೆಮ್ಮೆ ತಂದು ಕೊಟ್ಟಿರುವ ಈ ಕೃತಿ ಕನ್ನಡದ ಮೊದಲ ಉಪಲಬ್ದ ಕೃತಿಯೂ ಹೌದು. ಹೀಗಾಗಿ ಈ ಕೃತಿಯಿಂದ ಈ ಪ್ರದೇಶಕ್ಕೆ ವಿಶೇಷ ಮನ್ನಣೆ ಇರುವುದನ್ನು ಅರಿಯಬಹುದು.

ಕರ್ನಾಟಕದ ಉತ್ತರ ತುದಿಯಲ್ಲಿರುವ ಬೀದರ ಜಿಲ್ಲೆ ಗಡಿನಾಡ ಜಿಲ್ಲೆ. ಮಹಾರಾಷ್ಟ್ರ ಹಾಗೂ ಆಂದ್ರ ಪ್ರದೇಶ ರಾಜ್ಯಗಳಿಗೆ ಹೊಂದಿಕೊಂಡಿದೆ. ಅನೇಕ ಅರಸರು ಆಳಿ ಹೋಗಿರುವ ಇಲ್ಲಿ ವಿವಿಧ ಭಾಷೆಗಳು, ವಿವಿಧ ಕಲೆಗಳು ಹಾಗೂ ಹಲವು ಧರ್ಮಗಳು ಬಾಳಿ ಬೆಳಗುತ್ತಿವೆ. ಶರಣರ ವಚನಗಳು, ಅನುಭಾವಿಗಳ ಹಾಡುಗಳು ಇಲ್ಲಿವೆ. ಪ್ರಾಚೀನ ಕಾಲದಿಂದಲೂ ಇಲ್ಲಿ ಪ್ರಸಿದ್ಧ ಕವಿಗಳು ಆಗಿ ಹೋಗಿದ್ದಾರೆ. 'ವಡ್ಡಾರಾಧನೆ'ಯ ರಚನೆಕಾರ ಶಿವಕೋಟ್ಯಾಚಾರ್ಯ.ಮಿತಾಕ್ಷರ ಎಂಬ ನ್ಯಾಯ ಸಂಹಿತೆ ರಚಿಸಿರುವ ವಿಜ್ಞಾನೇಶ್ವರ. ಬೀದರ ಜಿಲ್ಲೇಯ ಕವಿಗಳು ಬಹುಮನಿ ಸುಲ್ತಾನ ಅಹ್ಮದ ಖಾನ ಆಸ್ಥಾನ ಕವಿ ಅಧರೆ – 'ಬಹುಮನ ನಾಮಾ' ಎಂಬ ಉರ್ದು ಗ್ರಂಥ ರಚಿಸಿದ್ದು ಈ ಜಿಲ್ಲೆಯಲ್ಲಿ[೧].

ಮುಂದೆ ಹೈದ್ರಾಬಾದ ನಿಜಾಮರ ಕಾಲದಲ್ಲಿ ಇಲ್ಲಿ 'ಖವ್ವಾಲಿ' ಪ್ರಕಾರಗಳ ಸಾಹಿತ್ಯ ನಿರ್ಮಾಣಕ್ಕೆ ಕಾರಣೀಭೂತವಾಯಿತು. ೧೯ನೇಯ ಶತಮಾನದಲ್ಲಿ 'ಗೀತಚಂದ್ರಿಕೆ' ಎಂಬ ಅಧ್ಯಾತ್ಮ ರಾಮಾಯಣ ಬಸವಕಲ್ಯಾಣದಲ್ಲಿ ಮರಾಠಿ ಭಾಷೆಯಲ್ಲಿ ರಚಿಸಿದ್ದು ತಿಳಿದು ಬರುತ್ತದೆ. ಹೀಗೆ ಹಿಂದಿನ ಕಾಲದಲ್ಲಿ ಬೀದರ ಜಿಲ್ಲೆ ವಿವಿಧ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಸಮ್ಮಿಲನದಿಂದ ಸಂಪದ್ಭರಿತವಾಗಿರುವುದನ್ನು ಗುರುತಿಸಬಹುದು.

ಹದಿನೆಂಟನೆಯ ಶತಮಾನದಿಂದ ಈ ಜಿಲ್ಲೆಯಲ್ಲಿ ತತ್ವಪದ ಸಾಹಿತ್ಯ ಸೃಷ್ಟಿಯಾಗತೊಡಗಿತು. ಅವರಲ್ಲಿ ಮರಕುಂದಿ ಬಸವಣ್ಣ, ನಿಡವಂಚಿ ನಿಜಲಿಂಗ ಭದ್ರೇಶ್ವರ, ಅಷ್ಟೂರಿನ ಲಕ್ಷ್ಮಣ ಸಾಧು, ಅಣದೂರಿನ ಮೋನಪ್ಪ,ಬೀದರನ ಕಾಶಿನಾಥ ಸಿಂಧೆ, ಬೀದರನ ರಘುನಾಥ ಹಡಪದ, ಅಣದೂರಿನ ಶಂಬಣ್ಣ, ಚಿಟಗುಪ್ಪಾದ ಮಂಕಲ ಹಣಮಂತಪ್ಪ, ಹಾರಕೂಡದ ಶಂಕರ, ದುಮ್ಮನಸೂರಿನ ಸಿದ್ಧಪ್ರಭು, ಚಿಟಗುಪ್ಪದ ಶಿಲಪ್ಪ ಭೂತಾಳೆ ಮೊದಲಾದ ಸು ೭೦ ಜನ ತತ್ವದಕಾರರು ಇಲ್ಲಿ ಆಗಿ ಹೋಗಿದ್ದಾರೆ. ಈಗಲೂ ಈ ಜಿಲ್ಲೆಯಲ್ಲಿ ತತ್ವಪದಕಾರರ ಪರಂಪರೆ ಮುಂದುವರೆದಿದೆ ಎನ್ನಬಹುದು ಯಾಳವಾರ ಅವರು ಸಹ ಹಲವು ತತ್ವಪದಗಳನ್ನು ರಚಿಸಿದ್ದು ಕಂಡು ಬರುತ್ತದೆ. ಅವು ಪ್ರಕಟವಾಗಬೇಕಾಗಿದೆ.

---

೧. ಡಾ.ಗುರುಲಿನಂಗಪ್ಪ ದಬಾಲೆ ಬೀದರ ಜಿಲ್ಲೆಯ ತತ್ವಪದಕಾರರು

ಈ ಜಿಲ್ಲೆಯಲ್ಲಿ ಹೊಸ ಕಾವ್ಯ ಹಾಗೂ ಸಾಹಿತ್ಯ ಕಾಣಿಸಿಕೊಂಡದ್ದು ೧೯೬೦ ನಂತರದಲ್ಲಿ ೧೯೬೩ ರಲ್ಲಿ ಮಾಣಿಕರಾವ ಧನಶ್ರೀ 'ಹಾಡುತ್ತ ಕಲಿ' ಮಕ್ಕಳ ಸಂಗ್ರಹ ಪ್ರಕಟವಾಯಿತು, ಈ ವೇಳೆಗೆ ಬೇರೆ ಕಡೆ ಕಾವ್ಯ ರಚನೆಯಾಗಿತ್ತು. 'ಅಧುನಿಕ ಕನ್ನಡ ಕಾವ್ಯ ಶತಮಾನದ ಅಂಚನ್ನು ತಲುಪಿಯಾಗಿತ್ತು. ಇದಕ್ಕೆ ಹೋಲಿಸಿದರೆ ಬೀದರ ಜಿಲ್ಲೆಯ ಹೊಸ ಕಾವ್ಯದ ಅವಧಿ ಕೇವಲ ನಲವತ್ತು ವರ್ಷ ಮಾತ್ರ ಎನ್ನಲಾಗಿದೆ[೨]. ಆನಂತರ ಜಿ.ಬಿ.ವಿಸಾಜಿಯವರ ಮುಂಜಾವು (೧೯೭೫ ರಲ್ಲಿ) ಪ್ರಕಟವಾಯಿತು.

ಆನಂತರದಲ್ಲಿ ಪ್ರೇಮಾಸಿರ್ಸೆ, ಕೆರಳ್ಳಿ ಲಕ್ಷ್ಮಾರೆಡ್ಡಿ, ವಿಜಯಶ್ರೀ ಸಬರದ, ಕಾಶೀನಾಥ ಅಂಬಲಗೆ, ದೇಶಾಂಶ ಹುಡಗೆ, ಎಂ.ಜಿ.ಗಂಗನಪಳ್ಳಿ, ಬಾಬು ಪೂಜಾರಿ, ಕೆ.ನೀಲಾ, ಜಗನ್ನಾಥ ಹೆಬ್ಬಾಳೆ, ಪಂಚಾಕ್ಷರಿ ಪುಣ್ಯಶೆಟ್ಟಿ ಮುಂತಾದವರ ಸಾಲಿನಲ್ಲಿ ನಿಲ್ಲಬಲ್ಲವರು ಸೋಮನಾಥ ಯಾಳವಾರರು ಎನ್ನಬಹುದು.

ನಂತರದ ೬೦ ರ ದಶಕದಲ್ಲಿ ಬೀದರ ಜಿಲ್ಲೆಯಲ್ಲಿ ಅನೇಕ ಯುವ ಕವಿಗಳು ಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದು ಎದ್ದು ಕಾಣುತ್ತದೆ. ನವೋದಯ, ನವ್ಯ ಬಂಡಾಯದ ಕಾವ್ಯ ರಚನಾ ಮಾದರಿಯನ್ನೇ ಹೋಲುವ ರಚನೆಗಳು ಬರತೊಡಗಿದವು, ತುಂಬಾ ಭಾವುಕತೆಯಲ್ಲಿ ಮುಳುಗಿ ಹೋಗಿರುವ ಕವಿಗಳೇ ಹೆಚ್ಚು. ನಾಡು-ನುಡಿ ಪ್ರೇಮ, ಸಾಮಾಜಿಕ ಸಮಸ್ತ ಧಾರ್ಮಿಕ ಆವರಣದ ಕವಿತೆಗಳು ಇಲ್ಲಿ ನಂತರದಲ್ಲಿ ಬಂದಿವೆ. ಉರ್ದು, ಮರಾಠಿ, ಹಿಂದೀ, ಇಂಗ್ಲೀಷ ಪ್ರಭಾವ ಹೊತ್ತ ಈ ಪ್ರದೇಶದಲ್ಲಿ ಕಾವ್ಯ ಹುಟ್ಟಿದೇ ಹೆಚ್ಚೆನ್ನಬಹುದು – ಆದರೂ ಹಲವರು ಇಲ್ಲಿ ಕವಿಗಳಾದರು. ಅಂಥವರಲ್ಲಿ ಕನ್ನಡ ಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡು ಆ ಮೂಲಕ ಕ್ನನಡ ಸಾಹಿತ್ಯಕ್ಕೆ ವಿಶಿಷ್ಟವಾದ ಕಾಣಿಕೆ ಕೊಟ್ಟವರು ಸೋಮನಾಥ ಯಾಳವಾರರು. ಅವರ ಕಾವ್ಯ ಹಾಗೂ ಸಮಗ್ರ ಸಾಹಿತ್ಯದ ಅಧ್ಯಯನವನ್ನು ಮುಂದಿನ ಅಧ್ಯಾಯಗಳಲ್ಲಿ ಕಾಣಬಹುದು.

---

೨. ಸಂ. ಸೋಮನಾಥ ಯಾಳವಾರ ಬೀದರ ಜಿಲ್ಲಾದರ್ಶನ ಪು.ಸಂ.೧೦೭
ವಿಕ್ರಂ ವಿಸಾಜಿ ಕಾವ್ಯದ ವೈಶಿಷ್ಟ್ಯಗಳು

ಸಂಶೋಧನೆ ವಿಮರ್ಶಾ ಸಾಹಿತ್ಯ ಕ್ಷೇತ್ರ ಆರಂಭದಲ್ಲಿ ತುಂಬಾ ಬಡವಾಗಿ ಕಾಣಿಸಿತು ೧೯೯೦ ರ ನಂತರ ಆರ್.ಎಲ್. ಕುಲಕರ್ಣಿಯವರು ಇಲ್ಲಿ ಮೊದಲು ಬರಿದ ಶಾಹಿಮನೆತನದ ಇತಿಹಾಸ ಕುರಿತು ಸಂಶೋಧಿಸಿದರು. ಆನಂತರದಲ್ಲಿ ಇಲ್ಲಿ ವೈಜಿನಾಥ ಭಂಡೆಯವರು, ಸೋಮನಾಥ ನುಚ್ಚಾ, ಜಿ.ಬಿ.ವಿಸಾಜಿಯವರು, ಜಗನ್ನಾಥ ಹೆಬ್ಬಾಳೆ, ಪ್ರೇಮಾ ಸಿರ್ಸೆ, ಕಾಶಿನಾಥ ಅಂಬಲಿಗೆ, ಮೊದಲಾದವರು ಭಾಷೆ ಜಾನಪದ, ಸಾಹಿತ್ಯ ಕುರಿತು ಸಂಶೋಧನ ನಡೆಸಿದರು. ಆನಂತರದಲ್ಲಿ ಸಂಶೋಧನ ಕೈಗೆತ್ತಿಕೊಂಡವರು ಸೋಮನಾಥ ಯಾಳವಾರರು. ಸಂಪಾದನೆ, ಜೀವನ ಚರಿತ್ರೆಗಳನ್ನು, ವಿಮರ್ಶೆ ವಚನರಚನೆಗಳಲ್ಲಿ ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡು ಸಮೃದ್ಧವಾದ ಸಾಹಿತ್ಯ ರಚನೆ ಮಾಡಿ ಪ್ರಮುಖರ ಸಾಲಿನಲ್ಲಿ ಗುರುತಿಸಲ್ಪಟ್ಟಿದ್ದಾರೆ.

ಸೋಮನಾಥ ಯಾಳವಾರರು ಸಾಹಿತ್ಯದ ಕೆಲವು ಭಾಗಗಳು ಬೀದರ ಜಿಲ್ಲೆಯ ಹಲವು ಪತ್ರಿಕೆಗಳಲ್ಲಿ, ಸ್ಮರಣ ಸಂಪುಟಗಳಲ್ಲಿ, ಶಾಂತಿಕಿರಣ, ಬಸವಮಾರ್ಗ, ಮೊದಲಾದ ಮಾಸಿಕ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವುದು ಗಮನಾರ್ಹ ಸಂಗತಿ. ಈ ಭಾಗದ ಹಲವು ಸಾಮಾಜಿಕ ಸಮಸ್ಯೆಗಳನ್ನು ಕಂಡುಂಡಿರುವ ಯಾಳವಾರರು ತಮ್ಮ ಕವನಗಳಲ್ಲಿ ಹಾಗೂ ಆಧುನಿಕ ವಚನಗಳಲ್ಲಿ ಸತ್ವಯುತವಾಗಿ ಮೂಡಿಸಿದ್ದಾರೆ. ಇಲ್ಲಿಯ ಪರಿಸರ, ಸಂಘಟನೆಗಳ ಬೆಂಬಲ, ವಿದ್ಯಾರ್ಥಿಗಳ ಆಸಕ್ತಿಯಂತಹ ಹಿನ್ನೆಲೆಗಳು ಸೃಜನಶೀಲ ಮನಸ್ಸಿನ ಯಾಳವಾರರಿಗೆ ಹೊಸ ಚಿಂತನೆ, ವಿಷಯ ವೈವಿಧ್ಯತೆ, ನಿರೂಪಣೆಯ ತಂತ್ರವನ್ನು ಒದಗಿಸಿಕೊಟ್ಟಿವೆ ಯಾಳವಾರರ ಸತತ ಅಧ್ಯಯನದ ಫಲವು ಇದ್ಕಕೆ ಕಾರಣವಾಗಿದೆ. ನವ್ಯ ಸಂದರ್ಭದ ಮುಕ್ತ ಆಲೋಚನೆ, ಸಾಮಾಜಿಕ ಕಾಳಜಿ, ಹಾಗೂ ಕಾವ್ಯಗಳಲ್ಲಿನ ಪ್ರಗತಿಪರತೆ ಮತ್ತು ಆಶಯ ಅಭಿವ್ಯಕ್ತಿಗಳನ್ನು ಗುರುತಿಸಲು ಸೋಮನಾಥ ಯಾಳವಾರರ ಬದುಕು – ಬರಹಗಳ ಹಿನ್ನೆಲೆಯಲ್ಲಿ ಈ ಅಧ್ಯಯನದ ಪೂರ್ವ ಪ್ರವೇಶಿಕೆ ಮಾರ್ಗದರ್ಶಿಯಾಗುತ್ತದೆ ಎಂದು ಆಲೊಚಿಸಲಾಗಿದೆ. ಇಂತಹ ಒಂದು ಸಾಹಿತ್ಯ ಪರಂಪರೆಯಲ್ಲಿ ನಿಲ್ಲಬಲ್ಲವರಾಗಿರುವ ಸೋಮನಾಥ ಯಾಳವಾರರ ಬದುಕು ಬರಹಗಳನ್ನು ಕುರಿತು ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ-೩

ಡಾ. ಸೋಮನಾಥ ಯಾಳವಾರರ ಜೀವನ ಮತ್ತು ಸಾಧನೆ

ಬೀದರ ಜಿಲ್ಲೆಯ ಕನ್ನಡ ಸಾಹಿತಿಗಳ ಶ್ರೇಣಿಯಲ್ಲಿ ಎದ್ದು ಕಾಣುವ ಹೇಸರು ಡಾ. ಸೋಮನಾಥ ಯಾಳವಾರರದು. ತಮ್ಮ ವಿಶಿಷ್ಟವಾದ ಜೀವನ ಶೈಲಿ, ಪರಿಶುದ್ಧ ನಡೆ-ನುಡಿ, ಆಚಾರ ವಿಚಾರಗಳಿಂದ, ವಿನಯ ವೈಚಾರಿಕತೆಯಿಂದ ಸಾಮಾಜಿಕ ಜೀವನದಲ್ಲಿ ಜನಪ್ರೀಯರಾಗಿರುವ ಸೋಮನಾಥರು, ವಿದ್ಯಾರ್ಥಿಪ್ರಿಯ ಪ್ರಾಧ್ಯಾಪಕರಾಗಿದ್ದಾರೆ. ತಮ್ಮದೇ ಆದ ಒಂದು ರೀತಿಯ ಮಾತುಗಾರಿಕೆ, ವಿಶಿಷ್ಠ ಬರವಣಿಗೆಯ ಮೂಲಕ ಜನಮನ್ನಣೆ ಗಳಿಸಿದ್ದಾರೆ. ಅವರ ಸಮಗ್ರ ಸಾಹಿತ್ಯದ ಅಧ್ಯಯನಕ್ಕೆ ತೊಡಗುವ ಮೊದಲು ಅವರ ಜೀವನ ಮತ್ತು ಸಾಧನೆಯನ್ನು ನಾವಿಲ್ಲಿ ಕಂಡುಕೊಳ್ಳಬೇಕಾಗುತ್ತದೆ.

ಸಾಹಿತಿಗೂ-ಕೃತಿಗೂ ಸಂಬಂಧ :-

ಒಬ್ಬ ಸಾಹಿತಿಯ ಸಮಗ್ರ ಕೃತಿಗಳ ಅಧ್ಯಯನಕ್ಕೆ ತೊಡಗುವಾಗ ಆತನ ಜೀವನ ಚರಿತ್ರೆಯನ್ನು ಸ್ಪಷ್ಠವಾಗಿ ತಿಳಿದಿರಬೇಕಾದುದು ಅವಶ್ಯವೆಂದು ಹೇಳಬಹುದು. ಏಕೆಂದರೆ ಕಾವ್ಯಕವಿಯ ಜೀವನಾನುಭವಗಳ ಸ್ಥರಗಳಲ್ಲಿಯೇ ಮೂಡುವಂತಹದು. ಕವಿಯ ಬದುಕು, ಪರಿಸರ, ವ್ಯಾಸಂಗ, ಧ್ಯೆಯ ಧೋರಣೆ, ಸಾಧನೆ ಸಿದ್ಧಿ ಮುಂತಾದವುಗಳು ಆತನ ಸಾಹಿತ್ಯ ಸೃಷ್ಟಿಯ ಪರಿಕರಗಳಾಗಿರುವುದರಿಂದ ಅವುಗಳಿಗೆ ಅತೀತನಾಗಿ ಕವಿಯೊಬ್ಬನು ಕಾವ್ಯ ವಸ್ತುವನ್ನು ದುಡಿಸಿಕೊಳ್ಳುವುದು ಅಸಾಧ್ಯವಾಗಿ ತೋರುತ್ತದೆ[೧]. ಕವಿಯ ವಯಕ್ತಿಕ ಅನುಭವ ಮತ್ತು ಸಂವೇದನೆಗಳ ಮೂಲಕವೆ ಆತನ ಸಾಹಿತ್ಯಕ್ಕೆ ಒಂದು ವಿಶಿಷ್ಠ ಸ್ವರೂಪ ಬರುತ್ತದೆ. ಏಕೆಂದರೆ "ಸಾಹಿತಿ ಅಥವಾ ಕಲಾವಿಧ ಕೇವಲ ಒಬ್ಬ ವ್ಯಕ್ತಿಯಾಗಿರದೇ ತಾನು ಬದುಕಿದ ಪ್ರದೇಶದ ಸಾಂಸ್ಕ್ರತಿಕ ಪ್ರತಿನಿಧಿಯಾಗಿರುತ್ತಾನೆ. ತನ್ನ ಕೃತಿಗಳ ಮೂಲಕ ಸಮಕಾಲಿನ ಸಾಮಾಜಿಕ ವ್ಯವಸ್ಥೆಯ ವೈರುದ್ಯಗಳನ್ನು, ನಾಡಿನ ಇತಿಹಾಸವನ್ನು ಮತ್ತು ಜನ ಸಾಮಾನ್ಯರ ಬದುಕಿನ ಚರಿತ್ರೆಯನ್ನು ದಾಖಲಿಸುತ್ತಾನೆ. ಜೊತೆಗೆ ಒಂದಿಲ್ಲೊಂದು ರೀತಿಯಿಂದ ಕೃತಿಯನ್ನು ತಾನು ಕಾಣಿಸಿಕೊಳ್ಳುತ್ತಾನೆ. ಆದ್ದರಿಂದ ಕವಿವೋರ್ವನ ಸಮಗ್ರ ಕೃತಿಗಳ

---

೧. ಡಾ. ಈ.ಎಸ್. ಕಾಪನೆ ಮಧುರಚನ್ನ-೧೯೭೬ ಕ.ವಿ.ವಿ. ಧಾರವಾಡ ಪುಟ ೩

ಅಧ್ಯಯನಕ್ಕೆ ತೊಡಗುವುದೆಂದರೆ, ಒಂದು ಪ್ರದೇಶದ, ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಅಧ್ಯಯನಕ್ಕೆ ಒಳಪಡಿಸಿದಂತಾಗುತ್ತದೆ[೨]. ಈ ಕಾರಣಗಳಿಂದಾಗಿ ಸಾಹಿತಿಯೊಬ್ಬನ ಬರಹವನ್ನು ಆತನ ಬದುಕಿನಿಂದ ಬೇರ್ಪಡಿಸಿ ನೋಡುವುದು ಸರಿಯಾದ ಅಧ್ಯಯನ ಕ್ರಮವೆನಿಸದು ಎಂಬುವುದನ್ನಿಲ್ಲಿ ಅರಿಯಬಹುದು.

ಕವಿಯ ಜೀವನವನ್ನು ಹಿನ್ನಲೆಯಾಗಿಟ್ಟುಕೊಂಡು ಅಥವಾ ಆಧಾರವಾಗಿಟ್ಟುಕೊಂಡು ಕಲಾಕೃತಿಯೊಂದರ ಪರಿವೀಕ್ಷಣೆಗೆ ತೊಡಗಿದರೆ ಆ ಕೃತಿಗೆ ಅಪಚಾರವಾಗುವುದೆಂಬುದು ಆಧುನಿಕ ವಿಮರ್ಶಕರ ಅಭಿಪ್ರಾಯ[೩]. ಮಾನಸ ಶಾಸ್ತ್ರದ ಭೂಮಿಕೆಯ ಮೇಲೆ ನಿಂತ ಈ ಅಭಿಪ್ರಾಯಕ್ಕೆ ವಿಮರ್ಶೆಯಲ್ಲಿ ಮಹತ್ವ ಸ್ಥಾನ ಸಿಕ್ಕರೂ ಸಹ ಇದು ಸರ್ವ ಸಾಮಾನ್ಯ ಸಿದ್ಧಾಂತವಾಗಲಾರದು. ಸಾಹಿತಿ ಹಾಗೂ ಆತನ ಕೃತಿಗಳಲ್ಲಿ ಅವಿನಾಭಾವ ಸಂಬಂಧವಿರುವೆಡೆಗಳಲ್ಲಿ ಕವಿಯನ್ನು ಒದಗಿಟ್ಟು, ಆತನ ಕೃತಿಗಳನ್ನು ನೋಡುವುದು ಸಮಂಜಸವೆನಿಸದು. ಹೀಗಾಗಿ ಸಾಮಾಜಿಕ ಜೀವಿಯನಿಸುವ ಕವಿಯ ವಿಶಿಷ್ಠ ವ್ಯಕ್ತಿತ್ವವನ್ನು, ಅವನ ಪರಿಸರದ ಹಿನ್ನಲೆಯಲ್ಲಿ ಪರಿಗಣಿಸಬೇಕಾಗಿರುವುದರಿಂದ ಬೀದರ ಜಿಲ್ಲೆಯ ಪ್ರಸಿದ್ಧ ಸಾಹಿತಿಯಾಗಿರುವ ಡಾ. ಸೋಮನಾಥ ಯಾಳವಾರರನ್ನು ರೂಪಿಸಿದ ಅವರ ಮನೆತನ, ತಂದೆ–ತಾಯಿ, ಬಾಲ್ಯ ಜೀವನ, ಶಿಕ್ಷಣ, ಪರಿಸರ, ಸಾಹಿತಿಕ ವಾತಾವರಣ, ಕೌಟುಂಬಿಕ ಜೀವನ ಮೊದಲಾವುಗಳನ್ನು ಈ ಅಧ್ಯಯನದಲ್ಲಿ ವಿವಿರವಾಗಿ ಕಂಡುಕೊಳ್ಳಬಹುದಾಗಿದೆ.

ಡಾ. ಸೋಮನಾಥ ಯಾಳವಾರ ಅವರು ಬೀದರ ಜಿಲ್ಲೆಯ ಸಂಶೋಧಕರು, ಜೀವನ ಚರಿತ್ರೆಕಾರರು, ಗ್ರಂಥ ಸಂಪಾದರಕರು, ವಿಮರ್ಶಕರು ಹಾಗೂ ಕವಿಗಳೆಂದು ಚಿರಪರಿಚಿತರು. ಕನ್ನಡ ನಾಡು ನುಡಿ ಸಂಸ್ಕೃತಿಗೆ ತಮ್ಮದೇ ಆದ ಕಾಣಿಕೆ ನೀಡಲು ಶ್ರಮಿಸಿದವರು. ಅವರು ಕೇವಲ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿರದೇ, ವೃತ್ತಿ ಜೀವನದ ಜೊತೆಗೆ ಸಾಮಾಜಿಕ ಕ್ಷೇತ್ರದಲ್ಲೂ ಗುರುತಿಸಿಕೊಂಡಿದ್ದಾರೆ. ಶೈಕ್ಷಣಿಕ ರಂಗದಲ್ಲಿ ಸೇವಾ ನಿಷ್ಠತೆ ಹಾಗೂ ಸತತ ಅಧ್ಯಯನದ ಮೂಲಕ ಅಧ್ಯಾಪನ ಕ್ಷೇತ್ರದಲ್ಲಿ ಹೆಸರುವಾಸಿಯಾಗಿದ್ದಾರೆ.

---

೨. ಆರ್.ಸಿ. ಹಿರೇಮಠ ಸಾಹಿತ್ಯ ವಿಮರ್ಶೆ –೧೯೬೬ ಪುಟ ೮೯
೩. Slected Prose –T.S. Eliot ಪುಟ ೩೦

ಕನ್ನಡ ಪರವಾದ ಹಲವು ಸಂಘಟನೆಯ ಮೂಲಕ ಹಲವಾರು ರಚನಾತ್ಮಕ ಕಾರ್ಯಗಳನ್ನು ಕೈಗೊಂಡು ಸೈ ಎನಿಸಿಕೊಂಡಿರುವವರು. ಅವರ ಬದುಕಿನ ಸಾಧನೆಯನ್ನು ನಾವಿಲ್ಲಿ ಈ ಕೆಳಗಿನ ಹಿನ್ನಲೆಯಲ್ಲಿ ಕಾಣಬಹುದು.

ಮನೆತನ :-

'ಸೋಯಾ' ಎಂದು ಗೆಳೆಯರಿಂದ ಕರೆಸಿಕೊಳ್ಳುವ ಸೋಮನಾಥರು ಆಲಮಟ್ಟಿ ಗ್ರಾಮದವರು. ಅವರು ಹುಟ್ಟಿದ್ದು, ಅವರ ತಾಯಿಯ ತವರು ಮನೆ 'ತಾರನಾಳ' ಗ್ರಾಮದಲ್ಲಿ. ಅವರ ಮನೆತನದ ಪ್ರಾಚೀನ ಹೆಸರು ಗಚ್ಚಿನಮನಿ ಎಂದಿತ್ತು. ಆ ಊರಿನಲ್ಲಿ ಇದೊಂದೆ ಗಚ್ಚಿನ ಮನೆಯಾಗಿತ್ತೆಂದು ಹೇಳಲಾಗುತ್ತದೆ. ಆದರೆ ಈ ಮನೆತನದ ಹಿರಿಯರು ಯಾಳವಾರ ಗ್ರಾಮಕ್ಕೆ ಹೋಗಿ ನೆಲೆಸಿ ಬಂದವರಿರಬಹುದಾದ್ದರಿಂದ ನಂತರದಲ್ಲಿ ಅಡ್ಡ ಹೆಸರು ಬಂದಂತಿದೆಯಂತೆ.

'ಆಲಮಟ್ಟಿ' ಕೃಷ್ಣಾನದಿ ತೀರದ ಪುಟ್ಟ ಗ್ರಾಮ. ಅಪಾರ ಜಲಸಂಪತ್ತು, ಉತ್ತಮ ಭೂಸಂಪತ್ತು ಹೊಂದಿರುವ ಪ್ರದೇಶ. ಹೊಳೆತುಂಬಿ ಬಂದಾಗೊಮ್ಮೆ ಈ ಗ್ರಾಮದವರು ಅನುಭವಿಸುವ ನೋವು ಹೇಳದಂತಹದು. ಕೃಷ್ಣಕ ಮನೆತನದ ವಾತಾವರಣದಲ್ಲಿ ಬೆಳೆದ ಸೋಮನಾಥರು ಬಾಲ್ಯದ ಅನೇಕ ಪ್ರಸಂಗಗಳನ್ನು ನೆನಪಿಸಿಕೊಳ್ಳುತ್ತಾರೆ. ಆಲಮಟಿ ಪುಟ್ಟ ಗೂಡುಗಳಂತಿರುವ ನದಿ ದಡದ ಊರು. ಆದರೂ ಊರಿನ ಎತ್ತರದ ಗುಡ್ಡದ ಮೇಲೆ ರೈಲ್ವೆ ಸ್ಟೇಶನ್ ಇದ್ದಿದ್ದರಿಂದ ನಾಗರಿಕತೆಯ ಸೊಂಕು ಆ ಊರಿಗಿತ್ತಂತೆ. ಸೊಲ್ಲಾಪೂರ ಗದಗ ಮಧ್ಯದ ರೈಲ್ವೆ ಮಾರ್ಗದಲ್ಲಿ ಬರುವ ಈ ಊರು ಆಲಮಟ್ಟಿ ಜಂಗಮರ ಕತೆಯಿಂದ ಹಾಗೂ ಹರಡಿಕರ ಮಂಜಪ್ಪನವರ ಶೈಕ್ಷಣಿಕ ಸೇವೆಯಿಂದ, ಇತ್ತಿಚೆಗೆ ನಿರ್ಮಾಣವಾದ ಆಲಮಟ್ಟಿ ಆಣೆಕಟ್ಟಿನಿಂದ ಪ್ರಸಿದ್ಧವಾಗಿದೆ. ಜನಪದ ಲಾವಣಿ, ಕಾಶಿಬಾಯಿ ಹಾಡು ಅಥವಾ ಕಡ್ಲಿಮಟ್ಟಿ ಕಾಶಿಬಾಯಿ ಹುಟ್ಟಿದ್ದು ಈ ಪ್ರದೇಶದಲ್ಲಿ. ಕಡ್ಲಿಮಟ್ಟಿ ಸ್ಟೇಶನ್‌ಗೆ ತುಂಬಾ ಹತ್ತಿರದ ಗುಡ್ಡದ ಸಂಧಿಯಲ್ಲಿರುವ ಸ್ಟೇಶನ್ ಈ ರೀತಿಯ ಹಲವು ಸಂದರ್ಭಗಳ ಮೂಲಕ ಆಲಮಟ್ಟಿ ಪ್ರಸಿದ್ಧವಾಗಿದೆ. ಜಾನಪದ ಸೊಗಡುಳ್ಳ ಇಂತ ಊರಲ್ಲಿ ಬೆಳೆದವರು ಡಾ. ಸೋಮನಾಥವರು.

ಕಳೆದ ೫೦ ವರ್ಷಗಳ ಹಿಂದೆ 'ಆಲಮಟ್ಟಿ ಆಣೆಕಟ್ಟು' ಆರಂಭಗೊಂಡಾಗ ಊರನ್ನು ಬಿಟ್ಟು ಹೋಗುವ ಪರಿಸ್ಥಿತಿ ಬಂತು. ಆಗ ಈ ಗ್ರಾಮ ಸಂಸ್ಕೃತಿಯಿಂದ

ದೂರಾಗಿ ಉಳಿಯಬೇಕಾಯಿತು. ನಂತರ ಡ್ಯಾಮ ಸೈಟ್ ನಲ್ಲಿ ವಾಸ. ಶೈಕ್ಷಣಿಕವಾಗಿ ಹಿಂದುಳಿದ ಆ ಪ್ರದೇಶದಿಂದ ಬೇರೆಡೆ ಹೋಗಿ ಶಿಕ್ಷಣ ಪಡೆಯಬೇಕಾದ ಸಂದರ್ಭ ಬಂದೊದಗಿತು. ಆದರೂ ಸೋಮನಾಥರ ಶೈಕ್ಷಣಿಕ ಸೌಧಕ್ಕೆ ಅವರ ಊರು, ಮನೆತನದ ಪರಿಸರಗಳು ಭದ್ರಬುನಾದಿ ಹಾಕಿದ್ದವೆನ್ನಬಹುದು. ಮನೆಯಲ್ಲಿ ಅಜ್ಜಿ ನೀಲಮ್ಮನವರು ತತ್ವ ನಿಷ್ಠರು ಎರಡು ಹೊತ್ತು ಲಿಂಗ ಪೂಜೆಯಲ್ಲಿ ನಿರತರಾಗುತ್ತಿದ್ದರು. ವಚನಗಳನ್ನು, ತತ್ವ ಪದಗಳನ್ನು ಹಾಡುತ್ತಿದ್ದರು. ಬಾಲಕ ಸೋಮನಾಥನನ್ನು ಕೂಡಿಸಿಕೊಂಡು ಪ್ರಾರ್ಥನೆ ಮಾಡುತ್ತಿದ್ದರು. ತಾಯಿಯವರು ಜನಪದ ಹಾಡುಗಳನ್ನು ಹಾಡುತ್ತಿದ್ದರು. ಇವರ ಪ್ರಭಾವ ಈ ಲೇಖಕರ ಮೇಲೆ ಎಳೆತನದಿಂದಲೇ ದಟ್ಟವಾಗಿತ್ತು. ಆ ಸಾಂಸ್ಕೃತಿಕ ಸನ್ನಿವೇಶವು ಅವರ ಶಿಕ್ಷಣದಲ್ಲಿಯೂ ಅಲ್ಲಲ್ಲಿ ದೊರಕಿತು.

ಬಾಲ್ಯ ಜೀವನ:-

೧೯೫೩ ನೇ ಮೇ ೧ ರಂದು ಸೋಮನಾಥರು ಜನಿಸಿದರು. ಸಿದ್ದಪ್ಪ ಹಾಗೂ ಶಿವನಂದಮ್ಮಾ ಇವರ ತಂದೆತಾಯಿಯರು. ಇವರದು ಬಡತನದ ಕೃಷಿಕ ಕುಟುಂಬ. ಆದರೂ ಸುಸಂಸ್ಕೃತಿಗೆ ಹೆಸರಾದ ಮನೆತನ. ಸರಳ ಜೀವಿಗಳಾದ ತಂದೆ ತಾಯಿಯರು ತುಂಬು ಜೀವನವನ್ನು ನಡೆಸಿದ್ದರು. ಅವರಿಗೆ ಮೂವರು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳಾದರು ಅವರಲ್ಲಿ ಮೊದಲನೆಯವರೇ ಸೋಮನಾಥರು. ಇವರಿಗೆ ಮೊದಲು ಶಿವಪುತ್ರಪ್ಪನೆಂಬ ನಾಮಕರಣ ಮಾಡಲಾಯಿತಂತೆ. ಆಗ ಕೂಸಾಗಿದ್ದ ಇವರು ಬಹಳ ಹಠಮಾಡಿ ಅಳಲು ಆರಂಭಿಸಿದ್ದರಿಂದ, ಮನೆ ದೇವರು ಸೋಮನಾಥೇಶ್ವರನ ಹೆಸರನ್ನಿಟ್ಟು ಆ ಹೆಸರನ್ನು ಬಿಟ್ಟರಂತೆ. ಆಗ ಇವರು ಶಾಂತ ಸ್ವಭಾವದಿಂದ ಬೆಳೆಯಲಾರಂಭಿಸಿದ ಸಂಗತಿ ತಿಳಿದುಬರುತ್ತದೆ. ಆದರೂ ಇದನ್ನು ತಮ್ಮ ತಾಯಿಯವರಿಂದ ತಿಳಿದ ಇವರು ಈಗ 'ಆಧುನಿಕ ವಚನ'ಗಳನ್ನು ಬರೆಯುವಾಗ 'ಲೋಚನ ಪ್ರಿಯ ಶಿವ' ಎಂದು ಆ ಹೆಸರನ್ನುಳಿಸಿಕೊಂಡ ಅಂಕಿತವಿಟ್ಟುಕೊಂಡಿರುವುದು ಕಂಡು ಬರುತ್ತದೆ.

ಶಿಕ್ಷಣ :–

ಸೊಮನಾಥವರಿಗೆ ಕೃಷಿಕ ಮನೆಯೇ ಮೊದಲ ಪಾಠಶಾಲೆಯಾಗ್ಗಿತ್ತು. ತಂದೆ ಸಿದ್ದಪ್ಪನವರೆ ಅಕ್ಷರ ಕಲಿಸಿದರು. ಹಳೆಯ ಕಾಲದ ಆರನೆಯ ಇಮತ್ತೆಯವರೆಗೆ ಅವರು ಓದಿದ್ದರು. ಹೀಗಾಗಿ ತಂದೆ ಜಾನಪದ, ಲೆಕ್ಕ, ಅಕ್ಷರ, ಹೇಳಿಕೊಟ್ಟ ಮೊದಲ ಗುರು. ಕುಟ್ಟುವ, ಬೀಸುವ ಮನೆಯ ವಾತಾವರಣದಲ್ಲಿ ಬೆಳೆದಿದ್ದರಿಂದ ಜನಪದ ಹಾಡುಗಳ ನಂಟುತನ ಇವರಿಗೆ ಉಂಟಾಯಿತು. ಹಾಡುವದು ಅವರ ವಿದ್ಯಾರ್ಥಿ ದೆಸೆಯಿಂದಲೆ ಆರಂಭಗೊಂಡಿತು. ರಾಮಣ್ಣ ಪೂಜಾರಿ ಹಾಗೂ ಹಿರೆಮಠ ಮಾಸ್ತರರು ಇವರಿಗೆ ಕನ್ನಡ ಓದಲು ಬರೆಯಲು ಕಲಿಸಿದ ಗುರುಗಳು. ಎಮ್.ಜಿ. ಹಿರೇಮಠ ಹಿಂದಿ ಭಾಷೆಯನ್ನು ಕಲಿಸಿದರು. ಸ್ವ–ಗ್ರಾಮದಲ್ಲಿ ತಾರನಾಳ, ಡವಳಣಿ, ಮುದ್ದೆಬಿಹಾಳಗಳಲ್ಲಿ ಶಿಕ್ಷಣ ಪಡೆದರು. ಪಿ.ಯು.ಸಿ. ಹಾಗೂ ಬಿ.ಎ. ಶಿಕ್ಷಣವು ಮುದ್ದೇಬಿಹಾಳದಲ್ಲಿ ಜರುಗಿದರೆ ಎಮ.ಎ. ಶಿಕ್ಷಣವು ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡದಲ್ಲಿ ಮುಗಿಯಿತು. ೧೯೭೪ –೭೫ ರಲ್ಲಿ ಧಾಡವಾಡದಲ್ಲಿದ್ದಾಲೆ 'ಭಾಷಾ ಶಾಸ್ತ್ರದಲ್ಲಿ ಡಿಪ್ಲೋಮಾ' ಪದವಿಯನ್ನು ಪಡೆದರು. ಮಾಧ್ಯಮಿಕ, ಪದವಿ ಪೂರ್ವ, ಪದಿವಿ ಶಿಕ್ಷಣದ ಅನುಕೂಲತೆಗಳು ಸಮೀಪದ ಊರುಗಳಲ್ಲಿಲ್ಲದಿದ್ದರಿಂದ ದೂರದ ಊರುಗಳಲ್ಲಿ ಬೋರ್ಡಿಂಗ್ ನಲ್ಲಿ ಊಟ ಮಾಡಿ ಶಿಕ್ಷಣ ಪಡೆಯಬೇಕಾಯಿತು. ಆಗ ಇವರು ಅನೇಕ ಕಷ್ಟಗಳನ್ನು ಎದುರಿಸಿದರು.

ಬಿ.ಎ. ಓದುವಾಗ, ಎಮ್.ಎ. ಓದಲು ಹೋಗುವಾಗ ಹಣಕಾಸಿನ ತೊಂದರೆಯಿಂದಾಗಿ ಓದು ನಿಲ್ಲಿಸುವ ಸಂದರ್ಭ ಬಂದೊದಗಿತು. ಆಗ ಮುದ್ದೇಬಿಹಾಳ ಕಾಲೇಜಿನ ಪ್ರಿನ್ಸಿಪಾಲ್ ಮುಳಗುಂದ ಸರ್ ಅವರು ಇವರ ಓದಿಗೆ ಸಹಕರಿಸಿದರು. ಅಷ್ಟೆ ಅಲ್ಲ, ಧಾರವಾಡದ 'ಶ್ರೀ ಮುರುಘಾಮಠ'ದ ಪ್ರಸಾದ ನಿಲಯದಲ್ಲಿ ಪ್ರವೇಶ ಕೊಡಿಸಿದರು. ಆ ಸಮಯದಲ್ಲಿ ಆ ಮಠದ ಆಡಳಿತ ನೋಡಿಕೊಳ್ಳುತ್ತಿದ್ದ ಶಿನಣ್ಣನವರು ಮಠದಲ್ಲಿ ಅರೆಕಾಲಿಕ ಕೆಲಸ ನೀಡಿ, ಅದನ್ನು ಮಾಡುತ್ತ ಅಲ್ಲಿರಲು ನೋಡಿಕೊಂಡರು. ಪ್ರೋ.ಜಿ.ಎಸ್.ಮಾಮನಿ ಗುರುಗಳು ಧಾರವಾಡದ 'ನಾಡಗೌಡರ' ಮನೆಚಿಯ ಮಕ್ಕಳಿಗೆ 'ಪಾಠ' ಹೇಳಿಕೊಡುವ ವ್ಯವಸ್ಥೆ ಮಾಡಿ ಕಾಲೇಜ ಶುಲ್ಕ ತುಂಬಲು ಸಹಾಯ ಮಾಡಿ ಕೊಟ್ಟರು. ಇದರೊಂದಿಗೆ "ಪರೋಕ್ಷವಾಗಿ ಕೆಲವು ಗೆಳೆಯರು ಸಹಕಾರ ನೀಡಿದ್ದರಿಂದ ೧೯೭೬ ರಲ್ಲಿ ಎಂ.ಎ.ಕನ್ನಡ ಹಾಗೂ ಭಾಷಾಶಾಸ್ತ್ರದಲ್ಲಿ ಡಿಪ್ಲೊಮಾ ಪದವೀ ಪಡೆದರು.

ಇದು ಶಾಲಾ ಶಿಕ್ಷಣವಾದರೆ, ಸೋಮನಾಥರು ನಿಜವಾದ ಶಿಕ್ಷಣ ಪಡೆದದ್ದು ಮುರುಘಾಮಠದ ವಾತಾವರಣದಲ್ಲಿ ಎನ್ನುತ್ತಾರೆ. ಅಲ್ಲಿದ್ದ ಎಲಿ ಮಾಸ್ತರರು, ಶಿನಪ್ಪನವರು ಶಿಸ್ತು, ಸಮಯ, ಕಠೀಣಶ್ರಮದ ಬದುಕನ್ನು ರೂಢಿಸಿದರು. ಪ್ರತಿನಿತ್ಯ ರಾತ್ರಿ ೧೦ ಗಂಟೆಗೆ ಸರಿಯಾಗಿ ಮಲಗುವುದು. ಬೆಳಗ್ಗೆ ೪.೩೦ ಗಂಟೆಗೆ ಎಳುವುದು, ಮುರುಘಾಮಠದಲ್ಲಿ ಬೆಳಗ್ಗೆ ೫.೦೦ ಗಂಟೆಗೆ ನಡೆಯುವ ಸಾಮೊಹಿಕ ಪ್ರಾರ್ಥನೆಗೆ ತಪ್ಪದೆ ಹೋಗುವುದನ್ನು ರೂಢಿಸಿದರು. ಒಂದು ವೇಳೆ ಪ್ರಾರ್ಥನೆ ತಪ್ಪಿಸಿದರೆ ಆ ದಿನ ಪ್ರಸಾದ ನಿಲಯದಲ್ಲಿ ಊಟ ಕೊಡುತ್ತಿರಲಿಲ್ಲ. ಅಂದು ಉಪವಾಸವಿರಬೇಕಾಗುತ್ತಿತ್ತು. ಮೊದಮೊದಲು ಇದು ತುಂಬಾ ತೊಂದರೆ ಎನಿಸಿತು. ನಂತರದಲ್ಲಿ ಅದು ರೂಢಿಯಾಗಿತ್ತು. ಶ್ರಾವಣ ಮಾಸದಲ್ಲಿ ಜರುಗುವ ಮಠದ ಆಧ್ಯಾತ್ಮಿಕ-ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಚರ್ಚಿಸುವುದು. ಪ್ರತಿ ತಿಂಗಳ ಮಾಸಿಕ ಶಿವಾನುಭವ ಕಾರ್ಯಕ್ರಮಗಳಲ್ಲಿ ಅತಿಥಿಗಳ ಪರಿಚಯ, ಕಾರ್ಯಕ್ರಮ ನಿರೂಪಣೆ ಮುಂತಾದವುಗಳನ್ನು ಮಾಡಲು 'ಯಾಳವಾರ' ಅವರನ್ನು ನೇಮಿಸಿದ್ದರಿಂದ ಅವರು ಆ ಮೂಲಕ ಬಹಳಷ್ಟನ್ನು ಕಲಿತರು.

ಪ್ರತಿ ವರ್ಷ ನಡೆಯುವ ಶ್ರೀ ಮಠದ 'ಶಿವಾನುಭವ' ಪರೀಕ್ಷೆಗಳಲ್ಲಿ ಭಾಗವಹಿಸಿದರು. ಎರಡನೇ ವರ್ಷದ ಅಂತಿಮ ಪರೀಕ್ಷೆಯಲ್ಲಿ ಇವರು 'ಬಂಗಾರಪದಕ' ಪ್ರಶಸ್ತಿಯೊಂದಿಗೆ ವಿಜೇತರಾದರು. ಆ ವರ್ಷ ಶ್ರೀ ಮುರುಘಾಮಠದ 'ಬೆಳ್ಳಿಹಬ್ಬ' ಆಚರಿಸುತ್ತಿದ್ದುದ್ದರಿಂದ ಅದರ ಸಂಭ್ರಮ ಅನನ್ಯವಾಗಿತ್ತೆನ್ನುತ್ತಾರೆ. ಸೋಮನಾಥ ಅವರು ಎಲ್ಲಿ ಮಾಸ್ತರ ಶ್ರೀ ಯಾಳವಾರರ ಜೀವನದಲ್ಲಿ 'ವಚನ ಸಾಹಿತ್ಯ', 'ಬಸವಾದಿ ಶರಣರ' ಮೇಲೆ ವಿಶೇಷ ಆಸಕ್ತಿಯುಂಟಾಗುವಚಿತೆ ಪ್ರಭಾವ ಬೀರಿದ ಗುರುವಾದರು. ಅಷ್ಟೇ ಅಲ್ಲ ಮಠದಿಂದ ಹೊರಡುತ್ತಿದ್ದ. 'ಶಿವಾನುಭವ' ಪತ್ರಿಕೆಗೆ ಲೇಖನ್ ಬರೆಯುವಂತೆ ಪ್ರೋತ್ಸಾಹಿಸಿದರು. ಹೀಗಾಗಿ ಧಾರವಾಡ ಸೋಮನಾಥರಿಗೆ, ಬೌದ್ಧಿಕ ಶಿಕ್ಷಣ ನೀಡಿದರೆ, ಮುರುಘಾವ್ಮಠ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ನೀಡಿತು. ಸೋಮನಾಥರ ಶೈಕ್ಷಣಿಕ ಬದುಕಿನಲ್ಲಿ ಧಾರವಾಡದ 'ಶ್ರೀ ಮುರುಘಾಮಠ' ಹಾಗೂ ಪೂಜ್ಯ ಮಹಾಚಿತಪ್ಪಗಳ ಪಾತ್ರ ತುಂಬಾ ದೊಡ್ಡದು ಎನ್ನಬಹುದು.

ನಂತರ ವೃತ್ತಿ ಜೀವನದೊಂದಿಗೆ ೧೯೯೫ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪದವಿಯನ್ನು ಪಡೆದರು.

ವೃತ್ತಿ ಜೀವನ :-

ಡಾ. ಸೋಮನಾಥ ಯಾಳವಾರರ ವೃತ್ತಿ ಜೀವನ ತುಂಬಾ ತೃಪ್ತಿಕರವಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಎಂ.ಎ ಪದವಿ ಪಡೆದ ನಂತರ ಒಂದು ವರ್ಷ ಶೆಟ್ಟಿ ಕಂಪನಿಯಲ್ಲಿ ವ್ಯವಸ್ಥಾಪಕರಾಗಿ ಎರಡು ವರ್ಷ ಆಲಮಟ್ಟಿ ಅಣೆಕಟ್ಟು ಗುಣನಿಯಂತ್ರಣ ಉಪವಿಭಾಗದಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸಿದರು. ದಿನಾಂಕ: ೦೧-೦೮-೧೯೭೯ ರಂದು ಶ್ರೀ ವೀರಭದ್ರೇಶ್ವರ ಶಿಕ್ಷಣ ಸಂಸ್ಥೆ ಹುಮನಾಬಾದಿನ ಬಸವತೀರ್ಥ ಚೆನ್ನಬಸವ ಸ್ವಾಮಿಜಿ ಕಲಾ ಹಾಗೂ ಶ್ರೀ ವೀರಭದ್ರೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇರಿಕೊಂಡರು. ಅದೇ ವರ್ಷ ಪ್ರಾರಂಭವಾಗಿದ್ದ ಈ ಕಾಲೇಜಿಗೆ ಅನುದಾನವಿರಲಿಲ್ಲ. ಹೀಗಾಗಿ ಐದು ವರ್ಷಗಳ ಕಾಲ ತುಂಬಾ ಕಷ್ಟ ಅನುಭವಿಸಬೇಕಾಯಿತು. ಆದರೂ ಪಾಠ ಹೇಳುವುದೇಂದರೆ ತುಂಬಾ ಸಂತೋಷ ಪಡುವ ಇವರು ಅನೇಕ ವಿದ್ಯಾರ್ಥಿಗಳ ಜನಪ್ರಿಯ ಉಪನ್ಯಾಸಕರೆನಿಸಿದರು. ವಿದ್ಯಾರ್ಥಿಗಳನ್ನು ತುಂಬಾ ಆತ್ಮಿಯತೆಯಿಂದ ಕಾಣುತ್ತಿದ್ದುದ್ದರಿಂದ ಅನೇಕ ವಿದ್ಯಾರ್ಥಿಗಳು ಇಂದಿಗೂ ಅವರಿಗೆ ತುಂಬಾ ಸಮೀಪದವರಾಗಿದ್ದಾರೆ. ೧೯೮೦ ರಲ್ಲಿ ಕಾಲೇಜಿಗೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಎನ್.ಎಸ್.ಎಸ್. ಘಟಕ ಮಂಜೂರಾಯಿತು.ಆಗ ಈ ಕಾಲೇಜಿನ ಮೊದಲ ಎನ್.ಎಸ್.ಎಸ್. ಅಧಿಕಾರಿಯಾಗಿ ಸುಮಾರು ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಆ ಸಂದರ್ಭದಲ್ಲಿ ಇವರು ಎನ್.ಎಸ್.ಎಸ್. ಶಿಬಿರಗಳನ್ನು 'ವಾಂಜರಿ' ಹಳ್ಳಿಯಲ್ಲಿ ಏರ್ಪಡಿಸಿ. ಆ ಗ್ರಾಮದ ಸ್ವಚ್ಛತೆ, ಉಪರಸ್ತೆಗಳ ತಯ್ಯಾರಿಕೆ ಹಾಗೂ ಜನೋಪಯೋಗಿ ಶಿಕ್ಷಣದ ಉಪನ್ಯಾಸ ನೀಡಿದರು. ಹಾಗೂ ಹೊಸ ಕಾಲೇಜಿನ ಆವರಣದ ಸುತ್ತ ಅನೇಕ ಗಿಡಮರಗಳನ್ನು ನೆಡಿಸಿದರು. ಇಂದಿಗೂ ಅವು ನಳನಳಿಸುವುದನ್ನು ಕಂಡು ಸಂತೋಷಪಡುತ್ತಾರೆ.

ಈಗ ೩೨ ವರ್ಷ ಸೇವೆ ಸಲ್ಲಿಸಿರುವ ಸೋಮನಾಥರು ಈಗ ಸಹ ಪ್ರಾಧ್ಯಾಪಕರಾಗಿ, ಕಾಲೇಜಿನ ಉಪ ಪ್ರಾಂಶುಪಾಲರಾಗಿ ಹಾಗೂ 'ಬೌದ್ಧ ಅಧ್ಯಯನ ಕೇಂದ್ರದ' ಸಂಯೋಜನಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಕನ್ನಡ ಸಂಘವನ್ನು ಸಂಸ್ಥಾಪಿಸಿ ಅದರ ಆರಂಭಿಕ ಕಾರ್ಯ ಅಧ್ಯಕ್ಷರಾಗಿ ಅನೇಕ ಕನ್ನಡ ಪರ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ. ಈ ನಿಮಿತ್ತವಾಗಿ ಇಲ್ಲಿಯ ವಿದ್ಯಾರ್ಥಿಗಳಿಗೆ ಡಾ.ಎಂ.ಎಸ್.ಲಠ್ಠೆ, ಪ್ರೊ.ಎಸ್.ಆರ್.ಶಾಸ್ತ್ರಿ, ಪ್ರೊ.ವೀರೇಂದ್ರ ಸಿಂಪಿ, ಡಾ. ಬಸವರಾಜ ಸಬರದ, ಡಾ.ಮೀನಾಕ್ಷಿ ಬಾಳಿ, ಪ್ರೊ.ವ್ಹಿ.ಜಿ.ಪೂಜಾರ, ಪ್ರೊ.ಬಿ.ಜಿ.ಮೂಲಿಮನಿ, ಪ್ರೊ.ಡಿ.ಬಿ.ನಾಯಕ, ಇಟಗಿ ಈರಣ್ಣ ಹಾಸ್ಯ ಕಲಾವಿದ ಗಂಗಾವತಿ ಬೀಚಿ, ಡಾ. ಸ್ವಾಮಿರಾವ ಕುಲಕರ್ಣಿ, ಶ್ರೀಮತಿ ಗೀತಾ ನಾಗಭೂಷಣ, ಸರಜೂ ಕಾಟಕರ್, ಡಾ.ಎಂ.ಎಂ.ಕಲಬುರ್ಗಿ, ಡಾ.ಪ್ರಭು ಖಾನಾಪುರೆ ರಂತಹ ಅನೇಕ ಸಾಹಿತಿಗಳು ಮತ್ತು ಕಲಾವಿದರ ಪರಿಚಯವಾಯಿತು. ಕಾಲೇಜಿನ ವಾರ್ಷಿಕೋತ್ಸವ ಹಾಗೂ ರಜತ ಮಹೋತ್ಸವದ ಸಂದರ್ಭದಲ್ಲಿ ಪ್ರಧಾನ ಸಂಪಾದಕರಾಗಿ 'ಶ್ರೀ ವೀರಭದ್ರ' ಎಂದ ಸ್ಮರಣ ಸಂಚಿಕೆಯನ್ನು ಹೊರತರುವಲ್ಲಿ ಬಹಳ ಶ್ರಮವಹಿಸಿದರು. ವೃತ್ತಿ ಜೀವನದೊಂದಿಗೆ ಆಡಳಿತ ಮಂಡಳಿಗಳಿಗೆ ಗೌರವ ಆಡಳಿತಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ ಹೆಸರು ಇವರಿಗಿದೆ.

ಶ್ರೀ ವೀರಭದ್ರೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುವುದರ ಜೋತೆಗೆ ಬೀದರಿನ ಕರ್ನಾಟಕ ಕಾಲೇಜಿನ ಸ್ನಾತಕೊತ್ತರ ಕೇಂದ್ರದಲ್ಲಿ ಗೌರವ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮಗಳ ಉದ್ಧಾರವೆ ದೇಶದ ಉದ್ಧಾರವೆಂದು ನಂಬಿರುವ ಅವರು ಗ್ರಾಮಿಣ ಪ್ರದೇಶದ ಮಕ್ಕಳು ಸಹ ಮುಖ್ಯ ವಾಹಿನಿಗೆ ಬರಬೇಕೆಂಬುವುದು ಇವರ ಉದ್ದೇಶ. ಅದಕ್ಕಾಗಿ ಗ್ರಾಮಿಣ ಪ್ರದೇಶದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದಾರೆ.[೪]

---

೪. ಬೀದರ ಜಿಲ್ಲೆಯ ಹಿರಿಯ ಸಾಹಿತಿಗಳು ಸಂ. ಹಂಸಕವಿ -೨೦೧೦ ಪುಟ ೨೮೭-೮೭

ಈ ಕ್ಷೇತ್ರದ ಸಾಂಸ್ಕೃತಿಕ ಹಿರಿಮೆ ಗರಿಮೆಗಳನ್ನು ಸಂಶೋಧಿಸುವಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದಾರೆ. ಯು.ಜಿ.ಸಿ. ಅನುವಾದದ ನೆರವಿನಿಂದ ಕಿರು ಸಂಶೋಧನಾ ಯೋಜನಾಡಿಯಲ್ಲಿ ಹುಮನಾಬಾದ ತಾಲ್ಲೂಕಿನ ನಾಟಿ ಔಷಧ ಪದ್ಧತಿ ಹಾಗೂ ಔಷಧಿ ಸಸ್ಯಗಳು ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ ಕಿರು ಪ್ರಬಂಧ ರಚಿಸಿದ್ದಾರೆ. ೧೯೯೫ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ 'ಆದಯ್ಯ' ಒಂದು ಅಧ್ಯಯನ ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧ ಮಂಡಸಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ. ಅಲ್ಲದೆ ರಾಜ್ಯ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ವಿಚಾರ ಸಂಕೀರ್ಣಗಳನ್ನು ಹಮ್ಮಿಕೊಂಡು ಅವುಗಳನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿದ್ದಾರೆ. ಸೇವೆಯಲ್ಲಿದ್ದುಕೊಂಡು ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ೧೦೦೦ ಕ್ಕಿಂತ ಹೆಚ್ಚು ಉಪನ್ಯಾಸಗಳನ್ನು ನೀಡಿದ್ದಾರೆ.

ವೃತ್ತಿ ಜೀವನದಲ್ಲಿ ಸೋಮನಾಥ ಯಾಳವಾರರು ಗಳಿಸಿದ ಅನುಭವ ದೊಡ್ಡದು. ಸತತ ಅಧ್ಯಯನ, ಅಧ್ಯಾಪನ ಫಲವಾಗಿ ಸಂಶೋಧನಾ ದೃಷ್ಟಿಯು ಅತ್ಯಂತ ತೀಕ್ಷ್ಣವಾಗಿದ್ದು, ವಿದ್ಯಾರ್ಥಿಗಳ ಮನೊಭೂಮಿಕೆಯಲ್ಲಿ ಇವುಗಳನ್ನೇ ಬಿತ್ತಿ ಬೆಳೆಸಿದ್ದಾರೆ. ಅವರ ಕೈಯಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ಕವಿಗಳಾಗಿ, ಲೇಖಕರಾಗಿ, ಸಂಶೋಧಕರಾಗಿ ಹೊರ ಹೊಮ್ಮಿದ್ದಾರೆ.

ನೇರ ನುಡಿ, ಸರಳ, ಸಜ್ಜನಿಕೆಯ ಹೃದಯಜೀವಿ ಸೋಮನಾಥರು. ಅವರ ಉಪನ್ಯಾಸಗಳು ನೇರವಾಗಿ ಹೃದಯ ತಟ್ಟುವಂತವುಗಳು. ಹೀಗಾಗಿ ಅವರ ಸಾಮಾಜಿಕ ಕ್ಷೇತ್ರದಲ್ಲಿ ಮಾಡುವ ಭಾಷಣಗಳಿಗೂ ಜನರು ಮುಗಿಬಿಳುತ್ತಾರೆ. ಶರಣ ಪ್ರೇಮಿಯಾಗಿರುವ ಇವರು ಬಸವಾದಿ ಶರಣರನ್ನು ಕುರಿತು ವೈಚಾರಿಕವಾಗಿ ಮಾತನಾಡುತ್ತಾರೆ. ವೃತ್ತಿ ಜೀವನದಲ್ಲಿ ಅವರು ಸಾಹಿತ್ಯದ ವಿದ್ಯಾರ್ಥಿಯಾಗಿ ಅನೇಕ ಕಾರ್ಯಗಾರ, ವಿಚಾರ ಸಂಕೀರ್ಣ, ದತ್ತಿ ಉಪನ್ಯಾಸ, ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಮೂರು ವರ್ಷಗಳ ಕಾಲ ಬೀದರ ಜಿಲ್ಲೆಯ 'ಕನ್ನಡ ಜಾಗೃತಿ' ಸಮಿತಿಯ ಸದಸ್ಯರಾಗಿಯೂ ಕೆಲಸ ಮಾಡಿದ್ದಾರೆ. ಕನ್ನಡ ಪರವಾದ ಎಲ್ಲಾ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿರುವ ಸೋಮನಾಥರು ಈ ಭಾಗದ ಒಬ್ಬ ಸಾಂಸ್ಕೃತಿಕ ರಾಯಭಾರಿ ಎನಿಸಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲಿ

ತಮ್ಮ ಚಿಂತನೆಗಳನ್ನು ಮಂಡಿಸಿರುವ ಇವರು ಅನೇಕ ಉದಯೋನ್ಮುಖ ಬರಹಗಾರರಿಗೆ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ, ಮುನ್ನುಡಿ ಅಭಿಪ್ರಾಯಗಳನ್ನು ಬರೆದು ಹಾರೈಸಿದ್ದಾರೆ. ಕನ್ನಡ ಸಾಹಿತ್ಯ ಹಾಗೂ ಸಂಶೋಧನಾ ಕ್ಷೇತ್ರಕ್ಕೆ ಅನೇಕ ಯುವ ಪ್ರತಿಭೆಗಳನ್ನು ಪರಿಚಯಿಸಿದ ಕಿರ್ತಿ ಇವರದ್ದಾಗಿದೆ ಎನ್ನಬಹುದು. ಪ್ರತಿ ವರ್ಷ ಕಾಲೇಜಿನಲ್ಲಿ ಕನಿಷ್ಠ ಇಬ್ಬರು ಮೂವರು ವಿದ್ಯಾರ್ಥಿಗಳನ್ನು ಲೇಖಕರನ್ನಾಗಿ ಮಾರ್ಪಡಿಸಿದ ಅನೇಕ ಉದಾಹರಣೆಗಳು ಸಿಗುತ್ತವೆ.

ಸಾಂಘಿಕ ಬದುಕು:

ಸ್ನೇಹ ಜೀವಿಗಳು, ಹಸನ್ಮುಖರು ಹಾಗೂ ಮೃದುಮಾತಿನ ಸೋಮನಾಥ ಯಾಳವಾರರು ಸಂಘ ಜೀವಿಯಾಗಿದ್ದಾರೆ. ತಮ್ಮ ವೃತ್ತಿ ಬದುಕಿನ ಜೊತೆಗೆ ವಿವಿಧ ಸಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಸಂಘ ಸಂಸ್ಥೆಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಬೆಂಗಳೂರು, ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನ ಆಜೀವ ಸದಸ್ಯತ್ವ ಹೊಂದಿರುವುದಲ್ಲದೆ, ನಾದವೇದಿಕೆ, ಸಮರಸ ಬಳಗ, ಕನ್ನಡ ಸಂಘ, ಬಸವ ಸೇವಾ ಪ್ರತಿಷ್ಠಾನಗಳ ಸದಸ್ಯರಾಗಿ, ಕರ್ನಾಟಕ ಸಾಹಿತ್ಯ ಪರಿಷತ್ತಿನ ಪದಾಧಿಕಾರಿ ಹಾಗೂ ಕನ್ನಡ ಜಾನಪದ ಪರಿಷತ್ತಿನ (ತಾಲ್ಲೂಕು) ಘಟಕದ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರೊಂದಿಗೆ ಗುಲಬರ್ಗಾ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಾಗಿ, ಪರೀಕ್ಷಾ ಸಮಿತಿಯ ಸ್ನಾತಕ ವಿಭಾಗಕ್ಕೆ ಚೇರಮನ ಆಗಿ, ಸದಸ್ಯರಾಗಿ ಕಳೆದ ೩೦ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಇದರೊಂದಿಗೆ ಬೀದರ ಜಿಲ್ಲೆಯ 'ಕನ್ನಡ ಜಾಗೃತಿ' ಸಮಿತಿಯ ಸದಸ್ಯರಾಗಿ ಗುಲಬರ್ಗಾ ವಿಶ್ವವಿದ್ಯಾಲಯದ 'ಬಸವಾದಿ ಶರಣ ಸಾಹಿತ್ಯ ಕೇಂದ್ರ'ದ ಸಲಹಾ ಸಮಿತಿಯ ಸದಸ್ಯರಾಗಿಯೂ ಆರು ವರ್ಷ ಕಾರ್ಯಗೈದಿದ್ದಾರೆ. ಜಿಲ್ಲೆಯ ಅನೇಕ ಕನ್ನಡ ಸಂಘಟನೆಗಳ ಸಾಮಾಜಿಕ ಕಾಳಜಿಯುಳ್ಳ ಸಂಘಗಳ ನಿರ್ದೇಶಕರಾಗಿ, ಸಲಹಾಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

ತಮ್ಮ ಕಾಲೇಜಿನಲ್ಲಿ ವೃತ್ತಿ ಜೀವನದ ಜೊತೆಗೆ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾಗಿ, ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಪಂಡಿತ ಜವಾಹರಲಾಲ

ಅಧ್ಯಯನ ಕೇಂದ್ರಗಳಿಗೆ ಸಲಹಗಾರರಾಗಿ, 'ಬೌದ್ಧ ಅಧ್ಯಯನ ಕೇಂದ್ರ'ದ ಸಮನ್ವಯಾಧಿಕಾರಿಯಾಗಿ ಕಾರ್ಯ ಮಾಡುತ್ತಿದ್ದಾರೆ. ಈ ಕೇಂದ್ರದ ಮೂಲಕ ರಾಷ್ಟ್ರ ಮಟ್ಟದ ವಿಚಾರ ಸಂಕೀರ್ಣಗಳನ್ನು ಏರ್ಪಡಿಸಿ ಯಶಸ್ಸುಗಳಿಸಿದ್ದಾರೆ.

ಸೋಮನಾಥ ಯಾಳವಾರರ ಸಾಂಘಿಕ ಕಾರ್ಯ ಘನವಾದುದು. ಅವರ ಕಾರ್ಯದಕ್ಷತೆ ಎಂಥವರನ್ನು ಆಕರ್ಷಿಸುತ್ತದೆ. ಅವರ ವಾಕ್ ಚಾತುರ್ಯ ಮನಮೋಹಕವಾದುದು. ಯಾಳವಾರರು ನಾಡು ನುಡಿಯನ್ನು ಅಭಿವೃದ್ಧಿ ಗೊಳಿಸುವ ತುಡಿತ ಉಳ್ಳವರು. ಕನ್ನಡ ಸಾಹಿತ್ಯ, ಕಲೆ, ಸಂಗೀತವನ್ನು ಇಲ್ಲಿ ಸದಾ ಕ್ರಿಯಾಶೀಲವಾಗಿರುವಂತೆ ಪ್ರಯತ್ನಿಸುವವರು. ಹೀಗಾಗಿ ಅವರ ಸುತ್ತಮುತ್ತ ಕಲಾವಿದರ ಬಳಗ ಯಾವಾಗಲು ಇರುತ್ತದೆ. ಎಲ್ಲರನ್ನು ಪ್ರೀತಿಯಿಂದ ಕಾಣುವ ಅಪರೂಪದ ಸಂಘಟಕ ಅಥವಾ ಸಾಂಘಿಕ ಜೀವಿ ಇವರು ಎನ್ನಬಹುದು.

ಕೌಟುಂಬಿಕ ಬದುಕು:

ಸೋಮನಾಥ ಯಾಳವಾರ ಅವರದು ಸಂತೃಪ್ತ ಕುಟುಂಬ. ತಂದೆ-ತಾಯಿ, ಸಹೋದರ-ಸಹೋದರಿಯರೊಂದಿಗೆ ಅನೂನ್ಯವಾಗಿ ಬಾಳಿದವರು. ಬಾಲ್ಯದಿಂದಲೂ ಕೌಟುಂಬಿಕ ಪ್ರೀತಿಯ ಸುಖವನ್ನು ಅನುಭವಿಸಿದ್ದಾರೆ. ಬದುಕಿನಲ್ಲಿ ಕಂಡಂತಹ ಕಷ್ಟ-ಸುಖಗಳನ್ನು ಸಮನಾಗಿ ಸ್ವೀಕರಿಸಿ, ಯಾವುದಕ್ಕೂ ಕೂಗ್ಗದೆ-ಹಿಗ್ಗದೆ ಸಮಚಿತ್ತತೆಯನ್ನು ಕಾಯ್ದುಕೊಂಡು ಬಂದವರು ಇವರು. ೧೯೮೧ರ ಮೇ ೧೭ ರಂದು ಹಾವೇರಿಯ ಜತ್ತಿಮನೆತನದ ಮಗಳು ಸುಲೋಚನಾಳೊಂದಿಗೆ ವಿವಾಹವಾದರೂ ಇವರ ಮದುವೆಯು ಯಾಳವಾರ ಇಚ್ಛೆಯಂತೆ ಅವರು ಜೀವನ ಶಿಕ್ಷಣ ಪಡೆದ ಧಾರವಾಡದ ಮುರುಘಾಮಠದಲ್ಲಿಯೇ ಜರುಗಿತು. ಇಚ್ಛೆಯನರಿವ ಸತಿಯಾಗಿ ಸುಲೋಚನಾ ಅವರು ಯಾಳವರರ ಮನೆ ಮನವನ್ನು ಬೆಳಗಿದ್ದಾರೆ. ಇವರದು ದೊಡ್ಡ ಕುಟುಂಬ ಮದೆವೆಯಾಗಿ ೩೦ ವಸಂತಗಳನ್ನು ತುಂಬಾ ಸಂತೊಷದಿಂದ ಕಳೆದಿದ್ದಾರೆ. ನಾಲ್ಕು ಜನ ಮಕ್ಕಳು ಮೊದಲಿನ ಮೂವರು ಹೆಣ್ಣು ಮಕ್ಕಳು, ಕೊನೆಯವನು ಮಗ. ಮಕ್ಕಳಹೆಸರುಗಳನ್ನು ತುಂಬಾ ಸುಂದರವಾಗಿ ಇರಿಸಿದ್ದಾರೆ. ಮೊದನೆಯವಳು ಕಾವ್ಯಶ್ರೀ, ಎರಡನೆಯವಳು ನೀಲವೇಣಿ, ಮೂರನೆಯವಳು ಶಾಂತಲಾ, ಮಗ ಮೃತ್ಯುಂಜಯ.

ಮೊದಲ ಮಗಳು ಬಿ.ಎ.ಎಂ.ಎಸ್. ಪದವಿ ಪಡೆದು ವೈದ್ಯ ವೃತ್ತಿ ಕೈಗೊಂಡಿದ್ದರೆ, ಎರನೆಯವಳು ಗಣಕಯಂತ್ರದಲ್ಲಿ ಎಂ.ಎಸ್.ಸಿ. ಬಿ.ಇಡ್. ಪದವಿಧರೆ, ಮೂರನೆಯ ಮಗಳು ಎಂ.ಟೆಕ್. ಓದಿದರೆ, ಮಗ ಇಂಜನೀಯರಿಂಗ್ ಪದವಿಯನ್ನು ಅಭ್ಯಾಸಿಸುತ್ತಿದ್ದಾನೆ. ಇಬ್ಬರೂ ಹೆಣ್ಣು ಮಕ್ಕಳನ್ನು ಯೋಗ್ಯ ಮನೆತನಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ಇಬ್ಬರೂ ಮೊಮ್ಮಕ್ಕಳನ್ನು ಕಂಡಿರುವ ತಾತನವರಾಗಿದ್ದಾರೆ.

ಮನೆಯ ಹೆಚ್ಚಿನ ಜವಾಬ್ದಾರಿಯನ್ನು ತಮ್ಮ ಧರ್ಮಪತ್ನಿಯವರಿಗೆ ಒಪ್ಪಿಸಿ, ಓದುಬರಹದಲ್ಲಿ ತಮ್ಮನ್ನು ಹೆಚ್ಚುಕಾಲ ತೊಡಗಿಸಿಕೊಂಡಿದ್ದಾರೆ. ಸದಾ ಹಸನ್ಮುಖಿಯಾಗಿ ತಮ್ಮೊಂದಿಗೆ ಸಂಸಾರದ ಭಾರ ಹೊತ್ತಿರುವ ಸುಲೋಚನಾ ಅವರು ಇವರ ಎಲ್ಲಾ ಬಗೆಯ ಜೀವನಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದಾರಂತೆ. ಆದರ್ಶ ದಾಂಪತ್ಯ ಇವರದು. ಹೊರಗೀನ ಯಾವುದೆ ವಸ್ತು ತರಲು ಹೋಗಬೇಕಾದರೆ ದಂಪತಿಗಳಿಬ್ಬರು ಜೊತೆಯಲ್ಲಿ ಹೋಗುವುದೇ ಹೆಚ್ಚು. ಇದು ಅವರ ತಂದೆ-ತಾಯಿಯರಿಂದ ಬಂದ ಬಳವಳಿ ಎನ್ನುತ್ತಾರೆ. ಸೋಮನಾಥರು ಜೀವನವನ್ನು ಅರ್ಥಪೂರ್ಣವಾಗಿ ಕಾಣುವ ಹಾಗೂ ಅದು ನಿಜ ಅರ್ಥದಲ್ಲಿ 'ಹೊಂದಾಣಿಕೆ' ಎನ್ನುವ ಇವರ ಬದುಕು ಅನುಕರಣಿಯವಾದುದು ಎನ್ನಬಹುದು.

ಸಾಹಿತ್ಯ ಜೀವನ ಮತ್ತು ಪರಿಸರ.

ವಿದ್ಯಾರ್ಥಿಯಾಗಿದ್ದಾಗಲೇ ಕವನ ಬರೆಯಲು ಆರಂಭಿಸಿದ ಸೋಮನಾಥರು ಅವುಗಳನ್ನು ಪ್ರಕಟಿಸಲಿಲ್ಲ. ಇದಕ್ಕೆ ಕಾರಣ ಆಗ ಅವುಗಳಿಗೆ ಪ್ರೋತ್ಸಾಹ ಸಿಗಲಿಲ್ಲ. ಆದರೆ ಊರಲ್ಲಿ ಆಗ ಆಡುತ್ತಿದ್ದ ನಾಟಕ, ದೊಡ್ಡಾಟ, ಮೊಹರಂ ಕುಣಿತ, ಸುಗ್ಗಿ ಹಾಡುಗಳನ್ನು ಹಾಡುತ್ತ ಅದೇ ದಾಟಿಲಯದಲ್ಲಿ ಕೆಲವು ಹಾಡು ಹಾಡುತ್ತಾ ಬೆಳೆದರು. ಅವುಗಳನ್ನು ಎಲ್ಲಿಯೂ ದಾಖಲಿಸಿಡಲಿಲ್ಲ. ಗ್ರಾಮ ಸಂಸ್ಕೃತಿಯ ವಾತಾವರಣದಲ್ಲಿ ಕೃಷಿ ಪ್ರಧಾನ ಉದ್ಯೋಗವನ್ನು ನಂಬಿಕೊಂಡ ಕುಟುಂಬದಲ್ಲಿ ಜನಿಸಿದ ಇವರು ಮೊದಮೊದಲು ಜಾನಪದ ಮಟ್ಟದ ಸಾಹಿತ್ಯಕ್ಕೆ ಮಾರುಹೋದರು. ಇಲ್ಲಿ ಅವರಲ್ಲಿ ಸಾಹಿತ್ಯದ ಆಸೆ ಚಿಗುರಲು ಕಾರಣರಾದವರು ತಾಯಿ, ಸುತ್ತಮುತ್ತಲಿನ ಜನಪದ ಕಲಾಕಾರರು ಇವರಿಂದಲೇ ಪ್ರೇರಣೆ ಪಡೆದ

ಯಾಳವಾರರಿಗೆ ಧಾರವಾಡ ಪರಿಸರ ಲೇಖನ, ಕವನ ಬರೆಯಲು ಆಸ್ಪದ ನೀಡಿತು. ಹೀಗಾಗಿ ಇವರು ಧಾರವಾಡದಲ್ಲಿ ಎಂ.ಎ.ಪದವಿಯಲ್ಲಿ ಓದುವಾಗ 'ಮಂಗಳ ಕ್ಷೇತ್ರ ಇಂಗಳೇಶ್ವರ' ಎಂಬ ಲೇಖನ ಬರೆದು 'ಮುರುಘಾಮಠದ ಪತ್ರಿಕೆಯಲ್ಲಿ (ಸಾವಧಾನ) ಪ್ರಕಟಿಸಿದರು.

ಸೋಮನಾಥರ ಸಾಹಿತ್ಯ ರಚನೆಗೆ ಪ್ರೇರಕ ಶಕ್ತಿಯೆಂದರೆ ಧಾರವಾಡದ ಶ್ರೀ ಮಹಾಂತ ಅಪ್ಪಗಳು ಹಾಗೂ ಇಂಗಳೇಶ್ವರದ ಚೆನ್ನಬಸವ ಸ್ವಾಮಿಗಳು. ಅದಕ್ಕೆ ನೀರೆದವರು ಕೆಲವು ಸಹೋದ್ಯೋಗಿ ಮಿತ್ರರು. ಇವರು ಏನನ್ನಾದರೂ ಬರೆದಾಗ ಅದನ್ನು ಮೊದಲು ಓದಿ ಹೇಳುವುದು ಅವರ ಧರ್ಮ ಪತ್ನಿಗೆ. ಅವರು ನೀಡುವ ಸಲಹೆ ಸೂಚನೆಗಳನ್ನು ಇವರು ತುಂಬು ಹೃದಯದಿಂದ ಸ್ವೀಕರಿಸುತ್ತಾರೆ. ಹೀಗಾಗಿ ಇವರ ಸಾಹಿತ್ಯದ ಮೊದಲ ಓದುಗರು ವಿಮರ್ಶಕರೆಂದರೆ ಇವರ ಧರ್ಮ ಪತ್ನಿ.

ಕಾಲೇಜುಗಳಲ್ಲಿ ಓದುವಾಗಲೇ ಇವರು ಕೆಲವು ಕಾರ್ಯ ಕ್ರಮಗಳಲ್ಲಿ ಸಂತ ಬರೆದ ಕವನಗಳನ್ನು ಓದಿ, ಹಾಡಿ ಸಂತೋಷಪದುತ್ತಿದ್ದರು. ಬಿ.ಎ.ಅಂತಿಮ ತರಗತಿಯಲ್ಲಿ ಓದುವಾಗ ಬಿಳ್ಕೊಡುವ ಸಮಾರಂಭದ ಸಂದರ್ಭದಲ್ಲಿ ಇವರು ರಚಿಸಿದ 'ಹೊಗಿಬರುವೆವು ಗೆಳೆಯಾ' ಎನ್ನುವ ಕವನ ಕಾಲೇಜಿನ ಸಂಚಿಕೆಯಲ್ಲಿ ಬರೆಯಲಾಗಿದೆಯಂತೆ. ಆ ಸಂದರ್ಭದಲ್ಲಿ ಇವರು ಬರೆಯಲು, ಭಾಷಣ ಮಾಡಲು ಪ್ರೋತ್ಸಾಹಿಸಿದವರೆಂದರೆ ಪ್ರೋ.ಜಿ.ಎಸ್.ಮಾಮನಿ ಹಾಗೂ ಬಿ.ಎಂ.ಹೀರೆಮಠರು, ಅವರ ಪ್ರಭಾವವನ್ನು ಇನ್ನು ನೆನಪಿಸುತ್ತಾರೆ ಇವರು. ನಂತರದಲ್ಲಿ ಸ್ನಾತಕೊತ್ತರ ಪದವಿ ಓದುವಾಗ ಗುರುಗಳಾಗಿದ್ದ ಎಂ.ಎಂ.ಕಲಬುರ್ಗಿ, ಸೋಮಶೇಖರ ಇಮ್ರಾಪೂರ ಹಾಗೂ ಜೆ.ಎಸ್.ಕುಳ್ಳಿಯವರು ಇವರ ಸಾಹಿತ್ಯಕ್ಕೆ ಒಂದು ದಿಕ್ಕನ್ನು ಸೂಚಿಸಿದ್ದಾಗಿ ಹೇಳಿಕೊಳ್ಳುತ್ತಾರೆ. ಇವರೆಲ್ಲರ ಸಾಮಿಪ್ಯ-ಸಹಕಾರ-ಸಲಹೆ-ಸೂಚನೆಗಳ ಸ್ಫೂರ್ತಿ ಹೊತ್ತುಕೊಂಡು ನಂತರದಲ್ಲಿ ಬರವಣಿಗೆ ಆರಂಭಿಸಿದ್ದನ್ನು ಒತ್ತಿ ಹೇಳುತ್ತಾರೆ.

ಮೃದು ಹೃದಯದ ಸೋಮನಾಥರು ಮೊದಮೊದಲು ಕವಿತೆಗಳನ್ನು ಬರೆಯುತ್ತಿದ್ದು, ನಂತರದಲ್ಲಿ ಪ್ರಬಂಧ, ಲೇಖನಗಳನ್ನು ಬರೆಯಲು ಆರಂಭಿಸಿದರು.

೧೯೮೬ ರಲ್ಲಿ ಪಿ.ಬಿ.ಹೆಚ್. ಪ್ರಕಾಶನ ಬೆಂಗಳೂರದಿಂದ 'ಹುಮನಾಬಾದ ತಾಲ್ಲೂಕು ದರ್ಶನ' ಎಂಬ ಚಿಕ್ಕ ಕೃತಿಯನ್ನು ಪ್ರಕಟಿಸಿದರು. ಇದು ಆಗ ಬಹಳ ಜನರ ಮನ್ನಣೆ ಪಡೆಯಿತು. ಆನಂತರದಲ್ಲಿ ಕೆಲವು ಕಾಲ ಬರವಣಿಗೆ ಸ್ಥಗಿತವಾಯಿತು. ಸೃಜನಶೀಲ ವ್ಯಕ್ತಿಯಾಗಿದ್ದರು ಸಹ ಮನೆಯಲ್ಲಿ ಹಲವು ಕಾರಣಗಳಿಂದ ಬರೆಯಲಾಗಲಿಲ್ಲ. ಅತ್ಯುತ್ತಮ ಕೃತಿಗಳನ್ನು ಓದುವ ಹವ್ಯಾಸ ಇವರಿಗೆ ಬಾಲ್ಯದಿಂದಲೆ ಅಂಟಿಕೊಂಡಿತ್ತು. ಯಾವುದೇ ವಿಷಯವನ್ನು ಓದಿದರೂ, ಕಣ್ಮುಂದೆ ಗಮನಿಸಿದರೂ ಅದನ್ನು ಚಿಕಿತ್ಸಕ ಬುದ್ಧಿಯಿಂದ ನೋಡುವ ಗುಣ ಇವರದ್ದು. ಹೀಗಾಗಿ ಸಂಶೋಧಕ ದೃಷ್ಟಿ ಇವರ ಪಾಠದಲ್ಲಿ, ಮಾತಿನಲ್ಲಿ ಆರಂಭದಿಂದಲೂ ಇರುವುದನ್ನು ಇವರ ಅನೇಕ ಗೆಳೆಯರು ಹೇಳುತ್ತಾರೆ. ಬಹುಜನ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿರುವ ಪ್ರಾಧ್ಯಾಪಕರಾಗಿರುವುದರೊಂದಿಗೆ ಉತ್ತಮ ವಾಗ್ಮಿಯಾಗಿ, ಉತ್ತಮ ಭಾಷಣಕಾರರೂ ಏನಿಸಿದ್ದಾರೆ. ಅವರ ಅಧ್ಯಯನದ ಆಸಕ್ತಿಯ ಕ್ಷೇತ್ರ 'ವಚನ ಸಾಹಿತ್ಯ' ಆಗಿರುವುದರಿಂದ ಸಹಜವಾಗಿಯೇ ವೈಚಾರಿಕತೆ, ವೈಜ್ಞಾನಿಕ ವಿಚಾರಗಳು ಮನೆ ಮಾಡಿದ್ದು, ಮೌಢ್ಯತೆ, ಅಜ್ಞಾನ, ಕಂದಾಚಾರಗಳ ವಿರುದ್ಧ ಬಂಡೆಳುವುದು ಅವರ ಒಟ್ಟು ಬದುಕು-ಬರಹದ ನಿಲುವಾಗಿದೆ ಎನ್ನುತ್ತಾರೆ ವಿಮರ್ಶಕರು.[೫]

ಬೀದರ ಜಿಲ್ಲೆಯ ಸಾಹಿತ್ಯ ಕ್ಷೇತ್ರಕ್ಕೆ ಸೋಮನಾಥ ಯಾಳವಾರರ ಕೊಡುಗೆ ಗಣನೀಯವಾಗಿದೆ. 'ಹುಮನಾಬಾದ ತಾಲ್ಲೂಕುದರ್ಶನ', 'ಬೀದರ ಜಿಲ್ಲೆಯ ಶರಣ ಸ್ಮಾರಕಗಳು', 'ಬೀದರ ಜಿಲ್ಲಾ ದರ್ಶನ', 'ಕುಂಬಾರ ಗುಂಡಯ್ಯ', 'ಕರಕನಳ್ಳಿ ಬಕ್ಕ ಪ್ರಭು', 'ಮಾಣಿಕಪ್ರಭು', 'ಹುಮನಾಬಾದ ಶ್ರೀ ವೀರಭದ್ರೇಶ್ವರ', 'ಉರಿಲಿಂಗ ಪೆದ್ದಿ' ಮೊದಲಾದ ಕೃತಿಗಳನ್ನು ಅವರು ರಚಿಸಿ ಇಲ್ಲಿಯ ಹಲವು ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಅದಲ್ಲದೆ ಅವರ ಬಿಡಿಲೇಖನಗಳಾದ 'ಬೀದರ ಜಿಲ್ಲೆಯ ವಾಸ್ತು ಶಿಲ್ಪ ಮತ್ತು ಶಿಲ್ಪ ಕಲೆಗಳು', ಬೀದರ ಜಿಲ್ಲೆಯ ದೇಶಿ ಕಲೆಗಳು, ಹುಮನಾಬಾದ ತಾಲ್ಲೂಕಿನ ನಾಟಿ ಔಷಧ ಪದ್ಧತಿ ಹಾಗೂ ಔಷಧಿ ಸಸ್ಯಗಳು, ಶ್ರೀ ಬಂಡೆಪ್ಪಾ ಖೂಬಾರ ವಚನ ಶತಕದ ಲೇಖನ ಮೊದಲಾದವುಗಳು ಸಂಶೋಧನಾತ್ಮಕ ದೃಷ್ಟಿಯುಳ್ಳ ಲೇಖನಗಳಾಗಿದ್ದು ಗಮನಾರ್ಹವೆನಿಸುತ್ತವೆ.

---

೫. ಬೀದರ ಜಿಲ್ಲೆಯ ಹಿರಿಯ ಸಾಹಿತಿಗಳು ಸಂ. ಹಂಸಕವಿ -೨೦೧೦ ಪುಟ ೨೮೭-೮೭

ಸಂಶೋಧನಾ ಕ್ಷೇತ್ರದಲ್ಲಿಯೂ ಇವರ ಕಾರ್ಯ ದಕ್ಷತೆ ತುಂಬಾ ಮಹತ್ವದ್ದೆನಿಸುತ್ತದೆ. ಈಗಾಗಲೇ ಇವರು ತಮ್ಮ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ, ಬೀದರ ಜಿಲ್ಲೆಯ ಪ್ರಸಿದ್ಧ ಕ್ಷೇತ್ರ 'ಸೀಮಿನಾಗಣ್ಣ'ನ ಬಗೆಗೆ, 'ಬೀದರ ಜಿಲ್ಲೆಯ ಬುಲಾಯಿ ಹಾಡುಗಳ' ಬಗೆಗೆ, ಇಲ್ಲಿಯ ಪ್ರಮುಖ ಕವಿಗಳಾದ ಶ್ರೀ ಬಂಡೆಪ್ಪಾ ಖೂಬಾ, ಶ್ರೀ ದೇಶಾಂಶ ಹುಡಗಿಯವರ ಬಗೆಗೆ ಹಾಗೂ ಜನಪದ ಸಾಹಿತ್ಯದ ಪ್ರಕಾರಗಳಾದ 'ಸಾಂಪ್ರದಾಯದ ಹಾಡುಗಳು', 'ದೇವರೋತ್ಸವಗಳ ಬಗ್ಗೆ' ಸಂಶೋಧನೆ ಮಾಡಿಸಿದ್ದಾರೆ. ಇವು ತುಂಬಾ ನವೀನವಾದ ವಿಷಯಗಳ ಶೋಧನೆಯನ್ನು ಒಳಗೊಂಡಿವೆ.

ಓದಿನಲ್ಲಿ ಮಗ್ನರಾಗುವ ಇವರು ಪುಸ್ತಕ ಪ್ರೇಮಿಗಳಾಗಿದ್ದುದರಿಂದ ಅವರಲ್ಲಿ ಸಾಹಿತ್ಯಿಕ ಆಸಕ್ತಿ ಸಹಜವಾಗಿತ್ತು. ವೃತ್ತಿ ಜೀವನದಲ್ಲಿ ಕಾಲಿರಿಸಿದ ಮೇಲೆ ಅನೇಕ ಕನ್ನಡ ಪರ ಸಾಹಿತ್ಯ, ಕಲೆ, ಚಿಂತನಾ ಕಾರ್ಯಕ್ರಮಗಳಲ್ಲಿ, ಸಮ್ಮೇಳನ ತರಬೇತಿಗಳಲ್ಲಿ ಭಾಗವಹಿಸಿದರೂ. ಇಲ್ಲೆಲ್ಲ ಶ್ರೇಷ್ಠ ಕವಿಗಳ ಸಾಹಿತಿಗಳ ಓದು ಬರಹ ಕೇಳಿ ಪ್ರಭಾವಿತರಾದರೂ. ಈ ಸಂದರ್ಭಗಳು ಯಾಳವಾರ ಅವರನ್ನು ಉತ್ತಮ ಸಾಹಿತಿಗಳಾಗಲು ನಾಂದಿ ಹಾಕಿದವು, ತಮ್ಮ ಅಧ್ಯಯನ, ಅಧ್ಯಾಪನದೊಂದಿಗೆ ಕವನ ರಚನೆ, ಹಾಡುಗಾರಿಕೆ ಮಹತ್ವ ಕೊಡುತ್ತಿದ್ದರು. ನಂತರದಲ್ಲಿ ಬರವಣಿಗೆಯ ಕಡೆಗೆ ಹೆಚ್ಚು ಆಕರ್ಷಿತರಾದರೂ. ಉರ್ದು, ಮರಾಠಿ, ಹಿಂದಿ, ಇಂಗ್ಲೀಷ, ತೆಲುಗು ಭಾಷೆಗಳ ದಟ್ಟ ಪ್ರಭಾವವಿರುವ ಈ ಪ್ರದೇಶದಲ್ಲಿ ಕನ್ನಡಕ್ಕೆ ಸ್ಥಾನ ಮಾನ ಹೆಚ್ಚು ಸಿಗಬೇಕೆಂಬ ಮಹಾದಾಸೆ ಹೊತ್ತು ಆ ದೃಷ್ಟಿಯಲ್ಲಿ ಕಾರ್ಯಪ್ರವೃತ್ತರಾಗಿ ಕನ್ನಡದಲ್ಲಿ ಈ ಭಾಗದ ಅನೇಕ ವಿಷಯಗಳನ್ನು ಕುರಿತು ಲೇಖನಗಳನ್ನು ಬರೆಯ ತೊಡಗಿದರು. ಇವರ ಕೆಲವು ಲೇಖನಗಳು ಕನ್ನಡ ದೀನ ಪತ್ರಿಕೆಗಳಲ್ಲಿ ಮೂಡಿ ಬಂದವು. 'ಹುಮನಾಬಾದ ಸಾಂಸ್ಕೃತಿಕ ಪರಿಸರ', ' ಹುಮನಾಬಾದ ಇತಿಹಾಸ ಪರಂಪರೆ' ಗಳು ಪ್ರಕಟವಾದವು. ಆನಂತರ ೧೯೮೬ರ ನಂತರದಲ್ಲಿ ಇವರ ಸಾಹಿತ್ಯ ಕೃಷಿ ಹುಲುಸಾಗಿ ಬೆಳೆಯಿತು. ಈವರೆ ಸಾಹಿತ್ಯದ ವಿವಿಧ ಪ್ರಕಾರಗಳನ್ನೊಳಗೊಂಡ ೨೦ ಕೃತಿಗಳು ಕನ್ನಡದಲ್ಲಿ ಪ್ರಕಟಗೊಂಡಿವೆ. ಅವುಗಳ ಸಮಗ್ರ ಅಧ್ಯಯನವನ್ನು ಮುಂದಿನ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ.

ಕಾಯಕ ಪ್ರೇಮಿ :- ಸೋಮನಾಥ ಯಾಳವಾರರು ತಾವು ಮಾಡುವ ಕಾರ್ಯದಲ್ಲಿ ಅತ್ಯಂತ ನಿಷ್ಠೇಯುಳ್ಳವರು. ಕನ್ನಡ ಪರವಾದ ಹಾಗೂ ಸಾಮಾಜಿಕ ರಚನಾತ್ಮಕತೆಯುಳ್ಳ ಸಂದರ್ಭಗಳಲ್ಲಿ ಎಡೆಬಿಡುವಿಲ್ಲದೆ ಕಾರ್ಯ ಮಾಡುತ್ತಾರೆ. ಸದಾ ಉತ್ಸಾಹದ ಬುಗ್ಗೆಯಂತಿರುವ ಇವರು ಪಾಠ ಹೇಳುವಾಗ ಎಂದೂ ಬೇಸರಿಸಿಕೊಳ್ಳುವುದಿಲ್ಲ.ಯಾವಾಗಲೂ ಕ್ರಿಯಾಶೀಲರಾಗಿರುತ್ತಾರೆ. ಬಸವಾನುಯಾಯಿ ಎನಿಸಿರುವ ಇವರು ಶರಣತತ್ವ ನಿಷ್ಠರು. ವಚನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದು, ಆ ಸಾಹಿತ್ಯದಲ್ಲಿಯ ಆನೇಕ ಸಂಗತಿಗಳನ್ನು ತಮ್ಮ ಲೇಖನಗಳ ಮೂಲಕ ಹೊರ ಹಾಕಿದ್ದಾರೆ, ಶರಣರಲ್ಲಿ ಪ್ರಮುಖವಾಗಿರುವ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ, ನುಲಿಯ ಚಂದಯ್ಯ, ಅಂಬಿಗರ ಚೌಡಯ್ಯ, ಮೋಳಿಗೆಯ ಮಾರಯ್ಯ, ಉರಿಲಿಂಗ ಪೆದ್ದಿ ಮೊದಲಾದ ಶರಣರ ಜೀವನ ಸಾಧನೆಯನ್ನು ಕುರಿತು, ಅವರ ವಚನಗಳಲ್ಲಿಯ ತತ್ವಗಳನ್ನು ಕುರಿತು ಚಿಂತನ ಪರವಾದ ಲೇಖನಗಳನ್ನು ಬರೆದು ಜನರಿಗೆ ತಿಳಿಸಲು ಪ್ರಯತ್ನಿಸಿದ್ದಾರೆ, ಹೆಚ್ಚು ಓದುವ, ಬರೆಯುವ ಹವ್ಯಾಸವುಳ್ಳ ಇವರು ಶರಣ ತತ್ವಗಳನ್ನು ಜೀವನದಲ್ಲಿ ಅವಡಿಸಿಕೊಂಡು ಬಾಳಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದು.

ಅಧ್ಯಯನ-ಅಧ್ಯಾಪನದೊಂದಿಗೆ ಸೃಜನಶೀಲ ಬರವಣಿಗೆಯಲ್ಲೂ ತಮ್ಮ ಗುರುತನ್ನು ಉಳಿಸಿಕೊಂಡಿದ್ದಾರೆ. ಜಾನಪದ ಹಾಡುಗಳನ್ನು ಹಾಡುತ್ತ, ಮಣ್ಣಿನ ಮಗನಾಗಿ ಬೆಳೆದಿದ್ದಾರೆ. ನಾಡು-ನುಡಿ ಸೇವೆ ಮಾಡುತ್ತಿದ್ದಾರೆ. ಕಾಲೇಜಿನಲ್ಲಿ ಕನ್ನಡ ಸಂಘದ ಮೂಲಕ ಅನೇಕ ಕನ್ನಡಪರ ಚಟುವಟಿಕೆಳನ್ನು ನಡೆಸಿದ್ದಾರೆ. ಬೌದ್ಧ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ, ದಿನಗಳ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ. ಯಾವುದೇ ಕಾರ್ಯಕ್ರಮವಿರಲಿ ತುಂಬಾ ಕ್ರಿಯಾಶೀಲರಾಗಿ ಓಡಾಡುತ್ತ ಗಮನ ಸೆಳೆಯುವ ಸೋಮನಾಥ ಯಾಳವಾರರು ಸಾಮಾಜಿಕ ಕ್ಷೇತ್ರದಲ್ಲೂ ಚಿರಪರಿಚಿತರಾಗಿದ್ದಾರೆ.

ಸಾಮಾಜಿಕ ಕಾರ್ಯಕ್ಷೇತ್ರ :-

ಸೋಮನಾಥ ಯಾಳವಾರರು ಜನಪರ ಚಿಂತನೆಯುಳ್ಳ ವ್ಯಕ್ತಿ. ಸಮಾಜದಲ್ಲಿಯ ಅನೇಕ ಜನರ ನೋವು ನಲಿವು, ಒಲವು-ಗೆಲವುಗಳನ್ನು ಕಂಡಿದ್ದಾರೆ ಅವರ ಕವನಗಳಲ್ಲಿ ಕೆಲವು ಲೇಖನಗಳಲ್ಲಿ ಈ ಅಂಶವು ಹೊರ-ಹೊಮ್ಮಿನಿಂತಿರುವುದನ್ನು ಗುರುತಿಸಬಹುದು. ಸಾಮಾಜಿಕ ಏಳ್ಗೆಗಾಗಿ ಬಾಳಿ

ಹೋಗಿರುವ ಆನೇಕ ಮಹಾಪುರುಷರ ಜೀವನ ಚರಿತ್ರೆಯನ್ನು ಅವರು ಓದಿದ್ದಾರೆ ಹಾಗೂ ಅವರ ಬಗೆಗೆ ಚಿಂತನಪರ ಲೇಖನಗಳನ್ನು ಬರೆದಿದ್ದಾರೆ ಸಾಹಿತ್ಯಕ ಸಾಧನೆಯೊಂದಿಗೆ ಇವರು ಆನೇಕ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಕ್ರಿಯೆಯಿಂದ ಭಾಗಿಯಾಗುತ್ತಿದ್ದಾರೆ.

ಬೀದರ ಪರಿಸರದ ಪ್ರಮುಖ ಲೇಖಕರಲ್ಲಿ ಒಬ್ಬರೆನಿಸಿರುವ ಸೋಮನಾಥ ಯಾಳವಾರರು, ಈ ಭಾಗದ ಅನೇಕ ಊರು ಕೇರಿಗಳಲ್ಲಿ, ಸಂಘು-ಸಂಸ್ಥೆಗಳಲ್ಲಿ ವಿದ್ವತಪೂರ್ಣವಾದ ಭಾಷಣ ಮಾಡಿದ್ದಾರೆ. ಸಾಮಾಜಿಕ ಕಳಕಳಿಯ ಅವರ ಮಾತುಗಳು ಸಾಮಾಜಿಕ ಬದುಕನ್ನು ಆರೋಗ್ಯಪೂರ್ಣವಾಗಿಡಲು ಸದಾ ಹರಿತವಾಗಿರುತ್ತದೆ. ಹುಮನಾಬಾದನಲ್ಲಿಯ ಕನ್ನಡ ಪರವಾದ, ಸಾಮಾಜಿಕ ಚಿಂತನೆಯಲ್ಲಿರುವ ಅನೇಕ ಸಂಘ-ಸಂಸ್ಥೆಗಳಿಗೆ ಇವರು ಸದಸ್ಯರಾಗಿದ್ದಾರೆ. 'ನಾದವೇದಿಕೆ' ಕನ್ನಡ ಸಂಘ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಪರಿಷತ್ತು, ಬಸವ ಸೇವಾ ಪ್ರತಿಷ್ಠಾನ, ಸಮರಸ ಬಳಗ, ಕರ್ನಾಟಕ ಸಾಹಿತ್ಯ ಪರಿಷತ್ತು, ವಚನೋತ್ಸವ ಸಮಿತಿಯಂತಹ ಹಲವು ಸಂಗ-ಸಂಸ್ಥೆಗಳ ಪದಾದಿಕಾರಿಗಳಾಗಿದ್ದಾರೆ. ರಾಷ್ಟ್ರೀಯ ಸೇವಾಯೋಜನೆಯ ಆಧಿಕಾರಿಗಳಾಗಿ ಸುಮಾರು ೧೦ ವರ್ಷ ಕೆಲಸಮಾಡಿದ್ದಾರೆ. ಈ ಸಂದರ್ಭದಲ್ಲಿ ವಾಂಜರಿ, ಜನತಾನಗರ, ಹುಡಗಿ, ಜನತಾನಗರ ಹುಮನಾಬಾದ, ಬಸವತೀರ್ಥ ಮೊದಲಾದ ಕ್ಷೇತ್ರಗಳಲ್ಲಿ ಶಿಬಿರ ಏರ್ಪಡಿಸಿ ಆ ಮೂಲಕ ಸ್ವಚ್ಛತೆ, ಆರೋಗ್ಯ ಸಂರಕ್ಷಣೆ, ಪರಿಸರ ರಕ್ಷಣೆ, ಜಲಸಂರಕ್ಷಣೆ, ಗಿಡ ನೆಡುವುದು ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯುವ ಜನತೆಯ ಮನದಲ್ಲಿ ರಾಷ್ಟ್ರಪ್ರೇಮ, ಸಾಮಾಜಿಕ ಸೇವೆ ಮೂಡಿಸುವಲ್ಲಿ ನೆರವಾಗಿದ್ದಾರೆ. ಹುಮನಾಬಾದನ ಸಾಂಸ್ಕೃತಿಕ ಪರಂಪರೆಗೆ ತಮ್ಮದೇಯಾದ ವಿಶಿಷ್ಟ ಕಾಣಿಕೆ ನೀಡಿರುವ ಇವರು ಸಾಮಾಜಿಕವಾಗಿ ತಟ್ಟನೆ ಗುರುತಿಸುವ ವ್ಯಕ್ತಿಯಾಗಿ ಬೆಳೆದಿದ್ದಾರೆ ಎನ್ನಬಹುದು.

ಯಾಳವಾರರ ಕನ್ನಡ ನಿಷ್ಠೆ ಅನುಪಮವಾದುದು ಅವರಿಗೆ ಇಂಗ್ಲೀಷ, ಹಿಂದೀ ಭಾಷೆಗಳನ್ನು ಮಾತನಾಡಲು ಓದಲು ಬರುತ್ತಿದ್ದರೂ ಸಹ ಕನ್ನಡದಲ್ಲಿಯೇ ಪ್ರತಿಶತ ವ್ಯವಹರಿಸುತ್ತಾರೆ. ಅವರ ಕನ್ನಡ ಸೇವೆಯೂ ಗಮನಾರ್ಹವಾಗಿದ್ದು, ಹಲವು ಸಂಘಟನೆಗಳ ಮೂಲಕ ಅದನ್ನು ಸಾಕಾರಗೊಳಿಸಿದ್ದಾರೆ.

- ಕನ್ನಡ ಲೇಖಕರು ಹಾಗೂ ಕವಿಗಳನ್ನು ಅವರು ಪ್ರೋತ್ಸಾಹಿಸಿದ್ದಾರೆ. ಹಲವು ಕನ್ನಡ ಪರ ಸಂಘಗಳನ್ನು ಕಟ್ಟಿ ಆ ಮೂಲಕ ಉದಯೋನ್ಮುಖ ವಿದ್ಯಾರ್ಥಿಗಳಿಗೆ ವೇದಿಕೆಯನ್ನು ನಿರ್ಮಿಸಿದ್ದಾರೆ.
- ಅಚ್ಚ ಕನ್ನಡದಲ್ಲಿ ಮಾತನಾಡುವ ಪಾಠಮಾಡುವ ಯಾಳವಾರರು ತಮ್ಮ ಅನೇಕ ಸಹೋದ್ಯೋಗಿಗಳಿಗೆ ಕನ್ನಡ ಬಳಸಲು ಪ್ರೋತ್ಸಾಹಿಸಿ, ಒತ್ತಾಯಿಸಿದ್ದು. ಆ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಬಯಸುತ್ತಿದ್ದಾರೆ.
- ಅನ್ಯ ಭಾಷಕರಿಗೆ ಕನ್ನಡ ಕಲಿಸುತ್ತಿದ್ದಾರೆ ತಮಗೆ ಅನ್ಯ ಭಾಷೆಗೊತ್ತಿದ್ದರೂ ಅವರೊಂದಿಗೆ ಕನ್ನಡದಲ್ಲಿಯೇ ಮಾತನಾಡಲು ಬಯಸುತ್ತಾರೆ.
- ಅನೇಕ ಕನ್ನಡ ಪರ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ಕನ್ನಡ ಪರಂಪರೆ ಮುಂದುವರೆಯುವಂತೆ ಅಣಿಗೊಳಿಸುತ್ತಿದ್ದಾರೆ
- ಬೀದರ, ರಾಯಚೂರ, ಕಲಬುರ್ಗಿ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಕನ್ನಡ ಸಾಹಿತ್ಯದ ಅನೇಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ.
- ಶರಣ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷರಾಗಿ ಇಟಗಾ ಗ್ರಾಮದಲ್ಲಿ ಪ್ರಥಮ ಶರಣ ಸಾಹಿತ್ಯ ಸಮ್ಮೇಳನ ಹಾಗೂ ಬಸವತೀರ್ಥದಲ್ಲಿ ೨ ನೇ ಜಿಲ್ಲಾ ಸಮ್ಮೇಳನವನ್ನು ಯಶಸ್ವಿಯಾಗಿ ನಡಿಸಿದ್ದಾರೆ.
- ಕಾಲೇಜಿನಲ್ಲಿ ಪ್ರತಿವರ್ಷ ಕನ್ನಡ ಸಂಘದ ವತಿಯಿಂದ ಕಾರ್ಯಕ್ರಮವನ್ನು ಆಯೋಜಿಸಿ ನಾಡಿನ ಬೇರೆ ಬೇರೆ ವಿದ್ವಾಂಸರುಗಳನ್ನು, ಸಾಹಿತಿಗಳನ್ನು ಆಹ್ವಾನಿಸಿ ವಿದ್ಯಾರ್ಥಿಗಳ ಮನದಲ್ಲಿ ನಾಡು-ನುಡಿಯ ಪ್ರೀತಿಯನ್ನು ತುಂಬುತ್ತಿದ್ದಾರೆ.

ಹೀಗೆ ಡಾ. ಸೋಮನಾಥರು ತಮ್ಮ ಸೇವೆಯನ್ನು ಕನ್ನಡಕ್ಕಾಗಿ ಮೀಸಲಿಟ್ಟು, ಕನ್ನಡ ಪರವಾದ ಅನೇಕ ಹೋರಾಟಗಳಲ್ಲಿ ಭಾಗಿಯಾಗಿದ್ದಾರೆ. ಶರಣರ ಸಾಮಾಜಿಕ ಕಾಳಜಿಯನ್ನು ಜನಮನದಲ್ಲಿ ಬಿತ್ತುವ ಅವರ ವಿಚಾರಗಳು ಅವರ ಮಾತು ಹಾಗೂ ಕ್ರಿಯೆಗಳಲ್ಲಿ ಸದಾ ಕಾಣುತ್ತವೆ.

ಪ್ರಶಸ್ತಿ ಸನ್ಮಾನಗಳು :-

ಬೆಳೆವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಸೋಮನಾಥ ಯಾಳವಾರರು. ವಿದ್ಯಾರ್ಥಿಯಾಗಿದ್ದಾಗಲೇ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಹಾಡು ಹಾಡಿ ಅನೇಕ ಪ್ರಶಸ್ತಿ ಪಡೆದಿದ್ದಾರೆ. ಜನಪದ ಹಾಗೂ ಭಾವಗೀತೆಗಳನ್ನು ತುಂಬಾ ಸುಂದರವಾಗಿ ಹಾಡುತ್ತಾರೆ. ಶಾಲೆ-ಕಾಲೇಜುಗಳ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಭಾಷಣ ಸ್ಪರ್ಧೆ ಹಾಗೂ ಗೀತ ಗಾಯನ ಸ್ಪರ್ಧೆಗಳಲ್ಲಿ ವಿಜೇತರಾಗಿ ಬಹುಮಾನ ಗಳಿಸಿದ್ದಾರೆ.

ಧಾರವಾಡದಲ್ಲಿ ಎಂ.ಎ.ಪದವಿಯಲ್ಲಿ ಅಭ್ಯಾಸ ಮಾಡುವಾಗ ಅಲ್ಲಿಯ ಪ್ರಸಿದ್ಧ ಲಿಂಗಾಯತ ಮಠವಾದ ಮುರುಘಾ ಮಠದಲ್ಲಿದ್ದರು. ೧೯೭೫-೭೬ ರಲ್ಲಿ ಆ ಮಠದ ಬೆಳ್ಳಿ ಹಬ್ಬದಾಚರಣೆಯಿತ್ತು. ಆ ವರ್ಷ ಜರುಗಿದ ಶಿವಾನುಭವ ತೃತೀಯ ಪರೀಕ್ಷೇಯಲ್ಲಿ ರಾಜ್ಯಕ್ಕೆ ಮೊದಲನೆಯ ಸ್ಥಾನ ಪಡೆದು 'ಬಂಗಾರ ಪದಕ" ಪಡೆದರು ಅಂದಿನಿಂದ 'ವಚನ ಸಾಹಿತ್ಯ' ದಲ್ಲಿ ಇವರ ಆಸಕ್ತಿ ಹೆಚ್ಚಿತು.

ವಿದ್ಯಾರ್ಥಿಗಳ ಮನ ಮೆಚ್ಚುಗೆ ಪಡೆದ ಸೋಮನಾಥ ಯಾಳವಾರರ ಪಾಠವೆಂದರೆ ಈಗಲೂ ವಿದ್ಯಾರ್ಥಿಗಳು ಮುಗಿಬೀಳುತ್ತಾರೆ. ಇವರ ಅನೇಕ ವಿದ್ಯಾರ್ಥಿಗಳು ಒಳ್ಳೆಯ ಹುದ್ದೆಯಲ್ಲಿದ್ದು ಅವರು ಈಗಲೂ ಇವರನ್ನು ಸ್ಮರಿಸಿ ಗೌರವಿಸುತ್ತಾರೆ.

೧೯೯೫ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ ಪದವಿ ಪಡೆದರು. ಡಾ. ಸಂಗಮೇಶ ಸವದತ್ತಿ ಮಠರ ಮಾರ್ಗದರ್ಶನದಲ್ಲಿ 'ಆದಯ್ಯ:ಒಂದು ಅಧ್ಯಯನ' ಎಂಬ ಸಂಶೋಧನಾ ಮಹಾಪ್ರಬಂಧವನ್ನು ಸಮರ್ಪಿಸಿ ಈ ಪದವಿಯನ್ನು ಗಳಿಸಿದ್ದಾರೆ. ಆ ಪ್ರಬಂಧದ ಮಹತ್ವವರಿತ ಶ್ರೀ ಚನ್ನಬಸವೇಶ್ವರ ಹಿರೇಮಠ ಸಂಸ್ಥಾನ ಹಾರಕೂಡದವರು ಅದನ್ನು ಪ್ರಕಾಶಪಡಿಸಿ ಯಾಳವಾರರನ್ನು ಸನ್ಮಾನಿಸಿ ಜನತೆಗೆ ಅರ್ಪಿಸಿದೆ. ಆ ಸಂದರ್ಭದಲ್ಲಿ ಹುಮನಾಬಾದ ತಾಲೂಕಿನಾದ್ಯಂತ ಅವರನ್ನು ಗೌರವಿಸಲಾಯಿತು.

ಕನ್ನಡ ಸಾಹಿತ್ಯದಲ್ಲಿ ತಮ್ಮ ಅಪೂರ್ವವಾದ ಬರವಣಿಗೆಯಿಂದ ಹಾಗೂ ಚಿಂತನಪರವಾದ ಭಾಷಣಗಳಿಂದ ಜನಮನಗಳಿಸಿರುವ ಸೋಮನಾಥ ಯಾಳವಾರರಿಗೆ ಅನೇಕ ಪ್ರಶಸ್ತಿಗಳು ಆರಿಸಿ ಬಂದವು. ಅವರಿಗೆ ದೊರೆತ ಗೌರವ ಸನ್ಮಾನಗಳು ಸ್ಥಳೀಯವಾಗಿ ಅಪಾರ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ,

- ೧೯೯೫ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ ಪದವಿ ಪ್ರಧಾನ.
- ಆ ನಿಮಿತ್ತ ಪದವಿ ಕಾಲೇಜಿನಲ್ಲಿ ಹಾಗೂ ತಾಲ್ಲೂಕಿನ ವಿವಿಧ ಕನ್ನಡ ಪರ ಸಂಘಟನೆಗಳಿಂದ ಸನ್ಮಾನ.
- ೧೮-೦೯-೧೯೯೮ ರಂದು ಗ್ರಾಮ ಕ್ರಾಂತಿವಾರ ಪತ್ರಿಕೆಯ ವತಿಯಿಂದ ಸನ್ಮಾನ ಹಾಗೂ ಪ್ರಶಸ್ತಿ.
- ೨೦೦೦ ದಲ್ಲಿ ಶ್ರೀ ವಿವೇಕಾನಂದ ಶಿಕ್ಷಣ ಸಂಸ್ಥೆ ಹುಮನಾಬಾದದಿಂದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಹಾಗೂ ಗೌರವಾರ್ಪಣೆ.
- ೨೦೦೧ ರಲ್ಲಿ ಚಿತ್ರದುರ್ಗ ಮುರುಘಾರಾಜೇಂದ್ರ ಮಠದಿಂದ 'ಶಿಕ್ಷಕರತ್ನ' ಪ್ರಶಸ್ತಿ ನೀಡಲಾಯಿತು.
- ೨೦೦೨ ರಲ್ಲಿ ವಚನ ಕಮ್ಮಟ ಪರೀಕ್ಷೆ ನಿಮಿತ್ತ ಬಸವ ಕೇಂದ್ರ ಮುರುಘ ರಾಜೇಂದ್ರ ಮಠ ಚಿತ್ರದುರ್ಗದಿಂದ 'ಶಿಕ್ಷಕಶ್ರೀ' ಪ್ರಶಸ್ತಿ.
- ೨೦೦೨ ರ ಬೀದರ ಜಿಲ್ಲಾ 'ರಾಜ್ಯೋತ್ಸವ ಪ್ರಶಸ್ತಿ".
- ೨೦೦೭ ರ ಎಪ್ರಿಲ್ ತಿಂಗಳಲ್ಲಿ ಬೀದರ ಜಿಲ್ಲೆಯ ಶ್ರೇಷ್ಠ ಸಾಹಿತಿ ಪ್ರಶಸ್ತಿಯನ್ನು ಶ್ರೀ ಚನ್ನಬಸವೇಶ್ವರ 'ಕನ್ನಡ ಸಂಘ' ಭಾಲ್ಕಿಯಿಂದ ಪಡೆದರು.
- ೨೦೦೭ ರಲ್ಲಿ 'ಶರಣಸಿರಿ' ಹಾಗೂ 'ಕುಮಾರವ್ಯಾಸ' ಕೃತಿ ರಚನೆಗಾಗಿ ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾದಿಂದ ಸನ್ಮಾನ.
- ದಿನಾಂಕ ೩-೯-೨೦೦೮ ರಂದು ಹುಮನಾಬಾದ "ಧರಿನಾಡು" ಸಂಘದ ವತಿಯಿಂದ 'ಸುವರ್ಣ ಕನ್ನಡಿಗ" ಪ್ರಶಸ್ತಿ.
- ೨೦೧೦-೧೧ರಲ್ಲಿ ಲಿಂಗಸೂರು ವೀರಶೈವ ಸಮಾಜದಿಂದ ಸನ್ಮಾನ ಹಾಗೂ ಪ್ರಶಸ್ತಿ.

ನೂರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಇವರ ಗೌರವ ಪ್ರಶಸ್ತಿಗಳ ಪಟ್ಟಿ ಬೆಳೆಯುತ್ತದೆ. ತಮ್ಮ ಸರಳ ವ್ಯಕ್ತಿತ್ವ ಹಾಗೂ ಉದಾತ್ತ ಜೀವನ ಪದ್ಧತಿಯಿಂದ ಸಮಾಜದಲ್ಲಿ ಗೌರವದ ಸ್ಥಾನ ಪಡೆದಿರುವ ಸೋಮನಾಥ ಯಾಳವಾರರು ಸರಳತೆ ಹಾಗೂ ಸಜ್ಜನಿಕೆಯ ಬರವಣಿಗೆಗಳ ಮೂಲಕ ಕನ್ನಡ ಭಾಷೆಗೆ, ನಾಡಿಗೆ ತಮ್ಮದೇ ಆದ ಕಾಣಿಕೆಯನ್ನು ಇತ್ತಿದ್ದಾರೆ ಎನ್ನಬಹುದು.

ವ್ಯಕ್ತಿತ್ವ :-

ಎದುರಿಗೆ ಬಂದವರನ್ನು ತುಂಬು ಹೃದಯದಿಂದ ನಗುನಗುತ್ತ ಮಾತನಾಡಿಸುವ ಯಾಳವಾರರು, ತುಂಬಾ ಆತ್ಮೀಯ ಸ್ವಭಾವವುಳ್ಳವರು. 'ಏನ್ರಿ ಆರಾಮಾ' ಎಂದು ಮಾತನಾಡಿಸುತ್ತ ಅವರನ್ನು ತಮ್ಮೆಡೆಗೆ ಆಕರ್ಷಿಸಿಕೊಳ್ಳುತ್ತಾರೆ. 'ಫೋನಿನಲ್ಲಿ ಮಾತನಾಡುವಾಗ 'ಶರಣು' ರೀ ಎಂದೇ ಮಾತಿಗಾರಂಭಿಸುತ್ತಾರೆ. ಸಾವಿರಾರು ಶ್ರೇಷ್ಠ ವಿದ್ಯಾರ್ಥಿಗಳನ್ನು ಸೃಷ್ಟಿಸಿ, ಅವರಲ್ಲಿ ಜಿವನ ಸಂಸ್ಕಾರದ ಬೀಜ ಬಿತ್ತಿ, ಮೌಲ್ಯಭರಿತ ಬದುಕನ್ನು ಬದುಕಲು ಕಲಿಸಿದ್ದಾರೆ.

ಮುಗುಳ್ನಗೆಯ ಮುಖದ ಇವರು ಸಮರ್ಥ ಅಧ್ಯಾಪಕರಾಗಿದ್ದಕೊಂಡು ಲೇಖಕರಾಗಿ ಬೆಳೆದಿದ್ದಾರೆ. ಕವಿಮನಸ್ಸಿನ ಅವರ ವ್ಯಕ್ತಿತ್ವ ಎಲ್ಲರಿಗೂ ಪ್ರಿಯವಾದುದು. ಓದುವ ಹವ್ಯಾಸವುಳ್ಳ ಅವರು ಚಿಂತನಾಶೀಲರಾದ ಬಸವಣ್ಣ, ಬುದ್ಧ, ಗಾಂಧೀಜೀ ಹಾಗೂ ಅಂಬೇಡ್ಕರ, ವಿವೇಕಾನಂದರಂತಹ ಮಹಾವ್ಯಕ್ತಿಗಳ ಆದರ್ಶವನ್ನು ಮೆಚ್ಚುಕೊಂಡಿದ್ದಾರೆ. "ಶರಣರ ವಚನಗಳು"ಅವರ ಅಧ್ಯಯನದ ಆಸಕ್ತಿ ಕ್ಷೇತ್ರ, 'ವಚನಗಳ ಬಗ್ಗೆ, ವಚನಕಾರರ ಬಗ್ಗೆ ಮನಬಿಚ್ಚಿ ಮಾತನಾಡುತ್ತಾರೆ. ಶರಣರನ್ನು ಕುರಿತು ಉಪನ್ಯಾಸ ನೀಡುವಾಗ ಏಲ್ಲರೂ ಅದರಲ್ಲಿಯೇ ಮೈಮರೆಯುವಂತೆ ಮಾತನಾಡುವ ಕಲೆಯನ್ನು ಅವರು ಹೊಂದಿದ್ದಾರೆ.

ಸೋಮನಾಥ ಯಾಳವಾರರ ಜೀವನ ಪ್ರೀತಿ ಆಗಾಧವಾದುದು. ಶರಣರ ಆದರ್ಶ ಬದುಕನ್ನು ಎಲ್ಲರೂ ಅಳವಡಿಸಿಕೊಳ್ಳಬೇಕೆಂಬ ಆಶೆ ಹೊತ್ತವರು. ಯಾವುದೇ ಸಂಧರ್ಭದ ಕಾರ್ಯಕ್ರಮದಲ್ಲಿ ಮಾತನಾಡುವಾಗ ಅವರು ಬಸವಾದಿ ಶರಣರ ಕೆಲವು ವಿಚಾರಗಳನ್ನು ಹೇಳದೆ ಭಾಷಣ ಮುಗಿಸುವುದಿಲ್ಲ. 'ಬಸವಣ್ಣ'

ಯಾಳವಾರರ ಆರಾಧ್ಯ ದೈವ. ಅವರು ಕುಳಿತು ಕೊಳ್ಳುವಾಗ, ಎಡವಿದಾಗ, ಸೀನು ಬಂದಾಗ, ಬೇಸರಾದಾಗ, ಸಂತೋಷ ಉಂಟಾದಾಗಲೆಲ್ಲ 'ಬಸವಾ' ಎಂದೇ ಹೇಳುತ್ತಾರೆ. ಮನೆಯಲ್ಲೂ ಅದೇ ವಾತಾವರಣ ನಿರ್ಮಿಸಿದ್ದಾರೆ.

ಸೋಮನಾಥ ಯಾಳವಾರರು ಶ್ರಮ ಸಂಸ್ಕೃತಿಯುಳ್ಳವರು. ಓದಿಕೊಳ್ಳದೆ ಎಂದೂ ತರಗತಿಗೆ ಹೋದವರಲ್ಲ. ವಿದ್ಯಾರ್ಥಿಗಳಾಗಿದ್ದಾಗಿನಿಂದಲೇ ಓದುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಸಾಹಿತ್ಯ ಪ್ರೀತಿಯ ಜೊತೆಗೆ 'ಸಂಗೀತ"ದಲ್ಲೂ ತುಂಬಾ ಆಸಕ್ತಿ ಬೆಳೆಸಿಕೊಂಡಿದ್ದಾರೆ. 'ನಾದವೇದಿಕೆ'ಬಳಗದ ಮೂಲಕ ಅನೇಕ ಸಂಗೀತ ವಿದ್ವಾಂಸರನ್ನು ಆಹ್ವಾನಿಸಿ ಜನತೆಗೆ ಪರಿಚಯಿಸಿದ್ದಾರೆ ವಚನ ಸಂಗೀತ ಪ್ರಿಯರು.

ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ಇವರು ಭಾಗವಹಿಸುತ್ತಾರೆ. ಇವರ ಸಾಮಾಜಿಕ ಕಾರ್ಯ ಮೆಚ್ಚುವಂತಹದ್ದು. 'ರಾಷ್ಟ್ರೀಯ ಸೇವಾ ಯೋಜನೆ'ಯ ಅಧಿಕಾರಿಯಾಗಿ ಸುಮಾರು ೯ ವರ್ಷ ಸೇವೆ ಸಲ್ಲಿಸಿದ್ದಾರೆ. 'ಅಲ್ಲೆಲ್ಲ ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನ, ಸೇವಾಮನೋಭಾವನೆ ಬೆಳೆಸಲು ತುಂಬಾ ಶ್ರಮಿಸಿದ್ದಾರೆ. ಇವರ 'ಜೀವನೋತ್ಸಾಹ' ಅನುಕರಣೀಯವಾದುದು.

ಜೀವನ ಮಾರ್ಗದಲ್ಲಿ ಪ್ರಗತಿಪರಪರ ವಿಚಾರಗಳಿಗೆ ಸದಾ ಮಾನ್ಯತೆ ನೀಡುವ ಇವರು ಅಂಧಾನುಕರಣೆಗಳನ್ನು ಖಂಡಿಸುತ್ತಾರೆ. 'ಜೀವನ ಮೌಲ್ಯಗಳ' ಉಳಿವಿಗಾಗಿ ಹೋರಾಟಕ್ಕೂ ಸಿದ್ಧರಾಗುವ ಇವರು ಇಂದಿನ ಯುವ ಜನಾಂಗಕ್ಕೆ ಮಾದರಿಯಾಗಿದ್ದಾರೆ ಅವರಲ್ಲಿರುವ ಪ್ರಾಮಾಣಿಕತೆಗೆ ಎಲ್ಲರೂ ಅವರನ್ನು ಗೌರವಿಸುತ್ತಾರೆ.

ಯಾಳವಾರರ ವ್ಯಕ್ತಿತ್ವ ಕೇವಲ ಅಧ್ಯಾಪನ ವೃತ್ತಿಗೆ ಮೀಸಲಾಗಿಲ್ಲ. ಅದು ಅಧ್ಯಯನ ಹಾಗೂ ಸಾಮಾಜಿಕ ಬದುಕಿಗೂ ಪೂರಕವಾಗಿದೆ. 'ಕನ್ನಡ ಸಂಘ' ಕಟ್ಟಿಕೊಂಡು ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಸೆಳೆದರೆ, 'ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿ'ನ ತಾಲೂಕು ಅಧ್ಯಕ್ಷರಾಗಿ 'ಶರಣರ ಜೀವನ ಹಾಗೂ ವೈಚಾರಿಕತೆಗಳನ್ನು ಎಲ್ಲೆಲ್ಲೂ ಪ್ರಚಾರ ಮಾಡುತ್ತಿದ್ದಾರೆ. ಶರಣರನ್ನು ಕುರಿತು

ಈಗಾಗಲೇ ೫೦೦ ಕ್ಕಿಂತ ಹೆಚ್ಚು ಉಪನ್ಯಾಸ ನೀಡಿದ್ದಾರೆ. ೩೦೦ ಕ್ಕಿಂತ ಹೆಚ್ಚು ಲೇಖನ ಬರೆದಿದ್ದಾರೆ. ಹಲವು ಕನ್ನಡ ಪರ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಅನೇಕ ಯುವ ಸಾಹಿತಿಗಳಿಗೆ ಪ್ರೋತ್ಸಾಹ ನೀಡಿದ್ದಾರೆ.

ಬೀದರ ಜಿಲ್ಲೆಯ ಮಹತ್ವದ ಲೇಖಕರಲ್ಲಿ ಒಬ್ಬರೆನಿಸಿರುವ ಯಾಳವಾರರು 'ಸಂಶೋಧನಾ' ದೃಷ್ಟಿಯುಳ್ಳ ಲೇಖಕರು ಅವರ 'ಶರಣಸಿರಿ, 'ಉರಿಲಿಂಗಪೆದ್ದಿ' ಹುಮನಾಬಾದ ವೀರಭದ್ರೇಶ್ವರ' ಕುಂಬಾರ ಗುಂಡಯ್ಯ, ಬೀದರ ಜಿಲ್ಲೆಯ ಶರಣ ಸ್ಮಾರಕಗಳು, ಬೀದರ ಜಿಲ್ಲೆಯ ವಾಸ್ತು ಮತ್ತು ಶಿಲ್ಪಕಲೆ ಕೃತಿಗಳು ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಗಳೆನ್ನಬಹುದು.

ಸೃಜನಶೀಲ ವ್ಯಕ್ತಿತ್ವವುಳ್ಳ ಇವರು 'ಕರಕನಳ್ಳಿ ಬಕ್ಕಪ್ರಭು' ಮಾಣಿಕ ಪ್ರಭು, ಕುಮಾರವ್ಯಾಸ, ಮೊದಲಾದ ಜೀವನ ಚರಿತೆಗಳನ್ನು ರಚಿಸಿದ್ದಾರೆ. ಪಿ.ಎಚ್.ಡಿ. ಎಂ.ಫಿಲ್. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ 'ಬೀದರ ಜಿಲ್ಲೆಯ ಸಾಂಸ್ಕೃತಿಕ ಬದುಕನ್ನು ಸಂಶೋಧಿಸುವಲ್ಲಿ ಕ್ರಿಯಾಶೀಲರಾಗಿ ಕೆಲವು ವಿದ್ಯಾರ್ಥಿಗಳನ್ನು ಈ ದೆಸೆಯಲ್ಲಿ ಅಣಿಗೊಳಿಸಿದ್ದಾರೆ. ಉತ್ತರ ಕರ್ನಾಟಕದ ಸೊಗಡುಳ್ಳ ಭಾಷೆಯನ್ನು ಬಳಸಿಕೊಂಡು ಬರೆಯುತ್ತಿರುವ ಇವರ ಲೇಖನ ಹಾಗೂ ಕವನಗಳಿಗೆ ಇವರದೇ ಆದ ವ್ಯಕ್ತಿತ್ವದ ರಂಜನೆಯಿರುವುದನ್ನು ಕಾಣಬಹುದಾಗಿದೆ.

ಹೀಗೆ ಹಲವು ಬಗೆಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಯಾಳವಾರರು ಬಹುಮುಖ ಪ್ರತಿಭೆಯ ಕ್ರಿಯಾಶೀಲ ವ್ಯಕ್ತಿಯಾಗಿದ್ದು ಈ ಭಾಗದ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಕ್ಕೆ ತಮ್ಮದೆ ಆದ ಕಾಣಿಕೆ ನೀಡುವ ಮೂಲಕ ಈ ನೆಲದ ಸಾಂಸ್ಕೃತಿಕ ಬದುಕು ಕಟ್ಟುತ್ತಿರುವ ಅಪರೂಪದ ವ್ಯಕ್ತಿತ್ವ ಪಡೆದಿದ್ದಾರೆನ್ನಬಹುದು ಎಂಬ ವಿದ್ವಾಂಸರ ಅಭಿಪ್ರಾಯ ಒಪ್ಪುವಂತದ್ದಾಗಿದೆ[೬].

---

೬. ಬೀದರ ಜಿಲ್ಲೆಯ ಹಿರಿಯ ಸಾಹಿತಿಗಳು ಸಂ. ಹಂಸಕವಿ -೨೦೧೦ ಪುಟ ೨೮೭-೮೭

ಅಧ್ಯಾಯ – ೪

ಸೋಮನಾಥ ಯಾಳವಾರರ ಸಮಗ್ರ ಸಹಾಹಿತ್ಯದ ಅಧ್ಯಯನ

ಭಾಗ –೧

ಅ) ಕಾವ್ಯೇತರ ಸಾಹಿತ್ಯ ಚಿಂತನೆಗಳು

ಸೋಮನಾಥ ಯಾಳವಾರರು ಮುಖ್ಯವಾಗಿ ಕಾವ್ಯೇತರ ಸಾಹಿತ್ಯ ರಚನೆಕಾರರು. ಅವರ ಗದ್ಯ ಬರವಣಿಗೆ ತುಂಬಾ ಪ್ರಧಾನವಾದುದು. ಗದ್ಯ–ಪದ್ಯಗಳೆರಡರಲ್ಲೂ ಹಿಡಿತ ಸಾಧಿಸಿರುವ ಇವರು ಬೀದರ ಜಿಲ್ಲೆಯ ಪ್ರಮುಖ ಲೇಖಕರಲ್ಲಿ ಒಬ್ಬರಾಗಿ ಗಮನ ಸೆಳೆದಿದ್ದಾರೆ.

ಇಂಗ್ಲೀಷ ಸಾಹಿತ್ಯದ ಪ್ರಭಾವವು ನಮ್ಮ ಕಾವ್ಯಕ್ಕೆ ಹೊಸ ದಾರಿ ತೋರಿಸಿದಂತೆ, ಗದ್ಯಕ್ಕೂ ಹಾಗೂ ಅದರ ಇತರ ಪ್ರಕಾರಗಳಿಗೂ ಹೊಸದಿಕ್ಕನ್ನು ಸೂಚಿಸಿತು. ಕತೆ, ಕಾದಂಬರಿ, ಪ್ರಬಂಧಗಳು, ಪತ್ರ ಸಾಹಿತ್ಯ, ಆತ್ಮಕಥನ, ಪ್ರವಾಸ ಸಾಹಿತ್ಯದಂತೆ, ಸಂಶೋಧನೆ, ಜೀವನಚರಿತ್ರೆ, ಸಂಪಾದನೆ, ವೈಚಾರಿಕ ಲೇಖನ ಹಾಗೂ ವಿಮರ್ಶಾ ಲೇಖನಗಳಿಗೂ ಅತ್ಯುನ್ನತ ಸ್ಥಾನಮಾನ ನೀಡಿತು. ಗದ್ಯ ಸೃಷ್ಟಿಯಲ್ಲಿ ಇತ್ತೀಚಿಗೆ ಕಂಡು ಬಂದಿರುವ ಬೆಳವಣಿಗೆಗಳು ಸಾಹಿತ್ಯ ಸೃಷ್ಟಿಯುಲ್ಲಿ ತುಂಬಾ ಗಮನಾರ್ಹವೆನಿಸುತ್ತದೆ.

ಒಂದು ಕಾಲಕ್ಕೆ ಸಾಹಿತ್ಯ ಮತ್ತು ಕಾವ್ಯ ಈ ಎರಡೂ ಸಮಾನರ್ಥಕವಾಗಿದ್ದವೆಂಬುದು ನಿಜವಾದರೂ, ಈಗ ಕಾವ್ಯವೆನ್ನುವುದು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಒಂದು ಎಂಬದನ್ನು ಹಾಗೂ ಕಾವ್ಯೇತರವಾದ ಇತರ ಪ್ರಕಾರಗಳು ಕಾವ್ಯದಷ್ಟೇ ಮುಖ್ಯ ಎನ್ನುವುದನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಒಬ್ಬ ಬರಹಗಾರನಾದವನು ಏಕಕಾಲಕ್ಕೆ ಕವಿತೆಯನ್ನು ಬರೆಯುತ್ತ, ಇನ್ನಿತರ ಕತೆ, ಕಾದಂಬರಿ, ಸಾಹಿತ್ಯ, ವಿಮರ್ಶೆ ಇತ್ಯಾದಿ ಕ್ಷೇತ್ರದಲ್ಲಿಯೂ ತನ್ನ ಸೃಜನ ಹಾಗೂ ಸೃಜನೇತರ ಸಾಮರ್ಥ್ಯಗಳನ್ನು ಪರೀಕ್ಷಿಸಿಕೊಳ್ಳುತ್ತಾನೆ.[೧]

---

೧. ಜಿ.ಎಸ್. ಶಿವಪುರದ್ರಪ್ಪಾ ಕಾವ್ಯ ಸಂವಾದ ಪುಟ ೧೦೬ (೨೦೦೫)

ಈ ಹಿನ್ನಲೆಯಲ್ಲಿ ಸೋಮನಾಥ ಯಾಳವಾರರು ಒಬ್ಬ ಉತ್ತಮ ಲೇಖಕರಾಗಿ ಕಂಡು ಬರುತ್ತಾರೆ. ಅವರ ಗದ್ಯ ಕೃತಿಗಳು ಅವರ ಕಾವ್ಯಕ್ಕಿಂತ ಮುಖ್ಯವಾಗಿದ್ದರೂ ಇವುಗಳನ್ನು ಕುರಿತು ಈ ವರೆಗೆ ಇಲ್ಲಿಯ ಸಾಹಿತ್ಯ ವಲಯದಲ್ಲಿಯಾಗಲಿ, ನಾಡಿನ ಇತರೆಡೆಯಲ್ಲಾಗಲಿ ಚರ್ಚೆ, ವಿಮರ್ಶೆಗಳಾವವು ನಡೆದಿಲ್ಲ. ಹಾಗೆ ಗಮನಿಸಿದರೆ ಯಾಳವಾರರ ಸಂಶೋಧನ ಗದ್ಯ, ಜೀವನ ಚರಿತ್ರೆಗಳು, ವಿಮರ್ಶೆ ಹಾಗೂ ವೈಚಾರಿಕ ಲೇಖನಗಳ ಗದ್ಯವು ಅವರ ಕಾವ್ಯವನ್ನು ಮರೆಸುವಷ್ಟು ಮಿಗಿಲಾಗಿವೆ. ಸೋಮನಾಥರ ಸಮಗ್ರ ಸಾಹಿತ್ಯ ಅಧ್ಯಯನದಲ್ಲಿ ಅವರ ಕಾವ್ಯೇತರ ಸಾಹಿತ್ಯವೇ ಮುಖ್ಯವೆನಿಸಿದ್ದರಿಂದ ಅವುಗಳನ್ನೇ ಮೊದಲಿಗೆ ಅವಲೋಕಿಸಲಾಗಿದೆ.

'ವಚನಗಳಲ್ಲಿ ದೇವರ ಪರಿಕಲ್ಪನೆ', ವಚನಗಳಲ್ಲಿ ಅಳತೆ ಮಾಪನಗಳು ಹಾಗೂ ಕಾಲನಿರ್ಣಯ, 'ವೀರಶೈವ ಮಠಗಳು ಹಾಗೂ ಪರಂಪರೆ' 'ಹಳೆಗನ್ನಡ ಕಾವ್ಯಗಳಲ್ಲಿ ನಿರ್ಲಕ್ಷಿತ ಪಾತ್ರಗಳು', ತೌಲನಿಕ ಕಾವ್ಯ ಚಿಂತನೆ, 'ಬೀದರ ಜಿಲ್ಲೆಯ ವಾಸ್ತು ಮತ್ತು ಶಿಲ್ಪ ಕಲೆಗಳು' ಹುಮನಾಬಾದ ಸಾಂಸ್ಕೃತಿಕ ಪರಿಸರ, ಬೀದರ ಜಿಲ್ಲೆಯ ದೇಶಿ ಕಲೆಗಳು 'ದುಂದುಮೆ ಪದದಲ್ಲಿ ಆದಯ್ಯ' 'ಬೀದರ ಜಿಲ್ಲೆಯ ಜನಪದ ಕಲಾಕಾರರು' ವಚನಗಳಲ್ಲಿ ಕೃಷಿ ಚಿಂತನೆ, ಮೊದಲಾದ ಲೇಖನಗಳೆಲ್ಲವು ಸಾಮಾನ್ಯವಾಗಿ ಬೇರೆ ಯಾವುದಾದರೂ ಒಂದು ಗ್ರಂಥಕ್ಕಾಗಿ ಬರೆದವುಗಳಾಗಿವೆ ಎಂಬುದನ್ನು ಮನಗಾಣಬಹುದು ಕರ್ನಾಟಕ ಸಾಹಿತ್ಯ ಆಕಾಡೆಮಿ (ವೀರೇಂದ್ರ ಸಿಂಪಿಯವರ ಜೀವನ ಚರಿತ್ರೆಗಳು) ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ಗೆ (ನಗರೀಕರಣ ಗ್ರಾಮ ಸಂಸ್ಕೃತಿಹರಣ), ಸಂಭಾವನಾ ಗ್ರಂಥಗಳಿಗಾಗಿ ಹಾಗೂ ಬೆಳ್ಳಿ ಹಬ್ಬದ ಕೃತಿಗಳಿಗಾಗಿ (ಮಾತೆಂಬುದು ಜ್ಯೋತಿರ್ಲಿಂಗ, ಬಸವಣ್ಣ ಮತ್ತು ಕಾಯಕ ತತ್ವ, ಮಹೇಶ ಸ್ಥಲ, ಅಂಬಿಗರ ಚೌಡಯ್ಯನ ಆಧ್ಯಾತ್ಮಿಕ ಸಾಧನೆ, ನಿರ್ಲಕ್ಷಿತ ಪಾತ್ರಗಳು, ಇತ್ಯಾದಿ) ಹೈದ್ರಾಬಾದ ಕರ್ನಾಟಕದ ಅನೇಕ ಅಭಿನಂದನ ಕೃತಿಗಳಲ್ಲೆಲ್ಲ ಯಾಳವಾರರ ಲೇಖನಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. ಇವು ಕಲ್ಯಾಣ ಕರ್ನಾಟಕ್ಕೆ ವಿಶೇಷವಾಗಿ ಬೀದರ ಜಿಲ್ಲೆಗೆ ಸಂದ ಗೌರವವೆಂದು ಹೇಳಬಹುದಾಗಿದೆ.

ಸೋಮನಾಥ ಯಾಳವಾರರು ಈ ವರೆಗೆ ೧೯ ಕಾವ್ಯೇತರ ಕೃತಿಗಳನ್ನು ರಚಿಸಿದ್ದಾರೆ ಅಧ್ಯಯನದ ಅನುಕೂಲಕ್ಕಾಗಿ ಅವುಗಳನ್ನು ಐದು ವಿಭಾಗಳಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಇವುಗಳನ್ನು

೧. ಸಂಶೋಧನೆ

೨. ವಿಮರ್ಶೆ

೩. ಜೀವನ ಚರಿತ್ರೆ

೪. ಸಂಪಾದನೆ

೫. ಸಂಕೀರ್ಣ ಸಾಹಿತ್ಯ ಎಂಬ ಭಾಗಗಳಲ್ಲಿ ವಿಭಾಗಿಸಿಕೊಳ್ಳಲಾಗಿದೆ.

೧. ಸಂಶೋಧನಾ ಸಾಹಿತ್ಯ:-

ಸೋಮನಾಥ ಯಾಳವಾರರ (೧). 'ಆದಯ್ಯ; ಒಂದು ಅಧ್ಯಯನ, (೨).ಬೀದರ ಜಿಲ್ಲೆಯ ಶರಣ ಸ್ಮಾರಕಗಳು ಮತ್ತು (೩). ಹುಮನಾಬಾದ ಶ್ರೀ ವೀರಭದ್ರೇಶ್ವರ ಎನ್ನುವ ಮೂರು ಕೃತಿಗಳು ಅವರ ಸಂಶೋಧನಾ ಅಧ್ಯಯನದ ಫಲಗಳು. ಈ ಮೂರನ್ನು ಈ ವಿಭಾಗದಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ಸೋಮನಾಥರು ವಿವೇಚನಾಶೀಲ ವ್ಯಕ್ತಿತ್ವವುಳ್ಳವರು ಮೇಲಾಗಿ ಅಧ್ಯಯನಶೀಲರು. ತಮ್ಮದೇ ಆದ ಸ್ವಆಸಕ್ತಿ ಹಾಗೂ ಪರಿಶ್ರಮಗಳಿಂದ ಎಂ.ಎ.ಪದವಿಗಳಿಸಿಕೊಂಡವರು. ಉನ್ನತ ಉದ್ಯೋಗಕ್ಕಾಗಿ ಹಲವೆಡೆ ಪ್ರಯತ್ನಿಸಿ, ಪದವಿ ಕಾಲೇಜಿನಲ್ಲಿ ಅಧ್ಯಾಪಕರಾದರು. ನಂತರದಲ್ಲಿ ಇವರು ಅಧ್ಯಾಪಕರೊಂದಿಗೆ ಅಧ್ಯಯನವನ್ನು ಹೆಚ್ಚಿಸಿಕೊಂಡರು. ೧೯೭೯ ರಿಂದ ಅಧ್ಯಾಪಕ ವೃತ್ತಿಗೆ ಸೇರಿದ ಮೇಲೆ ಗುಲಬರ್ಗಾ ವಿಶ್ವವಿದ್ಯಾಲಯದ ಸಂಪರ್ಕಕ್ಕೆ ಬಂದರು. ಆಗ ಡಾ.ಎಂ.ಎಸ್.ಲಠ್ಠೆಯವರು ಇವರಿಂದ ಕೆಲವು ಲೇಖನಗಳನ್ನು ಬರೆಸಲು ಪ್ರಾರಂಭಿಸಿದರು. ಬಿಡಿ ಲೇಖನಗಳ ಪ್ರಕಟಣೆಯಿಂದ ಪ್ರೇರೇಪಿತರಾದ ಇವರಿಗೆ ಸಂಶೋಧನಾ ಅಧ್ಯಯನ ಕೈಗೊಳ್ಳುವಂತೆ ಒತ್ತಾಯಿಸತೊಡಗಿದರು. ಆ ಸಂದರ್ಭಕ್ಕಾಗಲೆ ಬೆಂಗಳೂರಿನ ಇಂಡಿಯನ್ ಬುಕ್ ಹೌಸನವರು ಇವರಿಂದ, 'ಹುಮನಾಬಾದ ತಾಲ್ಲೂಕು ದರ್ಶನ'ವನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದವರು 'ಹರಿಶ್ಚಂದ್ರ ಕಾವ್ಯ ಮತ್ತು ಮೌಲ್ಯಗಳು' ಎಂಬ ಪುಸ್ತಿಕೆಯನ್ನು

ಬರೆಸಿ ಪ್ರಕಟಿಸಿದ್ದರು. ಹೀಗಾಗಿ ಡಾ. ಸಂಗಮೇಶ ಸವದತ್ತಿಮಠರ ಮಾರ್ಗದರ್ಶನದಲ್ಲಿ ಆವರೆಗೆ ಯಾರೂ ಕೈಗೊಳ್ಳದಂತಹ 'ಆದಯ್ಯ' ಶರಣನನ್ನು ಕುರಿತು ಸಂಶೋಧನೆಗೆ ತೊಡಗಿದ್ದರು. ಆ ಸಂಶೋಧನಾಧ್ಯಾಯನದ ಸಾರ ರೂಪವೇ ಪುಲಿಗೆರೆಯ ಆದಯ್ಯ ಕೃತಿ.

೧.೧ ಆದಯ್ಯ ಒಂದು ಅಧ್ಯಯನ

ಮೂರು ವರ್ಷಗಳ ಸತತ ಪರಿಶ್ರಮ ಹಾಗೂ ಅಧ್ಯನದ ಪರಿಣಾಮವಾಗಿ ೧೯೯೫ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ 'ಅದಯ್ಯ; ಒಂದು ಅಧ್ಯಯನ' ಎಂಬ ಮಹಾಪ್ರಬಂಧವನ್ನು ಪಿ.ಹೆಚ್.ಡಿ. ಪದವಿಗಾಗಿ ಸಮರ್ಪಿಸಿದರು. ೧೯೯೫ ರ ಅಗಷ್ಟ ತಿಂಗಳಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದರು. ಆ ಪ್ರಬಂಧದ ಬಾಹ್ಯ ಪರೀಕ್ಷಕರಾಗಿದ್ದ ಪ್ರೊ.ಎಚ್.ಎಂ.ಚನ್ನಯ್ಯನವರು ಹಾಗೂ ಡಾ. ತಾಳ್ತಜ್ಜೆ ವಸಂತಕುಮಾರರು ಈ ಪ್ರಬಂಧದ ಶೈಲಿ, ನಿರೂಪಣೆಗಳನ್ನು ಮೆಚ್ಚಿಕೊಂಡಿದ್ದ ಸಂಗತಿಯು ಅವರು ನೀಡಿರುವ ವರದಿಯ ಮೂಲಕ ಕಂಡುಬರುತ್ತವೆ.

ಅಲ್ಲದೆ ಸೋಮನಾಥ ಯಾಳವಾರರು 'ಆದಯ್ಯ'ನನ್ನು ಕುರಿತು ಪ್ರಥಮತಃ ಸಂಶೋಧನೆಗೆ ಎತ್ತಿಕೊಂಡಿದ್ದಾರೆ. ಆ ಪೂರ್ವದಲ್ಲಿ ಈ ವಿಷಯವನ್ನು ಕುರಿತು ಸಮಗ್ರವಾಗಿ ಯಾರೂ ಅಧ್ಯಯನ ಕೈಕೊಂಡಿರಲಿಲ್ಲ 'ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಸುಕ್ಷೇತ್ರ ಹಾರಕೂಡ' ದಿಂದ ಪ್ರಕಟವಾಗಿರುವ 'ಪುಲಿಗೆರಿಯ ಆದಯ್ಯ' ಎಂಬ ಈ ಕೃತಿ "ತಮ್ಮ ಮಾರ್ಗದರ್ಶನದಲ್ಲಿ ಶ್ರೀಮಠ ಪ್ರಕಟಿಸಿದ ಗ್ರಂಥಗಳು ನಾಡಿನ ವಿದ್ವಜ್ಜನರ ಗಮನ ಸೆಳೆದಿವೆ. ಪ್ರಸ್ತುತ ಪ್ರಕಟಿಸಿರುವ ಗ್ರಂಥ ಆ ಲೇಖಕರ ತಲಸ್ಪರ್ಶ ಅಧ್ಯನದ ಫಲ ಶರಣ ಸಾಹಿತ್ಯಾಕಾಶದಲ್ಲಿ ಮಿನುಗುವ ನಕ್ಷತ್ರ, ಎಂದು ಹೇಳಿರುವುದನ್ನು[೨] ಗಮನಿಸಿದರೆ ಈ ಕೃತಿಯ ಹಿಂದಿರುವ ಪರಿಶ್ರಮವನ್ನು ತಿಳಿಯಬಹುದಾಗಿದೆ.

---

೨. ಶ್ರೀ ಸಿದ್ಧರಾಮ ಸ್ವಾಮಿಗಳು ರುದ್ರಾಕ್ಷಿಮಠ ಬೆಳಗಾಂ ಪುಲಿಗೆರಿ ಆದಯ್ಯಾ ಪುಟ ೧೪೫ (೨೦೦೫)

'ವಚನ ಸಾಹತ್ಯದ ಸಮಗ್ರ ಅಧ್ಯಯನದ ತಳಹದಿಯ ಮೇಲೆ ರಚಿತವಾಗಿರುವ ಈ ಸಂಶೋಧನ ಮಹಾಪ್ರಬಂಧವು ಆದಯ್ಯನನ್ನು ಕುರಿತು ಅಧ್ಯಯನ ಮಾಡುವವರಿಗೆ ಒಂದು ಉತ್ತಮ ಆಧಾರ ಗ್ರಂಥವಾಗಿ ನಿಲ್ಲುತ್ತದೆ.

'೧೨ನೆಯ ಶತಮಾನ ಕರ್ನಾಟಕ ಚರಿತ್ರೆಯಲ್ಲಿ ವಿನೂತನ ಕಾಲ. ಕನ್ನಡ ಸಂಸ್ಕೃತಿಯನ್ನು ಹೊಸ ಮಜಲುಗಳಿಂದ ವ್ಯಕ್ತಗೊಳಿಸಿರುವ ವಚನ ಸಾಹಿತ್ಯ' ಈ ಯುಗದ ವೈಶಿಷ್ಟಗಳಲ್ಲೊಂದು. ಹಲವು ದೃಷ್ಟಿಗಳಿಂದ ಚಿಂತನಾರ್ಹವಾದ ವಚನಗಳು ಮಾನವಧರ್ಮ, ನೀತಿ, ಸಾಮಾಜಿಕ ಕಳಕಳಿಯೊಂದಿಗೆ, ಆಧ್ಯಾತ್ಮಿಕ ಅನುಭವಗಳ ಅಂತರ್ವಾಣಿಯಾಗಿ ಹೊರಹೊಮ್ಮಿರುವ ಬದುಕಿಗೆ ಕನ್ನಡಿ ಹಿಡಿಯುತ್ತವೆ.[೩] ಇಂಥ ರಚನಕಾರರಲ್ಲಿ ಒಬ್ಬನಾದ 'ಆದಯ್ಯ" ಶರಣನ ಬದುಕು – ಬರಹ ಹಾಗೂ ಜೀವನಾನುಭವದ ಮೌಲ್ಯಗಳನ್ನು ಇಲ್ಲಿ ಕಂಡಿರಿಸಲಾಗಿದೆ. ಆಳವಾದ ಅಧ್ಯಯನ, ಪ್ರಬುದ್ದ ಚಿಂತನೆ ಮತ್ತು ವಸ್ತು ನಿಷ್ಠ ನಿರೂಪಣೆಗಳು ಪ್ರಬಂಧದುದ್ದಕ್ಕೂ ಎದ್ದು ಕಾಣುತ್ತವೆ ವೀರಶೈವ ಧರ್ಮದ ತತ್ವ, ಸಿದ್ದಾಂತಗಳನ್ನು ವಿವರವಾಗಿ ತಿಳಿಯಬೇಕೆನ್ನುವವರು ಅವಶ್ಯವಾಗಿ ಈ ಕೃತಿಯನ್ನು ಅವಲೋಕಿಸಬೇಕು 'ಆದಯ್ಯ ಒಂದು ಅಧ್ಯಯನ'ದ ಸಾರ ಸಂಗ್ರಹವೇ 'ಪುಲಿಗೆರೆಯ ಆದಯ್ಯ'ಎಂಬ ಶೀರ್ಷಿಕೆಯಡಿಯಲ್ಲಿ ೨೦೦೫ ರಲ್ಲಿ ಪ್ರಕಟವಾಗಿದೆ.

ಈ ಮಹಾಪ್ರಬಂಧದ ವಿಷಯವನ್ನು ಪ್ರಮುಖವಾಗಿ ೯ ಅಧ್ಯಾಯಗಳಲ್ಲಿ ವಿಂಗಡಿಸಿ ಹೇಳಲಾಗಿದೆ.

೧.ಆದಯ್ಯನ ಹಿನ್ನಲೆ ಮತ್ತು ಪರಿಸರ.

೨. ಆದಯ್ಯ ಒಬ್ಬನೇ ? ಇಬ್ಬರೇ ? ಚರ್ಚೆ.

೩. ಆದಯ್ಯನ ಕಾಲ, ಮತ, ಮತ್ತು ಜೀವನ ಚರಿತ್ರೆ

೪. ಆದಯ್ಯ ಸಾಹಿತ್ಯ ವಿವೇಚನೆ ಹಾಗೂ ವಿಶ್ಲೇಷಣೆ.

೫. ಆದಯ್ಯನ ಸಾಹಿತ್ಯ; ತಾತ್ವಿಕ ದರ್ಶನ

೬. ಆದಯ್ಯನ ಸಾಹಿತ್ಯ; ಸಮಾಜೋಧಾರ್ಮಿಕ ದರ್ಶನ

೭. ಕನ್ನಡ ಸಾಹಿತ್ಯದಲ್ಲಿ ಆದಯ್ಯ

೮. ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಆದಯ್ಯನ ಸ್ಥಾನ.

೯. ಕರ್ನಾಟಕದಲ್ಲಿ ಆದಯ್ಯನ ಸ್ಮಾರಕ ಮತ್ತು ಕುರುಹುಗಳು.

---

೩. ಡಾ. ಸೋಮನಾಥ ಯಾಳವಾರ "ನನ್ನ ಮಾತು" ಪುಲಗೆರೆ ಆದಯ್ಯಾ ಪುಟ ೧೧೨ (೨೦೦೫)

ಪ್ರತಿ ಅಧ್ಯಾಯದಲ್ಲೂ ಸೂಕ್ತ ಉಪವಿಭಾಗಗಳನ್ನು ಮಾಡಿಕೊಂಡು ವಿಷಯವನ್ನು ಕುರಿತು ಆಳವಾಗಿ ವಿವೇಚಿಸಿದ್ದನ್ನು ಕಾಣಬಹುದು. ಮೊದಲ ಅಧ್ಯಾಯದಲ್ಲಿ ಆದಯ್ಯನ ಕಾಲದ ಪೂರ್ವದಲ್ಲಿದ್ದ ಪರಿಸರವನ್ನು ಕುರಿತು ಚರ್ಚಿಸುತ್ತ, ರಾಜಕೀಯ ವಾತಾವರಣ, ಧಾರ್ಮಿಕ ಪರಿಸ್ಥಿತಿ, ಸಾಮಾಜಿಕ ಪರಿಸರ, ಸಾಹಿತ್ಯಿಕ ಹಿನ್ನಲೆ, ಸಾಂಸ್ಕೃತಿಕ ಪ್ರಭಾವಗಳ ವಿಚಾರಗಳನ್ನೆಲ್ಲ ಸಮರ್ಪಕವಾಗಿ ಚರ್ಚಿಸಲಾಗಿದೆ. ತಮ್ಮ ಸಂಶೋಧನಾ ವಿಷಯಕ್ಕೆ ಬೇಕಾದ ಅಧ್ಯಯನದ ತಳಹದಿಯನ್ನು ಈ ವಿಭಾಗದಲ್ಲಿ ಕಂಡುಕೊಳ್ಳಲಾಗಿದೆ. ಆದಯ್ಯನ ಕಾಲದ ಅನೇಕ ವಿಸಂಗತಿಗಳನ್ನು ಪ್ರಬಂಧದ ಈ ಅಧ್ಯಾಯದಲ್ಲಿ ಸಂಶೋಧಕರು ಕಂಡು ತಿಳಿಸಿರುವುದು ಯಾಳವಾರರ ಅಧ್ಯಯನದ ಆಳವನ್ನು ಬಿಚ್ಚಿ ತೋರಿಸುತ್ತದೆ.

ಪ್ರಬಂಧದ ಮುಖ್ಯ ವಿಷಯ 'ಆದಯ್ಯ' ಆತನಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ವಿವಿಧ ಶೀರ್ಷಿಕೆಗಳಡಿಯಲ್ಲಿ ಚರ್ಚಿಸಿದ್ದಾರೆ. ಆದಯ್ಯ ಒಬ್ಬನೇ ? ಇಬ್ಬರೇ ? ಆತನ ವಚನ ಹಾಗೂ ವಚನೇತರ ಸಾಹಿತ್ಯದ ವಿವೇಚನೆ ಹಾಗೂ ವಿಶ್ಲೇಷಣೆ, ವಚನಗಳಲ್ಲಿ ಕಾವ್ಯ ದರ್ಶನ, ಬೆಡಗಿನ ವಚನಗಳ ಸಮೀಕ್ಷೆ, ವಚನಗಳಲ್ಲಿ-ತಾತ್ವಿಕ ದರ್ಶನ, ಸಮಾಜೋಧಾರ್ಮಿಕ ದರ್ಶನ, ಆದಯ್ಯನ ವ್ಯಕ್ತಿತ್ವ ದರ್ಶನ, ಸ್ಥಾನ ನಿರ್ದೇಶನ ಹಾಗೂ ಇತರ ಶರಣರ ಪ್ರಭಾವ ವಚನೇತರ ಸಾಹಿತ್ಯದ ಶ್ರೇಷ್ಠತೆ ಮೊದಲಾದ ವಿಚಾರಗಳ ಬಗೆಗೆ ಇಲ್ಲಿ ಚಿಂತನೆ ಮಾಡಲಾಗಿದೆ. ವೀರಶೈವ ಧರ್ಮದ ತತ್ವ ಸಿದ್ಧಾಂತಗಳು ಶೈವ-ವೀರಶೈವ ಶುದ್ಧಶೈವ ಭೇದಗಳು, ಶಕ್ತಿ ವಿಶಿಷ್ಟಾದ್ವೈತ. ಸೃಷ್ಟಿಯ ರಚನೆ, ದೇವರ ಪರಿಕಲ್ಪನೆ, ಶಿವತತ್ವ, ಲಿಂಗತತ್ವ, ಮಾಯಾತತ್ವ ಅಷ್ಟಾವರಣಗಳು, ಗುರುವಿನ ಪ್ರಕಾರಗಳು, ಗುರು-ಶಿಷ್ಯ ಸಂಬಂಧ, ಗುರುವಿನ ಮಹತ್ವ, ಇಷ್ಟ-ಸ್ಥಾವರಲಿಂಗ, ಇಷ್ಟ-ಪ್ರಾಣಲಿಂಗ ಹಾಗೂ ಇಷ್ಟ-ಭಾವಲಿಂಗಗಳ ಪರಿಚಯ, ಲಿಂಗಧಾರಣೆ, ಲಿಂಗಧರಿಸುವ ಸ್ಥಾನಗಳು, ಲಿಂಗ ನಿರ್ಮಾಣದ ವಸ್ತುಗಳು ಇತ್ಯಾದಿಗಳನ್ನು ಚರ್ಚಿಸಲಾಗಿದೆ.

ಜಂಗಮ ಮಹತ್ವ, ಜಂಗಮ ಶ್ರೇಷ್ಠತೆ, ಚೈತನ್ಯ ಜಂಗಮ, ಜಂಗಮ ಲಕ್ಷಣ, ಗುರು-ಲಿಂಗ-ಜಂಗಮ ಪೂಜ್ಯತೆ, ಪಾದೋದಕ, ಪ್ರಸಾದದ ಅರ್ಥ, ಮಹತ್ವ ಪ್ರಕಾರಗಳು, ಅವುಗಳ ಪ್ರಭಾವ, ಪರಿಣಾಮ, ಪರಿಶುದ್ಧತೆಗಳನ್ನು ಚರ್ಚಿಸಲಾಗಿದೆ.

ವಿಭೂತಿ, ರುದ್ರಾಕ್ಷಿ ಮಂತ್ರಗಳ ಅರ್ಥ, ಮಹತ್ವ, ಧರಿಸುವಿಕೆ, ಪ್ರಕಾರಗಳು, ಅವುಗಳ ಪ್ರಾಮುಖ್ಯತೆಗಳನ್ನು ವಿವರಿಸಲಾಗಿದೆ.

ಷಟಸ್ಥಲ ಸಿದ್ಧಾಂತದ ವಿವರಣೆ, ಮಹತ್ವ, ಭಿನ್ನತೆಗಳೊಂದಿಗೆ ಅವುಗಳ ಪರಿಭಾಷೆಯನ್ನು ಕಂಡು ಕೊಳ್ಳಲಾಗಿದೆ. ಅಂಗಸ್ಥಲ-ಲಿಂಗಸ್ಥಲದ ವಿಕಾಸ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಮೊದಲಾದವುಗಳ ವಿವರಣೆಯಿದೆ, ಇವುಗಳೊಂದಿಗೆ ಅಷ್ಟಾಂಗಯೋಗದ ವಿವರಣೆ, ಭಿನ್ನತೆ, ಅದರ ಮಹತ್ವ ಶಿವಯೋಗಿಯ ಲಕ್ಷಣ, ಸಾಧನೆ ಹಾಗೂ ಪರಿಣಾಮಗಳ ಚರ್ಚೆಯಿದೆ. ಈ ಎಲ್ಲ ಸಂದರ್ಭಗಳಲ್ಲಿ ಅತ್ಯಂತ ವಸ್ತುನಿಷ್ಠವಾಗಿ 'ಆದಯ್ಯ' ಶರಣನ ವಿಚಾರಧಾರೆಯನ್ನು ಅರ್ಥೈಸಿದ್ದಾರೆ. ಬಸವಾದಿ ಶರಣರ ವಚನ ಚಳುವಳಿಯ ಹಿನ್ನೆಲೆಯಲ್ಲಿ ಮೂಡಿಬಂದಿರುವ ಆದಯ್ಯನವರ ವಚನಗಳು ಮಾನವ ಕಲ್ಯಾಣಕ್ಕಾಗಿ ರೂಪಗೊಂಡಿದ್ದನ್ನು ಕಂಡುಕೊಳ್ಳುತ್ತ, ಅವುಗಳ ಸ್ವರೂಪ, ಹಾಗೂ ವೈಶಿಷ್ಟ್ಯಗಳನ್ನು ಕಾಣಿಸಿಕೊಟ್ಟಿರುವುದನ್ನು ಇಲ್ಲಿ ಮನಗಾಣಬಹುದು.

ಆದಯ್ಯನ ಸಾಹಿತ್ಯದಲ್ಲಿ 'ಸಮಾಜೋಧಾರ್ಮಿಕ ದರ್ಶನ'ವು ಆ ಯುಗಧರ್ಮದ ಸಾಮಾಜಿಕ ಜೀವನದ ಹಿನ್ನಲೆಯಲ್ಲಿ ಕಂಡುಕೊಳ್ಳಲಾಗಿದೆ. ಧರ್ಮದ ಪ್ರಭಾವ, ವೀರಶೈವ ಸಮಾಜ, ಭಕ್ತ-ಭವಿಗಳೆಂಬ ವರ್ಗೀಕರಣ, ಏಕದೇವೋಪಾಸನೆ, ಅದರ ಆಚರಣೆಯಲ್ಲಿ ಕಂಡುಬರುವ ಲೋಪ-ದೋಷಗಳ ಖಂಡನೆ, ಗುರು-ಲಿಂಗ-ಜಂಗಮ ಮಹತ್ವ, ಪಂಚ ಮಹಾಪಾತಕಗಳ ವಿವರಣೆ ಸೂತಕ, ಸಂಸ್ಕಾರ, ಕ್ರಿಯಾಚರಣೆಯ ವಿಷಯವಾಗಿ ನಡೆದ ಚರ್ಚೆಗಳ ಅಡಿಯಲ್ಲಿ 'ಸಮಾಜೋಧಾರ್ಮಿಕ' ದರ್ಶನದ ಅಧ್ಯಯನ ಮಾಡಲಾಗಿದೆ. ಈ ಮೂಲಕ ಪ್ರಬಂಧದ ಆಶಯವನ್ನು ಈ ಎಲ್ಲ ಮಗ್ಗಲುಗಳಿಂದ ಪರಾಮರ್ಶಿಸಿದ ಪರಿಶ್ರಮ ಇಲ್ಲಿ ಎದ್ದು ಕಾಣುತ್ತದೆ.

ಆದಯ್ಯ ಸಮಯಾಭಿಮಾನಿ 'ಸೌರಾಷ್ಟ್ರ ಸೋಮೇಶ್ವರ' ಎಂಬ ಅಂಕಿತವನಿಟ್ಟುಕೊಂಡು ಸಾಹಿತ್ಯ ನಿರ್ಮಾಣ ಮಾಡಿದ ಸಾಧಕ. ಆ ಸೌರಾಷ್ಟ್ರಪತಿ, ಸೋಮೇಶ್ವರನನ್ನು ಕರ್ನಾಟಕದ ಪುಲಿಗೆರೆಯ ಬಸದಿಯಲ್ಲಿ ತಂದು ಸಂಸ್ಥಾಪಿಸಲು

ಹೋರಾಟ ಮಾಡಿರುವ ಧೀರ ಶರಣ. ಕ್ರಿ.ಶ.ಸುಮಾರು ೧೦೩೮ ರಿಂದ ೧೧೭೦ ರ ಕಾಲಾವಧಿಯಲ್ಲಿ ಬಾಳಿ ಬದುಕಿದ್ದ ಆದಯ್ಯನ ಜೀವನದ ಉತ್ಕ್ರಾಂತಿಯ ಕಾಲ ೧೧೯೮ – ೧೧೬೦ ಎನ್ನಲಾಗಿದೆ. ಈ ಅವಧಿಯ ಕರ್ನಾಟಕದಲ್ಲಿ ಸಾಮಾಜಿಕ ಧಾರ್ಮಿಕ ಜೀವನದಲ್ಲಿ ಹಲವು ಸ್ಥಿತ್ಯಂತರಗಳು ಕಾಣಿಸಿಕೊಂಡ ಸಂಗತಿಯನ್ನು ಸಂಶೋಧಕರು ಇಲ್ಲಿ ಗುರುತಿಸಿದ್ದಾರೆ. ಆ ಕಾಲದ ಧಾರ್ಮಿಕ ಸ್ಥಿತಿಯು ತುಂಬಾ ಗೊಂದಲಮಯವಾಗಿತ್ತೆಂಬ ಅಂಶಗಳನ್ನು ಕೆಲವು ಶಾಸನಗಳು ಹಾಗೂ ಸಾಹಿತ್ಯಿಕ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.[೪] ಶೈವ, ಜೈನ, ವೈಷ್ಣವ, ವೀರಶೈವಗಳು ತಮ್ಮ ತಮ್ಮ ಮತ ಪ್ರಚಾರಕಕ್ಕಾಗಿ ಒಂದು ಕಡೆ ಹೆಣಗುತ್ತಿದ್ದರೆ, ಇನ್ನೊಂದೆಡೆಯಲ್ಲಿ ಪರಸ್ಪರ ಘರ್ಷಣೆಗೆ ತೊಡಗಿದ್ದವು ಎಂಬುದನ್ನು ಆ ಕಾಲದ ಶಾಸನ ಕಾವ್ಯ, ಪುರಾಣಗಳು ತಿಳಿಸುವುದನ್ನು ಎತ್ತಿ ತೋರಿಸಿದ್ದಾರೆ.

೧೨ ನೇಯ ಶತಮಾನದ ನಂತರದ ಅವಧಿಯಲ್ಲಿ ಆದಯ್ಯನ ಶ್ರೇಷ್ಠತೆಯು ಮನೆಮಾತಾಗಿದ್ದಿತು. ಆತನ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸಾಧನೆಯು ನಂತರದ ಕಾಲದಲ್ಲಿ ತುಂಬಾ ಪರಿಣಾಮ ಬೀರಿತ್ತೆಂಬುದನ್ನು ಕಂಡಿರಿಸಿರುವ ಈ ಪ್ರಬಂಧದಲ್ಲಿ, ಆದಯ್ಯನನ್ನು ಕುರಿತು ನಂತರದ ಸಾಹಿತ್ಯದಲ್ಲಿ ಆತನನ್ನು ಅರಿಯಲಾಗಿದೆ. 'ಸಾಹಿತ್ಯದಲ್ಲಿ ಆದಯ್ಯ' ಎಂಬ ಭಾಗವು ಈ ದೃಷ್ಟಿಯಲ್ಲಿ ತುಂಬಾ ಮಹತ್ವದ್ದಾಗಿದೆ. ಕನ್ನಡ ಹಾಗೂ ತೆಲಗು ಸಾಹಿತ್ಯದಲ್ಲಿ ಆದಯ್ಯನನ್ನು ಮುಖ್ಯವಾಗಿ

೧. ಪೌರಾಣಿಕ ರೀತಿ

೨. ಪೌರಾಣಿಕ ರೂಪದ ಚರಿತ್ರೆ

೩. ವಾಸ್ತವ ಬದುಕಿನ ರೀತಿ

೪. ಧಾರ್ಮಿಕ ಪ್ರಮಥರ ಕಥಾತ್ಮಕ ರೀತಿ

ಇವುಗಳಲ್ಲಿ ಅಳವಡಿಸಿಕೊಂಡಿರುವುದನ್ನು ಎತ್ತಿ ತೋರಿಸುತ್ತ, ಕವಿಗಳ ಮನೋಧರ್ಮ, ಯುಗಪ್ರೇರಣೆ, ರಚನೆಯ ಸ್ವರೂಪತೆಯಲ್ಲಿ ಭಿನ್ನತೆಯಿದ್ದರೂ, ಕೃತಿಗಳ ಒಟ್ಟು ಅಧ್ಯಯನದಲ್ಲಿ ಆಯಾ ಕಾಲದ ಜನರ ಜನ ಪ್ರಮುಖ ಐತಿಹಾಸಿಕತೆಗೆ ಪೂರಕವಾದ ಆಕರ ಪರಿಕರಗಳನ್ನು ಕಾಣಿಸಲಾಗಿದೆ. ೧೨ ನೇಯ

---

೪. ಡಾ. ಸೋಮನಾಥ ಯಾಳವಾರ ಪುಲಗೆರೆ ಆದಯ್ಯಾ ಪುಟ ೧೨೮ (೨೦೦೫)

ಶತಮಾನದ ಯಾವುದೇ ವಚನಕಾರರಲ್ಲಿ ಉಲ್ಲೇಖ ಸಿಗದ ಆದಯ್ಯನನ್ನು –

೧. ಕನ್ನಡ ಕಾವ್ಯಗಳಲ್ಲಿ

೨. ತೆಲಗು ಕಾವ್ಯಗಳಲ್ಲಿ

೩. ಕನ್ನಡ ವೀರಶೈವ ಪುರಾನಗಳಲ್ಲಿ

೪. ಜಾನಪದ ಸಾಹಿತ್ಯದಲ್ಲಿ

೫. ಕಾದಂಬರಿ ಸಾಹಿತ್ಯದಲ್ಲಿ

ಹೇಗೆ ಅಭಿವ್ಯಕ್ತಗೊಂಡಿದ್ದಾನೆಂಬುದನ್ನು ಗುರುತಿಸಲಾಗಿದೆ. ಈ ಎಲ್ಲ ಸಾಹಿತ್ಯದಲ್ಲಿಯ 'ಆದಯ್ಯ'ನ ಕಥಾ ವಸ್ತುವಿಗೆ ಹರಿಹರನ ರಗಳೆ ಹಾಗೂ ರಾಘವಾಂಕನ ಸೋಮನಾಥ ಚಾರಿತ್ರ್ಯಗಳೇ ಆಕರ ಗ್ರಂಥಗಳೆಂದು ಸ್ಪಷ್ಟಪಡಿಸಲಾಗಿದೆ. ಈ ಎರಡೂ ಕೃತಿಗಳನ್ನು ತೌಲನಿಕವಾಗಿ ವಿವೇಚಿಸಿ, ಉಳಿದ ಕೃತಿಗಳಲ್ಲಿ ವ್ಯಕ್ತವಾಗಿರುವ ಆದಯ್ಯನ ಜೀವನದ ವಿಶೇಷ್ಯತೆಗಳನ್ನು ಗಮನಿಸಿ ಆತನ ಐತಿಹಾಸಿಕ ಜೀವನದ ನಿರೂಪಣೆಯನ್ನು ಮಾಡಲಾಗಿದೆ. ಶರಣರ ಚಾರಿತ್ರಿಕಾಂಶಗಳು ಆವೇಶ ಹಾಗೂ ಕಲ್ಪನೆಗಳ ಒಡಲೊಳಗೆ ಸೇರಿರುವ ಸಂಭವವನ್ನು ಗುರುತಿಸಿರುವ ಸೋಮನಾಥರು "ವಸ್ತುಸತ್ಯ, ಚಾರಿತ್ರಿಕಸತ್ಯ, ಸಾಮಾಜಿಕಸತ್ಯಗಳನ್ನು ನೇರವಾಗಿ ಅಲ್ಲಿ ಅರಸುವುದಕ್ಕಿಂತ ಅದರ ಹೊಳಹುಗಳ ಮೀನಿನ ಹೆಜ್ಜೆಗಳನ್ನು ಕಾವ್ಯಗಳ ಕಲ್ಪನಾ ಸಾಗರದಲ್ಲಿ ಕಾಣಬೇಕಾಗುವುದು."[೫] ಎಂಬುದನ್ನು ಒಪ್ಪಿಕೊಂಡು ಆದಯ್ಯನನ್ನು ಕುರಿತ ರಗಳೆಗಳಲ್ಲಿ ಬಳಸಲಾಗಿರುವ ಕವಿಕಲ್ಪನೆ ಪವಾಡಗಳ ಹಿಂದಿರುವ ಸಾಂಕೇತಿಕತೆಗಳನ್ನು ಬಿಡಿಸಿ ಸೂಕ್ಷ್ಮವಾಗಿ ಅವುಗಳನ್ನು ವಿಶ್ಲೇಷಿಸಿ ಆದಯ್ಯನ ವ್ಯಕ್ತಿತ್ವವನ್ನು ಕಂಡುಕೊಡಿದ್ದಾರೆ.

ಹಾಗೆಯೇ ಹಂಪೆಯ ಹರೀಶ್ವರನ ವರಸುತನೆನಿಸಿದ ರಾಘವಾಂಕನು ಜನ ಬದುಕಬೇಕೆಂಬ ಆಪೇಕ್ಷೆಯಿಂದ ಕಾವ್ಯ ರಚಿಸಿದವನು. ಹರಿಹರನ 'ಆದಯ್ಯನ ರಗಳೆ'ಯಿಂದ ಪ್ರೇರಣೆ ಪಡೆದು 'ಸೋಮನಾಥ ಚಾರಿತ್ರ್ಯ'ರಚಿಸಿದ್ದಾನೆ. ಇದು ಸೌರಾಷ್ಟ್ರ ಸೋಮನಾಥನ ಕುರಿತ ಕಾವ್ಯ ರಸ, ಜೀವ, ಭಾವವೊಡಲು,

---

೫. ಎಸ್.ಎಮ್. ವೃಷಬೇಂದ್ರ ಸ್ವಾಮಿ ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭು ಪುಟ ೬೭

ಅರ್ಥವವಯವು, ರೀತಿ ಸುಕುಮಾರತೆ, ಸುಖ ನಿಳಯವಾಗಿಪ್ಪ ಪೊಸ ಕಾವ್ಯ ಕನ್ನಿಕೆ[೬] ಸೌರಾಷ್ಟ್ರದಲ್ಲಿ ಆದಯ್ಯವೆಸರಿನಿಂದ ಜನಿಸಿ ಹುಲಿಗೆರೆಗೆ ಬಂದು ವೈರಿಗಳ ಮೂದಲಿಕೆಗೆ, ಹಿರಿಯ ಬಸದಿಯಲ್ಲಿ ಶಶಿಧಾರಿ ಸೋಮಯ್ಯನನ್ನು ನಿಲ್ಲಿಸಿದ ಸಂಗತಿಯೇ ಈ ಕೃತಿಯ ಕಥಾವಸ್ತು. ಮೂರು ಸ್ಥಲಗಳ ಮಂದಾನಿಲ ರಗಳೆಯ 'ಆದಯ್ಯನ' ಸಣ್ಣ ಕಥೆಯನ್ನು ರಾಘವಾಂಕನು ವಿಸ್ತರಿಸಿ ಐದು ಸ್ಥಳಗಳಲ್ಲಿ ಒಟ್ಟು ೫೨೪ ವಾರ್ಧಕ ಷಟ್ಪದಿಗಳಲ್ಲಿ ವರ್ಣಿಸಿರುವುದನ್ನು ಇಲ್ಲಿ ಗಮನಿಸಲಾಗಿದೆ.

ಕಥೆ, ವರ್ಣನೆ, ಶೈಲಿ, ದರ್ಶನಗಳಲ್ಲಿ ಹರಿಹರನನ್ನು ಪ್ರಧಾನವಾಗಿ ಅನುಸರಿಸಿರುವ ರಾಘವಾಂಕನು ಘಟನೆಗಳ ಸೃಷ್ಟಿಯಲ್ಲಿ, ಸಂದರ್ಭಗಳನ್ನು ಹೊಸೆಯುವಲ್ಲಿ, ವಿಶೇಷವಾಗಿ ಸಂವಾದ ಸೃಷ್ಟಿಯಲ್ಲಿ ಹೊಸತನ ಮೆರೆದುದನ್ನು ಗುರುತಿಸಲಾಗಿದೆ. ಭಕ್ತನಾದ ರಾಘವಾಂಕನು ಶಿವಭಕ್ತನಾದ 'ಆದಯ್ಯ'ನ ಜೀವನವನ್ನು ನಿರೂಪಿಸುವಲ್ಲಿ ಆತನು ಅನುಸರಿಸಿರಬಹುದಾದ ಸ್ವತಂತ್ರ ಮನೋವೃತ್ತಿ, ಚಾರಿತ್ರಿಕ ಪ್ರಜ್ಞೆಯ ಹರಿಹರನಿಗಿಂತ ಎಷ್ಟರಮಟ್ಟಿಗೆ ಭಿನ್ನವಾಗಿದೆ, ಅವುಗಳ ಔಚಿತ್ಯವೇನು ? ಎಂಬುದನ್ನು ತೌಲನಿಕವಾಗಿ ಪರಿಶೀಲಿಸಿ ಆ ಕಾವ್ಯಗಳಲ್ಲಿ[೭] ಮೂಡಿ ನಿಂತಿರುವ ಆದಯ್ಯನ ವ್ಯಕ್ತಿತ್ವವನ್ನು ಗುರುತಿಸಲಾಗಿದೆ.

ಚೇರಮಾಂಕನ ಕಾವ್ಯದಲ್ಲಿ 'ಪಿತಾಮಹನೆನಿಸಿದ ಆದಯ್ಯನನ್ನು ಕಾಣಲಾಗಿದೆ. ವೀರಶೈವ ಕವಿಯಾದ ಚೇರಮಾಂಕನು ತನ್ನ ವಂಶಜರ ಪರಂಪರೆಯನ್ನು ಹೇಳುವಾಗ 'ಆದಯ್ಯ'ನನ್ನು ತನ್ನ ವಂಶದ 'ಪಿತಾಮಹಾ' ನೆಂದಿರುವುದನ್ನು ವಿವರಿಸುತ್ತಾರೆ. ಆದಿಶೆಟ್ಟಿ, ಸಿರಿಯಾಳಶೆಟ್ಟಿಯರ ವಂಶಜನು ನಾಗಲಿಂಗಶೆಟ್ಟಿ ಎಂದಿರುವುದು ಆದಯ್ಯನ ಐತಿಹಾಸಿಕತೆಯನ್ನು ತೋರಿಸುವಂತಹದ್ದು. ವಚನಗಳನ್ನು ಕಂಡಾಗ, ಆದಯ್ಯನು ಸುಜ್ಞಾನಿ, ಸನ್ಮಾರ್ಗಿ, ಸುಶೀಲ, ವ್ರತಾಚಾರಿಯಾಗಿದ್ದಾನೆ. ಎಂಬುದು ಸುವಿಧಿತವಾಗುತ್ತದೆ. ಲೌಕಿಕ ಜೀವನದಲ್ಲಿ ಆತನು ವಿಖ್ಯಾತ ಪಾವನಹಸ್ತ, ವ್ರತಾಚಾರಿ. 'ತನ್ನ ಕಾಮಿನಿಗಲ್ಲದೆಳಸದ ಚಿತ್ತಸುಜನನಾಗಿರುವನು. ಎಂಬುದನ್ನಲ್ಲಿ ಕಂಡುಕೊಳ್ಳಲಾಗಿದೆ.

---

೬. ಆರ್.ಸಿ. ಹಿರೇಮಠ ಸೋಮನಾಥ ಚಾರಿತ್ರ್ಯ ೧೯೯೭ ಪಿಠಿಕೆ
೭. ಡಾ. ಸೋಮನಾಥ ಯಾಳವಾರ ಪುಲಗೆರೆಯ ಆದಯ್ಯ ಪುಟ ೧೦೬ (೨೦೦೫)

ಭೈರವೇಶ್ವರ ಕಾವ್ಯ, ಸಿದ್ಧನಂಜೇಶನ ಚರಿತ್ರೆ, ರಾಘವಾಂಕ ಚಾರಿತ್ರ, ತೆಲಗು ಕಾವ್ಯಗಳಾದ ಬಸವ ಪುರಾಣಮು, ಪಂಡಿತಾರಾಧ್ಯ ಚರಿತಮುಗಳಲ್ಲಿ ವ್ಯಕ್ತಗೊಂಡಿರುವ ಆದಯ್ಯನು ವೀರಶೈವ ತತ್ವ, ಸಂಸ್ಕೃತಿಯ ಪ್ರಸಾರಕನಾಗಿರುವನು. ಇಲ್ಲೆಲ್ಲಾ ಆದಯ್ಯನ ಉಲ್ಲೇಖವು ಭಕ್ತಿನೆಲೆಯಲ್ಲಿಯೇ ಪ್ರಧಾನವಾಗಿ ಉಕ್ತವಾಗಿದ್ದು, ಪವಾಡಗಳ ಭವ್ಯತೆಯಲ್ಲಿ ಕಾಣಿಸಿಕೊಂಡಿರುವುದನ್ನು ಕಂಡುಕೊಳ್ಳಲಾಗಿದೆ. ಅಂತೆಯೇ ವೀರಶೈವ ಪುರಾಣಗಳಲ್ಲಿ, ದುಂದುಮೆ ಹಾಡಿನಲ್ಲಿ ಆದಯ್ಯನು ರಾಘವಾಂನ ಸೋಮನಾಥ ಚಾರಿತ್ರ್ಯದ ಕತೆಯಲ್ಲಿಯಂತೆ ಅಭಿವ್ಯಕ್ತಗೊಂಡಿರುವುದನ್ನು ಎತ್ತಿತೋರಿಸಲಾಗಿದೆ.

ಕಾದಂಬರಿ ಸಾಹಿತ್ಯದಲ್ಲಿ ಆದಯ್ಯನಿಗಂಟಿಕೊಂಡಿದ್ದ ಪವಾಡ ಪುರುಷತನ, ಅತಿಮಾನುಷ್ಯ ಶಕ್ತಿ, ಜಾತ್ಯಾಂಧತನ, ಜೈನವಿಗ್ರಹ ವೊಡೆದು ಸೌರಾಷ್ಟ್ರಪತಿಯನ್ನು ಪ್ರತಿಷ್ಠಾಪಿಸಿದ ಶರಣನೆಂಬ ಕಿಲುಬು ಕೊಳೆಯನ್ನು ನಿವಾರಿಸಿ, ಅವನನ್ನು ಒಬ್ಬ ಐತಿಹಾಸಿಕ ವ್ಯಕ್ತಿ ಕಾಮ ಪ್ರೇಮಗಳಲ್ಲಿ ತೊಳಲಾಡಿ, ಸೋಮನಲ್ಲಿ ಆತ್ಮೋದ್ಧಾರ ಮಾರ್ಗ ಕಂಡುಕೊಂಡ ಮಹಾನುಭಾವ, ವಚನಕಾರ ಎಂದು ಚಿತ್ರಿಸಲಾಗಿದೆ[೮].

ಆದಯ್ಯನ ಜೀವನ ಸಾಧನೆ ಮತ್ತು ಸಾಹಿತ್ಯ ಸಾಧನೆಗಳಲ್ಲಿ ಪ್ರಭಾವ ಬೀರಿದ ವಚನಕಾರರೆಂದರೆ, ಬಸವಣ್ಣ, ಮಡಿವಾಳ ಮಾಚಿದೇವ, ಅಕ್ಕಮಹಾದೇವಿ, ಅಲ್ಲಮ, ಚನ್ನಬಸವಣ್ಣ, ಸಿದ್ಧರಾಮ, ಅಜಗಣ್ಣ, ರೇವಣಸಿದ್ಧಯ್ಯಾ ಮುಂತಾದವರು. ಅವರನ್ನು ಆದಯ್ಯ ತನ್ನೆರಡು ವಚನಗಳಲ್ಲಿ ಸ್ಮರಿಸಿರುವುದನ್ನು ಹೇಳಲಾಗಿದೆ. ತಾನು ಬಸವಾದಿ ಶರಣರ 'ಪಡಿದೊತ್ತು' ಎಂದಿರುವುದು ಆತನ ಸಮರ್ಪಣೆಯ ಮನೋಭಾವವನ್ನು ಸೂಚಿಸುತ್ತದೆ ಎನ್ನಲಾಗಿದೆ. ಆದಯ್ಯನ ವಚನಗಳಲ್ಲಿ ಯೋಗದ ಬೆಡಗಿನ, ಗೂಢ ಸಂಖ್ಯೆಗಳ ಅದ್ಭುತ ಪ್ರಭಾವವನ್ನು ಕಾಣಲಾಗಿದೆ. ಆ ಗುಣ ಆತನಲ್ಲಿ ಪ್ರಭುದೇವರ ವಚನಗಳ ಮನನದ ಫಲವೆಂದು ಹೇಳಲಾಗಿದೆ. ಸೊಗಸಾದ ರೂಪಕಗಳ ವಿನ್ಯಾಸ, ಮಿಂಚಿನ ಗತಿಯ ವಾಖ್ಯ ಪ್ರಯೋಗ, ಆತ್ಮ ವಿಮರ್ಶೆಯಂಥಹ ನುಡಿಗಳಲ್ಲಿ ಬಸವಣ್ಣನವರ ಪ್ರಭಾವವಿರುವದನ್ನು ಗಮನಿಸಲಾಗಿದೆ. ಶಾಸ್ತ್ರಬದ್ಧ ವಚನಗಳು ಹಾಗೂ ವೀರಶೈವ ತತ್ವ ನಿರೂಪಣೆಯಲ್ಲಿ ಚನ್ನಬಸವಣ್ಣನ ಪ್ರಭಾವವಿರುವುದನ್ನು ಕಾಣಲಾಗಿದೆ. ಆದಯ್ಯನ 'ಮನವಾತ್ಮ ಸಂಪಾದನೆಯ' ವಚನಗಳು,ವಚನ ಸಾಹಿತ್ಯಕ್ಕೆ

---

೮. ಸೋಮನಾಥ ಯಾಳವಾರ ಪುಲಗೆರೆ ಆದಯ್ಯಾ ಪುಟ ೧೨೩ (೨೦೦೫)

ಆದಯ್ಯನು ಮೊದಲು ಒಬ್ಬ ಸಮಯಾಭಿಮಾನಿಯಾಗಿ ಧರ್ಮ ತತ್ವಗಳ ನಿಷ್ಠೆಯನ್ನು ಪಾಲಿಸಿಕೊಂಡು, ನಂತರದಲ್ಲಿ ಸಮಾಜ ಸುಧಾರಕನಾಗಿರುವುದನ್ನು ವಚನಗಳು ಅರುಹುತ್ತವೆ 'ಅದ್ವೈತದ ನಾಣ್ಯವ ಕಣ್ಮುಚ್ಚದ ನೋಟದಿಂ ನೋಡುವೆನಯ್ಯ' ಎಂಬಂತಹ ವಚನಗಳು ಆದಯ್ಯನ ಸಿದ್ಧ ಜೀವನವನ್ನು ದರ್ಶಿಸುವುದನ್ನು, ತನ್ನ ಜೀವನದ ವ್ಯಕ್ತಿತ್ವ ವಿಕಾಸಕ್ಕೆ ತಾನೇ ಕಾರಣನಾಗಿರುವುದನ್ನು ತಿಳಿಸುವ ವಚನಗಳಲ್ಲಿ ಪರಿಪಕ್ವಭಾವ ನಿಶ್ಚಿತ ಜ್ಞಾನ ಕಾರಣವಾಗಿರುವುದರಿಂದ ಆದಯ್ಯನು ಇಂತಹ ವಚನಗಳನ್ನು ಅವನ ವೃದ್ಧಾವಸ್ಥೆಯಲ್ಲಿ ರಚಿಸಿದ್ದಾನೆಂದು ಹೇಳುವುದನ್ನು, ಇವು ಆದಯ್ಯನ ಶರಣ ಸ್ಥಲದ ವ್ಯಕ್ತಿತ್ವವನ್ನು ತೋರಿಸುತ್ತವೆ ಎಂಬುವುದನ್ನು, ಆತನ ತತ್ವಜ್ಞಾನ, ಪಾಂಡಿತ್ಯ ಹಾಗೂ ಶಾಸ್ತ್ರೋಕ್ತಿತೆಯನ್ನು ಆತನ ಮನವಾತ್ಮನ ವಚನಗಳಲ್ಲಿ ಕಾಣಬಹುದೆಂದು ತುಂಬಾ ಆಧಾರಯುಕ್ತವಾಗಿ ತಿಳಿಸಿದ್ದಾರೆ ಸಂಶೋಧಕರು.

ಒಟ್ಟಿನಲ್ಲಿ ಹೇಳುವುದಾದರೆ 'ಪಸ್ತುತ ಗ್ರಂಥದಲ್ಲಿ ಡಾ. ಸೋಮನಾಥ ಯಾಳವಾರ ಅವರು ಗ್ರಂಥ ವ್ಯಾಪ್ತಿಗೆ ಅನುಸಾರವಾಗಿ ತಮ್ಮ ಸಂಶೋಧನ ತೆಕ್ಕೆಗೆ ಸಿಕ್ಕಷ್ಟು ಎಲ್ಲ ಮಾಹಿತಿಗಳನ್ನು ಆಕರಗಳನ್ನು ಸಾಧಾರ ಸುದೀರ್ಘವಾಗಿ ಚರ್ಚಿಸಿ, ತಮ್ಮ ನಿರ್ಣಯಗಳನ್ನು ತೂಕಬದ್ಧವಾಗಿ ಪ್ರಸ್ತಾಪಿಸಿದ್ದಾರೆ. ಪ್ರಸ್ತುತ ಪುಸ್ತಕದಲ್ಲಿ ಆದಯ್ಯನ ಕುರಿತು ಸಮಗ್ರ ಮತ್ತು ವೀರಶೈವ ಸಾಹಿತ್ಯದಲ್ಲಿ ವೀರಶೈವ ಧರ್ಮದಲ್ಲಿ ಅವನ ಸ್ಥಾನ ನಿರ್ದೇಶನ ಮಾಡಲಾಗಿದೆ. ಪ್ರಬಂಧದುದ್ದಕ್ಕೂ ಡಾ. ಸೋಮನಾಥ ಯಾಳವಾರರ ಸಂಶೋಧನ ಪ್ರಸಕ್ತಿ, ವಿಷಯ ವಿಶ್ಲೇಷಣಾ ವಿಧಾನಗಳು ಗಮನ ಸೆಳೆಯುತ್ತವೆ. ತಮ್ಮ ನಿಲುವುಗಳನ್ನು ಸಾಧಾರವಾಗಿ ಪ್ರತಿಪಾದಿಸಲು ಯತ್ನಸಿರುವುದು ಮೆಚ್ಚತಕ್ಕದ್ದಾಗಿದೆ. ಎಂದು ಹೇಳಿರುರುವ ಡಾ. ಸಂಗಮೇಶ ಸವದತ್ತಿಮಠರ ಅಭಿಪ್ರಾಯವನ್ನು[೧೧] ನಾವು ಒಪ್ಪವಂತಹದ್ದೆನ್ನಬಹುದು.

೧೧. ಡಾ. ಸಂಗಮೇಶ ಸವದತ್ತಿಮತ ಪುಲಗೆರೆ ಆದಯ್ಯ ಮುನ್ನುಡಿಯಲ್ಲಿ ಪುಟ ೧೦ ೨೦೦೫

೧.೨ ಬೀದರ ಜಿಲ್ಲೆಯ ಶರಣ ಸ್ಮಾರಕಗಳು

ಈ ಕೃತಿಯು ೨೦೦೯ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರಿನಿಂದ ಪ್ರಕಟವಾಗಿದೆ. ೩೬ ಶರಣ ಸ್ಮಾರಕಗಳನ್ನು ಒಳಗೊಂಡ ಸಂಶೋಧನ ಕೃತಿಯಿದು. ಬಸವಾದಿ ಶರಣರು ಕರ್ನಾಟಕ ಸಂಸ್ಕೃತಿಗೆ ಕೊಟ್ಟಿರುವ ಮಹತ್ವದ ಕೊಡುಗೆಗಳಲ್ಲಿ ಅವರ ಸಾಂಸ್ಕೃತಿಕ ಬದುಕು ಒಂದು.[೧೨] ಈ ಸಾಂಸ್ಕೃತಿಕತನವನ್ನು ಶರಣರು ನೆಲೆ ನಿಂತು ಹೋಗಿರುವ ಪ್ರದೇಶ ಹಾಗೂ ಆ ಪ್ರದೇಶಗಳಿಂದ ಅಭಿವ್ಯಕ್ತಗೊಂಡಿರುವ ಅವರ ವಿಚಾರಧಾರೆಗಳ ಹಿನ್ನೆಲೆಯಲ್ಲಿ, ಹಾಗೂ ಜನರು ಶರಣರನ್ನು ಹೇಗೆ ಗಮನಿಸಿ, ಅವರ ಸ್ಮಾರಕಗಳನ್ನು ನಿರ್ಮಿಸಿ ಆರಾಧಿಸುತ್ತಿದ್ದಾರೆಂಬುದನ್ನು ಇಲ್ಲಿ ಗುರುತಿಸಲಾಗಿದೆ.

ಸೋಮನಾಥ ಯಾಳವಾರ ಅವರು ತಾವು ಕಂಡುಕೊಂಡಿರುವ ಜಿಲ್ಲೆಯಲ್ಲಿಯ 'ಸ್ಮಾರಕ'ಗಳನ್ನು ೧). ಬಸವಪೂರ್ವಯುಗದ ಶರಣ ಸ್ಮಾರಕಗಳು ೨). ಬಸವ ಸಮಕಾಲೀನ ಶರಣಸ್ಮಾರಕಗಳು ಹಾಗೂ ೩). ಬಸವೋತ್ತರ ಕಾಲದ ಶರಣ ಸ್ಮಾರಕಗಳು, ಎಂದು ವಿಭಾಗಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಬಸವ ಪೂರ್ವ ಯುಗದಲ್ಲಿರಬಹುದಾದ ಶರಣ ಕುಂಬಾರ ಗುಂಡಯ್ಯ, ರೇವಣಸಿದ್ಧ, ಜೇಡರ ದಾಸಿಮಯ್ಯ, ಮಾದಾರ ಚನ್ನಯ್ಯ ಹಾಗೂ ಗೋರಕ್ಷನಾಥ ಮೂರ್ತಿಗಳ ಸ್ಮಾರಕಗಳನ್ನು ಭಾಲ್ಕಿ, ಬಸವಕಲ್ಯಾಣ, ಹಾಗೂ ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ಕಂಡು ಕೊಂಡು, ಅವುಗಳ ಸ್ಥಾನ, ಸ್ವರೂಪ, ರಚನೆ ಹಾಗೂ ಜನಮನದಲ್ಲುಳಿದ ಪರಿಕಲ್ಪನೆಗಳ ಹಿನ್ನಲೆಯಲ್ಲಿ ಆಯಾ ಶರಣರ ಜೀವನ ಚಾರಿತ್ರ್ಯವನ್ನು ಕಟ್ಟಿಕೊಡಲು ಪ್ರಯತ್ನಸಿದ್ದಾರೆ.

ಈ ಕೃತಿಯ ರಚನೆಯ 'ಪೀಠಿಕೆ' ಎಂಬ ಭಾಗದಲ್ಲಿ ಬೀದರ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ ಕಲ್ಯಾಣದ ಮಹತ್ವ, ಅದರ ಸಾಂಸ್ಕೃತಿಕ ಚರಿತ್ರೆಯನ್ನು ವಿವರಿಸಿದ್ದಾರೆ. 'ಜಗತ್ತಿಗೆ ಮೊಟ್ಟ ಮೊದಲನೆಯ ಸಂಸತ್ತನ್ನು' ಅನುಭವ ಮಂಟಪ' ರೂಪದಲ್ಲಿ ನೀಡಿರುವ ವಿಶಿಷ್ಟ ಕ್ಷೇತ್ರ, ಅನೇಕ ಶತಮಾನಗಳ ಇತಿಹಾಸ ಪರಂಪರೆಯುಳ್ಳ ಈ ಭೂಮಿ, 'ಕಲ್ಯಾಣ ನಾಡು' ಎಂದೇ ಸುಪ್ರಸಿದ್ದ. ಉತ್ತರ ಕರ್ನಾಟಕದ ತುದಿಯಲ್ಲಿರುವ ಇದು, ಸಾಮಾಜಿಕವಾಗಿ, ರಾಜಕೀಯವಾಗಿ,

---

೧೨. ಡಾ. ಸೋಮನಾಥ ಯಾಳವಾರರ "ನನ್ನ ಮಾತು" ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬

ಸಾಹಿತ್ಯಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಮಹತ್ವ ಪಡೆದಿರುವ ಪ್ರದೇಶ ಎಂಬುದನ್ನು[೧೩] ತೋರಿಸಿಕೊಟ್ಟಿದ್ದಾರೆ.

೧೧ ನೆಯ ಶತಮಾನ ಈ ಜಿಲ್ಲೆಯ ಇತಿಹಾಸದಲ್ಲಿ ಅತ್ಯಂತ ಮಹತ್ವದ ಕಾಲ. ಯಾಕಂದರೆ ಅದು ಕಲ್ಯಾಣ ಚಾಳುಕ್ಯರ ಆರಂಭದ ಕಾಲ. ಈ ಸಮಯದಲ್ಲಿ 'ಕಲ್ಯಾಣ' ಪಟ್ಟಣಕ್ಕೆ ರಾಜಧಾನಿಯ ಸುಯೋಗ ಒದಗಿಬಂತು.ಇಲ್ಲಿಂದ ಜಿಲ್ಲೆಯ ಇತಿಹಾಸದಲ್ಲಿ ಉಜ್ವಲ ಬದುಕಿನ ಪುಟಗಳು ಆರಂಭಗೊಂಡವೆಂದು ಹೇಳುತ್ತಾರೆ ಆನಂತರದಲ್ಲಿ 'ಕಲ್ಯಾಣ' ಕಳಚೂರಿ ಅರಸರ ರಾಜಧಾನಿಯಾಗಿ ನಿಂತುಕೊಂಡು ಕನ್ನಡ ಸಾಹಿತ್ಯ ಮತ್ತು ಕಲೆಗಳಿಗೆ ಅಪೂರ್ವ ಕಾಣಿಕೆಯಿತ್ತ ನೆಲೆಯಾದುದನ್ನು ತಿಳಿಸುತ್ತಾರೆ. ೧೨ ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆದ ಶರಣರ ಕ್ರಾಂತಿ ಬೀದರ ಇತಿಹಾಸಕ್ಕೆ ಸುವರ್ಣ ಕಿರೀಟ ತೊಡಿಸಿತು. ಹೊಸ ಬದುಕನ್ನು ತೋರಿಸಿದ ಈ ನೆಲದಲ್ಲಿ ಬಸವಣ್ಣ, ಅಲ್ಲಮ, ಚನ್ನಬಸವಣ್ಣ, ಅಕ್ಕಮಹಾದೇವಿ, ಮಾದಾರ ಚನ್ನಯ್ಯ ಸಮಗಾರ ಹರಳಯ್ಯ, ಅಂಬಿಗರ ಚೌಡಯ್ಯನಂತಹ ನೂರಾರು ಶರಣರು ಒಂದುಗೂಡಿ ಬಾಳಿದರು. ಅವರು ಈ ಕ್ಷೇತ್ರದ ಮೂಲಕ ಜಗತ್ತಿಗೆ ವೈಚಾರಿಕ ಕ್ರಾಂತಿಯನ್ನು ನೀಡಿದರೆಂದು ತಿಳಿಸುತ್ತಾರೆ.

ಮಾನವ ಧರ್ಮದ ಮೂಲವನ್ನು ಚರ್ಚಿಸಿ, ಬದುಕಿನ ಮೌಲ್ಯಗಳನ್ನು ಪುನರ್ ವಿಮರ್ಶಿಸಿ, ಧರ್ಮ, ಸಮಾಜ, ಜಾತಿ, ಜಂಗಮ ಮೊದಲಾದ ಶಬ್ದಗಳಿಗೆ ಹೊಸ ವ್ಯಾಖ್ಯಾನ ಬರೆದರು. ಅಂದಿನ ಸಮಾಜದಲ್ಲಿ ಸ್ಥಾವರಗೊಂಡಿದ್ದ ಭಯ, ಭಕ್ತಿ, ನೀತಿ, ನಿಯಮ, ವೃತ, ಆಚಾರಗಳನ್ನು ಜಂಗಮಗೊಳಿಸಿದರು. ಇವುಗಳಿಗೆ ಅಂಟಿಕೊಂಡಿದ್ದ ಮೂಢನಂಬಿಕೆಯ ಕಿಲುಬನ್ನು, ಚರ್ಚೆ, ಪ್ರವಚನ, ಅನುಭಾವಗೋಷ್ಠಿಗಳ ಮೂಲಕ ತಿಕ್ಕಿ ಸ್ವಚ್ಛಗೊಳಿಸಿದರು. ಕೇವಲ ಬೋಧಿಸಲಿಲ್ಲ, ಅವುಗಳನ್ನು ಶರಣರು ಬದುಕಿ ತೋರಿಸಿದರು. ಜಾತಿ, ಮತ, ಕುಲ, ಪಂಥ, ಗೋತ್ರಗಳ ಅಡ್ಡಗೋಡೆಗಳನ್ನು ಕೆಡವಿ, ಸತ್ಯ-ಸಮಾನತೆ, ಕಾಯಕ, ದಾಸೋಹ ತತ್ವಗಳನ್ನು ಅರ್ಥೈಸಿ ಒಂದುಗುಡಿ ಬದುಕುವ ಕಲೆಯನ್ನು ಕಲಿಸಿದರು.. ನಡೆ-ನುಡಿ, ಆಚಾರ-ವಿಚಾರ, ಸ್ವರ್ಗ-ನರಕ, ಜ್ಞಾನ-ಕ್ರಿಯೆ, ಅರಿವು-ಆಚಾರಗಳ ಸಂಗಮದ ಮಹತ್ವವನ್ನು ಜೀವನದಲ್ಲಿ ಆರಂಭಿಸಿ ಬೆಳೆಸಿ ತೋರಿಸಿದರು. ಕನ್ನಡ ಸಾಹಿತ್ಯಕ್ಕೆ

---

೧೩. ಡಾ. ಸೋಮನಾಥ ಯಾಳವಾರರ "ನನ್ನ ಮಾತು" ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ೧

ವಿನೂತನವಾದ 'ವಚನ ಸಾಹಿತ್ಯ'ವನ್ನು ನೀಡಿದರು. ಇದು ವಿಶ್ವ ಸಾಹಿತ್ಯಕ್ಕೆ ಕನ್ನಡ ಭಾಷೆಕೊಟ್ಟ ಕೊಡುಗೆಯಾಯಿತು.[೧೪] ಈ ಮಹತ್ವದ ಸಾಧನೆಯು ಇತಿಹಾಸದಲ್ಲಿ ಬಸವಾದಿ ಶರಣರ ಸ್ಥಾನ ಅತಿ ಮಹತ್ವದ್ದಾಗಿದೆ.

ಮಾನವ ಜೀವನದ ಪ್ರಗತಿಗಾಗಿ ಹಲವು ತತ್ವಾದರ್ಶಗಳನ್ನು ಜನಮನದಲ್ಲಿ ಮೂಡಿಸಿ, ಹೊಸ ಕ್ರಾಂತಿಗೆ ಕಹಳೆಯೂದಿದ ಶರಣರ ಕರೆಗೆ ಅಸಂಖ್ಯಾತರು ಓಗೊಟ್ಟು ಕಲ್ಯಾಣ ನಾಡಿಗೆ ಬಂದು ಸೇರಿದರು. ಆದರೆ ಇವರ ವೈಚಾರಿಕ ಕ್ರಾಂತಿಯನ್ನು ವಿರೋಧಿಸಿ ಬದುಕುತ್ತಿದ್ದವರೇ ಅಧಿಕಾರದಲ್ಲಿದ್ದರು. ಈ ವೈರುಧ್ಯಗಳಿಂದ ಸಾಮಾಜಿಕ ಕ್ರಾಂತಿಗೆ ಕಾಲ ಅಣಿಯಾಗಿ ಶರಣರಲ್ಲಿ ಕೆಲವರು ಎಳೆಹೂಟೆ ಶಿಕ್ಷೆಗೆ ಗುರಿಯಾದರು. ಇದರ ಪರಿಣಾಮ ಘೋರವಾಗಿ ಶರಣರು ಕಲ್ಯಾಣದಿಂದ ಕಾಲ್ತೆಗೆದರು.

ಅವರ ಭೌತಿಕ ದೇಹಗಳು ಕಲ್ಯಾಣದಿಂದ ಸು.೯೦೦ ವರ್ಷಗಳ ಹಿಂದೆ ಹೋಗಿದ್ದರೂ ಸಹ ಅವರ ಸ್ಮರಣೆ ಇಲ್ಲಿಯ ಜನಮನದಲ್ಲಿ ಬೇರೂರಿ ನಿಂತಿದೆ. ಬಸವ ಭಕ್ತಿ ಅಗಾಧವಾಗಿ ಇಲ್ಲಿ ಬೆಳೆದು ನಿಂತಿದೆ. ಎಷ್ಟೋ ಶರಣರ ಸಮಾಧಿಗಳು, ಮೂರ್ತಿ ಸ್ವರೂಪದ ಲಿಂಗಗಳು, ಇಲ್ಲಿ ಇವೆ. ಹೀಗಾಗಿ ಅವರ ಸ್ಮರಣಾರ್ಥವಾಗಿ ನಿರ್ಮಿಸಲಾಗಿರುವ 'ಸ್ಮಾರಕಗಳು' ಬೀದರ ಜಿಲ್ಲೆಯಲ್ಲಿ ಗಣನೀಯ ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಇವು ಬೇರೆ ಬೇರೆ ಕಾಲಗಳಲ್ಲಿ ನಿರ್ಮಾಣವಾದವುಗಳಿದ್ದು ಆಯಾ ಕಾಲದ ಜನರ ದೃಷ್ಟಿಕೋನದ ಹಿನ್ನೆಲೆಯಲ್ಲಿ ರಚಿತಗೊಂಡಿರುವುದನ್ನು ಯಾಳವಾರರು ತಿಳಿಸುತ್ತಾರೆ.

ಬಸವಾದಿ ಶರಣರ ಬದುಕು ಜನಜೀವನದ ಮೇಲೆ ವೈವಿಧ್ಯಮಯವಾದ ಪ್ರಭಾವ ಮೂಡಿದ್ದು, ಅದು ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ರೂಪದಲ್ಲಿದೆ. ಹೀಗಾಗಿ ಶರಣರನ್ನು ಅವರ ಸ್ಮಾರಕಗಳಲ್ಲಿ ಧಾರ್ಮಿಕ ಪುರುಷರನ್ನಾಗಿ, ಕಾಯಕ ಜೀವಿಗಳನ್ನಾಗಿ, ಪವಾಡ ಪುರುಷರನ್ನಾಗಿ, ವಚನಕಾರರನ್ನಾಗಿ, ಸಮಾಧಿ ರೂಪರನ್ನಾಗಿ, ಲಿಂಗಮೂರ್ತಿಯಾಗಿ ಇಲ್ಲವೇ ತಮ್ಮ ಮನದಲ್ಲಿ ಮೂಡಿದ್ದ ರೂಪದ ಶೀಲಾ ಮೂರ್ತಿಗಳನ್ನಾಗಿ ಸಾಮಾಜಿಕ ಕಾರ್ಯದ ರೂಪದಲ್ಲಿ, ಕಲ್ಯಾಣ ಮಂಟಪಗಳ ಹೆಸರಲ್ಲಿ, ಸಾರ್ವಜನಿಕ ಕೂಡು ರಸ್ತೆಗಳಲ್ಲಿ,

೧೪. ಡಾ. ಸೋಮನಾಥ ಯಾಳವಾರರ "ನನ್ನ ಮಾತು" ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ –೩

ಸಾಮಾಜಿಕ ಸಂಘ ಸಂಸ್ಥೆಗಳ ಹೆಸರಲ್ಲಿ, ಸೇವಾ ಸಂಸ್ಥೆಗಳ ರೂಪದಲ್ಲಿ, ಶರಣ ತತ್ವ, ಚಿಂತನೆಗಳ ರೂಪದಲ್ಲಿ, ಮಠ, ಧ್ಯಾನ ಮಂದಿರಗಳ ಮಾದರಿಯಲ್ಲಿ ಅವರು ತಂಗಿ ಹೋಗಿರುವ ಸ್ಥಾನಗಳ ಹೆಸರುಗಳಲ್ಲಿ ಅವರನ್ನು ಕಂಡರಿಸಲಾಗಿದೆ. ಈ ಸ್ಮಾರಕಗಳನ್ನು ಎಚ್ಚರಿಕೆಯಿಂದ ಗಮನಿಸಿ ಅವುಗಳಲ್ಲಿರುವ ಹಲವು ತೆರದ ಸಾಂಸ್ಕೃತಿಕ ಎಳೆಗಳನ್ನು ಗುರುತಿಸಿದ್ದಾರೆ.

ಬೀದರ ಜಿಲ್ಲೆಯ ಶರಣ ಸ್ಮಾರಕಗಳಲ್ಲಿ ಹೆಚ್ಚಿನವು ಆ ಶರಣರು ಸೇವೆಗೈದು ಹೋಗಿರುವ ಪ್ರದೇಶಗಳಲ್ಲಿಯೇ ದೊರೆಯುತ್ತವೆ. ಅವುಗಳನ್ನು ಅವರು ವಾಸಿಸಿದ ಸ್ಥಳಗಳು, ಕಾಯಕ ಕೈಗೊಂಡಿರುವ ತಾಣಗಳು ಅವರ ಸಮಾಧಿಗಳು. ಶಿವಯೋಗ ಸಾಧನಾ ಸ್ಥಳಗಳು, ಚಿಂತನ ಗೋಷ್ಠಿಗಳ ತಾಣ (ಅನುಭವ ಮಂಟಪ) ಮೊದಲಾದ ಸ್ಥಾನಗಳ ಮೂಲಕ ಗುರುತಿಸಬಹುದು. ಹಲವು ಸ್ಮಾರಕಗಳು ಶರಣರನ್ನು ಕುರಿತ ದೇವಾಲಯ ಹಾಗೂ ಮಠಗಳ ರೂಪದಲ್ಲಿದ್ದು, ತತ್ವ-ಸಿದ್ದಾಂತ ಪ್ರತಿಪಾದನೆ ಮಾಡುತ್ತ ಮುಂದುವರೆದಿವೆ. ಎಷ್ಟೋ ಕಡೆಗಳಲ್ಲಿ ಮೂರ್ತಿರೂಪದಲ್ಲಿ, ಲಿಂಗರೂಪದಲ್ಲಿ, ಶರಣರು ಉಪಯೋಗಿಸಿರಬಹುದಾದ ವಸ್ತುರೂಪದಲ್ಲಿ ದೊರೆತಿವೆ. ಬಸವಾದಿ ಶರಣರು ಜನರ ಬದುಕಿನಲ್ಲಿ ಎಷ್ಟೋಂದು ಮನೆಮಾತಾಗಿದ್ದಾರೆ ಎಂದರೆ ಊರಿನ ಮನೆಗಳ ಹೆಸರಿನಲ್ಲಿ ಹಲವು ಪಟ್ಟಣಗಳ ರಸ್ತೆಯ ಹೆಸರುಗಳಲ್ಲಿ, ಕೂಡುರಸ್ತೆಗಳ ಹೆಸರಲ್ಲಿ ಉದ್ಯಾನವನ, ಆಶ್ರಮ, ಗುರುಕುಲ, ಪ್ರಸಾದ ನಿಲಯ, ಶಿಕ್ಷಣ ಸಂಸ್ಥೆ, ಶಾಲಾ-ಕಾಲೇಜುಗಳ ಹೆಸರು ಹಾಗೂ ಹಲವು ಊರುಗಳ ಹೆಸರುಗಳಲ್ಲಿ ಶರಣ ಸ್ಮಾರಕಗಳನ್ನು ಕಾಣಬಹುದಾಗಿದೆ ಎಂಬುದನ್ನು ಸೋಮನಾಥ ಯಾಳವಾರರು ಇಲ್ಲೆಲ್ಲ ಕಂಡರಿಸಿರುವುದು ಅವರ ಆಳವಾದ ಕ್ಷೇತ್ರಾಧ್ಯಯನಕ್ಕೆ ಸಾಕ್ಷಿಯಾಗಿದೆ.

ಬಸವ ಪೂರ್ವಯುಗದ ಶರಣರ ಸ್ಮಾರಕಗಳನ್ನು ಶಿವಪಾರಮ್ಯ ಮೆರೆದ ಹಲವು ಶರಣರ ಹೆಸರಿನಲ್ಲಿ ಗುರುತಿಸಿದ್ದಾರೆ.

೧. ಭಾಲ್ಕಿಯ ಕುಂಭೇಶ್ವರ ದೇವಾಲಯ

೨. ಕಲ್ಯಾಣದ ಹುಲಿಕಂತಿ ಮಠ

೩. ಮಾದಾರ ಚನ್ನಯ್ಯನ ಅಂಬಲಿಕುಂಡ

೪. ಜೇಡರ ದಾಸಿಮಯ್ಯನ ಮಠ.

೫. ಗೋರಟಾದ ಗೋರಕ್ಷನ ಮೂರ್ತಿ

ಇಲ್ಲಿ ಪ್ರಮುಖವಾದುಗಳಾಗಿವೆ. ಬೀದರ ಜಿಲ್ಲೆಯ ಭಾಲ್ಕಿಯಲ್ಲಿ ಕುಂಭೇಶ್ವರ ದೇವಾಲಯವಿದ್ದು, ಇದು ಭಾಲ್ಕಿಯ ಕುಂಬಾರಗೇರಿಯಲ್ಲಿದೆ. ಶಿವನನ್ನು ಕುಂಭೇಶ್ವರ ಎಂದು ಕರೆಯಲಾಗಿದೆ. ಎದುರು-ಬದರು ಎರಡು ದೇವಾಲಯಗಳಿದ್ದು ಒಂದರಲ್ಲಿ ಶಿವಲಿಂಗವಿದ್ದು, ಗರ್ಭಗುಡಿ ಚಿಕ್ಕದಾಗಿರುವುದನ್ನು ತಿಳಿಸುತ್ತಾರೆ ಶಿವಲಿಂಗವಿರುವ ದೇವಾಲಯದ ಎದುರಿನ ಗರ್ಭಗುಡಿಯಲ್ಲಿ 'ಕುಂಬಾರ ಗುಂಡಯ್ಯನ ಹಳೆಯ ಮೂರ್ತಿಯನ್ನು ಈಗ ಬದಲಾಯಿಸಿ ಇಡಲಾಗಿದೆ ಮೊದಲಿದ್ದ ಶಿಲ್ಪವನ್ನು ಹೊರಗಿಟ್ಟು, ಅದರ ಜಾಗದಲ್ಲಿ ಗಣಪತಿ ಮೂರ್ತಿಯನ್ನು ಯಾರೋ ಇರಿಸಿದ್ದಾರೆ. ತೆಗೆದಿಟ್ಟಿರುವ ಶಿಲ್ಪದಲ್ಲಿ 'ಗುಂಡಯ್ಯ'ನ ಅಸ್ಪಷ್ಟ ಮೂರ್ತಿಯಿದೆ. ಅದು ಹೊರಗೆ ಬಿದ್ದಿರುವುದರಿಂದ ಅದು ಈಗ ಅಸ್ಪಷ್ಟವಾಗಿದೆ. ಈ ಸ್ಮಾರಕದ ಹಿನ್ನೆಲೆಯಲ್ಲಿ 'ಕುಂಬಾರ ಗುಂಡಯ್ಯ'ನ ಜೀವನಚರಿತ್ರೆಯನ್ನು ರೂಪಿಸಿಕೊಟ್ಟಿದ್ದಾರೆ ಯಾಳವಾರರು. ಕುಂಬಾರ ಗುಂಡಯ್ಯ ಬಸವ ಪೂರ್ವಯುಗದ ಮಹಾನ್ ಶಿವಭಕ್ತ. ಆತನು ಭಾಲ್ಕಿ ಗ್ರಾಮದವನು. ಗಡಿಗೆ ಮಾಡುವ ಕಾಯಕ ಈ ಶರಣನದು. ಗಡಿಗೆ ಮಾಡುವಾಗ ಆತನು ಮಣ್ಣನ್ನು ತಾಳಯುಕ್ತವಾಗಿ ತಟ್ಟುವುದು, ಹಾಗೂ ಮಣ್ಣನ್ನು ಹದ ಮಾಡುವಾಗ ಶಿವನಾಮ ಹೇಳುತ ಮಣ್ಣು ತುಳಿಯುತ್ತ ಕುಣಿಯುತ್ತಿದ್ದ. ಆತನ ಶಿಲ್ಪ ಸ್ಮಾರಕವು ಶಿವನನ್ನು ಕುಣಿಯುವಂತೆ ಮಾಡಿರುವ ಜನರ ಭಾವನೆಗಳನ್ನು ಸಾಕ್ಷೀಕರಿಸುವದನ್ನು ಸಂಶೋಧಕರು ಇಲ್ಲಿ ಕಾಣಿಸಿದ್ದಾರೆ. ಇದರೊಂದಿಗೆ ಆತನ ಕಾಯಕದ ಸ್ಥಾನವನ್ನು ಅಲ್ಲಿ ಗುರುತಿಸಲಾಗಿದೆ. ಆ ದೇವಸ್ಥಾನವು ಕುಂಭೇಶ್ವರನ ಹೆಸರಿನಲ್ಲಿರುವುದು, ಅದೇ ಹೆಸರಿನ 'ಸಂಘ'ವೊಂದನ್ನು ಸಂಸ್ಥಾಪಿಸಿರುವುದು. ಗೋರ್ಟಾದ ಪ್ರಾಚೀನ ಶಿವಾಲಯಗಳಲ್ಲಿ ಕುಂಭೇಶ್ವರ ದೇವಸ್ಥಾನವಿತ್ತೆಂಬ ಉಲ್ಲೇಖ ಶಾಸನಗಳಲ್ಲಿ ಸಿಗುವುದನ್ನು ಹಾಗೂ 'ಗುಂಡಯ್ಯ'ನ ಶಾಸನಯುಕ್ತ ಶಿಲ್ಪವು ಅಬ್ಬಲೂರು ಬಳ್ಳಾರಿಯಲ್ಲಿರುವುದನ್ನು ಇವರು ಕಂಡುಕೊಂಡಿರುವುದು ಅವರ ಕ್ಷೇತ್ರಾಧ್ಯಯನಕ್ಕೆ ಸಾಕ್ಷಿ ಎನ್ನಬಹುದು.

048713

ಬಸವಕಲ್ಯಾಣದ ಶಹಾಪುರ ಓಣಿಯಲ್ಲಿರುವ ಪ್ರಾಚೀನ ಕಾಲದ ಒಂದು ಮಠವನ್ನು 'ರೇವಣಸಿದ್ದೇಶ್ವರ'ರ ಸ್ಮಾರಕವೆನ್ನಲಾಗಿದೆ. ಈ ಮಠದ ಮೂಲ ಪುರುಷರನ್ನು ರೇವಣಸಿದ್ದರು ಎಂದು ಹೇಳುತ್ತಾರೆ. ಬಸವಾದಿ ಶರಣರ ಹಿರಿಯ ಸಮಕಾಲೀನರಾಗಿರುವ ಈ ಶರಣರ ಜೀವನದ ಚಾರಿತ್ರಿಕ ಅಂಶಗಳು ಪೌರಾಣಿಕಾಂಶಗಳೊಂದಿಗೆ ಬೆರೆತು ಮಸುಕಾಗಿ ನಿಂತಿವೆ. ಆದರೆ ಈ ಮಠದ

ಸ್ಮಾರಕಗಳಿಂದ ಈ ಶರಣರ ಚಾರಿತ್ರ್ಯ ದೊರೆಯುವುದಿಲ್ಲ. ಆತನ ಯಾವುದೋ ಒಂದು 'ಪವಾಡ'ದ ಪ್ರತಿನಿಧಿಯಾಗಿ ಈ ಮಠವು ಉಳಿದುಕೊಂಡಿದೆ. ಈಗ ಇದಕ್ಕೆ 'ಹುಲಿ ಕಂತಿ' ಮಠವೆಂದು ಕರೆಯಲಾಗುವ ಕಾರಣವನ್ನು ಇಲ್ಲಿ ಹೇಳಲಾಗಿದೆ.

ಬಸವಕಲ್ಯಾಣದಿಂದ ಸು ೧೫ ಕಿ.ಮೀ.ದೂರದಲ್ಲಿ ಸೊಲ್ಲಾಪುರ ಹೆದ್ದಾರಿಯ ಮೇಲೆ ಚಂಡಕಾಪುರದ ಸಮೀಪ 'ಅಮೃತಕುಂಡ'ವಿದೆ. ಈ 'ಅಮೃತಕುಂಡ' ಇಂದು ಬೇರೆ ಬೇರೆ ಸಂಪ್ರದಾಯದವರ ನೆಲೆವೀಡಾಗಿ ಪ್ರಸಿದ್ಧವಾಗಿದೆ. ಆದರೆ ಇದು ಪ್ರಸಿದ್ಧ ಶರಣ 'ಮಾದಾರ ಚನ್ನಯ್ಯ'ನ 'ಅಂಬಲಿ ಕುಂಡ'ವೆಂದು ಯಾಳವಾರರು ಕಂಡಿರುವುದು ಕುತೂಹಲಕಾರಿ ಸಂಗತಿ ಎನ್ನಬಹುದು. ಇದಕ್ಕೆ ಕೊಟ್ಟಿರುವ ಆಧಾರಗಳು ಒಪ್ಪುವಂತಹುಗಳಾಗಿವೆ.

ಈ ಅಮೃತ ಕುಂಡವನ್ನು ಹಲವರು 'ಅಂಬಲಿ ಕುಂಡವೆಂದೇ ಕರೆಯುತ್ತಾರೆ. ಆ 'ಕುಂಡ'ದ ಮೇಲು ಭಾಗದಲ್ಲಿ 'ರಾಮನ ಗುಡಿಯಿದೆ. ಇದು ಚನ್ನಯ್ಯನ ಇಷ್ಟದೈವಾಂಕಿತ 'ರಾಮರಾಮನ' ಗುಡಿ[೧೫] ಎಂದಿರುವುದು ಸಂಶೋಧನೆಗೆ ಹೊಸ ಸುಳಿವು ನೀಡುತ್ತದೆ. ಭಕ್ತಿಯಲ್ಲಿ ಶಿವನ ಒಲುಮೆಯನ್ನು ಸಂಪಾದಿಸಿದ ಶರಣ ಮಾದಾರ ಚನ್ನಯ್ಯ. 'ಸೂತಕ ಕಳೆದ ಗುರು' 'ಭಕ್ತಿ ಭೀಕ್ಷೆಯನಿಕ್ಕಿದ ದಾನಿ' 'ಅಪ್ಪ ನಮ್ಮ ಮಾದಾರ ಚನ್ನಯ್ಯ' ಎಂದು ಮುಂತಾಗಿ ಬಸವಾದಿ ಶರಣರಿಂದ ಕೊಂಡಾಡಿಸಿಕೊಂಡಿದ್ದಾನೆ. ದೇವನಿಗೆ ಅಂಬಲಿ ಉಣಿಸಿದ ಕಾಯಕ ಜೀವಿ. ಕಲ್ಯಾಣದಲ್ಲಿ ಆತ ತಂಗಿರುವಾಗ ಈ ಸ್ಥಳದಲ್ಲಿ ಇದ್ದ. 'ಪಾದರಕ್ಷೆ ಹೊಲೆಯುವ' ತನ್ನ ಕುಲವೃತ್ತಿಯನ್ನು 'ಕಾಯಕವನ್ನಾಗಿಸಿ'ಕೊಂಡಿದ್ದ- 'ಕೈಯುಳಿ ಕತ್ತಿ, ಅಡಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮ ರಾಮ ರಾಮನ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಇಂಥ ಶರಣನ ಕಾಲದ ನಂತರದಲ್ಲಿ ನಿರ್ಮಾಣಗೊಂಡಿರುವ ಈ ಸ್ಮಾರಕವು 'ಮಾದಾರ ಚನ್ನಯ್ಯ'ನದು. ಆದರೆ ಈಗ ಇದು ಪ್ರೇಕ್ಷಣೀಯ ಹಾಗೂ ಪ್ರವಾಸಿ ತಾಣವಾಗಿ ಬೇರೆ ರೂಪ ಪಡೆದಿದೆ ಎನ್ನುತ್ತಾರೆ ಇವರು. ಹಾಗೆಯೇ ಅಲ್ಲಿಯೇ ಇರುವ 'ಚಂಡಕಾಪುರ'ವು ಸಹ ಪ್ರಸಾದಿ ಬಂಕಣ್ಣ'ನ ಊರಾಗಿತ್ತು ಎನ್ನುತ್ತಾರೆ. ಯಾಕೆಂದರೆ 'ಚಂಡಿಕೇಶ್ವರ ಲಿಂಗ' ವೆಂಬ ಅಂಕಿತದಲ್ಲಿ ಆತ ವಚನ ಬರೆದಿರುವನು ಎಂದು ಉಲ್ಲೇಖಿಸಿದ್ದಾರೆ.

---

೧೫. ಡಾ. ಸೋಮನಾಥ ಯಾಳವಾರರ ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ಸಂಖ್ಯೆ ೧೧

ಬಸವಪೂರ್ವ ಯುಗದ ಶರಣ ಜೇಡರ ದಾಸಿಮಯ್ಯನ ಮಠವು 'ಶಹಾಪುರ'ದ ನೇಕಾರರ ಓಣಿಯಲ್ಲಿದೆ. ಒಂದು ಮನೆಯಲ್ಲಿರುವ ಈ ಸ್ಮಾರಕವು ವಿಶಾಲವಾದ ಪಡಸಾಲೆಯಲ್ಲಿ ದೊಡ್ಡ ಸಮಾಧಿಯಂತಹ ಕಟ್ಟೆಯ ರೂಪದಲ್ಲಿದೆ. ಆ ಗದ್ದಿಗೆಯ ಮೇಲೆ ಎರಡು ಲಿಂಗಗಳಿವೆ. ಅವು ಜೇಡರ ದಾಸಿಮಯ್ಯ ಹಾಗೂ ದುಗ್ಗಳೆ ದಂಪತಿಗಳದ್ದಾಗಿದೆ. ಅಲ್ಲಿಯೇ ಸಮೀಪದ ಜಗುಲಿಯ ಮಧ್ಯದಲ್ಲಿ ದಾಸಿಮಯ್ಯನ ಒಂದು ಹಿತ್ತಾಳೆಯ ಮೂರ್ತಿಯನ್ನು ಇಡಲಾಗಿದೆ. ಸುತ್ತ ಮುತ್ತಲಿನ ಮನೆಯವರೆಲ್ಲ ನೇಕಾರ ವೃತ್ತಿಯವರಾಗಿದ್ದಾರೆ. ಮಠಗಳೆಂದರೆ ಭಕ್ತನ ಮನೆ ಎಂಬ ದಾಸಿಮಯ್ಯನ ಹೇಳಿಕೆಯನ್ನು ಈ ಸ್ಮಾರಕವು ತೋರುತ್ತದೆ ಎಂದಿರುವರು ಸಂಶೋಧಕರು.

ನಾಥಪಂಥದ ಸಿದ್ಧ ಪುರುಷರು ಬೀದರ ಜಿಲ್ಲೆಯಲ್ಲಿ ಆಗಿ ಹೋಗಿದ್ದಾರೆ ಎಂಬುದನ್ನು ಗುರುತಿಸುವ ಯಾಳವಾರರು 'ಅದಕ್ಕನುಗುಣವಾಗಿ ಹಲವು ಆಧಾರಗಳನ್ನು ಅವರು ನೀಡುತ್ತಾರೆ. ಬೀದರ ಜಿಲ್ಲೆಯ ಗೋರ್ಟಾ ಗ್ರಾಮದ 'ಮಹಾದೇವ ಮಂದಿರ'ವೊಂದರಲ್ಲಿ 'ಗೋರಕ್ಷನಾಥ'ನ ಮೂರ್ತಿಯಿರುವುದನ್ನು ತಿಳಿಸುತ್ತಾರೆ. ಹೀಗಾಗಿ ಈ ಊರು ಗೋರಕ್ಷಕನು ವಾಸವಾಗಿರಬಹುದಾದ ಸ್ಥಾನವೆಂದು ಊಹಿಸುತ್ತಾರೆ. ಅನೇಕ ಶರಣರ[೧೬] ವಚನಗಳಲ್ಲಿ ನವನಾಥರ ಉಲ್ಲೇಖ ದೊರೆಯುವುದನ್ನು ತಿಳಿಸಿದ್ದಾರೆ.

ಗೋರಕ್ಷನು ಬಹಳ ಮಹತ್ವಾಂಕ್ಷೆಯ ವ್ಯಕ್ತಿ. ಜೀವನದಲ್ಲಿ ಏನಾದರೂ ಸಾಧಿಸಬೇಕೆನ್ನುವ ಛಲದವನು. ಹೀಗಾಗಿ ಅಣಿಮಾದಿ ಯೋಗ ಸಾಧನೆ ಮಾಡಿ ದೇಹವನ್ನು ವಜ್ರಕಾಯವನ್ನಾಗಿ ಮಾಡಿಕೊಂಡನು. ಇಂಥ ಗೋರಕ್ಷಕನಿಗೆ ಅಲ್ಲಮ ಪ್ರಭು ಭೇಟಿಯಾಗಿ ಅವನಿಗೆ 'ಲಿಂಗಮಹಿಮೆ' ತಿಳಿಸಿ ಆತನನ್ನು ಬದಲಿಸುತ್ತಾನೆ. ಇದರಿಂದ ಪ್ರಭಾವಿತನಾದ ಗೋರಕ್ಷನು ಇಷ್ಟಲಿಂಗ ಧಾರಣೆ ಮಾಡಿಕೊಂಡು ಶರಣ ಸಂಘದಲ್ಲಿ ಸೇರಿಕೊಳ್ಳುತ್ತಾನೆ. 'ಗೋರಕ್ಷ' ನಾಮಾಂಕಿತದಲ್ಲಿ ಆತನು ವಚನಗಳನ್ನು ಬರೆದಿದ್ದಾನೆಂದು ಹೇಳುವ ಯಾಳವಾರರು ಇಲ್ಲಿ ಹೊಸ ಸಂಶೋಧನೆಗೆ ಎಡೆಯೊದಗಿಸಿದ್ದಾರೆನ್ನಬಹುದು.

---

೧೬. ಡಾ. ಸೋಮನಾಥ ಯಾಳವಾರರ ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ಸಂಖ್ಯೆ ೧೩

'**ಬಸವ ಸಮಕಾಲೀನ ಶರಣ ಸ್ಮಾ**ರಕಗಳನ್ನು ಕಲ್ಯಾಣದ ಸುತ್ತು ಮುತ್ತಲೂ ಗುರುತಿಸಿದ್ದಾರೆ. 'ಬಸವಣ್ಣ' ಕೇವಲ ಒಂದು ಹೆಸರಲ್ಲ, ಅದೊಂದು ಶಕ್ತಿ, ಅಲ್ಲಮ ಹೇಳುವಂತೆ ಯುಗದ ಉತ್ಸಾಹ. ಕ್ರಾಂತಿ ಪುರುಷನಾಗಿ ತತ್ವಜ್ಞಾನಿಯಾಗಿ, ಸಮಾಜಮುಖಿ ಚಿಂತಕನಾಗಿ, ಕವಿಯಾಗಿ, ಕನ್ನಡದ ಕುಲಪುರಷನಾಗಿ, ಮಹಾಮಾನವತಾವಾದಿಯಾಗಿ, ವಿಶ್ವಜ್ಯೋತಿಯಾಗಿ ಬೆಳಗಿದ ಬಸವಣ್ಣನ ವ್ಯಕ್ತಿತ್ವ ದೇಶ, ವಿದೇಶಗಳ ಮಹಾನ್ ಚಿಂತಕರನ್ನು ಕಲ್ಯಾಣಕ್ಕೆ ೧೨ನೇ ಶತಮಾನದಲ್ಲಿ ಆ ಚಿಂತಕರೆಲ್ಲಾ ಒಂದೆಡೆ ಸೇರಿ, ಲೋಕಕಲ್ಯಾಣಕ್ಕಾಗಿ ಚರ್ಚೆಗೈದು, ತಾತ್ವಿಕ ಚಿಂತನೆ ಮಾಡಿ, 'ಲಿಂಗಾಯತ' ಕೊಂದು ಸಿದ್ಧಾಂತವನ್ನು ರೂಪಿಸಿದರು. ಪ್ರಜಾಪ್ರಭುತ್ವದ ಮೊದಲ ಸಂಸತ್ತೆನ್ನುವಂತೆ ಅನುಭಾವ ಮಂಟಪ' ರಚಿಸಿದರು. ಶರಣತ್ವದ ಚರಿತ್ರೆ ಕಟ್ಟಿದರು.[೧೭]

ಶರಣತ್ವಕ್ಕೆ ಪ್ರಧಾನವಾದುದು 'ಶೀಲ' ಅರ್ಥಾತ್ 'ಚಾರಿತ್ರ್ಯ' ಕುಲವಲ್ಲ. ಉಚ್ಚ, ನೀಚ ಭಾವದ, ಜಾತಿ ಭೇದದ ಸೋಂಕು ರೋಗ ಅದಕ್ಕೆ ತಗುಲಿರಲಿಲ್ಲ. ಶ್ರೀ ಸಾಮಾನ್ಯನು ಸದಾಚಾರಿಯಾಗಿದ್ದರೆ ಸಾಕು ಅದೇ ಸದಸ್ಯರ ಅರ್ಹತೆಯಾಗಿತ್ತು. ಅಲ್ಲ ಎಲ್ಲ ಸದಸ್ಯರು ಸಮಾನರು. ಪ್ರತಿಯಬ್ಬರು ಯಾವುದೇ ಅಂತರವಿಲ್ಲದೆ ಧರ್ಮ, ಸಾಹಿತ್ಯ, ಜೀವನಕ್ಕೆ ಸಂಬಂಧಿಸಿದ ತಮ್ಮ ಅನಿಸಿಕೆಗಳನ್ನು ತಮಗಾದ ಲೋಕಾನುಭವ ಶಿವಾನುಭವಗಳನ್ನು ವಚನಗಳ ಮೂಲಕ ಹೇಳುವ ಅವಕಾಶ ಪಡೆದರು.

ಇಲ್ಲಿಯವರೆಗೆ ಧರ್ಮ, ದೇವರು, ದಯೆ, ಸ್ವರ್ಗ, ನರಕಗಳ ಬಗ್ಗೆ ಏನೊಂದನ್ನು ಅರಿಯದ ಎಷ್ಟೋ ಜನ ಮುಗ್ಧರು ಎಚ್ಚೆತ್ತುಕೊಂಡರು ಶೋಷಣೆ-ಮುಕ್ತ ಸಮಾಜ ನಿರ್ಮಿಸಲು ಪಣತೊಟ್ಟರು. ಸಮಾಜೋ-ಧಾರ್ಮಿಕ ಕ್ರಾಂತಿಯನ್ನು ಹುಟ್ಟು ಹಾಕಿದರು. ಬಸವಣ್ಣನ ನೇತೃತ್ವದಲ್ಲಿ ನಡೆದ ಈ ಚಳುವಳಿಯಲ್ಲಿ ಭಾಗವಹಿಸಿ ಶರಣರೆಂದರೆ, ಅಲ್ಲಮ ಪ್ರಭು, ಸಿದ್ಧರಾಮ, ಅಕ್ಕಮಹಾದೇವಿ, ಚನ್ನಬಸವಣ್ಣ, ಮಡಿವಾಳ ಮಾಚಿದೇವ, ಮೊಳಗೆಯ ಮಾರಯ್ಯ ದಂಪತಿ, ಡೋಹರ ಕಕ್ಕಯ್ಯ, ಹುಲಿಗೇರಿ ಹೊನ್ನಯ್ಯ, ನುಲಿಯ ಚಂದಯ್ಯ, ಕಿನ್ನರಿ ಬೊಮ್ಮಣ್ಣ, ಆಯ್ಕಕಿ ಮಾರಯ್ಯದಂಪತಿ, ಹಡಪದ ಅಪ್ಪಣ್ಣ ದಂಪತಿ, ಘಟ್ಟವಾಳಯ್ಯ, ಲದ್ದೆ ಸೋಮಣ್ಣ, ಉರಿಲಿಂಗ ಪೆದ್ದಿ ದಂಪತಿ, ಅಂಬಿಗರ ಚೌಡಯ್ಯ, ಅಮುಗೆ ರಾಯಮ್ಮ, ಸತ್ಯಕ್ಕ,

---

೧೭. ಡಾ. ಸೋಮನಾಥ ಯಾಳವಾರರ ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ಸಂಖ್ಯೆ ೧೪

ಗೊಗ್ಗವ್ವೆ, ಮಾದರ, ಹರಳಯ್ಯ, ಮಧುವರಸ, ನೀಲಾಂಬಿಕೆ, ಗಂಗಾಂಬಿಕಾ ಅಕ್ಕ ನಾಗಮ್ಮ, ನಗೆಯ ಮಾರತಂದೆ ಮುಂತಾದ ಶಿವಶರಣರು ಇವರೆಲ್ಲರು, ಅಂದಿನ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸಿ ಸಮಾಜದಲ್ಲಿ ಸಮಾನತೆಯನ್ನು ಎಲ್ಲ ರಂಗಗಳಲ್ಲಿ ತರಲು ಹೋರಾಡಿದರು. ಆ ಕಾರಣಕ್ಕಾಗಿ ಕಾಯಕ–ದಾಸೋಹ ತತ್ವ ಪ್ರತಿಪಾದಿಸಿ, ನುಡದಂತೆ ನಡೆದು ಹೋಗಿರುವ ಅವರ ಜಿವನದ ಆದರ್ಶ ಎಂದೆಂದಿಗೂ ಪ್ರಸ್ತುತವಾಗಿದೆ. ಇಂಥ ಶರಣರ ದಿವ್ಯ ಜೀವನದ ಹಲವು ಸಂದರ್ಭಗಳು ಇನ್ನೂ ಇಲ್ಲಿಯ ಜನರ ಜೀವನದಲ್ಲಿ ಆದರ್ಶವಾಗಿ ಉಳಿದಿವೆ. ಅವುಗಳನ್ನು ಹಲವು ಸ್ಮಾರಕಗಳ ರೂಪದಲ್ಲಿ ಜನತೆ ಉಳಿಸಿಕೊಂಡಿದ್ದಾರೆ. ಅವುಗಳು ಅಸಂಖ್ಯರೂಪದಲ್ಲಿವೆ. ಕೆಲವು ಅಳಿದಿವೆ, ಹಲವು ಅಳಿವಿನಂಚಿನಲ್ಲಿವೆ. ಇವುಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಗುರುತಿಸಬೇಕಾಗಿದೆ ಎಂಬುದನ್ನು ಎತ್ತಿ ಹೇಳುವ ಸೋಮನಾಥರು ತಾವು ಕೆಲವೇ ಉಪಲಬ್ದ ಸ್ಮಾರಕಗಳನ್ನು ಮಾತ್ರ ಗುರುತಿಸಿಕೊಂಡಿದ್ದಾಗಿ ತಿಳಿಸುತ್ತಾರೆ.[೧೮] ಅವುಗಳಲ್ಲಿ 'ಬಸಲವಕಲ್ಯಾಣವೇ ಒಂದು ಸ್ಮಾರಕವೆಂದು ಹೇಳುತ್ತ; ಕಲ್ಯಾಣಪಟಣವು 'ಬಸವಕಲ್ಯಾಣ'ವಾದ ರೀತಿಯನ್ನು ವಿವರಿಸಿದ್ದಾರೆ.

ಈ ವಿಭಾಗದಲ್ಲಿ 'ಬಸವಕಲ್ಯಾಣ' ಪ್ರವೇಶದ್ವಾರ' ಬಸವಣ್ಣನವರ ಮಹಾಮನೆ, 'ಅರುಹಿನ ಮನೆ', ಪರುಷಕಟ್ಟೆ, ಅಶ್ವಾರೂಢ ಬಸವೇಶ್ವರರ ಮೂರ್ತಿಗಳು, 'ಅಕ್ಕನಾಗಮ್ಮನ ಗವಿ' ಘನಲಿಂಗರುದ್ರ ಮುನಿ ಗವಿ, ಅಂಬಿಗರ ಚೌಡಯ್ಯನ ಮಠ, ಪ್ರಭುದೇವರ ಮಠ ಮಡಿವಾಳ ಮಾಚಿದೇವರ ಹೊಂಡ ಮತ್ತು ಮಂದಿರ, ಮಾಚಿದೇವರ ಮೂರ್ತಿ, ಕಂಬಳಿ ಮಠ, ಉರಿಲಿಂಗ ಪೆದ್ದಿಗಳ ಮಠ, ಬಂದವರ ಓಣಿ, ಹರಳಯ್ಯನ ದಿಬ್ಬ ಹಾಗೂ ಗವಿ, ತ್ರಿಪುರಾಂತಕೇಶ್ವರ ದೇವಾಲಯ, ತ್ರಿಪುರಾಂತ ಕೆರೆ, ಅನುಭವ ಮಂಟಪ, ಸಿದ್ದೇಶ್ವರ ಮಂದಿರ, ಒಕ್ಕಲಿಗ ಮುದ್ದಣ್ಣನ ಗುಡಿ, ಮುಗ್ಧಸಂಗಯ್ಯನ ಗವಿ, ಘಟ್ಟಿವಾಳಯ್ಯನ ಗವಿ, ಮೋಳಿಗೆಯ ಮಾರಯ್ಯ ದಂಪತಿಗಳ ಗವಿ, ಲದ್ದೆ ಸೋಮಣ್ಣನ ಗುಡಿ, ಕಿನ್ನರಿ ಬೊಮ್ಮಣ್ಣನ ಗುಡಿ, ಚೌಕಿಮಠ, ಬಸವತೀರ್ಥ ಮಠ, ಇತರ ಸ್ಮಾರಕಗಳನ್ನು ಕಂಡರಿಸಿದ್ದಾರೆ–ಇಲ್ಲೆಲ್ಲ ಡಾ.ಯಾಳವಾರರ ಕ್ಷೇತ್ರಾಧ್ಯಯನ ಹಾಗೂ ವಚನಕಾರರ ಆಳವಾದ ಅಧ್ಯಯನದ

---

೧೮. ಡಾ. ಸೋಮನಾಥ ಯಾಳವಾರರ ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ಸಂಖ್ಯೆ ೧೫

ವ್ಯಾಪ್ತಿಯನ್ನು ಗುರತಿಸಬಹುದಾಗಿದೆ. ಸ್ಮಾರಕಕ್ಕೆ ಸಂಬಂಧಿಸಿದ ಶರಣರ ಚಾರಿತ್ರ್ಯವನ್ನು ತುಂಬ ಸಂಕ್ಷಿಪ್ತವಾಗಿ ಮತ್ತು ಅರ್ಥವತ್ತಾಗಿ ನೀಡಿರುವುದನ್ನಿಲ್ಲಿ ಅರಿಯಬಹುದಾಗಿದೆ.

ಬಸವೋತ್ತರ ಕಾಲದ ಶರಣ ಸ್ಮಾರಕಗಳಲ್ಲಿ, ಬೀದರ ಜಿಲ್ಲೆಯ ವೀರಶೈವ (ಲಿಂಗಾಯತ) ಮಠಗಳು, ಗುರು ಚನ್ನಬಸವೇಶ್ವರ ಮಠ, ಹುಲಸೂರು ಹಾರಕೂಡ ಬ್ರಹ್ಮನ್ನಠ, ಭಾಲ್ಕಿಯ ಹಿರೇಮಠ, ಠಾಣಾ ಕುಸುನೂರಿನ ವಿರಕ್ತ ಮಠ, ಬಸವಾದಿ ಶಿವಶರಣರ ವಿವಿಧ ಸ್ಮಾರಕಗಳು ಶರಣರ ಸಮಾಧಿ ಸ್ಥಳಗಳು ಹಾಗೂ ಶರಣರ ಹೆಸರಿನ ಸಂಘ – ಸಂಸ್ಥೆಗಳು ಕುರಿತು ವಿವರಿಸಿದ್ದಾರೆ. ಈ ಸಂದರ್ಭದಲ್ಲಿಯ ಯಾಳವಾರರ ಸ್ಥಳ ಪರಿಶೀಲನೆ, ಆಗಾಧವಾದ ಮಾಹಿತಿ ಸಂಗ್ರಹ, ಅವುಗಳ ವಿಶ್ಲೇಷಣೆ ಹಾಗೂ ಆದಕ್ಕೆ ಸಂಬಂಧಿಸಿದ ಸ್ಪಷ್ಟ ಬರವಣಿಗೆಯನ್ನು ನಾವು ಗುರುತಿಸಬಹುದಾಗಿದೆ.

ಒಟ್ಟಿನಲ್ಲಿ ಹೇಳಬಹುದಾದ ಮಾತೆಂದರೆ ಸೋಮನಾಥ ಯಾಳವಾರ ಅವರು ಹೇಳುವಂತೆ ಇಲ್ಲಿಯ ಶರಣ ಸ್ಮಾರಕಗಳು ಶರಣರ ಸ್ಮರಣಾರ್ಥವಾಗಿ ರಚನೆಗೊಂಡಿದ್ದು, ಅವು ವೀರಶೈವ ಧರ್ಮದ ಸಾಂಸ್ಕೃತಿಕ ವಾಹಕವಾಗಿ ಪಳಿಯುಳಿಕೆಗಳೆನಿಸಿದ್ದರೂ ಮಾನವ ಜೀವನಕ್ಕೆ ಬೇಕಾಗಿರುವ ಮೌಲಿಕ ಗಳಿಕೆಗಳಾಗಿ ನೆಲೆ ನಿಂತಿವೆ. ಹಿಂದಿನ ಶರಣರ ಜೀವನ ವಿಧಾನಗಳನ್ನು ಮಾನವೀಯ ಮೌಲ್ಯಗಳನ್ನು ವಿಶೇಷವಾಗಿ ಅರ್ಥಹೀನ ಆಚರಣೆಗಳಲ್ಲಿಯ ಜೊಳ್ಳತನವನ್ನು (ವಿಡಂಬಿಸುವ) ಎತ್ತಿ ತೋರಿಸುವ ರೀತಿಯಲ್ಲಿ ಮಹತ್ವದ್ದಾಗಿ ನಿಲ್ಲುತ್ತವೆ. ಕಾಲದ ಕೈವಶವಾಗಿ ಹಾಳು ಬಿದ್ದು ಮಣ್ಣಾಗುವ ಮೊದಲೇ ಅವುಗಳನ್ನು ರಕ್ಷಸಿಕೊಂಡು ಮಾನವನ ಮುಂದಿನ ಬದುಕಿಗೆ ಕಾದಿರಿಸಬೇಕಾದುದು ಇಂದಿನ ಆಗತ್ಯವಾಗಿದೆ.[೧೯] ಈ ಹಿನ್ನಲೆಯಲ್ಲಿ ರಚಿತವಾಗಿರುವ ಯಾಳವಾರರ ಈ ಕೃತಿಯು ಈ ನಿಟ್ಟಿನಲ್ಲಿ ಸಂಶೋಧನ ಕೈಗೊಳ್ಳುವವರಿಗೆ ಒಂದು 'ಆಕರ ಕೃತಿಯಾಗಿ ನಿಲ್ಲುತ್ತದೆ ಎಂದು ಹೇಳಬಹುದು. 'ಕನ್ನಡ ಸಾಹಿತ್ಯ ಪರಿಷತ್ತು' ಬೆಂಗಳೂರಿನಿಂದ ಪ್ರಕಟಗೊಂಡಿರುವ ಈ ಕೃತಿಯ ಅನುಬಂಧದಲ್ಲಿಯ 'ಭಾವ ಚಿತ್ರಗಳು' ಬಣ್ಣದಲ್ಲಿ ಮುದ್ರಿತವಾಗಿದ್ದರೆ ಈ ಕೃತಿಗೆ ಇನ್ನಷ್ಟು ಮೆರಗು ಬರತ್ತಿತ್ತೆನ್ನಬಹುದು.

೧೯. ಡಾ. ಸೋಮನಾಥ ಯಾಳವಾರರ ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ಸಂಖ್ಯೆ ೮೦

೧.೩ ಹುಮನಾಬಾದ ಶ್ರೀ ವೀರಭದ್ರೇಶ್ವರ:

ಕೃತಿಯು ಚಿಕ್ಕದಾಗಿದ್ದರು ಸಂಶೋಧಕರ ಗಮನ ಸೆಳೆಯುವಂತಹದ್ದು. ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನದಿಂದ ೨೦೦೬ ರಲ್ಲಿ ಅವರ 'ಜನಪ್ರಿಯ ಮಾಲಿಕೆ'ಯಲ್ಲಿ ಪ್ರಟವಾದ ಕೃತಿ ಅರವತ್ತು ಪುಟಗಳ ಈ ಪುಸ್ತಕದಲ್ಲಿ ಗಮನಾರ್ಹವಾದ ಸಂಗತಿಗಳು ಆಡಗಿವೆ. ಬೀದರ ಜಿಲ್ಲೆಯ ತಾಲ್ಲೂಕು ಸ್ಥಳವಾಗಿರುವ ಹುಮನಾಭಾದ ಐತಿಹಾಸಿಕ ಸ್ಥಾನ. 'ಜಯಸಿಂಗಪುರ, ಎಂಬುದು ಇದರ ಪ್ರಾಚೀನ ಹೆಸರು[೨೦] ಚಾಲುಕ್ಯದೊರೆ ಎರಡನೆಯ ಜಯಸಿಂಹ ಕ್ರ.ಶ. ೧೦೧೫–೧೦೪೩ ನ ಆಳ್ವಿಕೆಯ ಕಾಲದಲ್ಲಿ ಈ ಊರು ನಿರ್ಮಾಣವಾಗಿರುವಂತಿದೆ.

ಚಾಣುಕ್ಯ ಜಯಸಿಂಹ ಯಾವುದೋ ಒಂದು ಯುದ್ಧದ ವಿಜಯದ ನೆನಪನ್ನು ಈ ಹೆಸರು ಹೊತ್ತು ನಿಂತಿರುವುದನ್ನು ಅಲ್ಲಗಳೆಯಲಾಗದು. ಎನ್ನುವ ಯಾಳವಾರರು ಆನಂತರದ ಕಾಲದಲ್ಲಿ ಮುಸ್ಲೀಂ ಆಳರಸರ ಕಾಲದ 'ಹುಮಾಯೂನುನೆಂಬನಿಂದ 'ಹುಮಾಯೂನ್ ಆಬಾದ್' ಅಂದರೆ ಹುಮನಾಬಾದ ಎಂದು ಬದಲಾವಣೆಗೊಂಡಿದೆ ಎನ್ನುತ್ತಾರೆ. ಸ್ಥಳೀಯ ಪುರಾಣದಲ್ಲಿ ಈ ಊರನ್ನು ಕೆಲವು ಕಡೆ 'ಪಾಯಸಪುರ'ವೆಂದೂ ಕರೆಯಲಾಗಿದೆ. ಶ್ರೀ ವೀರಭದ್ರಸ್ವಾಮಿಯ ಅವತಾರವನ್ನು 'ಜಯಸಿಂಹ'ನೆಂದು ಕರೆಯುವದರಿಂದ ಈ ಊರಿನ ಹೆಸರಿಗೂ ಶ್ರೀ ವೀರಭದ್ರನಿಗೂ ಅನ್ವರ್ಥಕತೆಯರುವುದು ಸಹ ಗಮನಾರ್ಹವೆಂಬ ಸೋಮನಾಥ ಯಾಳವಾರರ ಅಭಿಪ್ರಾಯವು[೨೧] ಸರಿಯಾದುದೆನಿಸುತ್ತದೆ.

ಈ ಊರನ್ನು ಆಳಿದ ಅನೇಕ ಅರಸುಮನೆತನಗಳನ್ನು ಹೆಸರಿಸುವ ಲೇಖಕರು ಅವರಲ್ಲಿ ಚಾಲುಕ್ಯರು, ಕಾಕತೀಯರು, ಖಿಲ್ಜಿ, ಬಹಮನಿಅರಸರು, ಮೊಗಲುರು ಹೈದ್ರಾಬಾದ ನಿಜಾಮರ ಆಳ್ವಿಕೆಯು ಇಲ್ಲಿ ಪ್ರಮುಖವಾದುದು ಎಂದು ಹೇಳುತ್ತ, ರಾಮಚಂದ್ರ ಜಾಧವನ ಕಾಲದಲ್ಲಿ, ಅವನ ಮಗ ಚಂದ್ರಸೇನ ಜಾಧವನ ಕಾಲದಲ್ಲಿ ಇದು ಅಭಿವೃದ್ಧಿ ಹೊಂದಿದೆ ಎಂದು ಹೇಳುತ್ತಾರೆ. ಪೇಶ್ವೆಯ ಆಳ್ವಿಕೆಯ ಕಾಲದಲ್ಲಿ ಧಾನಾಜಿ ಜಾಧವ ವಿಶ್ವಾಸಾರ್ಹ ಮಂತ್ರಿಯಾಗಿದ್ದು, ಚೌಥಾಯ್,

---

೨೦. ಡಾ. ಸೋಮನಾಥ ಯಾಳವಾರರ ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ಸಂಖ್ಯೆ ೦೫

೨೧. ಡಾ. ಸೋಮನಾಥ ಯಾಳವಾರರ ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ಸಂಖ್ಯೆ ೦೬

ಕರ ವಸೂಲಿಗಾಗಿ ಪೇಶ್ವೆಯು ದಾನಾಜಿಗೆ ಈ ಭಾಗದ ಕೆಲವು ಊರುಗಳನ್ನು ಉಂಬಳಿಯಾಗಿ ನೀಡಿದ್ದ. ಅವುಗಳಲ್ಲಿ ಹುಮನಾಬಾದ ಒಂದು. ಅವನ ವಂಶಜರು ಈ ಊರನ್ನು ಅಭಿವೃದ್ಧಿ ಪಡಿಸಿದರು, ರಾಜಾ ರಾಮಚಂದ್ರನ ಕಾಲದಲ್ಲಿ ಹಿಂದೇ ಶಿವ ದೇವಾಲಯವಾಗಿದ್ದ ಗುಡಿಯಲ್ಲಿ ಶ್ರೀ ವೀರಭದ್ರೇಶ್ವರನ ಮೂರ್ತಿಯನ್ನು ಗಡವಂತಿ ಗ್ರಾಮದಿಂದ ತಂದು ಪ್ರತಿಷ್ಠಾಪಿಸಲಾಯಿತೆಂದು ಇಲ್ಲಿ ಐತಿಹ್ಯವಿರುವುದನ್ನು ಯಾಳವಾರರು ಉಲ್ಲೇಖಿಸಿದ್ದಾರೆ. ಈ ಹಿಂದೆ ಚಿಕ್ಕದಾಗಿದ್ದ ದೇವಾಲಯವು ತ್ರಿಕೂಟ ದೇವಾಲಯವಾಗಿ ವಿಸ್ತಾರಗೊಂಡು ಈ ರಾಜನ ಕಾಲದಲ್ಲಿ ಹೊಸ ರೂಪ ಪಡೆದಿದೆ. ಅದರ ರಚನೆಯು ಭಾರತೀಯ ವಾಸ್ತುಶಿಲ್ಪದ ಹಳೆಯ ಮಾದರಿಯಲ್ಲಿರುವುದನ್ನು ಇಲ್ಲಿ ಲೇಖಕರು ತೋರಿಸಿದ್ದಾರೆ.

ಆದರೆ ರಾಮಚಮದ್ರನ ಕಾಲದಲ್ಲಿ ಎತ್ತರವಾದ ಶಿಖರ, ಗರ್ಭ ಗುಡಿ, ಸುಕನಾಸಿ, ಹಾಗೂ ಸುತ್ತ ಪ್ರಾಂಗಣ, ಮಂಟಪಶಾಲೆ ನಿರ್ಮಾಣವಾಗಿ ಶೋಭಿಸತೊಡಗಿತು. ಪೂರ್ವ ದಿಕ್ಕಿಗೆ ಮುಖ್ಯ ದ್ವಾರವಿರುವ ಈ ದೇವಾಲಯವು ಯೋಜನಾ ಬದ್ಧವಾಗಿ ನಿರ್ಮಿತವಾಗಿದ್ದು ಆತಿ ಸುಂದರವಾಗಿದೆ[೨೨] ಎಂಬುದನ್ನು ಎತ್ತಿ ತೋರಿಸಿದ್ದಾರೆ.

ಪೂರ್ವ ದಿಕ್ಕಿನಿಂದ ದೇವಾಲಯಕ್ಕೆ ಬರುವ ಎಲ್ಲರಿಗೂ ಈ ದೇವರ ಮೂರ್ತಿಯು ಆತಿ ದೂರದಿಂದಲೇ ಕಾಣುವಂತೆ ಪ್ರತಿಷ್ಠಾಪಿಸಲಾಗಿದ್ದು, ಎದುರಿಗೆ ನಂದಿ, ಎಡ ಭಾಗದಲ್ಲಿ ವರಭದ್ರಕಾಳಿ, ಹಾಗೂ ಬಲಭಾಗದಲ್ಲಿ ಶಿವಲಿಂಗವಿರುವುದನ್ನು ಎತ್ತಿತೋರಿಸಿ ಈ ದೇವಾಲಯಕ್ಕೆ ಬರು ಅಗಣಿತ ಭಕ್ತರನ್ನು ಗಮನಿಸಿದರೆ ಇದ್ದೊಂದು ಭಕ್ತಿಯ ಆಗರವಾಗಿರುವ ಕ್ಷೇತ್ರವೆನ್ನುತ್ತಾರೆ. ಇಲ್ಲಿಯ ತ್ರಿಕಾಲ ಪೂಜೆ, ನವವಾದ್ಯಗಳ ಸೇವೆ, ರುದ್ರಪೂಜಾ ವಿಧಾನಗಳು ಸಾಂಗವಾಗಿ ಜರುಗುತ್ತಿದ್ದು, ಬರುವ ಭಕ್ತರಿಗೆ ಪ್ರಸಾದ ನಿಲಯ ವಾಸಸ್ಥಾನಕ್ಕೆ ಎಲ್ಲ ಅನುಕೂಲತೆಗಳು ಇರುವುದನ್ನು ತಿಳಿಸಿದ್ದಾರೆ. ದೇವಾಲಯದ ಎಲ್ಲ ಭಾಗಗಳನ್ನು ತುಂಬಾ ಸೂಕ್ಷ್ಮವಾಗಿ ಅಧ್ಯಯನ ಮಾಡಿರುವ ಯಾಳವಾರರು ಕರ್ನಾಟಕದ ವಾಸ್ತುಶಿಲ್ಪ ಮಾದರಿಯಲ್ಲಿ ಆ ದೇವಾಲಯವನ್ನು ವಿವರಿಸಿ ಹೇಳಿದ್ದು ಕುತೂಹಲ ಮೂಡಿಸುತ್ತದೆ.

---

೨೨. ಡಾ. ಸೋಮನಾಥ ಯಾಳವಾರರ ಬೀದರ ಜಿಲ್ಲಾ ಶರಣ ಸ್ಮಾರಕಗಳು ೨೦೦೬ ಪುಟ ಸಂಖ್ಯೆ ೦೯

ನಂದಿ ವಿಗ್ರಹ, ಮಂಟಪ ಶಾಲೆ, ಸುಕನಾಸಿ, ಪ್ರವಚನಪ್ರಾಂಗಣ, ಮಗ್ಗುಲಲ್ಲಿರುವ ಹೊಂಡ, ಹೆಬ್ಬಾಗಿಲು ಮಾಲಗಂಬಗಳ ವೈಶಿಷ್ಟ್ಯ, ಪ್ರದಕ್ಷೀಣಾ ಪಥ, ಮಾಲಗಂಬಗಳಲ್ಲಿ ಒಂದು ತಲೆ ಹಿಡಿದು ಅಲ್ಲಾಡಿಸಿದರೆ ಅಲ್ಲಾಡುವ ವಿನೂತನ ತಂತ್ರಗಾರಿಕೆ ಕುರಿತ ಎಲ್ಲ ವಿವರಗಳು ಗಮನ ಸೆಳೆಯುತ್ತವೆ.

ಮುಖ್ಯ ಗರ್ಭಗೃಹದಲ್ಲಿರುವ ವೀರಭದ್ರದೇವರ ಮೂರ್ತಿ, ಅದರ ಸ್ವರೂಪ, ಮಹತ್ವ, ವೈಶಿಷ್ಟ್ಯಗಳನ್ನು ತಿಳಿಸುತ್ತ, ಆ ಮೂರ್ತಿಗಿರುವ ಶೃಂಗಾರವನ್ನು ತಿಳಿಸಲಾಗಿದೆ. ಈ ವೀರಭದ್ರನ ಚರಿತ್ರೆಯನ್ನು ಮೊದಲು ಪೌರಾಣಿಕವಾಗಿ ಕಥೆ ಹೇಳುವ ಯಾಳವಾರರು ನಂತರದಲ್ಲಿ ಈ ದೇವಾಲಯದ ಪರಿ, ಆಚರಣೆಗಳು , ನಂಬಿಕೆಗಳು, ಉತ್ಸವಗಳು ಮೊದಲಾದವುಗಳನ್ನೆಲ್ಲ, ಕುಲಂಕುಷವಾಗಿ ಅಧ್ಯಯನಕ್ಕೊಳಪಡಿಸಿ ಇಲ್ಲಿರುವ ವೀರಭದ್ರ ಪೌರಾಣಿಕವೀರಭದ್ರ ಸ್ವಾಮಿಯಲ್ಲ. ಅದು ಶ್ರೀ ವೀರಭದ್ರನ ಅವತಾರವಾಗಿರುವ 'ಮಡಿವಾಳ ಮಾಚಿದೇವ'ರು ಎಂಬ ನಿಲುವಿಗೆ ಬಂದು ನಿಂತಿದ್ದಾರೆ.

ಹುಮನಾಬಾದ ವೀರಭದ್ರಯಾರು ? ಎಂದು ಪ್ರಶ್ನಿಸಿಕೊಂಡು ಅಧ್ಯಯನಕ್ಕಿಳಿದಿರುವ ಸೋಮನಾಥ ಯಾಳವಾರರು. ಅಗ್ನಿ ಪುರಾಣಗಳಲ್ಲಿ ವರ್ಣಿತವಾದ ವೀರಭದ್ರನ ರೂಪಕ್ಕಿಂತ ಭಿನ್ನವಾಗಿರುವ ಹುಮಬಾಬಾದ ವೀರಭದ್ರನ ಮೂರ್ತಿ ವಾಯುಪುರಾಣದ ಹೇಳಿಕೆಯಂತಿದೆ ಎನ್ನುತ್ತಾರೆ.[೨೩] ಶಕ್ತಿಯಲ್ಲಿ ಮಹಾವೀರನೂ, ಯುಕ್ತಿ ಭಕ್ತಿಯಲ್ಲಿ ಭದ್ರನೂ ಆಗಿರುವ ವೀರಭದ್ರನು ಶಿವಗಣದ ಸೇನಾನಿ. ರುದ್ರಗಣರಲ್ಲಿ ಅಗ್ರಗಣ್ಯ ಶ್ಯಾಮಾಂಗನಾದ ಉಗ್ರರೂಪನು ಭದ್ರಕಾಳಿಯ ಪತಿದೇವ. 'ರುದ್ರಗಣ'ವೆಂಬುದು ಒಂದು ಸಾಂಘಿಕ ಶಕ್ತಿಯಾಗಿದ್ದು, ಆದು ಸಾರ್ವಜನಿಕ ಕಲ್ಯಾಣ ಕಾರ್ಯಗಳಿಗಾಗಿ ನಿಯೋಜನೆಗೊಂಡಿತ್ತು. ಈ ಗಣದ ಸೇನಾನಿಗಳು ಶಿವಾಚಾರ ಪ್ರಭೋಧಕನಾದ ವೀರಭದ್ರನ ಅನುಯಾಯಿಗಳು[೨೪] ಕಾಲಾನಂತರದಲ್ಲಿ ಇವರೇ ಪುರವಂತರೆಂದು ಹೆಸರಾದರು ಎನ್ನುವದನ್ನು ಇಲ್ಲಿ ಹೇಳಲಾಗಿದೆ.

---

೨೩. ಡಾ. ಸೋಮನಾಥ ಯಾಳವಾರರ ಹುಮನಾಬಾದ ಶ್ರೀ ವೀರಭದ್ರೇಶ್ವರ ಪುಟ ಸಂಖ್ಯೆ ೩೮

೨೪. ಡಾ. ಸೋಮನಾಥ ಯಾಳವಾರರ ಹುಮನಾಬಾದ ಶ್ರೀ ವೀರಭದ್ರೇಶ್ವರ ಪುಟ ಸಂಖ್ಯೆ ೪೩

ಪೌರಾಣಿಕ ವೀರಭದ್ರನ ಹಲವು ವೈಶಿಷ್ಟ್ಯಗಳನ್ನು ವಿವರವಾಗಿ ಚರ್ಚಿಸುತ್ತ, ಹುಮನಾಬಾದ ವೀರಭದ್ರೇಶ್ವರನ ಆಚರಣೆಗೆ ಸಂಬಂಧಿಸಿದಂತೆ ಜರುಗುವ ಹಲವು ಸಂಗತಿಗಳನ್ನು ಗಮನಿಸಿರುವ ಲೇಖಕರು, ಅವುಗಳಲ್ಲಿ ಮುಖ್ಯವಾದವುಗಳನ್ನು ಈ ರೀತಿ ದಾಖಲಿಸುತ್ತ ಪೌರಾಣಿಕ ವೀರಭದ್ರನ ಅಸ್ತಿತ್ವವನ್ನು ಇಲ್ಲಿ ಪ್ರಶ್ನಿಸುತ್ತಾರೆ.

೧. ಶ್ರೀ ವೀರಭದ್ರೇಶ್ವರ ದೇವಾಲಯದ ಸಮೀಪದಲ್ಲಿ ಅಗ್ನಿ ಕುಂಡವಿಲ್ಲದಿರುವುದು.
೨. ಶ್ರೀ ವೀರಭದ್ರ ದೇವರ ಕೊರಳಲ್ಲಿ ಇಷ್ಟಲಿಂಗವಿರುವುದು.
೩. ದೇವರ ಕೈಯಲ್ಲಿ ಖಡ್ಗವೇ ಪ್ರಧಾನ ಆಯುಧವಾಗಿರುವುದು.
೪. ಜಾತ್ರೆಯ ಆರಂಭದಲ್ಲಿ ಶಲ್ಯ ಸುಡುವ ಪದ್ಧತಿಯಿರುವುದು.
೫. ದೇವಾಲಯದ ಮೂಲ ಗುಡಿಯ ಪಕ್ಕದಲ್ಲಿ ಆಳವಾದ ಒಂದು ನೀರಿನ ಹೊಂಡವಿರುವುದು.
೬. ವೀರಭದ್ರೇಶ್ವರ ಮೂರ್ತಿಗೆ ಭಕ್ತರು ಜಾತ್ರೆಯಲ್ಲಿ ಶಲ್ಯ ಹೊಚ್ಚುತ್ತಿರುವುದು.
೭. ವೀರಭದ್ರನ ಮೂರ್ತಿಯ ಎದುರಲ್ಲಿ 'ನಂದಿ' (ಬಸವಣ್ಣ) ಯನ್ನು ನಿಲ್ಲಿಸಿರುವುದು.
೮. ದೇವಾಲಯದ ಉತ್ಸವ ಮೂರ್ತಿಯನ್ನು ಹೊರಡಿಸುವ ಮೊದಲು ಜಂಗಮಾರ್ಚನೆ ಮಾಡುವುದು
೯. ದೇವಾಲಯದಿಂದ ಸುಮಾರು ೧ ಕಿ.ಮಿ ದೂರದ ಸ್ಥಾನದಲ್ಲಿ ಅಗ್ನಿ ಕುಂಡವಿರುವುದು.

ಈ ಎಲ್ಲ ಅಂಶಗಳನ್ನು[೫೮] ಗಮನಿಸಿರುವ ಯಾಳವಾರರು ಶ್ರೀ.ವೀರಭದ್ರೇಶ್ವರ ದೇವಾಲಯವು ಬಸವಾದಿ ಶರಣರ ಕಾಲದ ನಂತರದಲ್ಲಿ ನಿರ್ಮಾಣಗೊಂಡಿದ್ದು, ಇದು 'ವೀರಭದ್ರೇಶ್ವರನ ಅವತಾರ'ದ ದೇವಾಲಯವೆನ್ನುತ್ತಾರೆ. – 'ದಕ್ಷ ಸಂಹಾರದಿಂ ಬರುವಾಗ ಗುಪ್ತಗಣೇಶ್ವರನಂ ಸೊಂಕಲು ಆ ಪ್ರಶ್ನೆಯಿಂದ ಬಂದನಯ್ಯ ಮಡಿವಾಳನು' ಎಂಬ ನಂಜುಂಡ ಕವಿಯ ಹೇಳಿಕೆಯಂತೆ[೫೯]

೫೮. ಡಾ. ಸೋಮನಾಥ ಯಾಳವಾರರ ಹುಮನಾಬಾದ ಶ್ರೀ ವೀರಭದ್ರೇಶ್ವರ ಮಟ ಸಂಖ್ಯೆ ೫೮
೫೯. ಡಾ. ಸೋಮನಾಥ ಯಾಳವಾರರ ಹುಮನಾಬಾದ ಶ್ರೀ ವೀರಭದ್ರೇಶ್ವರ ಮಟ ಸಂಖ್ಯೆ ೫೯

ಕರ್ತೃ ಬಸವರಾಜನೆಡೆಗೆ ನಡೆದು ಬಂದ ಎನ್ನುವಂತೆ ಬಂದ 'ಮಡಿವಾಳ ಮಾಚಿದೇವ'ನ ದೇವಾಲಯವಿದಾಗಿರಬೇಕೆಂದು ಹೇಳಿರುವ 'ಯಾಳವಾರರ ಇಲ್ಲಿಯ ಮಾತುಗಳು ಗಂಭೀರವಾದ ಸಂಶೋಧನೆಗೆ ಚಾಲನೆಕೊಡುತ್ತಿವೆ. ಅಷ್ಟೇಅಲ್ಲ' ಸಂಶೋಧನಾತ್ಮಕವಾದ ಆಲೋಚನೆಗಳ ಈ ಕೃತಿ ಈ ನಿಟ್ಟಿನಲ್ಲಿ ತುಂಬಾ ಮಹತ್ವದ್ದೆನಿಸುತ್ತದೆ.

೨. ವಿಮರ್ಶಾ ಸಾಹಿತ್ಯ :-

ಕಾಲದಿಂದ ಕಾಲಕ್ಕೆ ಬದಲಾಗುವ ಸಾಮಾಜಿಕ ರಚನೆಗಳು ಮತ್ತು ವೈಚಾರಿಕತೆ ಇವುಗಳನ್ನನ್ನು ಸರಿಸಿ, ನಾವು 'ಸಾಹಿತ್ಯ'ವೆಂದು ನಿರ್ಮಿಸುವ ವರ್ಗದ ಸ್ವರೂಪವು ಬದಲಾಗುತ್ತದೆ. ಸಾಹಿತ್ಯದ ಸ್ವರೂಪ ಸಮಾಜದಲ್ಲಿ ಸಾಹಿತ್ಯದ ಸ್ಥಾನ ಮತ್ತು ಕೃತಿ– ಲೇಖಕ–ಓದುಗ ಸಂಬಂಧಗಳು ಇವುಗಳನ್ನು ಕುರಿತ ನ್ನಮ ಗ್ರಹಿಕೆ ಅಥವಾ ವೈಚಾರಿಕತೆ ಬದಲಾದಂತೆ ಸಾಹಿತ್ಯ ಮತ್ತು ಅದನ್ನು ಅರ್ಥೈಸುವ ವಿಮರ್ಶಾ ಪ್ರಸ್ಥಾನಗಳು ಬದಲಾಗುತ್ತವೆ. ಇಂತಹ ಬದಲಾವಣೆಯನ್ನು 'ಮಾದರಿಯ ಬದಲಾವಣೆ ಅಥವಾ PARA IODM SHIFT ಎಂದು ವಿದ್ವಾಂಸರು ಕರೆಯುತ್ತಾರೆ.[೨೭] ಒಂದು ವಸ್ತುವಿನ ಅಥವಾ ಕ್ಷೇತ್ರದ ಅಥವಾ ವರ್ಗದ ಬಗ್ಗೆ ನಮಗಿರುವ ಎಲ್ಲ ವಿಚಾರಗಳ ಮೊತ್ತವನ್ನು ನಾವು 'ಮಾದರಿ' ಎಂದು ಗುರುತಿಸಬಹುದು. ಒಂದು ನುತನ ಮಾದರಿಯೆಂದರೆ ನೂತನ ವಿಮರ್ಶಾ ಪ್ರಸ್ಥಾನದ ಜನ್ಮ. ಈ ದೃಷ್ಟಿಯಿಂದ ಇಂದು ಪ್ರಮುಖ ವಿಮರ್ಶಾ ಮಾರ್ಗಗಳಾದ ೧. ಕತೃನಿಷ್ಠ ವಿಮರ್ಶೆ ೨. ಚಾರಿತ್ರಿಕ ವಿಮರ್ಶೆ ೩. ಸಮಾಜ ಕೇಂದ್ರಿತ ವಿಮರ್ಶೆ ೪. ಕೃತಿ ಕೇಂದ್ರಿತ ವಿಮರ್ಶೆ ೫. ವಾಚಕ ಕೇಂದ್ರಿತ ವಿಮರ್ಶೆಗಳು ಹುಟ್ಟಿಕೊಂಡಿವೆ. ಈ ಹಿನ್ನಲೆಗಳಲ್ಲಿ ಡಾ.ಸೋಮನಾಥ ಯಾಳವಾರರ ವಿಮರ್ಶಾ ಕೃತಿಗಳು ಮೂಡಿ ಬಂದಿರುವುದನ್ನು ಮನಗಾಣಬಹುದು.

ವಿಮರ್ಶೆ ಎನ್ನುವುದು ಅಧ್ಯಯನದ ಒಂದು ಒಳಶಿಸ್ತು. ಈ ಶಿಸ್ತನ್ನು ಪ್ರತಿಯೊಬ್ಬ ಲೇಖಕರು ಒಂದಿಲ್ಲೊಂದು ರೀತಿಯಿಂದ ರೂಢಿಸಿಕೊಂಡಿರುತ್ತಾರೆ. ಸೃಜನಶೀಲ ಬರವಣಿಗೆಗಳಿಗಿಂತ ಭಿನ್ನವಾಗಿರುವ ಕಲೆ, ವಿಮರ್ಶೆ, 'ಸಾಹಿತ್ಯವು ಜೀವನದ ವಿಮರ್ಶೆಯಾಗಿದ್ದು.'

---

೨೭. ಡಾ. ಸಿ.ಎನ್.ರಾಮಚಂದ್ರನ್ – ಸಾಹಿತ್ಯ ವಿಮರ್ಶೆ ಪುಟ ೪೨ ಕ.ಸಾ.ಅ ೨೦೧೦

ಸಾಹಿತಿಯಾದವನು ಅದನ್ನು ಹೀಗೇಕೆ? ಹೀಗಿರಬೇಕು ಎಂಬ ಪ್ರಶ್ನೆಗಳನ್ನಿಟ್ಟು ವಿಶ್ಲೇಷಿಸುವ ಒಂದು ಬಗೆಯ ನೋಟವಾಗಿದೆ.

ಸೋಮನಾಥ ಯಾಳವಾರರ ೧. ಹರಿಶ್ಚಂದ್ರ ಕಾವ್ಯ ಮತ್ತು ಮೌಲ್ಯಗಳು. ೨. ಗಿರಿಜಾ ಕಲ್ಯಾಣ. ೩. ಶರಣ ಸಿರಿ ಮತ್ತು . ಕುಮಾರವ್ಯಾಸ ಎಂಬ ನಾಲ್ಕು ಕೃತಿಗಳನ್ನು ಅವರ 'ವಿಮರ್ಶಾ' ಕೃತಿಗಳೆಂದು ಇಟ್ಟುಕೊಂಡು ಇಲ್ಲಿ ಪರಾಮರ್ಶಿಸಲಾಗಿದೆ. ಯಾಳವಾರರ ಕಾವ್ಯೇತರ ಕೃತಿಗಳಲ್ಲಿ ವಿಮರ್ಶೆ ಸಹಜವಾಗಿದ್ದು, ಇದು ವಿಮರ್ಶೆ, ಇದು ಸಂಶೋಧನೆ, ಇದು ಚಿಂತನೆ, ಇದು ಸಮೀಕ್ಷೆ ಎಂದು ನಿಖರವಾಗಿ ವರ್ಗೀಕರಿಸುವುದು ತುಂಬಾ ಕಷ್ಟದ ಕೆಲಸ. ಯಾಕಂದರೆ ಇಲ್ಲಿಯ ಎಲ್ಲ ಕೃತಿಗಳ ಬರಹಗಳಲ್ಲಿ ಲೇಖಕರ ವೈಚಾರಿಕ ವಿವೇಚನೆಯಿರುವುದನ್ನು ಗುರುತಿಸಬಹುದು. ಆದರೆ ವಿಷಯ ವಿಶ್ಲೇಷಣೆಗನುಸಾರವಾಗಿ ಮಾತ್ರ ನಾವು ವಿವಿಧ ರೂಪಗಳನ್ನು ಮೇಲ್ನೋಟದಲ್ಲಿ ಕಾಣಬಹುದಾದರೂ. ವಿಮರ್ಶೆಯಲ್ಲಿ ಸಂಶೋಧನೆ, ಚಿಂತನ, ಬರಹಗಳಲ್ಲಿ, ವಿಮರ್ಶೆ, ಸಮೀಕ್ಷೆಯಲ್ಲಿ ಚಿಂತನೆಗಳು ಇರುವುದನ್ನು ಅಲ್ಲಗಳೆಯಲಾಗುವುದಿಲ್ಲ.

೨.೧. ಹರಿಶ್ಚಂದ್ರ ಕಾವ್ಯ ಮತ್ತು ಮೌಲ್ಯಗಳು :-

ಈ ಕೃತಿಯು ೧೯೯೦ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಗೊಂಡಿದೆ. ಉಪನ್ಯಾಸ ಗ್ರಂಥಮಾಲೆ – ೨೩ ರಲ್ಲಿ ಇದು ಮುದ್ರಿತಗೊಂಡಿದೆ. ಬಳ್ಳಾರಿ ಜಿಲ್ಲೆಯ 'ಇಟಗಿ' ಗ್ರಾಮದಲ್ಲಿ ವಿಶ್ವವಿದ್ಯಾಲಯವು ಏರ್ಪಡಿಸಿದ್ದ ೨೧ನೆಯ ಉಪನ್ಯಾಸ ಶಿಬಿರದಲ್ಲಿ ಸೋಮನಾಥರು ಉಪನ್ಯಾಸದ ಮಾಡಿದ ಕಿರುರೂಪವೇ ಈ ಪುಸ್ತಕ. ಚಿಕ್ಕ ಪುಸ್ತಕವಿದಾದರೂ ಯಾಳವಾರರ ಮೌಲಿಕ ಕೃತಿ ಎಂದು ಜನಪ್ರಿಯವಾಗಿದೆ.

'ಹರಿಶ್ಚಂದ್ರ ಚಾರಿತ್ರ್ಯ'ವು ಕನ್ನಡದ ಜನಪ್ರಿಯ ಕಾವ್ಯಗಳಲ್ಲಿ ಪ್ರಧಾನವಾದುದು. ರಾಘವಾಂಕ ಕವಿಯ ಕೃತಿಗಳಲ್ಲಿಯೇ ಶ್ರೇಷ್ಠವಾದುದು. ಕನ್ನಡಿಗರೆಲ್ಲರಿಗೂ ಚಿರಪರಿಚಿತವಾಗಿರುವ ಸತ್ಯ ಹರಶ್ಚಂದ್ರನ ಕಥೆ ಈ ಕೃತಿಯ ವಸ್ತು. ರಸಜೀವ, ಭಾವವೊಡಲರ್ಥವವಯವ ವಿಮಳಪದನ್ಯಾಸನಡೆ ರೀತಿಸುಕುಮಾರತೆ'ಯುಳ್ಳ ಈ ಪೊಸಕಾವ್ಯಕನ್ನಿಕೆಯನ್ನು ರಾಘವಾಂಕನು ಹಂಪೆಯ ಪಂಪಾನಾಥನಿಗೆ ಧಾರೆಯೆರಿದ್ದಾನೆ. ಹೀಗಾಗಿ ಭಕ್ತಿಭಾವ ಪ್ರಧಾನವುಳ್ಳ ಮಹಾಕಾವ್ಯವೆನಿಸಿದೆ ಇದು.

ಕಥಾರಚನೆ, ಸನ್ನಿವೇಶ ನಿರ್ಮಾಣ, ಕಲ್ಪನಾಸೊಗಸು, ಭಾಷಾಬಳಕೆಯ ದೃಷ್ಟಿಯಿಂದ ಇದೊಂದು ಶ್ರೇಷ್ಠ ಕೃತಿಯೆನಿದೆ, ಕಾವ್ಯ ಮತ್ತು ಜೀವನ ಮೌಲ್ಯಗಳ ದೃಷ್ಟಿಯಿಂದ ಈ ಕೃತಿ ತುಂಬಾ ಮುಖ್ಯವಾಗಿರುವುದನ್ನು ಯಾಳವಾರರು ಇಲ್ಲಿ ತೋರಿಸಿದ್ದಾರೆ, ಕೃತಿಯುದ್ದಕ್ಕೂ ಸೋಮನಾಥರ ಅಧ್ಯಯನಶೀಲತೆ ಹಾಗೂ ಚಿಂತನಾಕ್ರಮಗಳನ್ನು ಗುರುತಿಸಬಹುದಾಗಿದೆ. ಕವಿಪರಿಚಯ, ಜೀವನವ್ಯಕ್ತಿತ್ವ, ಗುರುಪರಂಪರೆ, ಮತ, ಕಾಲ, ಕೃತಿಗಳ, ಸಂಕ್ಷಿಪ್ತ ಪರಿಚಯ ಮಾಡಿಕೊಡುವುದರೊಂದಿಗೆ ಹರಿಶ್ಚಂದ್ರ ಕಾವ್ಯದಲ್ಲಿ ವ್ಯಕ್ತವಾಗಿರುವ ಮೌಲ್ಯಗಳನ್ನು ಶೋಧಿಸಿ ವಿಮರ್ಶಿಸಲಾಗಿದೆ.

ಕವಿ ಪರಿಚಯ ಮಾಡಿ ಕೊಡುವಲ್ಲಿ ಸೋಮನಾಥರ ಸಂಶೋಧನ ದೃಷ್ಟಿ ವ್ಯಕ್ತವಾಗುತ್ತದೆ. ರಾಘವಾಂಕನ ಒಟ್ಟು ಕೃತಿಗಳು ಆರು ಎಂಬುದನ್ನು ವಿದ್ವಾಂಸರ ಅಭಿಪ್ರಾಯಗಳ ಹಿನ್ನಲೆಯಲ್ಲಿ ಒಪ್ಪಿಕೊಳ್ಳುವ ಲೇಖಕರು. ರಾಘವಾಂಕನ ಮೊದಲ ಕೃತಿ ಯಾವುದು ? ಎಂಬುದನ್ನು ಕುರಿತು ಹೊಸ ನೋಟ ಬೀರಿದ್ದು ಗಮನಾರ್ಹವಾಗುತ್ತದೆ. ರಾಘವಾಂಕ ರಚಿಸಿದನೆನ್ನಲಾಗುವ ೧. ವಿರೇಶ ಚಾರಿತ್ರ್ಯ, ೨. ಸೋಮನಾಥ ಚಾರಿತ್ರ್ಯ, ೩. ಶರಭ ಚಾರಿತ್ರ್ಯ ೪. ಸಿದ್ಧರಾಮ ಚಾರಿತ್ರ್ಯ, ೫. ಹರಿಹರ ಮಹತ್ವ ಹಾಗೂ ೬. ಹರಿಶ್ಚಂದ್ರ ಚಾರಿತ್ರ್ಯಗಳಲ್ಲಿ ರಾಘವಾಂಕನ ಮೊದಲ ಕೃತಿ ಯಾವುದು? ಎಂಬ ಚರ್ಚೆ ಬಹು ಹಿಂದಿನಿಂದಲೂ ನಡೆದು ಬಂದಿದೆ[೨೮] ಇವುಗಳಲ್ಲಿ 'ಹರಿಹರ ಮಹತ್ವ ಹಾಗೂ 'ಶರಭ ಚಾರಿತ್ರ್ಯ ಕೃತಿಗಳು ಉಪಲಬ್ದವಾಗಿಲ್ಲ.

ಸಿದ್ಧನಂಜೇಶನ ರಾಘವಾಂಕ ಚಾರಿತ್ರ್ಯದ ಪ್ರಕಾರ, ರಾಘವಾಂಕನು ಮೊದಲು 'ಹರಿಶ್ಚಂದ್ರ ಚಾರಿತ್ರ್ಯ' ಬರೆದನೆಂದು ತಿಳಿಯುತ್ತದೆ. ಬಹಳ ಜನ ವಿದ್ವಾಂಸರು 'ವಿರೇಶ ಚಾರಿತ್ರ' ರಾಘವಾಂಕನ ಮೊದಲ ಕೃತಿಯಾಗಿದೆ. ಸಿದ್ಧನಂಜೇಶನು ರಾಘವಾಂಕನ ಹಲ್ಲುದಿರಿಸಿದ ಕಥೆ ಹೇಳುತ್ತಾನೆ. ಇದನ್ನು ಚರ್ಚಾಸ್ವದವಾದ ವಿಷಯವೆನ್ನುವ ಯಾಳವಾರರು "ಹಿಂದಿನ ಕವೀಶ್ವರರ ಮೇಲೆ ಅತಿ ಅಭಿಮಾನವುಳ್ಳ ಸಿದ್ಧನಂಜೇಶನಿಗೆ ರಾಘವಾಂಕನ ಕೃತಿಯಲ್ಲಿ ಹರೀಷ್ಚಂದ್ರ ನರಸ್ಪತಿಯಗಿ ಕಂಡಿರುವ ಸಾಧ್ಯತೆಯಿದೆ. ಈ ವಿಷಯ ಒಪ್ಪಿತವೆನಿಸುವುದಿಲ್ಲ ಎಂದಿದ್ದಾರೆ. ಇದರಲ್ಲೇನೋ ಕ್ರಿಯೆ–ಪ್ರಕ್ರಿಯೆಗಳು ನಡೆದ ಧ್ವನಿಯಿದೆ.

೨೮. ಕನ್ನಡ ಸಾಹಿತ್ಯ ಚರಿತ್ರೆ–ರಂ.ಶ್ರೀ ಮುಗುಳಿ.

ಹರಿಹರ – ರಾಘವಾಂಕರ ಎಷ್ಟೋವರುಷಗಳ ನಂತರ ಬಾಳಿದ ಸಿದ್ಧನಂಜೇಶನಿಗೆ ಹರಿಹರನು – ರಾಘವಾಂಕನ ಹಲ್ಲುದಿರಿಸಿದ ಪ್ರಸಂಗ ತಪ್ಪಾಗಿ ಕೇಳಿಸಿದೆ ಎನಿಸುತ್ತದೆ. ಈ ಕಥೆಯು ಸಿದ್ಧನಂಜೇಶನ ಕಾಲಕ್ಕೆ ಬದಲಾಗಿರುವ ಸೂಚನೆಯಿದೆ ಎನ್ನುತ್ತ ಅದು ಹೀಗಿರಬಹುದೆಂದು ಊಹಿಸುತ್ತಾರೆ.

ಹರಿಹರ – ರಾಘವಾಂಕರ ಈ ವಿಷಯ ಜನರದಿಂದ ಜನರಿಗೆ, ಬಾಯಿಯಿಂದ ಕಿವಿ ಸೇರುತ್ತ, ಬದಲಾವಣೆಯಾಗುತ್ತ ಕಥೆಯಾಗಿ ಪರಿಣಮಿಸಿದಂತಿದೆ. ಗುರುಭಕ್ತಿಯುಳ್ಳ ರಾಘವಾಂಕನು ಹರಿಹರನ ಅಪಾರ ಪಾಂಡಿತ್ಯಕ್ಕೆ, ಪ್ರತಿಭೆಗೆ ಮನಸೋತಿದ್ದನು. ಆತನ ಶಿವಭಕ್ತಿ ನಿಷ್ಠೆ ಕಂಡು ಗುರುವಿಗೆ ಶರಣಾಗಿದ್ದನು. ಗುರುವಿನ ಮೇಲೆ ಅತಿ ನಿಷ್ಠೆಯುಳ್ಳ ರಾಘವಾಂಕ ಕವಿಗೆ ಹರಿಹರನ ಬದುಕು ಶರಣನ ಬದುಕಾಗಿ ಕಂಡಿತು. ಹೀಗಾಗಿ ಶರಣರ ಬದುಕನ್ನೇ ಕಾವ್ಯದ ವಸ್ತುವಾಗಿರಿಸಿಕೊಂಡು ಕಾವ್ಯ ರಚಿಸಿ ಹರಿಹರನನ್ನೇ ರಾಘವಾಂಕನು ಮೊದಲ ಕಾವ್ಯಕ್ಕೆ ವಸ್ತುವಾಗಿ ಆರಿಸಿಕೊಂಡಿರುವನು. ಆ ಕೃತಿಯೇ 'ಹರಿಹರ ಮಹತ್ವ'. ಅದನ್ನು ಬರೆದು ಗುರುವಿನ ಶುಭಾಶೀರ್ವಾದ ಪಡೆಯಲು, ಆತನನ್ನು ಮೆಚ್ಚಿಸಲು ಹರಿಹರನಿಗೆ ಆ ಕೃತಿಯನ್ನು ತೋರಿಸಿರಬಹುದು.

ವಿರಕ್ತ ಬದುಕಿನಲ್ಲಿ ನಿಷ್ಠೆಯುಳ್ಳ, 'ತನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ಭಾವಿಸಿ ನಡೆಯುತ್ತಿದ್ದ ಹರಿಹರನು ತನ್ನನೆಂದೂ ಶರಣನೆಂದು ಭಾವಿಸಿರಲಿಲ್ಲ, ತಾನೊಬ್ಬ 'ನರ'ನೆಂದೇ ತಿಳಿದಿರುವಂತಿದೆ. ತನ್ನನ್ನು ಕುರಿತು ತಾನಿರುವಾಗಲೇ ಕೃತಿ ರಚಿಸಿದ ಶಿಷ್ಯನಿಗೆ ಇದು ನರಸ್ತುತಿ' ಎಂದು ಹೇಳಿ ತಿರಸ್ಕರಿಸಿರಬಹುದು. ಆದರೆ ಪಂಡಿತನಾದ ರಾಘವಾಂಕನು 'ಚೋಳ ದೇಶದ ಶರಣರನ್ನು ಕುರಿತು ಕೃತಿ ರಚಿಸಿರುವ ಗುರವನ್ನೇ ಪ್ರಶ್ನಿಸಿರಬಹುದು. ಈ ವಿಷಯದಲ್ಲಿ ಗುರು–ಶಿಷ್ಯರಿಬ್ಬರಲ್ಲಿ ವಾಗ್ವಾದ ನಡೆದು ಗುರು ಹೊಡೆದ ಪ್ರಸಂಗ ನಡೆದಿರುವಂತಿದೆ. ಅಷ್ಟೆ ಅಲ್ಲ; ಅಂದೇ ಹರಿಹರನು ತನ್ನನ್ನು ಕುರಿತು ರಚಿಸಿರುವ ಆ ಕೃತಿಯನ್ನು ಹರಿದು ನಾಶಪಡಿಸಿದನು. ಹಾಗಾಗಿಯೇ ಇಂದಿಗೂ 'ಹರಿಹರ ಮಹತ್ವ' ಕೃತಿ ನಮ್ಮಗೆ ದೊರಕಿಲ್ಲವೆನಿಸುತ್ತದೆ. ಆನಂತರದಲ್ಲಿ 'ಶೈವ ಪಂಚಕ'ಗಳನ್ನು ರಾಘವಾಂಕ ಬರೆದ ಅವನ ಐದು ಹಲ್ಲುಗಳು ಬಂದವು ಎಂಬ ಕಥೆಯಂತೆ

ಹೇಳುವುದಾದರೆ. ಆ ಶೈವ ಪಂಚಕಗಳ ಹೆಸರು ‘ಚಾರಿತ್ರ’ ಎಂದೇ ಇರುವುದು[೨೯] ಅವೇ–

೧. ವಿರೇಶ ಚಾರಿತ್ರ

೨. ಸೋಮನಾಥ ಚಾರಿತ್ರ

೩. ಸಿದ್ಧರಾಮ ಚಾರಿತ್ರ

೪. ಹರಿಶ್ಚಂದ್ರ ಚಾರಿತ್ರ

೫. ಶರಭ ಚಾರಿತ್ರ

‘ಹರಿಶ್ಚಂದ್ರ ಚಾರಿತ್ರ’ವು ಶೈವ ಪಂಚಕಗಳಲ್ಲಿ ಒಂದೆಂಬುದನ್ನು ಯಾಳವಾರರು ಸ್ಪಷ್ಟವಾಗಿ ಹೇಳಿರುವುದು ಅವರ ಸಂಶೋಧನಾ ದೃಷ್ಟಿಗೆ ಸಾಕ್ಷಿ ಎನ್ನಬಹುದು.

‘ಹರಿಶ್ಚಂದ್ರ’ನ ಕಥೆಯ ಹಿನ್ನೆಲೆಯಲ್ಲಿ ಈ ಕಾವ್ಯವು ‘ಜೀವನ ಮೌಲ್ಯಗಳನ್ನು ಹೇಗೆ ಅಭಿವ್ಯಕ್ತಿಸಿದೆ ಎಂಬುದನ್ನು ವಿವರವಾಗಿ ಚರ್ಚಿಸಿದ ಯಾಳವಾರರು ರಾಘವಾಂನ ಕೃತಿಗಳಲ್ಲಿಯೇ ಅಗ್ರಗಣ್ಯವಾದ ಈ ಕಾವ್ಯದ ಉದ್ದೇಶ “ಅತಿ ಹುಸಿವ ಯತಿ ಹೊಲೆಯ ಹುಸಿಯದಿಹ ಹೊಲೆಯನು ಉನ್ನತ ಯತಿವರನು” ಎಂದು ನಿರೂಪಿಸುವುದಾಗಿದೆ ಎಂದಿದ್ದಾರೆ. ‘ಸತ್ಯ’ ಹರಿಶ್ಚಂದ್ರ ಕಾವ್ಯದ ಮಹಾಮೌಲ್ಯ ಇದನ್ನು ನಂಬಿ ಬಾಳಿದವನು ಹರಿಶ್ಚಂದ್ರ, ಅವನ ಸುತ್ತಲು ಹಬ್ಬಿದ ಈ ಕಥಾ ಹಂದರದಲ್ಲಿ ಆ ಯುಗದ ಎಷ್ಟೋ ಮೌಲ್ಯಗಳು ಕಾಣಸಿಗುತ್ತವೆಂದು ಹೇಳಿದ್ದಾರೆ.

“ವಿಸ್ತಾರವಾದ ಅರ್ಥದಲ್ಲಿ ಜೀವನದ ಯಾವುದೇ ಅವಶ್ಯಕತೆಗಳನ್ನು ಪೂರೈಸುವ ಸಾಧನೆಗಳೆಲ್ಲ ಮೌಲ್ಯಗಳಾಗುತ್ತವೆ.[೩೦] ಎಂಬ ಅಭಿಪ್ರಾಯದಂತೆ ಹರಿಶ್ಚಂದ್ರ ಕಾವ್ಯದಲ್ಲಿ ಬೇಕಾದಷ್ಟು ಚಿರಂತನ ಮೌಲ್ಯಗಳನ್ನು ನೋಡಬಹುದು ಇವು ಆ ಕಾಲದ ಧಾರ್ಮಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಹಿನ್ನಲೆಯಲ್ಲಿ ರೂಪಿತವಾದವುಗಳು ಅವುಗಳಲ್ಲಿ ಸತ್ಯ, ದಾನ, ಗುರುಭಕ್ತಿ, ದೈವನಿಷ್ಠೆ ಕುಲಾಭಿಮಾನ, ತ್ಯಾಗ, ಪತಿಭಕ್ತಿ, ಸ್ವಾಮಿನಿಷ್ಠೆ ಮೊದಲಾದವುಗಳು ಪ್ರಮುಖವಾಗಿವೆ.

---

೨೯. ಸೋಮನಾಥ ಯಾಳವಾರರ –‘ಹರಿಶ್ಚಂದ್ರ ಕಾವ್ಯ ಮತ್ತು ಮೌಲ್ಯಗಳು’ ಪುಟ ೮–೯

೩೦. ಡಾ.ಎಚ್.ತಿಪ್ಪೇರುದ್ರಸ್ವಾಮಿ –ಸಾಹಿತ್ಯ ಮತ್ತು ಮೌಲ್ಯಗಳು ೨೦೦೬.

ಆದರೂ ಈ ಕಾವ್ಯದ ಕೇಂದ್ರ ಮೌಲ್ಯವೆಂದರೆ ಸತ್ಯ.ಈ ಕಾವ್ಯದ ನಾಯಕನು ಈ'ಸತ್ಯ'ವನ್ನೇ ಬದುಕೆಂದು ಭಾವಿಸುವನು 'ಸತ್ಯ'ದ ಪಾಲನೆಗಾಗಿ ಏನೆಲ್ಲ ಕಷ್ಟ-ಕಾರ್ಪಣ್ಯಗಳನ್ನು ಎದುರಿಸಿ ನಿಲ್ಲಬಲ್ಲವನು ಹರಿಶ್ಚಂದ್ರ. ಈ ಕಾವ್ಯದ ಉದ್ದೇಶವೂ ಇದೇ ಆಗಿದೆ. 'ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು" ಎಂದು ಕವಿ ಹೇಳಿರುವುದು ಇಲ್ಲಿ ಮುಖ್ಯವೆಂದು ತೋರಿಸುತ್ತ ಈ ಉದೇಶವನ್ನು ಪೂರೈಸಲು ಪಣತೊಟ್ಟಿರುವಂತೆ ನಿಂತ ನಾಯಕನನ್ನು ಕುಲಾಭಿಮಾನಿಯಾಗಿ, ದಾನವಂತನನ್ನಾಗಿ, ಮಹಾಶಿವಭಕ್ತನನ್ನಾಗಿ ಕವಿ ಚಿತ್ರಿಸಿರುವುದನ್ನು ವಿಶ್ಲೇಷಿಸಿ ತೋರಿಸಿರುವುದನ್ನು ಮನಗಾಣಬಹುದು.

೧೪ ಸಂಧಿಗಳಿಂದ ಕೂಡಿದ ಈ ಕೃತಿಯನ್ನು ೩ ಘಟ್ಟಗಳಲ್ಲಿ ವಿಂಗಡಿಸಿಕೊಂಡು ವಿಮರ್ಶಿಸಿದ್ದಾರೆ. ಇಲ್ಲಿಯ ಪಾತ್ರಗಳಾದ ವಶಿಷ್ಠ, ವಿಶ್ವಾಮಿತ್ರ, ಹರಿಶ್ಚಂದ್ರ, ಚಂದ್ರಮತಿ, ರೋಹಿತಾಶ್ವ, ಗಾಯಕಿಯರು, ವೀರಬಾಹುಕ ಮೊದಲಾದವರನ್ನು ಕವಿಯು ಹೇಗೆ ಚಿತ್ರಿಸಿದ್ದಾನೆಂಬುದನ್ನು ಸೊಗಸಾಗಿ ವಿಮರ್ಶಿಸಿ ತೋರಿಸಿದ್ದಾರೆ. ನಾಯಕ, ಖಳನಾಯಕರೊಂದಿಗೆ ಸಣ್ಣ-ಪುಟ್ಟ ಪಾತ್ರಗಳನ್ನೂ ರಾಘವಾಂಕ ಜೀವಂತವಾಗಿ ಸೃಷ್ಟಿಸಿರುವುದನ್ನು ಎತ್ತಿ ಹೇಳಿದ್ದಾರೆ.

ಹರಿಶ್ಚಂದ್ರ ಕಾವ್ಯದ ಗುಣ-ಶೈಲಿಯ ಬಗೆಗೂ ದೃಷ್ಟಿಹರಿಸಿರುವ ಲೇಖಕರು 'ರಾಘವಾಂಕನು ಹಳೆಯದನ್ನು ಅರಗಿಸಿಕೊಂಡು ಹೊಸದನ್ನು ನಿರೂಪಿಸಿದ ಕ್ರಾಂತಿಕಾರಿ' ಕವಿ ಎಂಬುದನ್ನು ಒಪ್ಪಿಕೊಂಡು ಅವನ ಕೃತಿಯಲ್ಲಿ ಸಾಂಪ್ರದಾಯಿಕತೆ ಹೆಚ್ಚಾಗಿ ಬೆರೆತ ನವೀನತೆಯು ಕಾಣಿಸುತ್ತದೆ. ಶೈಲಿಯ ಹಿನ್ನೆಲೆಯನ್ನು ಗಮನಿಸಿದಾಗ ಕಂಡು ಬರುವ ಅಂಶಗಳೆಂದರೆ ರಾಘವಾಂಕನುದು ಪ್ರಮುಖವಾಗಿ ನಾಟಕೀಯ ಶೈಲಿ, ಈ ಕಾವ್ಯದ ತುಂಬ ನಾಟಕೀಯತೆಯನ್ನು ಮೆರೆದಿದ್ದಾನೆ. ವಶಿಷ್ಠ - ವಿಶ್ವಾಮಿತ್ರ, ಹರಶ್ಚಂದ್ರ - ಗಾನರಾಣಿಯರ ಸಂವಾದದಲ್ಲಿ ಇದರ ಪರಿಣಾಮವನ್ನು ಕಾಣಬಹುದೆಂದು ತೋರಿಸಿದ್ದಾರೆ.

ಷಟ್ಪದಿಯ ಕವಿಯಾದ ರಾಘವಾಂಕನು ತನ್ನೆಲ್ಲ ಕಾವ್ಯಗಳನ್ನು ವಾರ್ಧಕ ಷಟ್ಪದಿಯ್ಲಲಿ ರಚಿಸಿ, ವಿಸ್ತಾರವಾದ ಕಥೆಗೆ, ಒತ್ತರಿಸಿ ಬರುವ ಕಲ್ಪನೆಗಳಿಗೆ, ನಾಟಕ ಯೋಗ್ಯವಾದ ಸಂಭಾಷಣೆಗಳಿಗೆ ಈ ಷಟ್ಪದಿ ಇಲ್ಲಿ ಶ್ರೇಷ್ಠ ಮಾಧ್ಯಮವಾಗಿರುವುದನ್ನು

ಲೇಖಕರು ಎತ್ತಿ ಹೇಳಿದ್ದಾರೆ. ಬಿಗುವಿಲ್ಲದ ಕನ್ನಡ ಭಾಷೆಯಲ್ಲಿ, ಪಾಂಡಿತ್ಯಪೂರ್ಣ ತರ್ಕ ಸೇರಿಸಿ, ಸಹಜವಾದ ಆಡುನುಡಿಯನ್ನು, ಗಾದೆ ಮಾತುಗಳನ್ನು ಉಪಯೋಗಿಸಿಕೊಂಡು ರಸವತ್ತಾದ ಸಂದರ್ಭಗಳನ್ನು ಕವಿಯು ನಿರೂಪಿಸಿದ್ದನ್ನು ವಿವರವಾಗಿ ತೋರಿಸಿರುವುದು[೩೧] ಸೋಮನಾಥ ಯಾಳವಾರರ ಅಧ್ಯಯನದ ಶ್ರಮವನ್ನು ವಿಮರ್ಶಾ ದೃಷ್ಟಿಯನ್ನು ಎತ್ತಿ ತೋರಿಸುತ್ತದೆ ಎನ್ನಬಹುದು.

೨.೨ ಗಿರಿಜಾ ಕಲ್ಯಾಣ :-

೧೯೯೬ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿತವಾಗಿರುವ ಕೃತಿಯಿದು, ಸೋಮನಾಥ ಯಾಳವಾರ ಅಧ್ಯಯನದ ವ್ಯಾಪ್ತಿಯನ್ನು ತೋರಿಸುವ ಮಹತ್ವದ ಕೃತಿಯಿದು. ೧೯೯೫ ರ ಆಗಸ್ಟ ತಿಂಗಳ ೩೧ ನೇಯ ತಾರೀಖಿನಂದು ಬೀದರ ಜಿಲ್ಲೆಯ 'ಮಾಣಿಕ ನಗರದಲ್ಲಿ ಜರುಗಿದ ಪ್ರಚಾರೋಪನ್ಯಾಸಗಳ ಉದ್ಘಾಟನಾ ಸಮಾರಂಭದಲ್ಲಿ ನೀಡಿದ ವಿಶೇಷ ಉಪನ್ಯಾಸದವಿಸ್ತಾರ ರೂಪವೇ ಈ ಕೃತಿ.

'ಗಿರಿಜಾ ಕಲ್ಯಾಣ' ಚಂಪೂ ಸಾಹಿತ್ಯ ಕೃತಿಗಳ ಮಾಲಿಕೆಯಲ್ಲಿ ವಿಶಿಷ್ಟವಾದ ಕೃತಿ. ಜೈನ ಕವಿಗಳ ಚಂಪೂ ಮಾರ್ಗದಲ್ಲಿ ಮುನ್ನಡೆದಿದ್ದರೂ ಸಹ ಅವುಗಳಿಗಿಂತ ಭಿನ್ನವಾದ ನಿಲುವನ್ನು ಧರಿಸಿ, ಕಥಾವಸ್ತು, ಪಾತ್ರರಚನೆ, ಶೈಲಿಯ ದೃಷ್ಟಿಯಿಂದ 'ನವೀನ ಕಾವ್ಯಾರಂಭ'ವನ್ನು ಸೂಚಿಸುವ ಕೃತಿಯಿದು ಎಂದು ಹೇಳುವ ಲೇಖಕರು[೩೨] ಕವಿಯು ಹೇಳುವ ಪಾವನವಿದು, ಪೊಸತಿದು ಎಂಬುದನ್ನು ಸಾರಿ ತೋರಲು ಪ್ರಯತ್ನಿಸಿದೆ ಎನ್ನುತ್ತಾರೆ.

ಹರಿಹರನಿಂದ ಶಿವಪಾರಮ್ಯವನ್ನು ಹೇಳುವ ಈ ಕೃತಿಯು ಗಿರಿಜೆಯನ್ನು ಕಥಾ ನಾಯಿಕೆಯನ್ನಾಗಿಸಿದೆ. ಕಾಳಿದಾಸನ 'ಕುಮಾರ ಸಂಭವ'ವನ್ನು ತನ್ನಲ್ಲಿ ಅರಗಿಸಿಕೊಂಡು ಲೌಕಿಕ ವಾತಾವರಣದಲ್ಲಿ ಕಾಲೂರಲು ಪರಯತ್ನಿಸಿ ಕೈಲಾಸಕ್ಕೆ ಸಾಗಿ ಹೋಗಿರುವ ಕಥಾ ಚೌಕಟ್ಟು ಗಿರಿಜಾ ಕಲ್ಯಾಣದಲ್ಲಿರುವುದನ್ನು ಕಾಣಿಸಿ ತೋರಿಸಿದ್ದಾರೆ.

---

೩೧. ಸೋಮನಾಥ ಯಾಳವಾರರ –'ಹರಿಶ್ಚಂದ್ರ ಕಾವ್ಯ ಮತ್ತು ಮೌಲ್ಯಗಳು' ಪುಟ ೪೬-೪೭

೩೨. ಸೋಮನಾಥ ಯಾಳವಾರರ – ಗೀರಿಜಾ ಕಲ್ಯಾಣ ಅರೀಕೆ ಪುಟ (೧೯೯೬)

ಇದಕ್ಕೆ ತಕ್ಕಂತ ವಾತಾವರಣಗಳನ್ನು, ಸನ್ನಿವೇಶಗಳನ್ನು, ಕಲ್ಪಿಸಿಕೊಂಡಿರುವ ಹರಿಹರನು ತಾನು ಬಾಳಿ ಬದುಕಿದ ಹಂಪೆಯ ಪರಿಸರದಲ್ಲಿ ಶಿವ ಪಾರ್ವತಿಯರ ವಿವಾಹವನ್ನು ಕಂಡು ಆ ಅನುಭವವನ್ನು ತನ್ನ ಕೃತಿಯಲ್ಲಿ ಹೇಗೆ ಕಟ್ಟಿದ್ದಾನೆ. ಎಂಬುದನ್ನು ಇಲ್ಲಿ ಮನಗಾಣಿಸಿದ್ದಾರೆ.

ಕವಿಯ ಮನದ ಆಂತರಿಕ ಒತ್ತಡವನ್ನು ನಿರೂಪಿಸುವ ಪ್ರಧಾನ ಅಂಶಗಳಲ್ಲಿ ಆತನ ಧರ್ಮ ಅತ್ಯಂತ ಮುಖ್ಯವಾದುದು. ತಾನು ಒಪ್ಪಿ ಸ್ವೀಕರಿಸುವ ಇಲ್ಲವೇ ತನ್ನ ವಂಶಸ್ಥರಿಂದ ನಡೆದು ಬಂದ ಧರ್ಮ ಹಾಗೂ ಅದರ ಮೌಲ್ಯಗಳು, ತತ್ವ-ಸಿದ್ಧಾಂತಗಳು, ಆಚಾರ – ವಿಚಾರಗಳು ಹಿರಿಮೆ-ಗರಿಮೆಗಳು ಕವಿಯ ಮನದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಹುದುಗಿಕೊಂಡಿರುತ್ತವೆ. 'ಸಮಯವೇ ಸರ್ವಸ್ವ' ವೆಂದು ನಂಬಲಾಗುತ್ತಿದ್ದ ಕಾಲದಲ್ಲಿ ಬದುಕಿದವನು ಹರಿಹರ. ಹೀಗಾಗಿ ತನ್ನ ಧರ್ಮದ ಪ್ರಸಾರಕ್ಕಾಗಿ ಇಲ್ಲವೆ ಸ್ವಧರ್ಮದ ಮಹತ್ವವನ್ನು ಹೇಳುವುದಕ್ಕಾಗಿ ಇಲ್ಲೆಲ್ಲ ಪ್ರಯತ್ನಸಿದ್ದನ್ನು ಗುರುತಿಸಬಹುದಾಗಿದೆ ಎಂದಿದ್ದಾರೆ ಲೇಖಕರು. ಧಾರ್ಮಿಕ ಪ್ರೇರಣೆಯ ಈ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಗಿರಿಜಾ ಕಲ್ಯಾಣ' ಒಂದು ಮಹತ್ವದ ಧಾರ್ಮಿಕ ಕೃತಿ' ಎಂಬುದನ್ನು ಯಾಳವಾರರು ಸ್ಪಷ್ಟಪಡಿಸಿದ್ದಾರೆ.

ಗಿರಿಜಾ ಕಲ್ಯಾಣದ ಕರ್ತೃ ಹರಿಹರದೇವನು ಶಿವಕವಿ, ಪಂಪಾ ವಿರೂಪಾಕ್ಷನ ಸಾಕ್ಷಾತ ಸುಪುತ್ರ ತಾನೆಂದು ಹೇಳಿಕೊಂಡಿರುವುದನ್ನು ಇಟ್ಟುಕೊಂಡು ಕವಿಯ ಜೀವನ ಚಾರಿತ್ರವನ್ನು, ಗುರು ಪರಂಪರೆಯನ್ನು ತಿಳಿಸುತ್ತ, ಕವಿಯ ವ್ಯಕ್ತಿತ್ವವನ್ನು ವಿವರಿಸಿದ್ದಾರೆ ಹರಿಹರನ ಕೃತಿಗಳ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸಿ, 'ಗಿರಿಜಾ ಕಲ್ಯಾಣ'ದ ಸಂಕ್ಷಿಪ್ತ ಕಥಾವನ್ನು ರಚಿಸಿದ್ದಾರೆ. ೧೦ ಆಶ್ವಾಸಗಳ 'ಮಹಾಪ್ರಬಂಧ' ವೆನಿಸಿರುವ ಇದರ ಕಥಾವಸ್ತು ಹಿಂದಿನ ಕೃತಿಗಳಿಗಿಂತ ವಿನೂತನವಾದುದು. 'ಗಿರಿಜೆಯ ಕಲ್ಯಾಣ'ದೊಂದಿಗೆ ಲೋಕ ಕಲ್ಯಾಣವನ್ನು ಸಾಧಿಸುವುದು ಇದರ ಕಥಾವಸ್ತು.

'ಗಿರಿಜೆ' ಇಲ್ಲಿ ಪ್ರಧಾನ ಪಾತ್ರವಾಗಿದ್ದು, ಅವಳ ಶಿಶುಲೀಲೆಗಳನ್ನು ಹಾಗೂ ಬಾಲ್ಯಲೀಲೆಗಳನ್ನು ಕವಿಯು ಸೊಗಸಾಗಿ ವರ್ಣಿಸುತ್ತಾನೆ 'ಭವಾನಿ'ಯಾಗಿರುವ ಅವಳು ಶಿವನಿಗಾಗಿ ಉಗ್ರ ತಪಸ್ಸು ಮಾಡುವುದನ್ನು ಕವಿ ಇಲ್ಲಿ ಭಕ್ತಿಪೂರ್ವಕವಾಗಿ ವರ್ಣಿಸುತ್ತಾನೆ ಕಾಳಿದಾಸನಿಗಿಂತ ಭಿನ್ನವಾದ ನೆಲೆಯಲ್ಲಿ 'ಗಿರಿಜೆ' ಯ ಪಾತ್ರ ರಚನೆಗೊಂಡಿರುವುದನ್ನು ಲೇಖಕರು ಇಲ್ಲಿ ಕಂಡಿರಿಸಿದದಾರೆ.

ಕಾಳಿದಾಸನ 'ಕುಮಾರ ಸಂಭವ' ಕಾವ್ಯಕ್ಕೂ 'ಗಿರಿಜಾ ಕಲ್ಯಾಣ'ಕ್ಕೂ ಕೆಲವೆಡೆ ಹೋಲಿಕೆ ಕಂಡರೂ ಅವುಗಳಲ್ಲಿ ವ್ಯತ್ಯಾಸಗಳಿರುವುದನ್ನು ಅರಿಯಬಹುದು. ಕಾಳಿದಾಸನು ಹರಿಹರ ಕವಿಗೆ ಪೂಜ್ಯನಾಗಿದ್ದಾನೆ. ಆತನ 'ರಸಾವೃತ್ತಿ' ತನ್ನ ಕಾವ್ಯದಲ್ಲಿ ನೆಲಸಲಿ ಎಂದು ಹರಿಹರ ಕೇಳಿಕೊಳ್ಳುತ್ತಾನೆ. ಹೀಗಾಗಿ ಕವಿಯು ಕಾಳಿದಾಸನ 'ಕುಮಾರ ಸಂಬವಂ' ಕಾವ್ಯವನ್ನು ಓದಿರಬಹುದೆನಿಸುತ್ತದೆ. ಆದರೆ ಅದನ್ನೇ ಅನುಸರಿಸಿದ್ದಾನೆಂಬುದು ಉಚಿತವಾದ ನಿರ್ಣಯವೆನಿಸುವುದಿಲ್ಲ ಇಬ್ಬರಿಗೂ ಕಥಾವಸ್ತು ಒಂದೇ ಮೂಲದಿಂದ ದೊರೆತಿರಬಹುದು. ಹೀಗಾಗಿ ಕಥಾ ಸಂವಿಧಾನದಲ್ಲಿ, ಉದ್ದೇಶದಲ್ಲಿ, ಘಟನಾವಳಿಗಳ ನಿರೂಪಣೆಯಲ್ಲಿ ಇಬ್ಬರದೂ ಭಿನ್ನದೃಷ್ಟಿಯಾಗುತ್ತದೆ[೩೩] ಎನ್ನುವುದನ್ನು ತಿಳಿಸಿರುವುದು ಸರಿಯಾದ ವಿಚಾರ ಎನ್ನಬಹುದು.

ಎರಡು ಕೃತಿಗಳಲ್ಲಿ ಕೃತಿಯ ಆರಂಭದಿಂದಲೇ ವ್ಯತ್ಯಾಸಗಳಿರುವುದನ್ನು ಎತ್ತಿ ತೋರಿಸುತ್ತ. 'ಕುಮಾರ ಸಂಭವದಲ್ಲಿಯ ಆರಂಭದ ೬೦ ವೃತ್ತಗಳಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿರುವ ಹಿಮವಂತನ ವರ್ಣನೆ, ಪಾರ್ವತಿ ಜನನ, ಯೌವ್ವನ, ಅವಳ ಪೂಜಾ ವಿಧಾನ ಇತ್ಯಾದಿಗಳನ್ನು ಗಿರಿಜಾ ಕಲ್ಯಾಣದಲ್ಲಿ ಐದು ಅಧ್ಯಾಯಗಳ ೧೬೨ ಪುಟಗಳ ವ್ಯಾಪ್ತಿಯಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಹಾಗೆಯೇ ಹರಿಹರನ ಕಾವ್ಯದ ಕಥಾ ವಸ್ತುವಿನಲ್ಲಿ ಹಲವು ಬೆಳವಣಿಗೆಗಳನ್ನು ಗುರುತಿಸಿದ್ದಾರೆ.

೧. ಕುಮಾರ ಸಂಭವದಲ್ಲಿಲ್ಲದ ಮೇನಾದೇವಿಯ ತಪಸ್ಸಿನ ಫಲದಿಂದ ಗಿರಿಜೆ ಜನಿಸುತ್ತಾಳೆ.

೨. ಗಿರಿಜೆ ಜನಿಸಿದಾಗ ಅವಳು ಶಿವಲಿಂಗದ ದರ್ಶನದಿಂದ ಕಣ್ಣು ಬಿಟ್ಟಳೆಂದು ಹರಿಹರ ಹೇಳುತ್ತಾನೆ. ಈ ಪ್ರಸಂಗ ಕಾಳಿದಾಸನಲ್ಲಿಲ್ಲ.

---

೩೩. ಸೋಮನಾಥ ಯಾಳವಾರರ – ಗೀರಿಜಾ ಕಲ್ಯಾಣ ಪುಟ ೧೭ ೧೯೯೬

೩. ತಾರಕಾಸುರನ ಉಪಟಳದ ಪ್ರಸಂಗದಲ್ಲಿ ದೇವತೆಗಳು ಬೃಹಸ್ಪತಿಯನ್ನು ರಾಯಬಾರಿತನಕ್ಕಾಗಿ ಕಳಿಸಿದರೆಂಬ ವರ್ಣನೆ ಹರಿಹರನಲ್ಲಿದ್ದರೆ, ಅದು ಕಾಳಿದಾಸನಲ್ಲಿಲ್ಲ.

೪. ದೇವತೆಗಳಿಗೆ ಪರಿಹಾರ ಸೂಚಿಸುವವನು 'ಬ್ರಹ್ಮ'ನೆಂದು ಕಾಳಿದಾಸ ಹೇಳಿದರೆ, ಆತನು ವಿಷ್ಣುವೆಂದು ಹರಿಹರ ಹೇಳುತ್ತಾನೆ.

೫. ಮನ್ಮಥನು ನಂದಿಯ ಕಣ್ಣು ತಪ್ಪಿಸಿ ಶಿವನ ತಪೋವನವನ್ನು ಪ್ರವೇಶಿಸಿದನೆಂದು 'ಕುಮಾರ ಸಂಭವಂ' ಹೇಳಿದರೆ, ನಂದಿಯ ನೋಟದಿಂದ ಮನ್ಮಥನ ಸೈನ್ಯವೆಲ್ಲ ನಾಶವಾಗುತ್ತದೆ ಇದರಿಂದ ಹೆದರಿದ ಮನ್ಮಥನು ಪಾರ್ವತಿಯ ಅಭಯದೊಂದಿಗೆ ಅವಳ ಪುಷ್ಪಕದ ನೆರಳಲ್ಲಿ ಅಡಗಿ ತಪೋವನ ಪ್ರವೇಶಿಸಿದನೆಂದು ಗಿರಿಜಾ ಕಲ್ಯಾಣ ತಿಳಿಸುತ್ತದೆ.

ಈ ರೀತಿಯ ಸುಮಾರು ೧೦ ವ್ಯತ್ಯಾಸಗಳನ್ನು[೩೪] ಗುರುತಿಸಿ ಹರಿಹರನ ಕಥಾ ನಿರೂಪಣೆ ಬೇರೆ ಯಾಗಿರುವುದನ್ನು ಅಧ್ಯಯನ ಪೂರ್ವಕವಾಗಿ ಎತ್ತಿ ತೋರಿಸಿದಾರೆ. ಇಲ್ಲಿ ಲೇಖಕರು. ತೌಲನಿಕವಾದ ವಿಮರ್ಶೆಯ ಹಿನ್ನೆಲೆಯಲ್ಲಿ ಅತ್ಯಂತ ಪ್ರಮುಖವಾಗುವ ಈ ಕೃತಿಯು ಸೋಮನಾಥ ಯಾಳವಾರರ ವಿಮರ್ಶಕ ದೃಷ್ಟಿಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಕಥಾವಸ್ತು, ಸನ್ನಿವೇಶ ನಿರ್ಮಾಣ, ಪಾತ್ರ ಚಿತ್ರಣಗಳಲ್ಲಿ ಹಲವಾರು ವ್ಯತ್ಯಾಸಗಳನ್ನು ಮಾಡಿಕೊಂಡಿರುವ ಹರಿಹರನು ತನ್ನ 'ಶಿವಾನುಭಾವ ದೃಷ್ಟಿ' ಲೌಕಿಕ ಪ್ರಜ್ಞೆ, ನಾಡು-ನುಡಿಗಳ ಅಭಿಮಾನವನ್ನು ತನ್ನ ಭಕ್ತಿ ಹಾಗೂ ಪ್ರತಿಭಾ ಕೌಶಲ್ಯಗಳಿಂದ 'ಗಿರಿಜಾ ಕಲ್ಯಾಣ'ವನ್ನು ಉತ್ತಮ ಕೃತಿ ಯಾಗಿಸಿದ್ದನ್ನು ಯಾಳವಾರರು ಇಲ್ಲಿ ಮನಗಾಣಿಸಿದ್ದಾರೆ. ಅಂತೆಯೇ ಎಂ.ಎಂ. ಹುಡೇದರು – 'ಡಾ.ಸೋಮನಾಥ ಯಾಳವಾರರ 'ಗಿರಿಜಾ ಕಲ್ಯಾಣ' ವಿಷಯದ ಉಪನ್ಯಾಸ ಶ್ರೀ ಸಾಮಾನ್ಯನಿಗೂ ತಿಳಿಯುವ ತಿಳಿಯಾದ ಶೈಲಿಯಲ್ಲಿ ನಿರೂಪಣೆಯಾಗಿದೆ. ಶಿವಪಾರ್ವತಿಯರ ಪಾತ್ರ ಚಿತ್ರಣ ಮನಂಬುಗುವಂತೆ ಚಿತ್ರಿತವಾಗಿದೆ. ಹರಿಹರ ಕವಿಯನ್ನಂತೂ ಶ್ರೀ ಸಾಮಾನ್ಯರ ಮನೋಪಟಲದಲ್ಲಿ ಶಾಶ್ವತವಾಗಿ ನೆಲೆಯೂರುವಂತೆ ವಿಷಯ ನಿರೂಪಿಸಿದ್ದಾರೆಂದು[೩೫] ತಿಳಿಸಿರುವುದು ಯಥೋಚಿತವಾಗಿದೆ ಎನ್ನಬಹದುದು.

---

೩೪. ಸೋಮನಾಥ ಯಾಳವಾರರ –ಗೀರಿಜಾ ಕಲ್ಯಾಣ ಪುಟ ೧೯ ೧೯೯೬

೩೫. ಎಂ.ಎಂ.ಹುಡೇದ – ಗೀರಿಜಾ ಕಲ್ಯಾಣ ಪರಿಶೀಲನಕಾರರ ಅನಿಸಿಕೆ ಪುಟ ೪೭

೨.೩ ಶರಣ ಸಿರಿ :-

ಸೋಮನಾಥ ಯಾಳವಾರರ ವಿಮರ್ಶಾ ಕೃತಿಗಳಲ್ಲಿ ಅತ್ಯಂತ ಪ್ರಮುಖವಾದುದು ಈ ಶರಣಸಿರಿ. ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು ಗುಲಬರ್ಗಾದವರಿಂದ ೨೦೦೬ ರಲ್ಲಿ ಪ್ರಕಟಗೊಂಡಿರುವ ಕೃತಿಯಿದು. ೧೪ ವಿವಿಧ ವಿಷಯಗಳ ವೈಚಾರಿಕ ಲೇಖನಗಳಿರುವ ಗಮನಾರ್ಹ ಕೃತಿ. 'ವಚನ ಸಾಹಿತ್ಯ'ವನ್ನು ಕುರಿತ ಸಾಂಪ್ರದಾಯಿಕ ಅಧ್ಯಯನಕ್ಕಿಂತ ಭಿನ್ನವಾದ ನೆಲೆಯಲ್ಲಿ ಆಲೋಚಿಸಿದ ಲೇಖನಗಳ ಸಂಗ್ರಹವಿದು.

ಡಾ.ಸೋಮನಾಥ ಯಾಳವಾರರು ಹೇಳಿರುವಂತೆ – 'ಈಗ ವಚನ ಸಾಹಿತ್ಯವನ್ನು ಕುರಿತು ಸಾಕಷ್ಟು ಅಧ್ಯಯನ ನಡೆದರೂ ಸಹ ಅದರಲ್ಲಿ ಸಂಗ್ರಹ, ಸಂಪಾದನೆ, ಅರ್ಥವಿವರಣೆ ಹಾಗೂ ವಿಶ್ಲೇಷಣೆಗಳೇ ಹೆಚ್ಚಾಗಿವೆ. ಸಾಂಪ್ರದಾಯಿಕ ನೋಟಗಳುಳ್ಳ ಧಾರ್ಮಿಕ ಹಿನ್ನೆಲೆಯೊಂದಿಗೆ, ಅವುಗಳಲ್ಲಿ ಸಮಾಜೋ–ಧಾರ್ಮಿಕ ಹಾಗೂ ಆರ್ಥಿಕ ಒಳನೋಟಗಳನ್ನು ಗುರುತಿಸಬಹುದಾಗಿದೆ. ಈ ದೃಷ್ಟಿಯಲ್ಲಿ ನಾನು ಆಗಾಗ ಬರೆದು ಕೆಲವು ಕೃತಿಗಳಲ್ಲಿ ಪ್ರಕಟ ಪಡಿಸಿರುವ ಬಿಡಿ ಲೇಖನಗಳನ್ನು ಒಂದೆಡೆ ಸೇರಿಸಿ ಈಗ 'ಶರಣ ಸಿರಿ'ಯಲ್ಲಿ ಸಂಗ್ರಹಿಸಿದ್ದೇನೆ ಎಂದಿರುವುದನ್ನು[೩೬] ಇಲ್ಲಿ ಕಾಣಬಹುದು.

ಆರಂಭದ ಲೇಖನ, 'ಶರಣರ ಕಾಯ ಮೀಮಾಂಸೆ'ಯು ಸೋಮನಾಥರ ಸಂಶೋಧನಾ ದೃಷ್ಟಿಯುಳ್ಳ ಚಿಂತನ ಪರ ಲೇಖನವಾಗಿದೆ. ಆಚಾರ ಪ್ರಧಾನವಾದ ಶರಣ ಧರ್ಮ, ಆಚಾರವಿಚಾರಗಳ ಸಮನ್ವಯತೆ ತರಲು ಎಂಥ ಪ್ರಯತ್ನ ಮಾಡಿತು ಆ ನೆಲೆಯಲ್ಲಿ ಮೂಡಿ ನಿಂತ ಭಕ್ತಿಯನ್ನು ಬೆಳೆಸಲು ವ್ಯಕ್ತಿಯ 'ಕಾಯ' ಎಷ್ಟು ಮಹತ್ವ ಪೂರ್ಣವಾದುದೆಂಬುದನ್ನು ಬಸವಾದಿ ಶರಣರು ಯಾವ ನೆಲೆಯಲ್ಲಿ ಚಿಂತನಗೈದರು ಎಂಬುದನ್ನು ಈ ಲೇಖನವು ತಿಳಿಯ ಪಡಿಸುತ್ತದೆ. 'ಭಕ್ತಿ ಎಂಬ ನಿಧಾನವ ಸಾಧಿಸುವರೆ ಶಿವ ಪ್ರೇಮವೆಂಬಂಜನವ ನೆಚ್ಚಿಕೊಂಬುದು' ಇದಕ್ಕಾಗಿ ಭಕ್ತನ ಕಾಯ ಬಾಳೆಯ ಕಂಬದಂತಿರಬೇಕೆನ್ನುತ್ತಾರೆ ಶರಣರು.

---

೩೬. ಶರಣಸಿರಿ ಅರಿಕೆಯಲ್ಲಿ ಪುಟ v ೨೦೦೬

ವ್ಯಕ್ತಿಯ ಭಕ್ತಿ ಸಾಧನೆಯ ಮಹಾ ಪಥವೇ ಕಾಯ. ಶರಣಂಗೆ ಭಕ್ತಿ ಕಾಯವಿಲ್ಲದನಕ್ಕ ಕೂಡಲ ಸಂಗಯ್ಯನರಿವ ಪರಿಯಂತೋ' ಎಂದು ಕೇಳುವ ಬಸವಣ್ಣನವರ ವಿಚಾರ ವಿರಿಸಿಕೊಂಡು 'ಕಾಯ'ದ ಬಗೆಗೆ ಆಳವಾಗಿ ಚಿಂತಿಸಿ ಲೇಖನ ಬರೆದಿದ್ದಾರೆ ಯಾಳವಾರರು . 'ಕಾಯ'ವೆಂಬುದು ಶರಣರ ದೃಷ್ಟಿಯಲ್ಲಿ ಶಿವನ ನೆಲೆ. ಅದು ಪ್ರತಿಯೊಬ್ಬರ ಬದುಕಿನ ಧರ್ಮ ಕ್ಷೇತ್ರ. ಮಾನವನ ಎಲ್ಲ ಸಾಕ್ಷಾತ್ಕಾರಗಳ ಮೂಲ ಅವಶ್ಯಕತೆ, ತಾನೇ ಶಿವನೆಂಬ ನೆಲೆಗಾಣಲು 'ದೇಹ'ಮುಖ್ಯವಾದ ನೆಲೆ ಅದು ವಿಕಾರಗೊಳ್ಳದಂತೆ ಕಾಪಾಡಿಕೊಳ್ಳಬೇಕೆಂಬುದನ್ನು ಶರಣ ಚಿಂತನೆಯ ಹಿನ್ನೆಲೆಯಲ್ಲಿ ವಿವರಿಸುತ್ತಾರೆ.[೩೭]

ಕಾಯದ ಕಳವಳ ವಿಪರೀತವಾಗಿರುವುದನ್ನು ಅನೇಕ ವಚನದ ಸಾಲುಗಳ ಹಿನ್ನೆಲೆಯಲ್ಲಿ ಕಾಣಿಸುವ ಲೇಖಕರು 'ಕಾಯದಲ್ಲಿ ಕಳವಳವೆಡೆಗೊಂಡ ಬಳಿಕ ಅರಿವಿನಲ್ಲಿ ಮಾಣದು ಕಾಯದ' ಸಡಗರದ ಸಂಭ್ರಮದ ಬಲೆಯಲಿ ಸಿಲುಕಿಸದಿರು' ಎಂಬಂತಹ ವಚನಗಳನ್ನು ಈ ವಿಚಾರಕ್ಕೆ ಬಳಸಿಕೊಂಡಿರುವರು ಈ ಕಾಯದ ಕಳವಳವನ್ನು ಅತ್ಯಂತ ಸರಳವಾಗಿ ತಪ್ಪಿಸುವ ಮಾರ್ಗವನ್ನು ಬಸವಣ್ಣನವರು – 'ಕಾಯದ ಕಳವಳವು ದಾಸೋಹದ ಮುಖದಲ್ಲಿ ಅಲ್ಲದೆ ಹರಿಯದು'ಎಂದಿದ್ದಾರೆ ಎಂದು ಹೇಳುತ್ತ ಮಾರ್ಗ ಸೂಚಿಸುವ ಪರಿ ಇಷ್ಟವಾಗುತ್ತದೆ.

ಕಾಯದ ಬಗೆಗೆ ವಿಪರೀತ – ಭಾವನೆಗಳನ್ನು ಹೊಂದಿದ್ದ ಹಿಂದಿನ, ಜೈನ ಹಾಗೂ ಶೈವ ದಾರ್ಶನಿಕರ ಅಭಿಪ್ರಯಗಳಾದ 'ಅತಿ ನಿರಾಕರಣೆ' ಹಾಗೂ 'ಸ್ವೀಕರಣೆ'ಗಳನ್ನು ಶರಣರು ಒಪ್ಪುವುದಿಲ್ಲವೆಂಬುದ್ನನು ಎತ್ತಿತೋರಿಸುತ್ತಾರೆ – 'ಕಾಯಕರ್ರನೆ ಕಂದಿದರೇನು ? ಹಾಗೂ 'ಅಮೇಧ್ಯದ ಹಡಿಕೆ' ಮೂರ್ತದ ಕುಡಿಕೆ' ಎಂಬಂತಹ ನುಡಿಗಳು ಕೇವಲ ಸಾಂದರ್ಭಿಕವಾಗಿ ಬಂದಂತಹುಗಳು. ಆದರೆ ಅವು ದೇಹದ ನಿರಾಕರಣೆಯನ್ನು ಹೇಳುವುದಿಲ್ಲ, ಅದರಲ್ಲಿ ತುಂಬಿದ್ದ ಕಾಮವನ್ನು ಬೇರೆಡೆ ತಿರುಗಿಸಲು ಪ್ರಯತ್ನಿಸುವ ಸಂದರ್ಭಗಳಾಗುತ್ತವೆ ಅಷ್ಟೇ[೩೮] ಎಂಬ ಮಹತ್ವ ಮಾತನ್ನು ಹೇಳುತ್ತಾರೆ ಇಲ್ಲಿ.

---

೩೭. ಡಾ. ಸೋಮನಾಥ ಯಾಳವಾರರ – ಶರಣಸಿರಿ ಕಾಯಮೀಮಾಂಸೆ ೨ ೨೦೦೭

೩೮. ಡಾ. ಸೋಮನಾಥ ಯಾಳವಾರರ – ಶರಣಸಿರಿ ಕಾಯಮೀಮಾಂಸೆ ಪುಟ ೩ ೨೦೦೭

ದೇಹವು ಶ್ರೇಷ್ಠವಾದುದು ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು. – 'ಕಾಯದಿಂದ ಲಿಂಗ ದರುಶನ, ಕಾಯದಿಂದ ಜಂಗಮದರುಶನ. 'ಕಾಯದಿಂದ ಪ್ರಸಾದ ಸಂಪತ್ತು' ಅಷ್ಟೇಅಲ್ಲ ಆ ಕಾಯದಲ್ಲಿ ಚೆನ್ನಸಂಗಯ್ಯ ನಿಮ್ಮನ್ನು ಕಂಡೆನೆಂದು 'ಬಸವಣ್ಣ ಹೇಳುವಲ್ಲಿ ಅದರ ಮಹತ್ವವನ್ನು ತಿಳಿಯಬಹುದೆನ್ನುತ್ತಾರೆ ಲೇಖಕರು ಕಾಯವು ದೇವನ ವಾಸಸ್ಥಾನವಾಗಿರುವುದರಿಂದ ಅದನ್ನು ಶುದ್ಧವಾಗಿರಿಸಿಕೊಳ್ಳಬೇಕು. ಅತಿಯಾಗಿ ಅದನ್ನೇ ನೆಚ್ಚಿಕೊಳ್ಳಬಾರದು. ಇಂದಿನ ಜಾಹಿರಾತು ಪ್ರಪಂಚದಲ್ಲಿ ಕಾಯ ರಂಗಾಗಿಸಲು, ಕಾಯದ ಅಂಗಗಳನ್ನು ಬೆಳಗಿಸಲು ನೂರೆಂಟು ಪದಾರ್ಥಗಳನ್ನು ಬಳಸುವ ಸೂಚನೆಗಳಿವೆ ಇದನ್ನು ಆಲೋಚಿಸಿದರೆ ಶರಣರ ನುಡಿಗಳು ನಮಗೆ ಮುಜುಗರವನ್ನುಂಟು ಮಾಡುವದಿಲ್ಲವೇ? ಎನ್ನುವ ಯಾಳವಾರರು ಶರಣರು ಈ ಚಿಂತನೆಯ ಮೂಲಕ, ಸರ್ವಾಂಗ ಕ್ರಿಯಾ ಶೀಲತೆಯನ್ನು ತಂದು ವಿವೇಚನೆಗೊಳಪಡಿಸುವ ಮೂಲಕ ವೈಜ್ಞಾನಿಕ ನೆಲೆಯಲ್ಲಿ ಆಲೋಚಿಸಲು ದಾರಿ ಮಾಡಿದ್ದಾರೆ ಎಂದು ಹೇಳಿರುವುದು[೩೯] ಸರಿಯಾದ ಆಲೋಚನೆ ಎನ್ನಬಹುದು. ಅಂತೆಯೇ ಡಾ. ವೀರಣ್ಣ ದಂಡೆಯವರು ಡಾ. ಯಾಳವಾರರ ಅವರು 'ಕಾಯ ಮೀಮಾಂಸೆ' ಎಂಬ ಲೇಖನದಲ್ಲಿ ತಮ್ಮ ಶೋಧದ ಗುಣವನ್ನು ಮೆರೆದಿದ್ದಾರೆ[೪೦] ಎಂದು ತಿಳಿಸುತ್ತಾರೆ.

'ವಚನಗಳಲ್ಲಿ ದೇವರ ಪರಿಕಲ್ಪನೆ':–

ಎಂಬ ಲೇಖನದಲ್ಲಿ ಬಹುದೇವತೆಗಳ ಆರಾಧನೆಯನ್ನು ವಿರೋಧಿಸುವ ಶರಣರು 'ಏಕದೇವೋಪಾಸಕರು' ಎಂಬುದನ್ನು ವಚನಗಳ ಆಧಾರದ ಹಿನ್ನೆಲೆಯಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ ಇಂದಿನ ಸಂದರ್ಭದಲ್ಲಿ 'ಶರಣರ ಪರಿಕಲ್ಪನೆಯ ದೇವರು ಮತ್ತು ಅದರ ವಿಚಾರಗಳು ಎಷ್ಟರಮಟ್ಟಿಗೆ ಪ್ರಸ್ತುತ? ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಚಿಂತನೆ ಮಾಡುತ್ತ ಶರಣರ ಸರ್ವಾಂಗೀಣ ಕ್ರಾಂತಿಯ ಹಿನ್ನೆಲೆಯಲ್ಲಿ ಚರ್ಚಿಸುತ್ತ, ಅವರ ವೈಚಾರಿಕ ದೃಷ್ಟಿಯನ್ನು ಇಲ್ಲಿ ಕಂಡಿರಿಸಿದ್ದಾರೆ.

---

೩೯. ಡಾ. ಸೋಮನಾಥ ಯಾಳವಾರರ – ಶರಣಸಿರಿ ಕಾಯಮೀಮಾಂಸೆ ಪುಟ ೫ ೨೦೦೭

೪೦. ಡಾ. ವೀರಣ್ಣ ದಂಡೆ – ಶರಣಸಿರಿ ಮುನ್ನುಡಿಯಲ್ಲಿ ಪುಟ iii

ಸಾಕಾರ ಪೂಜೆಯ ಮೂಲಕ ನಿರಾಕಾರದತ್ತ ಸಾಗಬೇಕಾಗಿರುವುದರಿಂದ ಶರಣಧರ್ಮದಲ್ಲಿ ಆರಂಭದ ಹಂತದಲ್ಲಿ ಹಲವು ಕಡೆ ಸಾಕಾರ ಶಿವನ ಕಲ್ಪನೆ ಬಂದಿದೆ, ಪ್ರಾಚೀನ ಪುರಾಣಗಳಲ್ಲಿ ವರ್ಣಿತ ಶಿವನಿಗಿಂತ ವಚನಗಳು ನಿರೂಪಿಸಿದ ಶಿವನ ವರ್ಣನೆಯು ಹೆಚ್ಚು ಪ್ರಭಾವಿತವಾಗಿದ್ದು, ಇಲ್ಲಿ ಈ ಪರಮಾತ್ಮನ ಪರಿಕಲ್ಪನೆಯು ಸಾಧಕನ ಆತ್ಮವಿಕಾಸದ ಹಂತವನ್ನು ಅವಲಂಬಿಸಿರುವುದನ್ನು ಸ್ಪಷ್ಟಪಡಿಸುತ್ತಾರೆ.[೪೧] 'ಜೀವಂಗೆ ಜೀವವಾದವನೇ ಪರಮಾತ್ಮ' ನೆಂಬುದನ್ನು ತಿಳಿಸುತ್ತ, ದೇವನೊಬ್ಬ ನಾಮ ಹಲವು ಎನ್ನುವಂತೆ ಆ ದೇವನಿಗೆ ಬಸವಣ್ಣ 'ಕೂಡಲಸಂಗಂದೇವ' ಎಂದು ಕರೆದರೆ ಪ್ರಭುದೇವ 'ಗುಹೇಶ್ವರನೆಂದು' ಅಕ್ಕಮಹಾದೇವಿ 'ಚನ್ನಮಲ್ಲಿಕಾರ್ಜುನ' ಎಂದು ಕರೆಯುವುದನ್ನು ವಿವರಿಸುತ್ತಾರೆ.

ಇದನ್ನು 'ಪರವಸ್ತು'ವೆಂದು ವಚನಕಾರರು ಗುರುತಿಸಿರುವುದನ್ನು ತಿಳಿಸುತ್ತ, ಯಾವುದು ಪಂಚೇಂದ್ರಿಯಗಳಿಗೆ ಒಳಗಿನ ಶಕ್ತಿಯಾಗಿ ಆಜ್ಞೆ ಮಾಡುತ್ತದೆಯೋ ಅದೇ ಪರವಸ್ತು, ಅದನ್ನೇ ಶರಣರು 'ಪ್ರಾಣದ ಪ್ರಾಣ' ಕಣ್ಣಿನ ಕಣ್ಣು, ಕಿವಿಯ ಕಿವಿ, ಎಂದಿರುವುದನ್ನು ತೀಳಿಸುತ್ತಾರೆ.

'ಗುಹೇಶ್ವರ'ನ ನಿಲುವು ಮಾತಿನ ಮಾತಿಗೆ ಸಿಲುಕುವುದೇ ಎನ್ನುವ ಶರಣರು ಮಾತಿನ ಮೂಲಕವೇ ಅದನ್ನು ತೋರಿಸಲು ಪ್ರಯತ್ನಿಸುವುದನ್ನು ಅರಿಯಬಹುದು. 'ಬೆಳಗಿನೊಳಗಣ ಮಹಾಬೆಳಗು' 'ನೆಲದ ಮರೆಯ ನಿಧಾನದಂತೆ' ಭಾವದ ಮರೆಯಬ್ರಹ್ಮ' ಎಂದೂ ಅದರ ಸ್ವರೂಪ ಹೇಳಲು ಪ್ರಯತ್ನಿಸಿರುವುದನ್ನು ಅರುಹುತ್ತಾರೆ. ನಂತರದ ವಿಚಾರಗಳಲ್ಲಿ ದೇವನಿಗೆ ಯಾವುದೂ ಹೆಸರಿಲ್ಲ 'ಆತನಿಗೆ ಸಂಸಾರದ ಕುರುಹು' ಇಲ್ಲವೆಂದು ಸ್ಪಷ್ಟಪಡಿಸಿ ಪೌರಾಣಿಕ ಕಲ್ಪನೆಯ ದೇವರುಗಳ ಅಸ್ತಿತ್ವವನ್ನು ಹಿಡಿದು ಅಲ್ಲಾಡಿಸುತ್ತಾರೆ. 'ಬೀಜದೊಳಗಣ ವೃಕ್ಷದಂತೆ ಆದೇವನು ಶರೀರದೊಳಗೆ ಆತ್ಮವನ್ನು ಕಾಣದಂತಿರಿಸಿದ್ದಾನೆಂಬುದನ್ನು ಜೇಡರ ದಾಸಿಮಯ್ಯ ತಿಳಿಸುತ್ತಾನೆ. ಈ ಹಿನ್ನೆಲೆಯಲ್ಲಿ ಶರಣರ ಸಮನ್ವಯ ದೃಷ್ಟಿಯನ್ನು ಗುರುತಿಸುವ ಲೇಖಕರು ಅವರಿತ್ತಿರುವ 'ಇಷ್ಟಲಿಂಗ' ಸ್ವರೂಪದಲ್ಲಿ ವೈಜ್ಞಾನಿಕ ವಿವೇಚನೆಯನ್ನು ಮಾಡಿದ್ದಾರೆ[೪೨] ಎನ್ನುತ್ತಾರೆ.

---

೪೧. ಡಾ. ಸೋಮನಾಥ ಯಾಳವಾರರ - ಶರಣಸಿರಿ ಪುಟ ೨ ೨೦೦೭

೪೨. ಡಾ. ಸೋಮನಾಥ ಯಾಳವಾರರ - ಶರಣಸಿರಿ ಪುಟ ೧೭ ೨೦೦೭

ಇದು ದೇವರನ್ನು ಹೊರಗಡೆಯಲ್ಲಿ ಹುಡುಕಬಾರದು ಅದು ಯಾವುದೋ ರೂಪದ ವ್ಯಕ್ತಿಯಲ್ಲ; ಸೃಷ್ಟಿಯ ಚರಾಚರಗಳನ್ನು ವ್ಯಾಪಿಸಿರುವ, ಆದರೂ ಅದಕ್ಕೆ ಅತೀತವಾಗಿರುವ ವಿರಾಟ್ ಶಕ್ತಿ' ಎಂದು ಕಂಡಿರುವುದನ್ನು ವಿವರವಾಗಿ ಬಿಚ್ಚಿ ತೋರಿಸಿದ್ದಾರೆ ಲೇಖಕರು ಇಲ್ಲಿ. ಒಟ್ಟಿನಲ್ಲಿ ಹೇಳಬಹುದಾದ ಮಾತೆಂದರೆ ಮಾನವ ಸಂಬಂಧದ ಚಿಂತನೆಯಲ್ಲಿ ಹೊಸ ಜೀವನ ಕ್ರಮವನ್ನು ರೂಪಿಸಿಕೊಳ್ಳಲು, ಹೊಸ ಧಾರ್ಮಿಕ ಪದ್ಧತಿಯನ್ನು ಶರಣರು ಜಾರಿಗೆ ತಂದರು. ಆ ಮಾರ್ಗದಲ್ಲಿಯೇ ಅವರು ಕಂಡು ಕೊಂಡಿರುವ, ದೇವರ ಪರಿಕಲ್ಪನೆಯೂ ಚಿಂತನಾತ್ಮಕವಾಗಿ ಮೂಡಿಬಂದಿರುವುದು ಗಮನಾರ್ಹ ಸಂಗತಿ ಎನ್ನಬಹದು.

'ವಚನಗಳಲ್ಲಿ ಅಳತೆ ಮಾಪನಗಳು ಹಾಗೂ ಕಾಲನಿರ್ಣಯ'ಎಂಬ ಲೇಖನವು ಸಂಶೋಧನಾತ್ಮಕ ಶೈಲಿಯ ಗುಣಹೊಂದಿದ್ದು ತುಂಬಾ ಮಹತ್ವದ್ದೆನ್ನಬಹುದು. ಇಂದಿನ ಆಧುನಿಕ ವಿಜ್ಞಾನದ ಸಾಧನೆ ಸಲಕರಣೆಗಳಿಂದ ಅವುಗಳನ್ನು ತೂಗಿ ತೂಗಿ ನೋಡಿದಾಗಲೂ ಅವುಗಳ ಅಸ್ತಿತ್ವ ತುಂಬಾ ಘಟ್ಟಿಯಾಗಿ ಉಳಿದು ನಿಲ್ಲುವುದನ್ನಿಲ್ಲಿ ಕಾಣಬಹುದು.

ಬ್ರಹ್ಮ, ವಿಷ್ಣು, ರುದ್ರರಿಂದ ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಂಗಳು ಜನಿಸಿದವು. ಈ ಮೂರು ಲೋಕಂಗಳ ಮಧ್ಯದಲ್ಲಿ ಸಚರಾಚರ ಹೆಣ್ಣುಗಂಡು ನಾಮ ರೂಪು ಕ್ರಿಯಾದಿ ಸಕಲ ವಿಸ್ತಾರವಾಯಿತು. ನಂತರ ೧೪ ಲೋಕಗಳ ಕಲ್ಪನೆ ಶರಣರಲ್ಲಿ ಅದ್ಭುತವಾದುದು ಎನಿಸುತ್ತದೆ. ಭೂಲೋಕವನ್ನು ಆಧಾರವಾಗಿಟ್ಟುಕೊಂಡು ಈ ಲೋಕಗಳ ಅಂತರವನ್ನು ತಿಳಿಸುವ ಚನ್ನಬಸವಣ್ಣನ ಕಲ್ಪನೆ ರೋಮಾಂಚನವನ್ನುಂಟು ಮಾಡುತ್ತದೆ. ಭೂಮಿಗೆ ತೊಂಬತ್ತೆಂಟು ಸಾವಿರ ಯೋಜನದುದ್ದದಲ್ಲಿ ಸಿಡಿಲು, ಮಿಂಚು, ಮುಗಿಲುಗಳಿವೆಯಂತೆ. ಅದಕ್ಕಿಂತ ಮೇಲೆ ಒಂದು ಲಕ್ಷ ಯೋಜನೆ ದೂರದಲ್ಲಿ ಬ್ರಹಸ್ಪತಿ. ಆತನಿಂದ ಮೂವತ್ತೆರಡು ಲಕ್ಷ ಯೋಜನೆ ಮೇಲೆ ಶುಕ್ರ – ಆನಂತರ ಶನಿ, ಆದಿತ್ಯ, ರಾಹು–ಕೇತು, ನಕ್ಷತ್ರಗಳು, ಮಹಾಋಷಿಗಳು, ತ್ರಿವಿಧದೇವರು, ದೇವರುಗಳು ದ್ವಾದಶಾದಿತ್ಯರು, ಮಹಾಸೇನರು, ಮಹಾಮುನಿಗಳು, ಮಹಾಲೋಕವಿದೆ (ಚ.ಬ.ವ೧೪೫೮) ವಿಶ್ವದ ಈ ಎಲ್ಲ ಲೋಕಗಳ ಅಳತೆಯನ್ನು 'ಯೋಜನೆ'ಯ ಲೆಕ್ಕದಲ್ಲಿ ವಿವರಿಸಿದನ್ನು ಶರಣರ

ವೈಜ್ಞಾನಿಕ ದೃಷ್ಟಿ ಎನ್ನುವ ಲೇಖಕರು ಸೊಗಸಾಗಿ ವಿವರಿಸಿರುವ ಈ'ಯೋಜನೆ' ಎಂಬುದು ದೂರದ ಅಳತೆಯ ಒಂದು ಪ್ರಮಾಣವಾಗಿದ್ದು ಕನ್ನಡ ನಿಘಂಟಿನಲ್ಲಿ ಸು. ೧೨ಮೈಲು ದೂರವೆಂದು ಅರ್ಥೈಸಲಾಗಿರುವುದನ್ನು ತಿಳಿಸುತ್ತ, ಆಗ ಬಸವಕಲ್ಯಾಣದ ವಿಸ್ತೀರ್ಣ ೧೨ ಯೋಜನ ಪರಿಪ್ರಮಾಣದಲ್ಲಿತ್ತು. ಎಂದು ವಚನವೊಂದರ ಉಲ್ಲೇಖ ನೀಡಿದ್ದಾರೆ ಇಲ್ಲಿ[೪೩] 'ಯೋಜನ'ದ ಅರ್ಥವು ಸ್ಪಷ್ಟವಾಗುತ್ತದೆ. ಇಂದು ನಮ್ಮ ವಿಜ್ಞಾನ ಹೇಳಿರುವ 'ಗೆಲಾಕ್ಷಿ' ಹಾಗೂ ಒಂದು 'ಜ್ಯೋತಿ ವರ್ಷ'ದ ವೈಜ್ಞಾನಿಕತೆಯ ಮೂಲವನ್ನು ನಾವು 'ಯೋಜನ' 'ಮಾಪನ'ದ ಹಿನ್ನೆಲೆಯಲ್ಲಿ ಅರಿಯಬಹುದೆಂದು ತಿಳಿಸಿರುವುದು ಕುತೂಹಲಕಾರಿ ಸಂಗತಿಯಾಗಿದೆ.

ಭೂಮಿಯ ವಿಸ್ತೀರ್ಣವನ್ನು 'ಪಂಚ ಶತಕೋಟಿ' ಯೊಜನವೆಂದೂ, ಪ್ರಂಪಂಚದಲ್ಲಿರುವ ಜೀವರಾಶಿಗಳನ್ನು' ಎಂಭತ್ತು ನಾಲ್ಕು ಲಕ್ಷ' ವೆಂದು ಅಳೆದು ಹೇಳಿರುವುದು ಅವುಗಳಿಗೆ ಜೈನ ಕಾವ್ಯಗಳಲ್ಲಿ ಉಲ್ಲೇಖಿತ ಸಂಗತಿಗಳನ್ನು ತೌಲನಿಕವಾಗಿ ಗಮನಿಸಿರುವುದು ಡಾ. ಸೋಮನಾಥ ಯಾಳವಾರರ ತೌಲನಿಕ ವಿಮರ್ಶೆಯ ವ್ಯಾಪ್ತಿಯನ್ನು ಅರುಹುತ್ತದೆ. ಅಂತೆಯೆ 'ಕಾಲಗಣನೆ'ಯ ದೃಷ್ಟಿಯಿಂದಲೂ ಶರಣರು ತುಂಬಾ ವೈಚಾರಿಕವಾಗಿ ವಿವೇಚನೆ ಮಾಡಿರುವುದನ್ನು ಸಕಾರಣಗಳ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ.[೪೪] ಇದನ್ನು ಕೂಲಂಕುಶವಾಗಿ ಗಮನಿಸಿರುವ ವಿದ್ವಾಂಸರು, ಮುನ್ನುಡಿಯಲ್ಲಿ ಯಾಳವಾರ ಅವರು ಬರೆದ 'ವಚನಗಳಲ್ಲಿ ದೊರೆಯುವ ಕಾಲ ನಿರ್ಣಯ ಮತ್ತು ಅಳತೆ ಮಾಪನ'ಗಳ ಸಂಗತಿಯನ್ನು ಕುರಿತ ಲೇಖನ ಅವರ ಸಂಶೋಧನಾ ದೃಷ್ಟಿಗೆ ಸಾಕ್ಷಾಯಾಗಿದೆ. ನಾವು ಸಾಮಾನ್ಯವಾಗಿ ಘಳಿಗೆ, ಘಳ ಇತ್ಯಾದಿ ಪದಗಳನ್ನು ಬಳಸುವುದನ್ನು ಕಾಣುತ್ತೇವೆ ಆದರೆ ಹನ್ನೆರಡನೆಯ ಶತಮಾನದಲ್ಲಿ ಈ ಪದಗಳೆಲ್ಲ ಹೀಗೆ ಬಳಕೆಯಾಗುತ್ತಿದ್ದವು. ಜೈನ ಧರ್ಮದ ಇಂತಹ ಮಾಪನಗಳಿಗೂ ಶರಣರ ಮಾಪನಗಳಿಗೂ ಏನು ವ್ಯತ್ಯಾಸ ಕಾಣುತ್ತದೆ ಎಂಬುದನ್ನು ಯಾಳವಾರ ಅವರು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಶರಣರ ಕಲ್ಪನೆಯೇ ಆಗಿನ ಕಾಲದ ಸಮಾಜದ ಕಲ್ಪನೆಯಾಗಿರುವಂತಿದೆ.

---

೪೩. ಡಾ. ಸೋಮನಾಥ ಯಾಳವಾರರ – ಶರಣಸಿರಿ ಪುಟ ೧೮ ೨೦೦೭
೪೪. ಡಾ. ಸೋಮನಾಥ ಯಾಳವಾರರ – ಶರಣಸಿರಿ ಪುಟ ೨೧,೨೨,೨೩ ೨೦೦೭

ಒಂದು ಘಳಿಗೆ ಎಂದರೆ ಅದು ೨೪ ಸೆಕೆಂಡುಗಳ ಒಂದು ಮಾಪನ ಎಂಬುದು ಈ ಲೇಖನದಿಂದ ನನ್ನ ಗಮನಕ್ಕೆ ಬಂದ ಸಂಗತಿ[೪೫] ಎಂದು ಹೇಳಿರುವುದನ್ನು ನಾವಿಲ್ಲಿ ಮನಗಾಣಬಹುದು.

ಇಲ್ಲಿಯ **'ಶರಣ ಸಂಸ್ಕೃತಿ – ನಗರೀಕರಣ'** ಎಂಬ ಲೇಖನವು ಹೊಸ ದೃಷ್ಟಿಯಿಂದ ಕೂಡಿದ, ಒಳಶಿಸ್ತಿನ ಅಧ್ಯಯನದ ಫಲಶೃತಿಯಾಗಿದೆ ಆಧುನಿಕ ಬದುಕಿನ ಹಿನ್ನೆಲೆಯಲ್ಲಿ 'ವಚನ ಸಂಸ್ಕೃತಿ'ಯನ್ನು ಅದರ ಮಗ್ಗುಲಲ್ಲಿಟ್ಟು, ಆ ಪ್ರತಿಫಲವನ್ನು ಕಂಡಿರಿಸಿರುವ ಯಾಳವಾರರು ಒಬ್ಬ ಶ್ರೇಷ್ಠ ವಿಮರ್ಶಕರ ಸಾಲಿನಲ್ಲಿ ನಿಲ್ಲುವಂತವರೆನಿಸುತ್ತಾರೆ.

ಮಾನವನ ಬದುಕು ಇಂದು ಅತ್ಯಂತ ಸಂಕೀರ್ಣತೆಯಲ್ಲಿದೆ. ಒಂದರ್ಥದಲ್ಲಿ ದ್ವಂದ್ವಮಯವಾಗಿರುವ ಅದು ತ್ವರಿತಗತಿಯಲ್ಲಿದೆ. ಇದರ ಮೂಲವನ್ನು ನಾವಿಂದು ಮಾನವನ ಕರ್ಮದಲ್ಲಿ ಕಾಣಬಯಸುತ್ತಿದ್ದೇವೆ. ಇದು ವಿಜ್ಞಾನ ಮುಂದುವರೆದಂತೆ ಮನುಷ್ಯ ಅನೇಕ ರಂಗಗಳಲ್ಲಿ ಪ್ರಗತಿ ಪಡೆದಿದ್ದಾನೆ ಆದರೆ 'ತನ್ನಂತರಂಗವನ್ನು ತಾನರಿಯಲೊಲ್ಲ' ಅಂದರೆ ಬಾಹ್ಯ ಅನ್ವೇಷಣೆಗೆ ಹೆಚ್ಚು ಒತ್ತು ಕೊಟ್ಟಿರುವ ಮನುಷ್ಯನಲ್ಲಿ ಆಂತರಿಕ ಅನ್ವೇಷಣೆಗಳಾದ, ಪ್ರೀತಿ, ಕರುಣೆ ತ್ಯಾಗ, ಪ್ರಾಮಾಣಿಕತೆ, ಸತ್ಯ, ಶಾಂತಿ, ಸಮಾಧಾನ, ದಯೆ, ಭಕ್ತಿ , ಅಹಿಂಸೆ, ಸರಳತೆ, ಸಹನೆ, ವಿನಯ, ಸಹಕಾರದಂತಹ ಜೀವನ ಮೌಲ್ಯಗಳನ್ನು ಈಗ ಹುಡುಕಾಡಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ ಏಕೆ ? ಎಂಬ ಪ್ರಶ್ನೆಯೊಂದಿಗೆ ಆರಂಭವಾಗುವ ಲೇಖನವು ಇಂದಿನ ಜಾಗತೀಕರಣದ ಸಂದರ್ಭದಲ್ಲಾಗುವ ಬದಲಾವಣೆಗಳಲ್ಲಿ 'ನಗರೀಕರಣ'ವು ಒಂದು. ಅದು 'ಗ್ರಾಮೀಣ ಸಂಸ್ಕೃತಿ'ಯನ್ನು ಹೇಗೆ ಮಣ್ಣುಗೂಡಿಸುತ್ತದೆ ಅಂದರೆ 'ಶರಣ ಸಂಸ್ಕೃತಿ' ಈಗ ಹೇಗೆ ನಾಶವಾಗತೊಡಗಿದೆ ಎಂಬುದನ್ನು ಸೋಮನಾಥರು ಇಲ್ಲಿ ಆಳವಾಗಿ ಚರ್ಚಿಸುತ್ತ, ವಿಶ್ಲೇಷಿಸಿದ್ದಾರೆ.

ಮೇಲ್ನೋಟದಲ್ಲಿ 'ವಸುದೈವ ಕುಟುಂಬಕಂ' ಮಂತ್ರ ಪಠಿಸುತ್ತಿದ್ದರೂ ಇದು ಮಾನವ ಕಲ್ಯಾಣಕ್ಕಾಗಿ ರೂಪಿತವಾದುದಲ್ಲ, ಬಂಡವಾಳಶಾಹಿ ರಾಷ್ಟ್ರಗಳು

---

[೪೫]. ಡಾ. ವೀರಣ್ಣ ದಂಡೆ – ಶರಣಸಿರಿ ಮುನ್ನುಡಿಯಲ್ಲಿ iii

ಆರ್ಥಿಕವಾಗಿ ಲಾಭ ಗಳಿಸುವ ಯೋಜನೆಗಳಲ್ಲಿ ಇದೂ ಒಂದಾಗಿರುವಂತಿದೆ[೪೬] ಎನ್ನುವಲ್ಲಿ ಲೇಖಕರ ವಿಮರ್ಶಾ ದೃಷ್ಟಿ ಗಮನಾರ್ಹವಾಗುತ್ತದೆ. ನಗರೀಕರಣದಿಂದ ಹೊಲದಲ್ಲಿ ಊಳುವ ರೈತನಿಗಾಗಲಿ, ಕೆಲಸ ಮಾಡುವ ಕಾರ್ಮಿಕನಿಗಾಗಲಿ, ಕೂಲಿಕಾರರಿಗಾಗಲಿ ಲಾಭ ಯಾವುದೂ ಇಲ್ಲ ಎಂಬುದನ್ನು ತೋರಿಸುವ ಈ ಲೇಖನವು ಗ್ರಾಮದ ಭೌತಿಕತೆ ಅಂದವಾದರೆ, ಅಲ್ಲಿಯ ಜನರ ಬದುಕು ಸುಂದರವಾಗಲು ಸಾಧ್ಯವೇ ? ಎನ್ನುತ್ತಾರೆ 'ಶರಣ ಸಂಸ್ಕೃತಿ'ಯ ನೆಲೆಗಟ್ಟು ನಗರೀಕರಣದಿಂದ ಕುಸಿದು ಹೋಗುತ್ತಿರುವದನ್ನು ಒಟ್ಟು ಮೌಲ್ಯಗಳ ಹಿನ್ನೆಲೆಯಲ್ಲಿ ಚಿಂತಿಸುವ ಈ ಲೇಖನ ವಾಸ್ತವಿಕತೆಯನ್ನು ತೆರೆದಿಡುತ್ತದೆ.

ನಮ್ಮಲ್ಲಿ 'ನಾಗರಿಕ' ಎಂಬ ಪದವಿದೆ. ನಾಗರಿಕ ಎಂದರೆ ನಗರವಾಸಿ ಎಂದು ಮಾತ್ರ ಅರ್ಥ. ಇಂದು ನಾವು ಇದನ್ನು ಉತ್ತಮ ಪೋಷಾಕುಗಳನ್ನು ಧರಿಸಿದವನು. ಬಹು ಬೆಲೆಯುಳ್ಳ ಬಟ್ಟೆ ಧರಿಸಿದವ ಎಂದು ತಿಳಿಯುತ್ತೇವೆ. 'ಇಂಥವರನ್ನು 'ಸುಸಂಸ್ಕೃತ' ಎಂದೂ ಭಾವಿಸುತ್ತೇವೆ ಆದರೆ ಸಂಸ್ಕೃತಿ ಪಟ್ಟಣಕಷ್ಟೇ ಸೀಮಿತವಾಗಿಲ್ಲ ಅದರ ತವರುಮನೆ ಹಳ್ಳಿ.' ಎನ್ನುತ್ತಾರೆ ಯಾಳವಾರರು. ಒಳ ಹೊರಗೆ ಒಂದೇ ನಡೆತೆಯಳ್ಳವ ಸುಸಂಸ್ಕೃತ. ಮಾನವೀಯತೆಯನ್ನು ಗೌರವಿಸುವುದು ಸುಸಂಸ್ಕೃತನ ಲಕ್ಷಣ. ಇಂದು 'ಮಾನವೀಯತೆ'ಯ ನೆಲೆಯಂತ್ತಿದ್ದ 'ವಚನ ಸಂಸ್ಕೃತಿಯು ನಾಗರಿಕತೆಯ ಹೆಸರಿನಲ್ಲಿ ಮರೆಯಾಗುತ್ತಿರುವುದನ್ನು ಇಲ್ಲಿ ವಿಮರ್ಶಕವಾಗಿ ವಿವರಿಸಿದ್ದಾರೆ. ಕೃಷಿ ಪ್ರಧಾನ ಸಂಸ್ಕೃತಿಯ ಗ್ರಾಮಗಳಲ್ಲಿ ಮೇಟಿ ವಿದ್ಯೆ ಈಗ ಮಾಯವಾಗಿ, ನೇಗಿಲಯೋಗಿಯಾಗಿದ್ದ ರೈತ ಆರ್ಥಿಕವಾಗಿ ರೋಗಿಯಾಗಿದ್ದಾನೆ – ಜಾಗತೀಕರಣದ ಜಾಲಕ್ಕೆ ಸಿಕ್ಕು ಬೀಜ, ಗೊಬ್ಬರಕ್ಕಾಗಿ, ಉತ್ತುಬಿತ್ತುವುದಕ್ಕಾಗಿ ಸಾಲ ಮಾಡಿ ಸೊರಗುತ್ತಿದ್ದುದನ್ನು ತಿಳಿಸಿದ್ದಾರೆ – ತನ್ನ ಹೊಲಕ್ಕೆ ಬಿಜವನ್ನು ತಾನೇ ಹುಟ್ಟಿಸುವ ಶಕ್ತಿ ಕಳೆದುಕೊಂಡಿರುವ ರೈತ ಸಾಲಕ್ಕಾಗಿ ಮತ್ತೆ ಸಾಲ ಮಾಡಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗಕ್ಕಿಳಿದಿರುವುದನ್ನು ಇಲೆಲ್ಲ ಮನೋಜ್ಞವಾಗಿ ವರ್ಣಿಸಿದ್ದಾರೆ.

ಈ ಕಾರಣದಿಂದ ನಮ್ಮ ಜಾನಪದ ಕಲೆಗಳು, ಸಾಹಿತ್ಯ ಅವನತಿ ಹಾದಿ ಹಿಡಿದಿರುವುದನ್ನು ಕನ್ನಡಿ ಹಿಡಿದು ತೋರಿದ್ದಾರೆ ನಮ್ಮ ದೇಶದ ಸಾಮಾಜಿಕ

---

೪೬. ಡಾ. ಸೋಮನಾಥ ಯಾಳವಾರರ – ಶರಣಸಿರಿ ಪುಟ ೨೫ ೨೦೦೭

ವ್ಯವಸ್ಥೆಯ ಒಂದು ನಾಣ್ಯದ ಎರಡು ಮುಖಗಳಂತಿದ್ದ ನಗರ – ಗ್ರಾಮಗಳು ವಿರುದ್ಧ ದ್ರುವಗಳಾಗಿ ಬೆಳೆಯುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂಬುದನ್ನು ಇಲ್ಲಿ ವಿವರವಾಗಿ ತಿಳಿಸುತ್ತ, ಶರಣ ಸಂಸ್ಕೃತಿಯ ಅರಿವು ಇಂಥ ಗ್ರಾಮಗಳ ನಗರೀಕರಣದಿಂದ ದೂರವಾಗಿರುವುದನ್ನು ಗಮನಿಸಬಹುದು ಎಂದು ತಿಳಿಸುತ್ತ ವಾಸ್ತವ ಚಿತ್ರಣವನ್ನು ಇಲ್ಲಿ ಬಿಡಿಸಿದ್ದಾರೆ.

ಶರಣ ಸಂಹಿತೆ ಮತ್ತು ಭಾರತದ ಸಂವಿಧಾನ – ಎಂಬ ಲೇಖನವು ಹೊಸ ದೃಷ್ಟಿಯಿಂದ ಕೂಡಿದೆ. 'ವ್ಯಕ್ತಿಯ ಜೀವನದ ಸಾರ್ಥಕತೆ ಮತ್ತು ಸಾಮಾಜಿಕ ಜೀವನದ ಸಂಘರ್ಷ ಮುಕ್ತವಾಗಲು ಮಾನವೀಯ ಮೌಲ್ಯಗಳ ಸಂರಕ್ಷಣೆಗಾಗಿ ಕೆಲವು ನೀತಿ ನಿಯಮಗಳು ಹಾಗೂ ಕಾಯ್ದೆ ಕಾನುನುಗಳು ತುಂಬಾ ಅವಶ್ಯವಾಗಿ ಬೇಕು. ಈ ದೃಷ್ಟಿಯಲ್ಲಿ ಸ್ವರೂಪಿತಗೊಂಡಿರುವ ಭಾರತದ ಸಂವಿಧಾನದಲ್ಲಿಯ ಮೂಲಭೂತ ಅಂಶಗಳು ಶರಣರ ವಚನಗಳಲ್ಲಿ ಅಭಿವ್ಯಕ್ತ ಗೊಂಡಿರುವುದು ಗಮನಾರ್ಹ ಸಂಗತಿ ಎನ್ನುತ್ತಾರೆ ಯಾಳವಾರರು[೪೭] 'ಸಂವಿಧಾನ' ಎಂಬ ಪದವನ್ನು ಶರಣರು ಉಪಯೋಗಿಸದೆ ಇರಬಹುದು ಆದರೆ ಸಂವಿಧಾನ ವೆಂಬುದು ಶರಣರ ಅನುಭಾವದಲ್ಲಿ ಒಂದು ಅಂಶವಾಗಿ ಹೊರ ಹೊಮ್ಮಿರುವುದನ್ನು ನಾವು ಗುರುತಿಸಬಹುದು "ಈ ಅನುಭಾವದ ಮಾರ್ಗ ಸೂಚಿಯ ಒಂದು ಮೈಲುಗಲ್ಲು ಶರಣರ ನೀತಿ ಸಂಹಿತೆ, ಅದು ಇಂದಿನ 'ಸಂವಿಧಾನ'ದಂತೆ ಎಲ್ಲ ಜನಾಂಗಗಳ, ಸಭ್ಯ ಸಂಸ್ಕೃತಿಗಳ ಸಂಹಿತೆಯಾಗಿ ಕಾಣುತ್ತದೆ ಕೆಲವೆಡೆ ತತ್ವಜ್ಞಾನದ ಅಂಗವಾಗಿ, ಹಲವೆಡೆ ಆಚರಣೆಗಳ ಮಾರ್ಗವಾಗಿ, ಮತ್ತೊಂದೆಡೆ ಮನೋವಿಶ್ಲೇಷಣೆಯ ಭೂಮಿಕೆಯಾಗಿ, ಇನ್ನೊಂದೆಡೆ ಮಾನವ ಧರ್ಮದ ಪ್ರಮುಖಾಂಗವಾಗಿ ಹಲವೆಡೆ ಸಮಾನತೆಯ ಸೆಕ್ಯುಲರ್ ತತ್ವವಾಗಿ ನಿಂತಿರುವುದನ್ನು ಗಮನಿಸಿದರೆ ಆಶ್ಚರ್ಯ ಮೂಡಿಸುತ್ತದೆ[೪೮] ಎನ್ನುವ ಸೋಮನಾಥರ ಅಭಿಪ್ರಾಯವು ಈ ಲೇಖನದಲ್ಲಿ ಅದನ್ನು ಸಂಶೋಧನೆಗೊಳಪಡಿಸಿ ತೋರಿಸಿದೆ.

ಮಾನವ ಜೀವನದ ಪ್ರಮುಖವಾದ ಮೂರು ಗುರಿಗಳೆಂದರೆ ೧.ಸುಖ ಅಥವಾ ಸಂತೋಷ ೨. ಕರ್ತವ್ಯ ಅಥವಾ ಋಣ ಪರಿಹಾರ ೩. ಪರಿಪೂರ್ಣತೆಯ

೪೭. ಡಾ. ಸೋಮನಾಥ ಯಾಳವಾರರ – ಶರಣಸಿರಿ ಪುಟ ೩೧ ೨೦೦೭

೪೮. ಡಾ. ಸೋಮನಾಥ ಯಾಳವಾರರ – ಶರಣಸಿರಿ ಪುಟ ೩೧ ೨೦೦೭

ಸಾಧನೆ ಈ ಗುರಿಗಳನ್ನು ಅನುಸರಿಸಿ ಆಯಾ ಕಾಲದಲ್ಲಿ ರೂಪಿತವಾದವುಗಳು ಸಂಹಿತೆಗಳು ಇವುಗಳೆಲ್ಲ ನೀತಿ ಪ್ರಧಾನವಾದವುಗಳು ಹಿಂದೆ ಅವುಗಳನ್ನು 'ನೀತಿಶಾಸ್ತ್ರ'ಎಂದರೆ ಇಂದಿನ ಅರ್ಥದಲ್ಲಿ ಅವುಗಳಿಗೆ 'ಸಂವಿಧಾನ' ಎನ್ನಲಾಗುತ್ತದೆ. ಶರಣ ಸಂಹಿತೆಯ ವ್ಯಕ್ತಿ ಮತ್ತು ಸಮಷ್ಠಿ ಎರಡನ್ನು ಒಳಗೊಂಡಿರುವ ಸಾಧನಾ ಪಥವಾಗಿದ್ದು ಅದು ಅನುಭಾವಾಧಾರಿತವಾಗಿರುವುದನ್ನು ಲೇಖಕರು ಬಿಡಿಸಿ ತೋರಿದ್ದಾರೆ. 'ಬಾಹ್ಯ ಶಿಸ್ತನಷ್ಟೇ ದೃಷ್ಟಿಯಲ್ಲಿಟ್ಟುಕೊಳ್ಳದ್ದೆ ಅದು ಅಂತರಂಗದ ಶಿಸ್ತನ್ನು ಕಲಿಸುವ ರೀತಿಯನ್ನು ವಚನಗಳ ಆಧಾರದಿಂದ ಹೆಕ್ಕಿ ತೋರಿಸಿದ್ದಾರೆ. ಕಾರುಣ್ಯ-ಪುರುಷರ ಅನುಭಾವದಿಂದ ರೂಪಗೊಂಡಿರುವ ಇದು ಎಂಥವರನ್ನು ಕ್ರೂರವಾಗಿ ಕಾಣದೆ, ಅವರಲ್ಲಿಯ ಒಳ್ಳೆಯದನ್ನು ಬಡಿದೆಬ್ಬಿಸಿ, ಸಾಧನ ಪಥದಲ್ಲಿ ತೊಡಗಿಸುವುದು ಇದರ ಉದ್ದೇಶ, ಎಂದಿರುವುದು[೪೯] ಸರ್ವಸಮ್ಮತವಾಗಿದೆ. ಇಂದಿನ ಸಂವಿಧಾನಕ್ಕೆ ಮಾದರಿಯಾದ ಸತ್ಯ ಶುದ್ಧತೆ' ಸಮಾನತೆ. ಸ್ವಾತಂತ್ರ್ಯ, ಸಹೋದರತ್ವ ಜಾತಿಭೇದ ನಿರಾಕರಣೆ, ಕರ್ತವ್ಯ ನಿಷ್ಠೆ, ಪರೋಪಕಾರ ಗುಣಗಳನ್ನು ಬೆಳೆಸಲು ಪ್ರಯತ್ನಿಸಿರುವ ಶರಣರು ದಯವೇ ಧರ್ಮ ಎಂಬ ಹೊಸ ವ್ಯಾಖ್ಯಾನ್ನ ನೀಡಿ ಮಾದರಿಯಾಗಿರವುದನ್ನು ಈ ಲೇಖನವು ತುಂಬಾ ವಿವೇಚನಾತ್ಮಕ ಗುಣವನ್ನು ಹೊಂದಿ ನಿಂತಿರುವುದು ಸುಸ್ಪಷ್ಟವಾಗುತ್ತದೆ.

'ಶರಣ ಆದಯ್ಯ ಹಾಗೂ ಆಧ್ಯಾತ್ಮಿಕ ಶಿಕ್ಷಣ' ಕೆಲವು ವಿವರಗಳು ಎಂಬ ಲೇಖನವು ಯಾಳವಾರರ ಅಧ್ಯಯನದ ಆಳಕ್ಕೆ ಕನ್ನಡಿ ಹಿಡಿಯುತ್ತದೆ. 'ಆದಯ್ಯ' ಶರಣರನ್ನು ಕುರಿತು ಸಂಶೋಧನಾಧ್ಯಯನ ಕೈಗೊಂಡು ಪಿ.ಎಚ್.ಡಿ. ಪಡೆದಿರುವ ಇವರು ಆ ಮಹಾಪ್ರಬಂಧದಲ್ಲಿ ವ್ಯಕ್ತಗೊಳ್ಳದ ಒಂದು ವಿಚಾರವನ್ನು ನಂತರದಲ್ಲಿ ಈ ಲೇಖನ ರೂಪದಲ್ಲಿ ಬರೆದಿದ್ದಾರೆ. ಈ ಲೇಖನದ ಹಿನ್ನಲೆಯಲ್ಲಿ ಆದಯ್ಯನ ಕಾಲದ 'ಶಿಕ್ಷಣದ ಪರಿಕಲ್ಪನೆ' ಹಾಗೂ ವಿಶೇಷವಾಗಿ 'ಆಧ್ಯಾತ್ಮಿಕ ಶಿಕ್ಷಣ'ದ ಮಹತ್ವವನ್ನು ಒಟ್ಟು ನೋಟದಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ. ಆದಯ್ಯನ ಸಂಕ್ಷಿಪ್ತ ಜೀವನ ಚರಿತ್ರೆ, ತತ್ವಜ್ಞಾನ, ಶೈಕ್ಷಣಿಕ ತತ್ವಗಳು, ಶಿಕ್ಷಣದ ಗುರಿಗಳು, ಅಭ್ಯಾಸ ಕ್ರಮ, ಧಾರ್ಮಿಕ ಶಿಕ್ಷಣ, ನೈತಿಕ ಶಿಕ್ಷಣಗಳ ಉಪ ಶೀರ್ಷಿಕೆಗಳಡಿಯಲ್ಲಿ ಮೂಡಿ ನಿಂತಿರುವ ಈ ಲೇಖನವು ಯಾಳವಾರರ ವಿಮರ್ಶಾತ್ಮ ದೃಷ್ಟಿಯ ಸಂಶೋಧನೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

---

೪೯. ಡಾ. ಸೋಮನಾಥ ಯಾಳವಾರರ – ಶರಣಸಿರಿ ಪುಟ ೩೨ ೨೦೦೭

ಇದೇ ರೀತಿಯಲ್ಲಿ **'ಬಸವಣ್ಣನವರು ಮತ್ತು ಶಿಕ್ಷಣ ಒಂದು ಚಿಂತನೆ'** ಎಂಬ ಲೇಖನವು ಶೈಕ್ಷಣಿಕ ದೃಷ್ಟಿಯಿಂದ ಬಸವಣ್ಣ ಹಾಗೂ ಆತನ ಕಾಲವನ್ನು ಅಧ್ಯಯನ ಮಾಡುವವರಿಗೆ ದಾರಿ ದೀಪವಾಗಿ ನಿಲ್ಲುತ್ತದೆ. 'ಸಂಶೋಧನ ದೃಷ್ಟಿ', ತೌಲನಿಕ ವಿವೇಚನೆಗಳನ್ನು ಒಳಗೊಂಡಿರುವ ಈ ಲೇಖನವು ಹೊಸ ಬೆಳಕು ಚಲ್ಲುತ್ತದೆ 'ಶಿಕ್ಷಣದ ಪರಿಕಲ್ಪನೆಯು ಸಮಕಾಲೀನ ಸಮಾಜದ ಅವಶ್ಯಕತೆಗಳಿಗನುಗುಣವಾಗಿ ಕಾಲದಿಂದ ಕಾಲಕ್ಕೆ ಬದಲಾಗುವುದನ್ನು ತಿಳಿಸುತ್ತ ಪ್ರಾಚೀನ ಕಾಲದ ಗುರುಕುಲ ಪದ್ಧತಿ,ಯನ್ನು ಹಿಡಿದು ೧೨ನೆಯ ಶತಮಾನದ ಶಿಕ್ಷಣದ ಪರಿಕಲ್ಪನೆಯನ್ನು ಇಂದಿನ ಯುಗದೊಂದಿಗೆ ಹೋಲಿಸಿ ನೋಡುತ್ತ ತೌಲನಿಕ ದೃಷ್ಟಿಯಲ್ಲಿ ಬರೆದ ಲೇಖನವಿದು. 'ಆಧುನಿಕ ಶಿಕ್ಷಣ ತಜ್ಞರು ಶಿಕ್ಷಣದ ಬಗ್ಗೆ ಹೇಳುವ ವಿಚಾರಗಳನ್ನು ಗಮನಿಸಿರುವ ಲೇಖಕರು ಶಿಕ್ಷಣದ ತತ್ವ, ಗುರಿ, ಉದ್ದೇಶಗಳನ್ನು ಅನುಲಕ್ಷಿಸಿ ಬಸವಣ್ಣವನವರ ವಿಚಾರಗಳನ್ನು ಎತ್ತಿ ತೋರಿಸುತ್ತ 'ಕೂಡಲ ಸಂಗಮ ದೇವರನ್ನು ಕಾಣುವ ಶಿಕ್ಷಣ ಕಲಿಸಿದವರು ಬಸವಣ್ಣನವರು ಎನ್ನುತ್ತಾರೆ. ಶಿಕ್ಷಣದ ಗುರಿ ಶಾಶ್ವತ ಸತ್ಯವನ್ನರಿಯುವುದಾಗಿದೆ. ಅದನ್ನರಿವ ಶಕ್ತಿ ಪ್ರತಿಯಬ್ಬ ಮನುಷ್ಯನಲ್ಲಿದೆ. ಅದನ್ನು ಜಾಗೃತ ಗೊಳಿಸುವುದು ಶಿಕ್ಷಣದ ಉದ್ದೇಶ ಇಂತಹ ನಿಜ ಶಿಕ್ಷಣವನ್ನು ಮೊದಲು ಆರಂಭಿಸಿದ ಚಿಂತಕರೇ ಬಸವಣ್ಣನವರು ಎಂದು ಹೇಳುತ್ತಾರೆ ಯಾಳವಾರರು.[೫೦] ಆದರೂ ಇಂದು ಅವರನ್ನು ಶಿಕ್ಷಣ ತಜ್ಞರಲ್ಲಿ ಒಬರನ್ನಾಗಿ ಗಮನಿಸದಿರುವುದು ಆಶ್ಚರ್ಯಸಂಗತಿ ಎನ್ನುತ್ತಾರೆ ಲೇಖಕರು. ವ್ಯಕ್ತಿ ಸಮಾನತೆಯೊಂದಿಗೆ ವೃತ್ತಿ ಸಮಾನತೆಯನ್ನು ಗೌರವಿಸಿದ ಬಸವಣ್ಣ ಆ ಮೂಲಕ ಮತ್ತೊಂದು ಶೈಕ್ಷಣಿಕ ಪಾಠ ಹೇಳತ್ತಾನೆ. ವ್ಯಕ್ತಿಗಿಂತ ವ್ಯಕ್ತಿತ್ವ ಮುಖ್ಯವೆಂಬ ಶಿಕ್ಷಣವು ಇಂದು ಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿ ಕಾಯಕ ಮಾಡದೆ ಉಣ್ಣುವುದು ಸರಿಯಲ್ಲ, ಸರ್ವೋದ್ಧಾರ ಶಿಕ್ಷಣದ ಅಡಿಯಲ್ಲಿ ಈ ಬೋಧನೆ ಅತ್ಯಂತ ಮಹತ್ವದ್ದೆಂಬುದನ್ನು ಯಾಳವಾರರು ಈ ಲೇಖನದಲ್ಲಿ ತೋರಿಸಿ, ಹೊಸ ಆಲೋಚನೆಯನ್ನು ಇಲ್ಲಿ ಹುಟ್ಟುಹಾಕಿದ್ದಾರೆನ್ನಬಹದು.

ಬಸವಣ್ಣ – ಸ್ವಾಮಿವಿವೇಕಾನಂದ ಎಂಬ ಲೇಖನವು ಈ ಗ್ರಂಥದಲ್ಲಿಯ ಇನ್ನೊಂದು ಮಹತ್ವದ ವಿಷಯವನ್ನು ತಿಳಿಸುತ್ತದೆ ಈ ತೌಲಿನಕ ದೃಷ್ಟಿಯ ವಿಮರ್ಶಾತ್ಮಕತೆಯುಳ್ಳ

---

೫೦. ಡಾ. ಸೋಮನಾಥ ಯಾಳವಾರರ – ಶರಣಸಿರಿ ಮಟ ೬೭ ೨೦೦೭

ಇದು ಇಬ್ಬರು ಮಹಾಪುರಷರನ್ನು ತುಲನಾತ್ಮಕವಾಗಿ ನೋಡ ಬಯಸಿದೆ 'ಹಲವು ವೈಚಾರಿಕ ಕ್ರಾಂತಿಯ ಹರಿಕಾರರಲ್ಲಿ ಬಸವಣ್ಣ ಮತ್ತು ವಿವೇಕಾನಂದರು ಅತ್ಯಂತ ಪ್ರಮುಖರು. ವಿಭಿನ್ನ ಪ್ರದೇಶ ವಿಭಿನ್ನ ಪರಿಸರ, ವಿಭಿನ್ನ ಸಂಸ್ಕೃತಿಯಲ್ಲಿ ಬಾಳಿ ಹೋಗಿದ್ದ ಈರ್ವರು ವಿಭಿನ್ನ ತತ್ವದ ಚಿಂತಕರು ತಮ್ಮದೇ ಆದ ನೆಲೆಗಳಲ್ಲಿ ಬಾಳಿ, ತಮ್ಮ ವ್ಯಕ್ತಿತ್ವವನ್ನು ಉದಾತ್ತಿಕರಿಸಿಕೊಂಡು ಜಾಗತಿಕ ಸಂಸ್ಕೃತಿಗೆ ಘನತೆಯನ್ನು ನೀಡಿದವರು, ಜಡತ್ವ ವಿರೋಧಿಗಳಾಗಿದ್ದ ಇಬ್ಬರೂ ವಿಚಾರ ಹಾಗೂ ಪ್ರಚಾರವಾದಿಗಳು. ಮಾನವೀಯತೆ ಹಾಗೂ ಸಾಮಾಜಿಕ ಸಂದರ್ಭದಲ್ಲಿ ಇಬ್ಬರ ಚಿಂತನೆಗಳು ಜೀವನ ವಿಧಾನಗಳಾಗಿವೆ[೫೧] ಎಂಬುದನ್ನು ಲೇಖಕರು ಸರಿಯಾಗಿ ಗುರುತಿಸಿದ್ದಾರೆ.

ಈ ಈರ್ವರನ್ನು ಮುಖಾಮುಖಿಯಾಗಿಸುವಾಗ ಹಲವು ವೈರುಧ್ಯಗಳನ್ನು ಕಂಡಿರುವ ಯಾಳವಾರರು ಹೆಚ್ಚಿನ ಸಾದೃಶ್ಯಗಳನ್ನು ಹೇಳಿದ್ದಾರೆ. ಭಿನ್ನ ಸಾಂಸ್ಕೃತಿಕ ಮೌಲ್ಯಗಳ ಹಿನ್ನೆಲೆಯಲ್ಲಿ ಇವರು ಆಧ್ಯಾತ್ಮಿಕ ಹಾಗೂ ಭೌತಿಕ ಜಗತ್ತಿನ ಪ್ರವೃತ್ತಿಗಳ ನಡುವೆ, ಅಂಧಸಂಪ್ರದಾಯ ಮೂಢನಂಬಿಕೆ, ಅಸಮಾನತೆ, ಜಾತಿಭೇದಗಳ ಇಬ್ಬಂಧಿತನ ಕಂಡು ರೋಸಿ ಹೋಗಿದ್ದಾರೆ ಬ್ರಿಟೀಷರ ದಬ್ಬಾಳಿಕೆ, ಸಾಂಸ್ಕೃತಿಕ ಗುಲಾಮಿತನ, ಅಶಿಕ್ಷಿತ ವಾತಾವರಣ, ಭಾರತದ ಬಡತನದಂತಹ ವಿಷಯಗಳು ವಿವೇಕಾನಂದರನ್ನು ಕಾಡಿದವು. ಇವುಗಳ ಪರಿಹಾರಕ್ಕಾಗಿ ವಿದೇಶ ಪ್ರವಾಸ ಮಾಡಿರುವ ಇವರು ಜಗತ್ತನ್ನು ಭಾರತದ ಕಡೆ ನೋಡುವಂತೆ ಮಾಡಿದರು. ದೇವರ ಅಸ್ತಿತ್ವ, ತತ್ವಜ್ಞಾನ ತಿಳುವಳಿಕೆ, ಸ್ತ್ರೀ-ಪುರುಷರಲ್ಲಿ ಸಮಾನತೆ, ಅದ್ವೈತ ತತ್ವದ ವಿಚಾರಗಳಲ್ಲಿ ಹಲವು ಭಿನ್ನ ನೆಲೆಗಳಿದ್ದರೂ ತ್ಯಾಗ, ಶ್ರದ್ದೇ, ಸೇವೆ, ಭಕ್ತಿ, ಮೊದಲಾದ ವಿಚಾರಗಳಲ್ಲಿ ಈರ್ವರ ದೃಷ್ಟಿ ಒಂದೇ ತೆರನಾಗಿರುವದನ್ನು ಅರ್ಥವತ್ತಾಗಿ ವಿಶ್ಲೇಷಿಸಲಾಗಿದೆ. ಈರ್ವರ ಕುರಿತು ಅಧ್ಯಯನ ಮಾಡಬಯಸುವವರಿಗೆ ಇದೊಂದು ಮಾರ್ಗದರ್ಶನ ನೀಡುವ ಲೇಖನವೆನ್ನಬಹುದು.

ಒಟ್ಟಿನಲ್ಲಿ ಹೇಳಬೇಕಾದರೆ ಇಲ್ಲಿಯ ಉಳಿದ ಲೇಖನಗಳಾದ 'ಬಸವಣ್ಣ ಹಾಗೂ ಕಾಯಕತತ್ವ, ಮಹೇಶ್ವರಸ್ಥಲ ವೀರಶೈವ ಮಠಗಳು ಹಾಗೂ ಪರಂಪರೆ,

---

೫೧. ಡಾ. ಸೋಮನಾಥ ಯಾಳವಾರರ – ಶರಣಸಿರಿ ಪುಟ ೭೩ ೨೦೦೭

ಮಾತೆಂಬುದು ಜ್ಯೋತಿರ್ಲಿಂಗ, ಗಣಾಚಾರಿ ಮಡಿವಾಳ ಮಾಚಯ್ಯ, ಇಂತಹ ಸಾಂಪ್ರದಾಯಕ ಹೆಸರುಗಳನ್ನು ಹೊತ್ತ ಲೇಖನಗಳನ್ನು ಗಮನಿಸಿದರೂ ಅಲ್ಲೆಲ್ಲ ಲೇಖಕರ ಸ್ವಂತಿಕೆ ಖುಷಿ ಕೊಡುತ್ತದೆ ಎನ್ನುವ ವಿದ್ವಾಂಸರು, ಇಲ್ಲಿಯ ಲೇಖನಗಳು ಒಂದಿಲ್ಲಾ ಒಂದು ಹೊಸ ಚಿಂತನೆಗಳಿಂದ ಕೂಡ್ಡಿದು, ಓದುಗರಿಗೆ ಒಂದು ಹೊಸ ಅನುಭವಕೊಡುವಲ್ಲಿ ಕೆಲಸ ಮಾಡುತ್ತವೆ ಎಂದಿರುವುದು ಗಮನಾರ್ಹ ಸಂಗತಿ.[೫೨]

'ಶರಣಸಿರಿ' ಶರಣರ ಹಾಗೂ ವಚನ ಸಾಹಿತ್ಯ ಕುರಿತು ವಿಶೇಷ ಆಸಕ್ತಿ ಹೊಂದಿರುವ ಕೃತಿ ಸೋಮನಾಥ ಯಾಳವಾರರು ಅನೇಕ ಶರಣರ ಹಾಗೂ ಅವರು ರಚಿಸಿದ ವಚನಗಳ ಆಧಾರದ ಮೇಲೆ ಹತ್ತು ಹಲವು ಹೊಸ ಬೆಳಕು ಚಲ್ಲುವ ಲೇಖನಗಳನ್ನು ರಚಿಸಿದ್ದಾರೆ. ಪ್ರಸ್ತುತ ಶರಣಸಿರಿ ಕೃತಿ ವೈಚಾರಿಕ ಲೇಖನಗಳಿಂದ ಕೂಡಿದ ಗ್ರಂಥವಾಗಿದೆ. ಇಲ್ಲಿಯ ಲೇಖನಗಳು ಹೊಸ ಭರವಶೆ ಹುಟ್ಟಿಸುವುದರ ಜೊತೆಗೆ ಒಂದೊಂದು ಲೇಖನವೂ ಸಂಶೋಧನೆ ವಸ್ತುವಾಗಬಲ್ಲ ಆಲೋಚನೆ, ಚಿಂತನೆ, ತೌಲನಿಕ ವಿವೇಚನೆಗಳು, ಇಲ್ಲಿ ಕಂಡು ಬರುವುದರಿಂದ ಇದೊಂದು ಶರಣ ಸಾಹಿತ್ಯದ ಮೇಲೆ ಹೊಸ ಬೆಳಕು ಚಲ್ಲುವ ಕೃತಿಯಾಗಿದೆ' ಎಂಬ ವಿದ್ವಾಂಸರ[೫೩] ಅಭಿಪ್ರಾಯವನ್ನು ಇಲ್ಲಿ ಮನಗಾಣಬಹುದಾಗಿದೆ.

೨.೪ ಕುಮಾರವ್ಯಾಸ

ಶ್ರೀ ಸಿದ್ದಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಗುಲಬರ್ಗಾದಿಂದ ೨೦೦೭ ರಲ್ಲಿ ಪ್ರಕಟವಾಗಿರುವ ವಿಮರ್ಶಾ ಕೃತಿ. ಜನಪ್ರಿಯ ಪುಸ್ತಕ ಮಾಲಿಕೆಯಲ್ಲಿ ಪ್ರಕಾಶನಗೊಂಡಿರುವ ಇದು ೬೪ ಪುಟಗಳ ಮಿತಿಯಲ್ಲಿದೆ. ಸರಳವಾಗಿ ಓದಿಸಿಕೊಂಡು, ಅರ್ಥೈಸಿಕೊಳ್ಳಬಹುದಾದ ವಿಷಯ ಸಾರವನ್ನು ಒಳಗೊಂಡಿರುವ ಕೃತಯಿದು. ಕನ್ನಡದ ಮಹಾಕವಿಗಳಲ್ಲಿ ಒಬ್ಬನಾದ ಕುಮಾರವ್ಯಾಸ' ಕವಿ ವರಕವಿ, ಅದ್ವಿತೀಯಕವಿ, ಭಕ್ತ ಕವಿ ಎಂದು ಪ್ರಸಿದ್ಧನಾಗಿದ್ದಾನೆ. ಉದ್ಧಾಮ ಕವಿ, ಪಂಡಿತ ಕವಿಗಳಲ್ಲಿ ಪ್ರಧಾನವಾಗಿರುವ ಈತನು ಅಪಾರವಾದ ಲೋಕಾನುಭವವನ್ನು ಹೊಂದಿದ್ದಾನೆ. ಅತ್ಯಂತ ವಿನಯಶೀಲನಾದ ಈ ಕವಿ 'ಕಾವ್ಯಕ್ಕೆ ಗುರು' ಎನಿಸಿದ್ದಾನೆ.

---

೫೨. ಡಾ.ವೀರಣ್ಣ ದಂಡೆ – ಶರಣಸಿರಿ ಮುನ್ನುಡಿಯಲ್ಲಿ ಪುಟ iv ೨೦೦೭

೫೩. ಡಾ. ಬಸವರಾಜ ಸಬರದ – ಶರಣಸಿರಿ ಮುನ್ನುಡಿಯಲ್ಲಿ ೨೦೦೭

ಇಂಥ ಕವಿಯೋರ್ವನ ಕಾಲ ಮತ, ಜೀವನ ಚರತೆ, ಕೃತಿ ಪರಿಚಯ ಮಾಡಿಕೊಡುವುದರ ಜೊತೆಗೆ, ಆತನ ಕಾವ್ಯ 'ಕನ್ನಡ ಭಾರತ'ದ ಮೂಲ ಹಾಗೂ ವೈಶಿಷ್ಟ್ಯ ಅದರ ಹಿರಿಮೆಗರಿಮೆ, ಕಾವ್ಯದ ಕಥಾಸಾರ, ಪ್ರಮುಖ ಪಾತ್ರಗಳ ಚಿತ್ರಣದೊಂದಿಗೆ, ಕುಮಾರವ್ಯಾಸನ ವರ್ಣನೆಗಳು, ಆತನ ಭಾಷೆ, ಶೈಲಿ, ದರ್ಶನಗಳನ್ನು ಮನ ಮುಟ್ಟುವಂತೆ ಪರಿಚಯಿಸಿ ಕೊಡಲಾಗಿದೆ. ಇದರೊಂದಿಗೆ – ಕುಮಾರವ್ಯಾಸನ ಸಮಕಾಲೀನ ಜೀವನ ದರ್ಶನವನ್ನು ಸಂಕ್ಷಿಪ್ತವಾಗಿದ್ದರೂ ಸಹ ಅರ್ಥವತ್ತಾಗಿ ಮಾಡಿರುವುದು ಓದುಗರ ಮನ ಮುಟ್ಟುತ್ತದೆ ಅಂತೆಯೇ ವಿಮರ್ಶಕರೊಬ್ಬರು ಅಭಿಪ್ರಾಯ ಪಟ್ಟಿರುವಂತೆ 'ಈ ಕೃತಿಯಲ್ಲಿ ಲೇಖಕರು ಕುಮಾರ ವ್ಯಾಸ ಕವಿಯ ಕಾವ್ಯ ಮೌಲ್ಯಗಳ ವಿವೇಚನೆಯನ್ನು ವಸ್ತುವಿಷ್ಠವಾಗಿ ದಾಖಲಿಸಿದ್ದಾರೆ. ಇದೊಂದು ಅಧ್ಯಯನಕಾರರಿಗೆ ಹಾಗೂ ತಿಳಿದುಕೊಳ್ಳ ಬಯಸುವವರಿಗೆ ಆಕರವಾಗಿದೆ[೫೪] ಎಂಬ ಮಾತು ಸತ್ಯವಾಗಿದೆ ಎನ್ನಬಹುದು.

'ಸಾಹಿತ್ಯ ವಿಮರ್ಶೆಯ ಪ್ರಮುಖವಾದ ಕೆಲಸವೆಂದರೆ ಒಂದು ಸಾಹಿತ್ಯ ಪರಂಪರೆಯ, ಪ್ರಮುಖಕವಿ, ಕೃತಿಗಳನ್ನಾದರಿಸಿ ನಡೆಯುವ ತರತಮ ವಿವೇಚನೆ. ಕವಿಯ ಕಾವ್ಯದ ನಿಜವಾದ ರಸಸ್ಥಾನಗಳ ಸೊಗಸನ್ನು ಬೆರಳಿಟ್ಟು ತೋರಿಸುವುದು. ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳನ್ನು ಹೊರಗೆಡಹುವುದು, ಕವಿಯ ಕಾಲ, ದೇಶಾದಿ ಪರಿಸರಗಳ ಹಿನ್ನೆಲೆಯಲ್ಲಿ ಅವನ ಸಾಧನೆ, ಸಿದ್ಧಿಗಳನ್ನು ಎತ್ತಿ ತೋರಿಸುವುದು ಇತರ ಕವಿಗಳ ಸಾಲಿನಲ್ಲಿ ಆತನ ಸ್ಥಾನವೇನೆಂಬುದನ್ನು ನಿರ್ದೇಶಿಸುವುದು.[೫೫] ಈ ಹಿನ್ನೆಲೆಯಲ್ಲಿ ಕವಿಯೋರ್ವನನ್ನು ಹಾಗೂ ಆತನಕೃತಿಯ ಮೂಲಕ ಅರ್ಥ ಮಾಡಿಕೊಳ್ಳುವ ಹಾಗೂ ಓದುಗರಿಗೆ ಅರ್ಥವಾಗುವ ರೀತಿಯಲ್ಲಿ ಅಭಿರುಚಿಯನ್ನು ಹುಟ್ಟಿಸುವ ವಿವೇಚನಾ ಶಕ್ತಿಯನ್ನು ಎಚ್ಚರಗೊಳಿಸುವದಾಗಿದೆ. ಈ ದೃಷ್ಟಿಯಿಂದ ಸೋಮನಾಥ ಯಾಳವಾರರ 'ವಿಮರ್ಶಾ ಕೃತಿಗಳು' ತುಂಬಾ ಮುಖ್ಯವಾಗುತ್ತವೆ ಎಂದು ಹೇಳಬಹುದು.

---

೫೪. ಡಾ. ಜೈದೇವಿ ಗಾಯಕವಾಡ – ಕುಮಾರ ವ್ಯಾಸ ಬೆನ್ನುಡಿಯಲ್ಲಿ ೨೦೦೭

೫೫. ಜಿ.ಎಸ್. ಶಿವರುದ್ರಪ್ಪಾ – ಕಾವ್ಯಾರ್ಥ ಚಿಂತನ ಪುಟ ೨೪೨-೪೩ ೧೯೮೮ ದ್ವಿತೀಯ ಮುದ್ರಣ

೩. ಜೀವನ ಚರಿತ್ರೆಗಳು:-

ಜೀವನ ಚರಿತ್ರೆಗಳು ವ್ಯಕ್ತಿಗಳ ವ್ಯಕ್ತಿತ್ವವನ್ನು ಕುರಿತ ಮಹತ್ವದ ದಾಖಲೆಗಳು. ಆಯಾ ವ್ಯಕ್ತಿಗಳ ಬದುಕಿನ ಬಹುಭಾಗವನ್ನು ಕುರಿತಿರುವ ಜ್ಞಾಪಕ ಚಿತ್ರ ಶಾಲೆಗಳು, ಚರಿತ್ರೆ ಹಾಗೂ ಸಾಹಿತ್ಯದ ಬಹು ಮುಖ್ಯ ಭಾಗವಾಗಿರುವ ಇವುಗಳಿಗೆ ಇತ್ತೀಚಿನ ದಿನಗಳಲ್ಲಿ ತುಂಬಾ ಮಹತ್ವದ ಸ್ಥಾನ ದೊರಕಿದೆ ಎನ್ನಬಹುದು. ಹೊಸಗನ್ನಡ ಸಾಹಿತ್ಯದಲ್ಲಿ ಗಣನೀಯ ಸ್ಥಾನ ಪಡೆದಿರುವ 'ಜೀವನ ಚರಿತ್ರೆ' ಸಾಹಿತ್ಯಕ್ಕೆ ಪ್ರತ್ಯೇಕ ಸ್ಥಾನಮಾನ ದೊರಕಿದೆ. ಇಂತಹ ರಚನಕಾರರಲ್ಲಿ ಸೋಮನಾಥ ಯಾಳವಾರರು ಗಮನಾರ್ಹವೆನಿಸಿದ್ದಾರೆ.

ಸೋಮನಾಥ ಯಾಳವಾರರು ಈವರೆಗೆ ೫ ಜೀವನ ಚರಿತ್ರೆ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.-

೧. ಉರಿಲಿಂಗ ಪೆದ್ದಿ – ೨೦೦೫
೨. ಕರಕನಳ್ಳಿ ಬಕ್ಕಪ್ರಭು – ೨೦೦೬
೩. ಕುಂಬಾರ ಗುಂಡಯ್ಯ – ೨೦೦೭
೪. ಮಾಣಿಕ ಪ್ರಭುಗಳು – ೨೦೦೮
೫. ಜಯದೇವಿ ತಾಯಿ ಲಿಗಾಡೆ – (ಅಚ್ಚಿನಲ್ಲಿ)

ಈ ಐದೂ ಕೃತಿಗಳ ಹೆಸರುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸಾಕು ನಾವು ಯಾಳವಾರರನ್ನು ಅರ್ಧ ಅರ್ಥಮಾಡಿಕೊಳ್ಳಬಹುದು ಮಹಾತ್ಮರು, ಪುಣ್ಯಪುರಷರು, ಸಂತರು, ಶರಣ ಸಾಹತಿಗಳು ಯಾಳವಾರವರಿಗೆ ಅಚ್ಚುಮೆಚ್ಚು, ಶರಣಪ್ರೇಮಿಯಾಗಿರುವ ಇವರು ಅವರ ಬದುಕು ಬರಹಗಳನ್ನು ಜೀವಸೆಲೆಯಾಗಿ ಸ್ವೀಕರಿಸಿದ್ದಾರೆ. ತಮ್ಮ ಬರವಣಿಗೆಯಲ್ಲಿ ಇಂಥ ಆದರ್ಶ ಪುರುಷರಿಗೆ ಅತಿ ಮಹತ್ವ ನೀಡಿರುವುದರಿಂದ ಮೇಲಿನ ಕೃತಿಗಳು ಮೂಡಿ ಬಂದಿವೆ ಎನ್ನಬಹುದು.

೩.೧ ಉರಿಲಿಂಗ ಪೆದ್ದಿ: –

ಜನಪ್ರಿಯ ಪುಸ್ತಕ ಮಾಲಿಕೆಯಲ್ಲಿ ಪ್ರಕಟವಾಗಿರುವ ಈ ಕೃತಿಯು ೬೪ ಪುಟಗಳಲ್ಲಿದೆ. ೧೨ ನೇಯ ಶತಮಾನದ ಬಸವಣ್ಣನ ಕ್ರಾಂತಿಯ ಬೆಳಕಿನಲ್ಲಿ ನಡೆದು

ಹೋಗಿರುವ ಅನೇಕ ಶರಣರಲ್ಲಿ ಉರಿಲಿಂಗದೇವನ ಶಿಷ್ಯ ಉರಿಲಿಂಗ ಪೆದ್ದಿಯೂ ಒಬ್ಬ. ಈತನು ಒಬ್ಬ ಅಸ್ಪೃಶ್ಯನಾದರೂ ಮುಗ್ಧಭಕ್ತಿಯ ದೆಸೆಯಿಂದ ಶ್ರೇಷ್ಠ ಶರಣನಾಗಿ ರೂಪಗೊಂಡವನು. ಉರಿಲಿಂಗ ದೇವನ ಪರಮ ಶಿಷ್ಯನಾಗಿ ಗುರುಕೊಟ್ಟ ಕಲ್ಲನ್ನೇ ಲಿಂಗವೆಂದು ಬಗೆದು ಧ್ಯಾನಾಸಕ್ತನಾಗಿ, ಗುರುವಿನ ಮನಸ್ಸನ್ನೇ ಗೆದ್ದು ಸಾಧಕನಾದದ್ದು ಅಪೂರ್ವ ಸಂಗತಿ – ಕಳ್ಳತನಕ್ಕೆಂದು ಬಂದು, ದೀಕ್ಷಾ ಪ್ರಸಂಗ ಕಂಡು, ಮಾರು ಹೋಗಿ, ಅದನ್ನೇ ಅನುಸರಿಸಿ ಲಿಂಗ ಪೂಜೆಯರಿತು, ಜಂಮನಾದುದು, ಒಬ್ಬ ಮಠಾದೀಶನಾದುದು ಒಂದು ಇತಿಹಾಸ. ನಂತರದಲ್ಲಿ ವಚನ ರಚನಾಕಾರನಾಗಿ ಮೂರುನೂರಾ ಆರವತ್ತಕ್ಕಿಂತ ಹೆಚ್ಚಿನ ವಚನಗಳನ್ನು ರಚಿಸಿ, ಅದರಲ್ಲಿ ಲಿಂಗಾಯತ ತತ್ವ ದರ್ಶನವನ್ನು ತುಂಬಾ ನಿಷ್ಠಾ ಪೂರ್ವಕವಾಗಿ ವಿವರಿಸಿದ್ದುದು ಎಂಥವರನ್ನು ಆಶ್ಚರ್ಯಗೊಳಿಸುತ್ತವೆ. ಉರಿಲಿಂಗ ಪೆದ್ದಿ ಶರಣನ ದಿವ್ಯವ್ಯಕ್ತಿತ್ವವನ್ನು ಯಾಳವಾರರು ಓದಿಸಿಕೊಂಡು ಹೋಗುವಂತೆ ಕಂಡಿರಿಸಿದ್ದಾರೆ. ಕೂತೂಹಲ ಮೂಡುವಂಥ ಶೈಲಿ ಇವರದಾಗಿದೆ. ಪುಟಗಳ ಇತಿಮಿತಿಯಲ್ಲಿಯೂ ಸಾಧಿಸಬೇಕಾದುದನೆಲ್ಲ ಸಾಧಿಸಿದ್ದಾರೆ. ಶರಣರ ಚರಿತ್ರೆಯನ್ನು ನಿಖರವಾಗಿ, ಸಾಧ್ಯಂತವಾಗಿ ಕ್ರಮಶಃ ಅಷ್ಟೇ ಸಂಗ್ರಹವಾಗಿ, ಸ್ವಲ್ಪ ಪ್ರೌಢ ಭಾಷೆಯ್ಲಲಿಯೇ ನಿರೂಪಿಸಿದ್ದಾರೆ. ಒಬ್ಬ ಗೃಹಸ್ಥ ಆಧ್ಯಾತ್ಮದೆಡೆಗೆ ಸಾಗಿದುದುನ್ನು ಮನಂಬುಗುವಂತೆ ಚಿತ್ರಿಸಿದ್ದಾರೆಂದು ವಿದ್ವಾಂಸರು ಹೇಳಿದುದನ್ನು[೫೬] ನಾವು ಒಪ್ಪಿಕೊಳ್ಳಬಹುದು. ಸರಳವಾದ ಭಾಷೆಯಲ್ಲಿ, ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಯಾಳವಾರವರು 'ಉರಿಲಿಂಗ ಪೆದ್ದಿ' ಯ ಜೀವನ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ.

೩.೨ ಕರಕನಳ್ಳಿ ಬಕ್ಕಪ್ರಭು:-

ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ವಿಭಾಗ ಶ್ರೀ ಕೊತ್ತಲ ಬಸವೇಶ್ವ ಭಾರತೀಯ ಶಿಕ್ಷಣ ಸಮಿತಿ ಸೇಡಂ'ನಿಂದ ೨೦೦೮ ರಲ್ಲಿ ಪ್ರಕಟವಾಗಿರುವ ಕೃತಿಯಿದು. ೨೫ ಪುಟಗಳ ಮಿತಿಯಲ್ಲಿ ಪ್ರಕಾಶಿತಗೊಂಡಿರುವ ಈ ಕೃತಿಯು ಈ ಭಾಗದ ಗೌರವ ಹೆಚ್ಚಿಸುವ ಮೊದಲ ೩೫ ಕೃತಿಗಳಲ್ಲಿ ಒಂದಾಗಿದೆ.

---

೫೬. ರವೀಂದ್ರ ಕರ್ಜಗಿ – ಉರಿಲಿಂಗ ಪೆದ್ದಿ ಬೆನ್ನುಡಿಯಲ್ಲಿ ೨೦೦೪

ಸುಮಾರು ೨೦೦ ವರ್ಷಗಳ ಹಿಂದೆ ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಕರಕನಳ್ಳಿ ಪ್ರದೇಶದಲ್ಲಿ ಬಾಳಿ ಬೆಳಗಿದ ಬಕ್ಕ ಪ್ರಭುಗಳು ತಪಶ್ವಿಗಳು, ಶಿವಯೋಗಿಗಳೆನಿಸಿದ ಇವರು ಸರಳ ಜೀವಿಗಳು ಆಗಿದ್ದು, ಸಾಮಾನ್ಯರಂತೆ ಬದುಕಿ ಹೋಗಿದ್ದಾರೆ. ಬ್ರಹ್ಮ ಜ್ಞಾನಿಯಾಗಿದ್ದ ಅವರು ಬಾಲ್ಯದಿಂದಲೇ ವೈರಾಗ್ಯದ ಬದುಕಿಗೆ ಅಂಟಿಕೊಂಡಿದ್ದರು. ಸುಖ ಲಾಲಸೆಗೆ ಎಂದೂ ಮನಸೋಲದ ಇವರು ಬಂದದ್ದನ್ನು ಶಿವನಿಚ್ಛೆ ಏಂದು ಸ್ವೀಕರಿಸುತ್ತಿದ್ದರು. ಸದಾ ಅಂತರ್ ಮುಖಿಯಾಗಿರುತ್ತಿದ್ದ ಅವರು ಹೆಚ್ಚು ಏಕಾಂತ ಪ್ರಿಯರಾಗಿದ್ದರು. ತಮ್ಮ ಆಧ್ಯಾತ್ಮದ ಬದುಕಿನ ಮೂಲಕ 'ಕಾಯಕ-ದಾಸೋಹ ತತ್ವಗಳನ್ನು ಬದುಕಿನಲ್ಲಿ ಅನುಷ್ಠಾನಕ್ಕೆ ತಂದು, ತಮ್ಮ ಪವಾಡ ಘಟನೆಗಳಿಂದ ಜನಮಾನಸದಲ್ಲಿ ದೇವರ ಪ್ರತೀಕವಾಗಿ ಮೆರೆದ ಸಂತನ ಬದುಕನ್ನು ಯಾಳವಾರರು ಸರಳ ನೇರವಾದ ನಿರೂಪಣೆ ಶೈಲಿಯಲ್ಲಿ ಚಿತ್ರಿಸಿರುವರು ಎಂದಿರುವ ಪ್ರೊ. ಶ್ರೀಶೈಲ ನಾಗರಾಳ[೫೭] ಅಭಿಪ್ರಾಯವನ್ನು ನಾವಿಲ್ಲಿ ಮನಗಾಣಬಹುದು.

೩.೩ ಕುಂಬಾರ ಗುಂಡಯ್ಯ :-

ಈ ಪುಸ್ತಕೆಯು ೨೦೦೬ ರಲ್ಲಿ ಸೇಡಂನಿಂದಲೇ ಪ್ರಕಟಗೊಂಡಿದೆ. ಶ್ರೀ ಬಸವರಾಜ ಪಾಟೀಲ ಸೇಡಂ ಅವರ ಸತ್ ಸಂಕಲ್ಪದಂತೆ ಸಾಂಸ್ಕೃತಿಕ ಪರಿಚಯ ಪುಸ್ತಕ ಮಾಲೆಯ ಅಡಿಯಲ್ಲಿ ಪ್ರಕಟಗೊಂಡಿದೆ ಬಸವಾದಿ ಶರಣರಿಗಿಂತ ಹಿಂದೆ 'ಕಾಯಕ ಜೀವಿ'ಯಾಗಿ ಬಾಳಿಹೋದ ಶಿವಭಕ್ತ ಕುಂಬಾರ ಗುಂಡಯ್ಯ. ಕಲ್ಯಾಣ ನಾಡಿನ ಭಾಲ್ಕಿಯಲ್ಲಿ ಆತನ ಸ್ಮಾರಕಗಳಿವೆ.

ಕೃತಿಯ ಪೂರ್ವಾರ್ಧವು ಗುಂಡಯ್ಯನ ಮುಗ್ಧಭಕ್ತಿ ಹಾಗೂ ಕಾಯಕ ನಿಷ್ಠೆಯನ್ನು ಒಳಗೊಂಡಿದ್ದರೆ, ಉತ್ತರಾರ್ಧದಲ್ಲಿ ಆ ಭಕ್ತನ ಆನಂದದ ನಲಿಯುವಿಕೆಯ ಚಿತ್ರವಿದೆ. 'ಭಕ್ತಿಯ ಮೂಲಕ ಶಿವನನ್ನು ನುಡಿಸಬಲ್ಲೆ, ನಡೆಸಬಲ್ಲೆ ಎಂಬ ಅಚಲ ವಿಶ್ವಾಸವಿಟ್ಟು ಬಾಳಿದ ನಿಜಭಕ್ತಿ ಗುಂಡಯ್ಯನದು. 'ದೈಹಿಕ ಶ್ರಮ ಬಾಹ್ಯ ಕುಂಬಾರಿಕೆಯ ಕ್ರಿಯೆಯಾದರೆ' ಮನಸ್ಸಿನ ಏಕಾಗ್ರತೆ ಆತನ ಆಂತರಿಕ ಕುಂಬಾರಿಕೆ ವಿಧಾನವಾಗಿದೆ. ಇಂತಹ ಕಾಯಕ ನಿಷ್ಠೆಯಿಂದ ಮಾಡಿದ ಗಡಿಗೆಗಳನ್ನು ಶಿವಭಕ್ತರಿಗೆ ಆನಂದದಿಂದ ಕೊಡುವುದು ಆತನ ದಾಸೊಹ ಗುಣದ ಪ್ರತೀಕವೆನ್ನಬಹದು.

---

೫೭. ಕರಕನಳ್ಳಿ ಬಕ್ಕಪ್ರಭು - ಬೆನ್ನುಡಿಯಲ್ಲಿ ೨೦೦೬

"ಕುಂಬಾರ ಗುಂಡಯ್ಯ ಮಾನವೀಯ ಗುಣವುಳ್ಳ ಶ್ರೇಷ್ಠಭಕ್ತರೆನಿಸಿ ಜೀವನ ಮತ್ತು ಆಧ್ಯಾತ್ಮಿಕ ಸಂಪತ್ತಿನ ಮಧ್ಯದ ಸೇತುವೆಯಾಗಿ ನಿಂತು ಮಾನವ ಹಾಗೂ ದೈವೀ ಸಂಬಂಧದ ಸೆಲೆಯನ್ನು ನಮಗೆಲ್ಲಾ ತೋರಿಸಿದ್ದಾನೆ. ಎಂಬುದನ್ನು ಡಾ. ಯಾಳವಾರರು ಸರಳ ಹಾಗೂ ಸ್ಪಷ್ಟ ವಿಚಾರಗಳ ಮೂಲಕ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ ಎಂದು ಕೃತಿ ಪರಶೀಲಕರು[೫೮] ಹೇಳಿದ ಅಭಿಪ್ರಯವನ್ನು ಎತ್ತಿಹೇಳಬಹುದಾಗಿದೆ.

೩.೪ ಮಾಣಿಕ ಪ್ರಭುಗಳು

೨೦೦೮ ರಲ್ಲಿ ಗುಲಬರ್ಗಾ ವಿಶ್ವ ವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಬವಾಗಿರುವ ಪುಸ್ತಕೆಯಿದು ಚಿಕ್ಕ ಕೃತಿಯಾದರೂ ಮಾಣಿಕ ಪ್ರಭುಗಳ ಚಾರಿತ್ರ್ಯವನ್ನು ಸ್ಪಷ್ಟವಾಗಿ ಕಟ್ಟಿಕೊಟ್ಟಿದೆ. ಸಕಲಮತಾಚಾರ್ಯರೆನಿಸಿದ ಶ್ರೀಮಾಣಿಕಪ್ರಭುಗಳು ಚತುರ್ಥ ದತ್ತಾವತಾರಿಗಳೆಂದು ಹೆಸರುವಾಸಿಯಾಗಿದ್ದಾರೆ. ಲೋಕಕಲ್ಯಾಣಕ್ಕಾಗಿ ಅವರು ಮಾಡಿರುವ ಲೀಲೆಗಳು ಅಗಾಧವಾಗಿವೆ. ಹುಮನಾಬಾದ ಹತ್ತಿರದ ಮಾಣಿಕ ನಗರದ ಕಾಡನ್ನು ನಾಡನ್ನಾಗಿ ಹಾಗೂ ಶ್ರೀ ಕ್ಷೇತ್ರವನ್ನಾಗಿ ಮಾಡಿ ಹೋದವರು ಮಾಣಿಕಪ್ರಭುಗಳು. ಕ್ರಿ.ಶ.೧೮೬೫ ರಲ್ಲಿ ವೈಕುಂಠ ವಾಸಿಗಳಾದ ಇವರು ತಮ್ಮ ಅವತಾರದ ಕಾಲದಲ್ಲಿ ಸಾವಿರು ಜನತೆಯ ದುಃಖ ಹೋಗಲಾಡಿಸಿ ಸುಖದತ್ತ ಕರೆದೊಯ್ದಿದ್ದರು. ಅವರು ದಯಾಮೂರ್ತಿಗಳಾಗಿದ್ದರು. ಅವರ ಸೌಜನ್ಯ ಔದಾರ್ಯ ಎಲ್ಲರನ್ನು ಆಕರ್ಷಿಸಿದವು. ವೀರ ವಿರಕ್ತರಾಗಿದ್ದ ಪ್ರಭುಗಳು ವ್ಯವಹಾರ ಚತುರರಾಗಿದ್ದರು.. ರೂಪ, ಮಾತು ನಡತೆಗಳಲ್ಲೆಲ್ಲ ಜನಾನುರಾಗಿ ಯಾಗಿದ್ದರು. ಹೀಗಾಗಿ ಎಲ್ಲ ಜನಾಂಗದ, ಎಲ್ಲ ಮತ-ಪಂಥಗಳ ಜನರಿಂದ ಆಕರ್ಷಿತರಾಗಿದ್ದರು. ಸಾಮಾನ್ಯ ಜನತೆಯೂ ಸಹ ಅವರ ಸುಗುಣ ಸ್ವರೂಪಕ್ಕೆ ಮಾರು ಹೋಗಿದ್ದರು. ಅಂಥ ಪ್ರಭುಗಳಿಗೆ ಅಪಾರವಾದ ಶಿಷ್ಯವರ್ಗವಿದೆ. ಅವರು ಅರಂಭಿಸಿದ 'ಗಾದಿ' ಮತ್ತು ಸಾಂಪ್ರದಾಯಿಕ ಕಾರ್ಯಗಳು ಇಂದಿಗೂ ಜೀವನಂತವಾಗಿರುವುದನ್ನು ಸೋಮನಾಥರು ಸರಳವಾಗಿ ಓದಿಸಿಕೊಂಡು ಹೋಗುವಂತೆ ಕೃತಿ ರಚಿಸಿದ್ದಾರೆ. 'ಮಾಣಿಕ ಪ್ರಭುಗಳ ದಿವ್ಯ ವ್ಯಕ್ತಿತ್ವವನ್ನು ಪರಿಚಯಿಸಿ ಕೊಡುವಲ್ಲಿ ಈ ಪುಸ್ತಕೆಯು ಮುಖ್ಯವಾಗುತ್ತದೆ ಎನ್ನಬಹುದು.

---

೫೮. ಕುಂಬಾರ ಗುಂಡಯ್ಯ - ಬೆನ್ನುಡಿ ಪರಿಶಿಕರು ೨೦೦೬

೩.೫ ಜಯದೇವಿ ತಾಯಿ ಲಿಗಾಡೆ :-

ಪುಸ್ತಕ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರನಿಂದ ಪ್ರಟಗೊಳ್ಳಲಿರುವ ಇದು ಇನ್ನೂ ಅಚ್ಚಿನಲ್ಲಿದೆ ಕಲ್ಯಾಣದ ನಾಡಿನಲ್ಲಿದ್ದುಕೊಂಡು, ಬಸವಕಲ್ಯಾಣದಲ್ಲಿ ವಾಸಮಾಡಿಕೊಂಡು ೧೨ನೆಯ ಶತಮಾನದ ಶಿವಯೋಗಿ ಸಿದ್ಧರಾಮೇಶ್ವರನನ್ನು ಕುರಿತು ತ್ರಿಪದಿ ಛಂದಸ್ಸಿನಲ್ಲಿ ಮಹಾಕಾವ್ಯ ಬರೆದ ಮಹಾನ ಲೇಖಕಿ ಜಯದೇವಿ ತಾಯಿಯವರು ಸೋಲ್ಲಾಪುರದ ಪ್ರಸಿದ್ಧ ಮನೆತನಗಳೇರಡರ ಮಗಳು ಹಾಗೂ ಸೊಸೆಯಾಗಿದ್ದ ಇವರು ಅಪ್ಪಟ ಕನ್ನಡ ಪ್ರೇಮಿ. ಸೋಲ್ಲಾಪುರನ್ನು ಕನ್ನಡ ನಾಡಿನಲ್ಲಿ ಉಳಿಸಿಕೊಳ್ಳಲು ಅವಿರಳ ಶ್ರಮಿಸಿದರು. ಗಡಿನಾಡಿನ ಸಿಂಹಿಣೆಯೆನಿಸಿದ್ದರು. ಈ ಭಾಗದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. ಶ್ರೇಷ್ಠ ಸಾಹಿತಿಗಳಾಗಿ ಬಾಳಿ ಹೋದವರು. ಅವರ ದಿವ್ಯ ಬದುಕನ್ನು ವಿವರವಾಗಿ ಹಿಡಿದು ನಿಲ್ಲಿಸುವ ಈ ಕೃತಿಯು ಪ್ರಟವಾಗಿ ಬಂದಾಗ ಗಮನಾರ್ಹವಾಗುತ್ತದೆ ಎಂದು ಹೇಳಬಹುದು.

ಈ ಮಹಾಪುರುಷರು, ಕನ್ನಡಾಭಿಮಾನಿಗಳು ಕಂಡುಕೊಂಡಿರುವ ಜೀವನಾನುಭವದ ಶ್ರೇಷ್ಠತೆಯನ್ನು ಇಲ್ಲಿ ನೀಡಿರುವದರ ಜೊತೆಗೆ, ಅವರ ಕೊಡುಗೆಯನ್ನು ಯಾಳವಾರರು ಅರ್ಥವತ್ತಾಗಿ ನೀಡಿರುವುದು ಇವರ 'ಜೀವನ ಚರಿತ್ರೆ'ಗಳ ವಿನ್ಯಾಸ ಹಾಗೂ ವೈಶಿಷ್ಟ್ಯವೆನ್ನಬಹುದು.

೪. ಸಂಪಾದನೆಗಳು

೪.೧ ಸೋಮನಾಥ ಯಾಳವಾರರು ಈ ವರೆಗೆ ೯ ಕೃತಿಗಳನ್ನು ಸಂಪಾದಿಸಿದ್ದಾರೆ. ವಿವೇಕವಾಹಿನಿ, ಗೃಹಮಂಗಳ, ವೀರಭದ್ರಸಿರಿ, ಎನ್ನುವ ಕೃತಿಗಳು ಬೆಳ್ಳಿಹಬ್ಬದ ನಿಮಿತ್ತವಾಗಿ ಮಾಡಲಾಗಿರುವ ಸ್ಮರಣ ಸಂಚಿಕೆಗಳು. ಹುಮನಾಬಾದದ ಶ್ರೀ ವಿವೇಕಾನಂದ ಶಿಕ್ಷಣ ಸಂಸ್ಥೆಯ ರಜತ ಮಹೋತ್ಸವ ಸಂಚಿಕೆ ವಿವೇಕವಾಹಿನಿ, ಇಲ್ಲಿಯ ಗೃಹ ನಿರ್ಮಾಣ ಸಂಘದ ೨೫ನೆಯ ವರ್ಷದ ಆಚರಣೆಯ ಸ್ಮರಣ ಸಂಚಿಕೆ – ಗೃಹ ಮಂಗಳ ಹಾಗೂ ಶ್ರೀ ವೀರಭದ್ರೇಶ್ವರ ಶಿಕ್ಷಣ ಟ್ರಸ್ಟಿನ ಬೆಳ್ಳಿಹಬ್ಬದ ಸ್ಮರಣ ಸಂಚಿಕೆ ಶ್ರೀ ವೀರಭದ್ರಸಿರಿ ಇವುಗಳ ಪ್ರಧಾನ ಸಂಪಾದಕರಾಗಿ ತಾಲೂಕಿನ ಇತಿಹಾಸ, ಸಾಮಾಜಿಕ ಜೀವನ, ಆರ್ಥಿಕ ವಿಚಾರಗಳು, ಸಾಂಸ್ಕೃತಿಕಬದಕು. ಶೈಕ್ಷಣಿಕ ಪ್ರಗತಿ ಮೊದಲಾದ ವಿಷಯಗಳನ್ನು ಕುರಿತು ಅರ್ಥ ಪೂರ್ಣವಾದ ಲೇಖನಗಳನ್ನು

ಬರೆಸಿ, ಅವುಗಳಿಗೊಂದೊಂದು ಪ್ರಸ್ತಾವನೆ ಬರೆದು, ಆ ಸಂದರ್ಭದ ಮಹತ್ವವನ್ನು ದಾಖಲೀಕರಿಸಿ ಕೊಟ್ಟು 'ಸಂಪಾದನೆ' ಮಾಡಿರುವುದು ಒಂದು ಉತ್ತಮ ಕಾರ್ಯವೆನ್ನಬಹುದು. ಸಂಪಾದನೆಯ ಜೊತೆಗೆ – ಹುಮನಾಬಾದದ ಇತಿಹಾಸ, ಸಾಂಸ್ಕೃತಿಕ ಪರಿಚಯ ಹಾಗೂ ಬೆಳ್ಳಿ ಹಬ್ಬದ ಮಹತ್ವ ಕುರಿತು ಲೇಖನಗಳನ್ನು ಬರೆದು ಆ ಸಂಚಿಕೆಗಳ ಔನ್ನತ್ಯವನ್ನು ಹೆಚ್ಚಿಸಿರುವುದು ಯಾಳವಾರರ 'ಸಂಪಾದನೆ'ಗಳ ಹಿರಿಮೆಯನ್ನಬಹುದು.

೪.೨ 'ಬೀದರ ಜಿಲ್ಲಾ ದರ್ಶನ'

ಇದೂ ಸೋಮನಾಥ ಯಾಳವಾರರ ಸಂಪಾದಿತ ಮಹತ್ವದ ಕೃತಿ. ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಯಿದಾಗಿದೆ. ಬೀದರ ಜಿಲ್ಲೆಯ ದರ್ಶನಾತ್ಮಕ ಹರವು ತುಂಬಾ ಮಹತ್ವದ್ದಾಗಿರುವುದರಿಂದ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಿಸರದಿಂದ ಆವೃತಗೊಂಡಿರುವುದರಿಂದ ಸಂಪಾದನಾ ಕಾರ್ಯ ಸರಳವಾದುದೆನಿಸುವುದಿಲ್ಲ. ಸೃಜನ ಬರಹಕ್ಕಿಂತ ಸಂಪಾದಿತ ಕೃತಿಯನ್ನು ಸಿದ್ಧ ಪಡಿಸುವಲ್ಲಿ ವಿಶೇಷ ಪರಿಶ್ರಮದ ಅಗತ್ಯವಿರುವುದನ್ನು ಅರಿಯಬಹುದು. ದರ್ಶನಾತ್ಮಕವೆನಿಸುವ ವಿಷಯಗಳಲ್ಲಿ ಮುಖ್ಯವಾದವುಗಳನ್ನು ಹಾಗೂ ಪ್ರಾತಿನಿಧಿಕವೆಂದು ಗುರುತಿಸಲಾಗುವ ಭಾಗಗಳನ್ನು ಆರಿಸಿಕೊಳ್ಳಬೇಕಾಗುತ್ತದೆ. "ಇಲ್ಲಿ ಪ್ರತಿಭೆಯ ಜೊತೆಗೆ ಆಳವಾದ ಅನುಭವವು ಶಾಸ್ತ್ರಜ್ಞಾನವು, ವಿಷಯಗಳ ಪರಿಜ್ಞಾನ, ಪಾಂಡಿತ್ಯ, ವಿಮರ್ಶಕ ಬುದ್ಧಿ, ಕ್ಷೇತ್ರಾಧ್ಯಯನ ಹಾಗೂ ಕಲಾಭಿಜ್ಞತೆ ಸಂಪಾದನಾ ಕಾರ್ಯಕ್ಕೆ ಅವಶ್ಯವಾಗಿ ಬೇಕಾಗುತ್ತದೆ." ಈ ಹಿನ್ನೆಲೆಯಲ್ಲಿ ನೋಡಿದಾಗ ವಿಮರ್ಶಕರು, ಸಂಶೋಧಕರು ಆಗಿರುವ ಸೋಮನಾಥ ಯಾಳವಾರರು 'ಬೀದರ ಜಿಲ್ಲೆಯ ಬಗೆಗೆ ಬಹುಕಾಲದ ಅಧ್ಯಯನದ ಫಲವಾಗಿ ಈ ಜಿಲ್ಲೆಗೆ ಸಂಬಂಧಿಸಿದ ಮುಖ್ಯ ವಿಷಯಗಳ ಲೇಖನಗಳನ್ನು ವಿದ್ವಾಂಸರುಗಳಿಂದ ಬರೆಸಿ, ಶ್ರದ್ಧೆ ಹಾಗೂ ಬಹುಪರಿಶ್ರಮದಿಂದ ಸಂಪಾದಿಸಿಕೊಟ್ಟಿದ್ದಾರೆ.

ಬೀದರ ಕುರಿತಂತೆ ಹಾಗೂ ಅದರ ತಾಲೂಕಾದ ಹುಮನಾಬಾದ ಪರಿಸರವನ್ನು ಕುರಿತಂತೆ ಹಲವು ರೀತಿಯಲ್ಲಿ ಅಧ್ಯಯನ ಕೈಗೊಂಡಿರುವ ಯಾಳವಾರರು, ಅದರಲ್ಲಿ ಸಾಕಷ್ಟು ಆಸಕ್ತಿವಹಿಸಿರುವುದನ್ನು ಅರಿಯಬಹುದು.

ಬೀದರ ಜಿಲ್ಲೆ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪರಂಪರೆಗೆ ಭದ್ರನೆಲೆಯುಳ್ಳ ತಾಣ. ಶತಶತಮಾನಗಳ ಐತಿಹ್ಯ ಹಾಗೂ ಇತಿಹಾಸ ಹೊಂದಿರುವ ಪುಣ್ಯ ಪುರುಷರ ನೆಲೆವೀಡು. ಇವುಗಳಲ್ಲಿ ಬಸವಕಲ್ಯಾಣದ ನೆಲೆ ವಿಶೇಷವೆನ್ನಬಹುದು. ಚಾಲುಕ್ಯರಿಗೆ ಸುಮಾರು ಒಂದು ಶತಮಾನ ಈ ಕಲ್ಯಾಣವು ರಾಜಧಾನಿಯಾಗಿದ್ದಿತು.

ಗಡಿ ಪ್ರದೇಶದ ಸಂಸ್ಕೃತಿ ಹಾಗೂ ಭಾಷಾ ಕೊಡುಕೊಳ್ಳುವಿಕೆಯಲ್ಲಿ ಕನ್ನಡದ ವೀರಪರಂಪರೆಯನ್ನು ಉಳಿಸಿಕೊಂಡಿರುವ ಪ್ರದೇಶ. ಕಾಲಕಾಲಕ್ಕೆ ತಕ್ಕಂತಹ ಏರಿತಗಳನ್ನು ಮೈಗೊಡಿಸಿಕೊಂಡು ಹಿಂದಿನ ಸಾಂಸ್ಕೃತಿಕ ಶ್ರೀಮಂತಿಕೆಯೊಂದಿಗೆ ಇಂದಿನ ಸ್ಥಿತ್ಯಂತರಗಳನ್ನು ಕಾಣಿಸುತ್ತಿರುವ ಧರಿನಾಡು. ಮಿಶ್ರ ಸಂಸ್ಕೃತಿಗೆ ಹೆಸರಾಗಿರುವ ಈ ನೆಲ, ವಿವಿಧ ಜನಾಂಗ, ವಿವಿಧ ಧರ್ಮ ವಿವಿಧ ಭಾಷೆ, ವಿವಿಧ ಕಲೆ, ಹಾಗೂ ವಿವಿಧ ಸಾಹಿತ್ಯ, ಶಿಲ್ಪ ಕಲೆಗೆ ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾಗಿದೆ. ಇಂಥ ಹಿರಿಮೆ – ಗರಿಮೆ ಹೊಂದಿರುವ ಈ ಜಿಲ್ಲೆಯ ದರ್ಶನ ಮಾಡಿಸಲು ಯಾಳವಾರರು ಇಲ್ಲಿ ಶ್ರಮಿಸಿರುವುದನ್ನು ಕಾಣಬಹುದಾಗಿದೆ.

ಪ್ರಸತುತವಾಗಿರುವ ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು 'ಬೀದರ ಜಿಲ್ಲಾ ದರ್ಶನ'ಕ್ಕೆ ಲೇಖನಗಳನ್ನು ಆರಿಸಿಕೊಳ್ಳುವಾಗ ಒಂದು ಕ್ರಮವನ್ನು ಇರಿಸಿಕೊಳ್ಳಲಾಗಿದೆ. ಒಟ್ಟು ಐದು ವಿಭಾಗಗಳಲ್ಲಿ ವಿಷಯವನ್ನು ವಿಭಾಗಿಸಿ, ಒಳ ಶೀರ್ಷಿಕೆಗಳ ಅಡಿಯಲ್ಲಿ ಹಲವು ಲೇಖನಗಳನ್ನು ಬರೆಸಿ ಸ್ವೀಕರಿಸಿಲಾಗಿದೆ. ಅವುಗಳನ್ನು ಈ ಕೆಳಕಂಡ ಕ್ರಮದಲ್ಲಿ ವಿಂಗಡಿಸಿಕೊಂಡಿದ್ದಾರೆ. –

I. ಸಂಸ್ಕೃತಿ–ಶಿಕ್ಷಣ–ಸ್ಮಾರಕಗಳು. ಎಂಬ ತಲೆಬರಹದಡಿಯಲ್ಲಿ – ಸಾಂಸ್ಕೃತಿಕ ಪರಂಪರೆ ಹಾಗೂ ಸ್ಥಿತ್ಯಂತರಗಳು ಜಾಗತೀಕರಣ ಹಾಗೂ ಸಾಂಸ್ಕೃತಿಕ ಪಲ್ಲಟ ಕನ್ನಡ ಪತ್ರಿಕೆಗಳು ಶರಣ ಸ್ಮಾರಕಗಳು, ಶಿಲ್ಪಿ ಶಾಸನಗಳು ಎಂಬ ಉಪವಿಭಾಗಳಿವೆ.

II. ಸಾಮಾಮಾಜಿಕ – ಆರ್ಥಿಕ – ರಾಜಕೀಯ ಬೆಳವಣಿಗೆಯ, ಅಡಿಯಲ್ಲಿ – ವಿಮೋಚನಾಚಳುವಳಿಗಳು, ಮಹಿಳೆ – ಸಮಾಜ ಮತ್ತು ಸವಾಲುಗಳು, ಕೃಷಿ ಆರ್ಥಿಕ ಬೆಳವಣಿಗೆ 'ಅಂದು – ಇಂದು', ಸಾಮಾಜಿಕ ನ್ಯಾಯ ಹಾಗೂ

ರಾಜಕೀಯ ಪ್ರಜ್ಞೆ , ಪ್ರಸ್ತುತ ರಾಜಕೀಯ ಸಂದರ್ಭ ಹಾಗೂ ಜಿಲ್ಲೆಯ ಬೆಳವಣಿಗೆ ಎಂಬ ಉಪಶೀರ್ಷಿಕೆಗಳ ಲೇಖನಗಳು ಇಲ್ಲಿವೆ.

III. ಸಾಹಿತ್ಯದ ಸಾಧನೆಯ ಕೆಳಗೆ- ಕಾವ್ಯ – ವೈಶಿಷ್ಟ್ಯಗಳು, ನಾಟಕ ಮತ್ತು ರಂಗಭೂಮಿಯ ಹೊಸಬೆಳವಣಿಗೆಗಳು, ಕಥನ ಸಾಹಿತ್ಯ, ಸಾಹಿತ್ಯ ವಿಮರ್ಶೆ, ಸಂಶೋಧನೆ ಸಮೀಕ್ಷೆ, ಮಹಿಳಾ ಸಾಹಿತ್ಯ, ತತ್ವಪದಕಾರರು, ಕನ್ನಡ ಭಾಷೆ ಎಂಬ ಉಪಶೀರ್ಷಿಕೆಗಳಿವೆ.

IV. ಜನಪದ ಸಾಹಿತ್ಯ, ಲಲಿತಕಲೆಗಳು – ಎಂಬ ಭಾಗದಲ್ಲಿ, ಜನಪದ ಸಾಹಿತ್ಯ, ಬುಲಾಯಿ ಹಾಡುಗಳು, ಬಿದ್ರಿಕಲೆ, ಸಂಗೀತ ಕಲೆ ಹಾಗೂ ಜನಪದ ವೃತ್ತಿ ಕಲಾವಿದರು ಎಂಬ ಲೇಖನಗಳನ್ನು ಸೇರಿಸಲಾಗಿದೆ.

V. ಜಿಲ್ಲಾ ಮತ್ತು ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ತಲೆ ಬರಹದ ಅಡಿಯಲ್ಲಿ – ಪ್ರಶಸ್ತಿ ವಿಜೇತ ಸಾಹಿತಿಗಳು ಹಾಗೂ ಪ್ರಶಸ್ತಿ ವಿಜೇತ ಜನಪದ ಕಲಾವಿದರು ಎಂಬ ಲೇಖನಗಳನ್ನು ಬರೆಯಿಸಿ ಸಂಪಾದಿಸಲಾಗಿದೆ.

ಪರಿವರ್ತನೆ ಜಗದ ನಿಯಮ. ಕಾಲವು ಬದಲಾದಂತೆ ಸಕಾಲಿಕವಾದ ಜನ ಜೀವನ ಮತ್ತು ಸಂಸ್ಕೃತಿಗಳು ತಂತಾನೆ ಸ್ಥಿತ್ಯಂತರಗೊಳ್ಳುತ್ತವೆ ಅಂತೆಯೇ ಮನುಷ್ಯನ ನಡುವಳಿಕೆಗಳು, ಆಚರಣೆಗಳು, ಅನುಕರಣೆಗಳು, ಮತ್ತು ವರ್ತನೆಗಳು ಆಲೋಚನೆಯ ಪರಂಪರೆಯ ಸಾರಥ್ಯದಲ್ಲಿ ಪರಿವರ್ತನೆ ಹೊಂದುತ್ತವೆ. ಇದಕ್ಕೆ ಬೀದರ ಜಿಲ್ಲೆ ಹೊರತಾಗಿಲ್ಲ ಎಂಬುದನ್ನು ಇಲ್ಲಿಯ ಎಲ್ಲ ಲೇಖನಗಳ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ. ಸೋಮನಾಥ ಯಾಳವಾರರು ಸ್ವತಃ ಸಂಶೋಧಕರಾಗಿರುವುದರಿಂದ ಅವರು ಸಂಶೋಧನಾತ್ಮಕ ಹಿನ್ನೆಲೆಯಲ್ಲಿ ಗ್ರಹಿಸಿದ ಭಾವಗಳೆಲ್ಲವೂ ಒಳನೋಟಗಳ ಹಿನ್ನೆಲೆಯಲ್ಲಿ ಮೂಡಿಬಂದಿವೆ. ಸೊಗಸಾದ 'ಅರಿಕೆ' ಸ್ವತಃ ಯಾಳವಾರರ ಲೇಖನ' ಬೀದರ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ಹಾಗೂ ಸ್ಥಿತ್ಯಂತರಗಳು ಎಂಬುದು ಅರ್ಥಪೂರ್ಣವಾಗಿ ಬಂದಿವೆ. ಲೇಖನಗಳನ್ನು ಪರಿವಿಡಿಯಲ್ಲಿ ವಿಷಯಕ್ಕನುಗುಣವಾಗಿ ವಿಭಾಗಿಸಿ ಹೊಸತನಕ್ಕೆ ಹಾದಿ ತೋರಿರುವಲ್ಲಿ ಸಂಪಾದನೆಯ ಜಾಣ್ಮೆಯನ್ನು ಕಾಣಬಹುದು. ಕೊನೆಯಲ್ಲಿ ಕೊಟ್ಟಿರುವ ಭಾವಚಿತ್ರಗಳ ಅನುಬಂಧವು ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದು, ಇದೊಂದು ಶ್ರೇಷ್ಠಸಂಪಾದನಾ

ಕೃತಿ ಎನ್ನಬಹುದು. ೨೦೦೫ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ 'ಬೆಳ್ಳಿ ಬೆಳಕು' ಮಾಲೆಯಲ್ಲಿ ಪ್ರಸಾರಾಂಗದಿಂದ ಪ್ರಕಟಿಸಲಾಗಿರುವ ಈ ಕೃತಿಯು ಜಿಲ್ಲಾ ದರ್ಶನ ಸಂಪುಟವಾಗಿದ್ದು ಡಾ. ಪ್ರೇಮಾ ಶಿರ್ಷೆಯವರು ಇವರೊಂದಿಗೆ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ.

೪.೩. ಕಾವ್ಯ ಸಂಗಮ ಭಾಗ –೨

ಎಂಬುವುದು ಸೋಮನಾಥ ಯಾಳವಾರರ ಪ್ರಥಮ ಕಾವ್ಯ ಸಂಪಾದನೆಯಾಗಿದೆ. ಹಳೆಗನ್ನಡ ನಡುಗನ್ನಡ ಕಾವ್ಯದ ಪ್ರಾತಿನಿಧಿಕ ಸಂಕಲನವಾಗುವಂತೆ ಇದನ್ನು ಸಂಪಾದಿಸಲಾಗಿದೆ[೫೯] ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಪದವಿ ತರಗತಿಗಳಿಗೆ ೧೯೯೪ – ೯೫ ನೆಯ ಸಾಲಿನಿಂದ ಏಕರೂಪ ಪಠ್ಯಕ್ರಮವನ್ನು ತರಲು ಗುಲಬರ್ಗಾ ವಿಶ್ವವಿದ್ಯಾಲಯವು ಒಪ್ಪಿಕೊಂಡು ಈ ಹಿನ್ನೆಲೆಯಲ್ಲಿ ೧೯೯೫–೯೬ ನೇ ಸಾಲಿಗಾಗಿ ಎರಡನೆಯ ವರ್ಷದ ಬಿ.ಎ.ಪದವಿ ತರಗತಿಗೆ ಸಾಮಾನ್ಯ ಕನ್ನಡ ಪತ್ರಿಕೆಗಾಗಿ ಈ ಕಾವ್ಯ ಸಂಕಲವನ್ನು ತರಲಾಗಿದ್ದು 'ಸಂಪಾದಕ ಮಂಡಳಿ'ಯು ಸಿದ್ಧಪಡಿಸಿದ್ದು, ಪ್ರಸಾರಾಂಗ ಪ್ರಕಟಿಸಿ ಹೊರತಂದಿದೆ[೬೦] ಎಂದಿದ್ದಾರೆ. ವಾಸುದೇವ ಅಗ್ನಿಹೋತ್ರಿಯವರೊಂದಿಗೆ ಸೋಮನಾಥ ಯಾಳವಾರರು ಇದನ್ನು ಸಂಪಾದಿಸಿಕೊಟ್ಟಿದ್ದಾರೆ.

ಕನ್ನಡ ಅಭ್ಯಾಸ ಮಂಡಳಿಯ ನಿರ್ದೇಶನದಂತೆ ಇಲ್ಲಿ ಪಂಪ, ರನ್ನ, ಜನ್ನ, ನಾಗಚಂದ್ರ, ಬಸವಣ್ಣ, ರಾಘವಾಂಕ, ಕುಮಾರವ್ಯಾಸ್ ಮತ್ತು ರತ್ನಾಕರವರ್ಣಿಗಳ ಕಾವ್ಯಗಳಿಂದ ಸು.೧೦ಪುಟಗಳ ಸೊಗಸಾದ ಕಾವ್ಯ ಭಾಗಗಳನ್ನು ಆಯ್ದುಕೊಂಡು, ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಅವರಿಗೆ. ಉಪಯುಕ್ತವೆನಿಸುವ ಮತ್ತು ಸಾಹಿತ್ಯದ ದೃಷ್ಟಿಯಿಂದ ತುಂಬಾ ಪರಿಣಾಮಕಾರಿಯಾದ ಭಾಗಗಳನ್ನು ಆಯ್ದುಕೊಂಡಿದ್ದು, ಸಂಪಾದಕರ ಅಧ್ಯಯನದ ಆಳವನ್ನು ತೋರುತ್ತದೆ.

---

೫೯. ಡಾ. ಸೋಮನಾಥ ಯಳವಾರ ಹಾಗೂ ವಾಸುದೇವ ಅಗ್ನಿ ಹೋತ್ರಿ – ಕಾವ್ಯ ಸಂಗಮ ಭಾಗ ೨ ೧೯೯೫ ಸಂ.ನುಡಿಯಲ್ಲಿ

೬೦. ಡಾ. ಸೋಮನಾಥ ಯಳವಾರ ಹಾಗೂ ವಾಸುದೇವ ಅಗ್ನಿ ಹೋತ್ರಿ – ಕಾವ್ಯ ಸಂಗಮ ಭಾಗ ೨ ೧೯೯೫ ಅರಿಕೆಯಲ್ಲಿ

ಗ್ರಂಥಾರಂಭದಲ್ಲಿ ಅಧ್ಯಾಪಕರುಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಸುದೀರ್ಘವಾದ ಪೀಠಿಕೆಯನ್ನು ಬರೆದಿದ್ದಾರೆ. ಕೊನೆಯ ಅನುಬಂಧದಲ್ಲಿ ಕವಿಗಳೆಲ್ಲರ ಸಂಕ್ಷಿಪ್ತ ಪರಿಚಯ ಹಾಗೂ ಆಯ್ದ ಕಾವ್ಯ ಭಾಗಗಳ ಸಂದರ್ಭ ಹಾಗೂ ಟಿಪ್ಪಣಿಗಳನ್ನು ನೀಡಲಾಗಿದೆ ಒಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರುಗಳಿಗೆ ಮೆಚ್ಚಿಗೆಯಾಗುವ ರೀತಿಯಲ್ಲಿರುವ ಈ ಸಂಗ್ರಹವು ಹಳೆಗನ್ನಡ-ನಡುಗನ್ನಡ ಕಾವ್ಯಕ್ಕೆ ಪ್ರಾತಿನಿಧಿಕ ಸಂಕಲನವಾಗಿ ಹೊರಹೊಮ್ಮಿದ್ದು ಮೂರು ವರ್ಷಗಳ ಕಾಲ ಇದು ಎಲ್ಲರಿಗೂ ಮೆಚ್ಚಕೆಯಾದ ಪಠ್ಯಪುಸ್ತಕವಾಗಿತ್ತೆನ್ನಬಹುದು.

೪.೪ 'ಹೊಸಗನ್ನಡ ಕಾವ್ಯ ಸಂಗ್ರಹ'ವು ೨೦೧೦-೧೧ ರಿಂದ ಮೂರು ವರ್ಷಗಳ ಕಾಲ ಬಿ.ಎ.ಪ್ರಥಮ ಸೆಮಿಸ್ಟರಗೆ ಕನ್ನಡ ಸಾಮಾನ್ಯ ಪತ್ರಿಕೆಯ ಪಠ್ಯಕಾವ್ಯವಾಗಿ ಪ್ರಕಟವಾಗಿದೆ. ಸೋಮನಾಥ ಯಳವಾರರ ೬ನೆಯ ಸಂಪಾದಿತ ಕೃತಿ. ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳಿಂದ ಮೆಚ್ಚಿಗೆ ಪಡೆದಿರುವ ಇದು ಯಾಳವಾರರ ಸಂಪಾದನಾ ಚಾತುರ್ಯವನ್ನು ಎತ್ತಿ ತೋರುತ್ತದೆ.

ಈ ಹಿಂದೆ ಒಬ್ಬ ಕವಿಯ ಹಾಗೂ ಒಬ್ಬ ಕಥಗಾರನ ಒಂದು ಇಡೀ ಕೃತಿಯನ್ನೇ ಪಠ್ಯವನ್ನಾಗಿಸುವ ಪರಿಪಾಠವಿತ್ತು. ಈಗ ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಮಹತ್ವದ ಲೇಖಕರು ಬೆಳೆದು ನಿಂತಿದ್ದಾರೆ. ಹೀಗಾಗಿ ಒಬ್ಬರ ಕೃತಿ ಓದುವುದಕ್ಕಿಂತ, ಪ್ರಮುಖ ಲೇಖಕರ ರಚನೆಗಳನ್ನು ಸಂಗ್ರಹಿಸಿ, ಹೊಸ ಸಂಕಲನದ ಮೂಲಕ ಓದುವುದು ಹೆಚ್ಚು ಸೂಕ್ತವೆನಿಸಿತು. ಇದರಿಂದ ವಿವಿಧ ಸಮುದಾಯಗಳ –ವಿವಿಧ ಜೀವನಾನುಭವಗಳನ್ನು ತಿಳಿದುಕೊಳ್ಳಲು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ, ಅನೇಕ ಮಹತ್ವದ ಲೇಖಕರನ್ನು ಒಮ್ಮೇಲೆ ಓದಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಹೊಸಗನ್ನಡ ಕಾವ್ಯ ಸಂಗ್ರಹಗಳನ್ನು ವಿವಿಧ ಘಟ್ಟಗಳಲ್ಲಿ ರಚನೆಯಾದ ಸಂಕಲನಗಳಿಂದ ಸಂಗ್ರಹಿಸಿ ಪ್ರಕಟಿಸಲಾಗಿದೆ[೬೧] ಪ್ರಧಾನ ಸಂಪಾದಕರ ನುಡಿಯಲ್ಲಿ.

ಹೊಸಗನ್ನಡದ ಕನ್ನಡ ಅಭ್ಯಾಸ ಮಂಡಳಿಯ ನಿರ್ದೇಶನದಂತೆ ಕನ್ನಡದ ಶ್ರೇಷ್ಠ ಹೊಸಗನ್ನಡ ಕವಿಗಳಾದ ದ.ರಾ.ಬೇಂದ್ರೆ, ಎಂ.ಗೋಪಾಲಕೃಷ್ಣ ಅಡಿಗ,

---

೬೧. ಡಾ. ಬಸವರಾಜ ಸಬರದ – ಹೊಸಗನ್ನಡ ಕಾವ್ಯ ಸಂಗ್ರಹ ಪುಟ v

ಜಿ.ಎಸ್.ಶಿವರುದ್ರಪ್ಪ, ಜಂಬಣ್ಣ ಅಮರಚಿಂತ, ಸರಜುಕಾಟ್ಕರ್, ಸವಿತಾನಾಗಭೂಷಣ, ರಂಜಾನ್ ದರ್ಗಾ, ಅರವಿಂದ ಮಾಲಗತ್ತಿ ಹಾಗು ವಿಜಯಶ್ರೀ ಸಬರದ ಅವರ ನಾಲ್ಕು ನಾಲ್ಕು ಕವನಗಳನ್ನು ಈ ಸಂಕಲನದಲ್ಲಿ ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಂಡಿರುವುದು ಯಾಳವಾರರ ಕಾವ್ಯಾಸಕ್ತಿ ಹಾಗೂ ಮನೋಧರ್ಮವನ್ನು ಸರಿಯಾಗಿ ಗುರುತಿಸಲು ಸಹಾಯಕಾರಿಯಾಗುತ್ತದೆ.

ನಾಡು-ನುಡಿ ಪ್ರೇಮ, ಸಾಮಾಜಿಕ ಕಳಕಳಿ, ಕೋಮು ಸೌಹಾರ್ದತೆ, ಸ್ತ್ರೀಪರ ಚಿಂತನೆ ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವಂತಿರುವ ಹಾಗೂ ಸಮಾಜದ ಒಳತಿಗಾಗಿ ತುಡಿಯುತ್ತಿರುವ ಇಲ್ಲಿಯ ಕವನಗಳು, ಸೃಜನಶೀಲತೆಯ ಸಾಧ್ಯತೆಗಳನ್ನು ಒಳಗೊಂಡಿರುವ, ಆಧುನಿಕತೆ ಮತ್ತು ಸಂಪ್ರದಾಯಗಳ ನಡುವಿನ ಸಂಘರ್ಷವನ್ನು ಕುರಿತು ಚರ್ಚಿಸುವ ಆಶಯ ಹೊಂದಿವೆ[೭೨] ಎಂದಿರುವ ಸಂಪಾದಕರು ನವೋದಯ, ನವ್ಯ, ದಲಿತ ಬಂಡಾಯ ಹಾಗೂ ಮಹಿಳಾ ಪರವಾದ ಪ್ರಮುಖ ಸಂವೇದನೆಗಳನ್ನು ಕಟ್ಟಿಕೊಡುತ್ತವೆ ವಿದ್ಯಾರ್ಥಿಗಳನ್ನು ಹಾಗೂ ಅವರ ಓದಿನ ಹರಹುಗಳನ್ನು ಗಮನದಲ್ಲಿರಿಸಿಕೊಂಡು ಕವಿ-ಕಾವ್ಯದ ಪರಿಚಯವನ್ನು ಸಂಕ್ಷಿಪ್ತವಾಗಿಯಾದರೂ ಅರ್ಥಪೂರ್ಣವಾಗಿ ಮಾಡಿಕೊಡಲಾಗಿದೆ. ಕವನ ಹಾಗೂ ಅವುಗಳ ಆಶಯಗಳನ್ನು ಕಠಿಣ ಶಬ್ದಾರ್ಥಗಳನ್ನು ಅನುಬಂಧದಲ್ಲೇ ನೀಡಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿತವಾಗಿರುವ (೨೦೦೯) ಈ ಕವನ ಸಂಕಲನವು ಗು.ವಿ.ವಿದ್ಯಾಲಯದ ಅತ್ಯುತ್ತಮ ಪಠ್ಯಪುಸ್ತಕದಲ್ಲಿ ಒಂದಾಗಿದೆ ಎನ್ನಬಹುದು. ಇದರ ಸಂಪಾದನೆಯಲ್ಲಿ ಸೋಮನಾಥ ಯಾಳವಾರರ ಶ್ರಮ ಎದ್ದು ಕಾಣುತ್ತಿದ್ದು, ಹೊಸಗನ್ನಡ ಸಾಹಿತ್ಯದ ಸ್ಥೂಲನೋಟವನ್ನು ಗುರುತಿಸುವವರಿಗೆ ಇದೊಂದು ಸಂಕಲನವಾಗಿ ಮೂಡಿನಿಂತಿದೆ ಎಂದು ಹೇಳಬಹುದು.

೫. ಸಂಕೀರ್ಣ ಸಾಹಿತ್ಯ:-

ಸೋಮನಾಥ ಯಾಳವಾರರ ಕಾವ್ಯೇತರ ಕೃತಿಗಳಲ್ಲಿ ಸಂಶೋಧನೆ, ವಿಮರ್ಶೆ, ಜೀವನ ಚರಿತ್ರೆ, ಸಂಪಾದನೆ ಕೃತಿಗಳನ್ನು ಹೊರತು ಪಡಿಸಿ ಉಳಿದ

---

೭೨. ಡಾ. ಸೋಮನಾಥ ಯಳವಾರ – ಹೊಸಗನ್ನಡ ಕಾವ್ಯ ಸಂಗ್ರಹ ಪುಟ vii ೨೦೦೯

ಕೃತಿಗಳನ್ನು, ಲೆಖನಗಳನ್ನು ಸಂಕೀರ್ಣ ಭಾಗದಲ್ಲಿ ಅವಲೋಕಿಸಲಾಗಿದೆ. ಸಾಮಾನ್ಯವಾಗಿ ಸಮಿಕ್ಷೇಗಳು ಚಿಂತನ ಪರವಾದ ಲೇಖನಗಳು, ಹಲವು ಕೃತಿಗಳಿಗೆ ಬರೆದ ಮುನ್ನುಡಿಗಳ, ಅಭಿಪ್ರಾಯಗಳು ಈ ಸಾಹಿತ್ಯದಲ್ಲಿ ಸೇರ್ಪಡೆಯಾಗಿವೆ.

೫.೧ – ಯಾಳವಾರರ 'ಮೊದಲ ಕೃತಿ' ಹುಮನಾಬಾದ ತಾಲ್ಲೂಕು ದರ್ಶನವು ಸಮೀಕ್ಷೆಯುಳ್ಳ ಒಂದು ಪುಸ್ತಕೆ. ಅದು ೧೯೮೬ ರಲ್ಲಿ ಇಂಡಿಯನ್ ಬುಕ್ ಹೌಸ್ ಬೆಂಗಳೂರಿನಿಂದ ಪ್ರಕಟಗೊಂಡಿದೆ ಕರ್ನಾಟಕ ಪ್ರಗತಿಯ ಮುನ್ನಡೆ ಮಾಲೆಯಲ್ಲಿ ಪ್ರಕಟವಾಗಿರುವ ತಾಲ್ಲೂಕು ದರ್ಶನ ಪುಸ್ತಕಗಳಲ್ಲಿ ಇದು ನಾಲ್ಕನೆಯದು. ೫೬ ಪುಟಗಳ ಈ ಪುಸ್ತಕವು ತಾಲೂಕಿನ ಸಮಗ್ರ ವಿಷಯವನ್ನು ಸಮೀಕ್ಷೆ ಮಾಡಿ ಹೇಳಿರುವುದು ಈ ಪುಸ್ತಕದ ವೈಶಿಷ್ಟ್ಯವೆನ್ನಬಹುದು.

ಕರ್ನಾಟಕದ ಉತ್ತರದ ತುದಿಯಲ್ಲಿರುವ 'ಹುಮನಾಬಾದ' ಬೀದರ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರ – 'ಜಯಸಿಂಗಪುರ' ಎಂಬುದು ಇದರ ಪ್ರಾಚೀನ ಹೆಸರು. ಮುಸ್ಲಿಂ ಆಳರಸರು ಇದಕ್ಕೆ ಕೊಟ್ಟಿರಬಹುದಾದ ಹೆಸರು ಹುಮನಾಬಾದ, ಮುಂಬೈ– ಹೈದ್ರಾಬಾದ ಹೆದ್ದಾರಿಯ ಮೇಲಿರುವ ಈ ನಗರ ಹಾಗೂ ತಾಲ್ಲೂಕನ್ನು ದರ್ಶಿಸುವಲ್ಲಿ ಯಾಳವಾರರ ಈ ಕೃತಿಯು ತುಂಬಾ ಉಪಯುಕ್ತವಾಗುತ್ತದೆ.

ಭೌಗೋಳಿಕ ಪರಿಚಯ, ಮೇರೆಗಳು, ಹವಾಗುಣ, ಮಳೆ, ಪ್ರಾಕೃತಿಕ ಸಂಪನ್ಮೂಲಗಳು, ಜನವರ್ಗಗಳು ಮತ್ತು ಬಣಗಳು, ತಾಲೂಕಿನ ಚರಿತ್ರೆ, ಐತಿಹ್ಯ, ನಗರ ರಚನೆ, ಶ್ರೀ ವೀರಭದ್ರೇಶ್ವರ ದೇವಾಲಯ, ತಾಲ್ಲೂಕಿನ ಪ್ರೇಕ್ಷಣಿಯ ಸ್ಥಳಗಳಾದ, ಬಸವತೀರ್ಥ, ಮೋಳಕೇರಾ, ಚಿಟಗುಪ್ಪಾ, ಬೆಳಕೇರಾ, ಹಳ್ಳಿಖೇಡ(ಬಿ) ಹಳ್ಳಿಖೇಡ (ಕೆ) ಮೊದಲಾದ ಗ್ರಾಮಗಳ ಸಂಕ್ಷಿಪ್ತ ಪರಿಚಯ, ಮೀನುಗಾರಿಕೆ, ಕೈಗಾರಿಕೆಗಳು, ವಿದ್ಯಾಭ್ಯಾಸ ಸೌಕರ್ಯಗಳ, ಪ್ರತಿಭಾವಂರು, ಕಲೆಗಳು, ಸಾರಿಗೆ ಸಂಪರ್ಕ ಸಾಮಾಜಿಕ ಸೇವೆಗಳು, ವೈದ್ಯಕೀಯ ನೆರವು, ಆಡಳಿತ, ಅಭಿವೃದ್ಧಿ, ಕಾರ್ಯಗಳು, ಮುನ್ನೋಟ, ಹೋಬಳಿ ಗ್ರಾಮಗಳು ಮತ್ತು ಅವುಗಳಲ್ಲಿ ಬರು ಹಳ್ಳಿಗಳು ಹಾಗೂ ಹುಮನಾಬಾದ ತಾಲ್ಲೂಕಿನ ಅಂದಿನ ಸ್ಥೂಲ – ನೋಟವನ್ನು ಅಂಕಿ–ಸಂಖ್ಯೆಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಹುಮನಾಬಾದ ಪಟ್ಟಣ ಹಾಗೂ ತಾಲ್ಲೂಕನ್ನು ಕುರಿತು ಪ್ರಪ್ರಥಮವಾಗಿ ಬರೆದ ಪುಸ್ತಕ ಇದಾಗಿರುವುರಿಂದ ಈ ಕೃತಿಗೆ ಹುಮನಾಬಾದ ಸಾಹಿತ್ಯದ ಇತಹಾಸದಲ್ಲಿ ಪ್ರಮುಖ ಸ್ಥಾನಲಭೀಸಿದೆ ಈ ಕೃತಿ ರಚನೆಯಲ್ಲಿ ಯಾಳವಾರರು ತೋರಿರುವ ಶ್ರದ್ಧೆ, ಶ್ರಮ, ಕ್ಷೇತ್ರಾಧ್ಯಯನದ ಹಾಗು ಅಧ್ಯಯನ ಪೂರ್ಣ ವಿವರಣೆಯು ಅವರ ಸಂಶೋಧನಾ ದೃಷ್ಟಿಗೆ ಕನ್ನಡಿ ಹಿಡಿಯುತ್ತವೆ. ಅಂತೆಯೇ ವಿದ್ವಾಂಸರೊಬ್ಬರು–'ಹುಮನಾಬಾದ ತಾಲ್ಲೂಕು ದರ್ಶನ'ವನ್ನು ಮೊಟ್ಟಮೊದಲು ರಚಿಸಿ ಈ ಭಾಗದಲ್ಲಿ ಸಾಹಿತ್ಯ ಸಂಶೋಧನೆಗೆ ಚಾಲನೆ ನೀಡಿದವರಲ್ಲಿ ಡಾ.ಸೋಮನಾಥ ಯಾಳವಾರರು ಒಬ್ಬರು.[೬೩] ಎಂದಿರುವುದ ಸರಿಯಾದ ಅಭಿಪ್ರಾಯ.

೫.೨ 'ಹುಮನಾಬಾದ ಸಾಂಸ್ಕೃತಿಕ ನೋಟ' ಎಂಬ ಇನ್ನೊಂದು ಲೇಖನವು ಹುಮನಾಬಾದ ನಗರದ ಸಾಂಸ್ಕೃತಿಕ ಪರಿಚಯ ಮಾಡಿಕೊಡುತ್ತದೆ. ಕೇವಲ ಈ ಪಟ್ಟಣಕ್ಕೆ ಸೀಮಿತವಾಗಿರುವ ಈ ಲೇಖನವು ಊರ ರಚನೆ, ಕೋಟೆ–ಕೊತ್ತಳ, ಇದರ ಐತಿಹಾಸಿಕತೆ, ರಸ್ತೆ, ಅಗಸೆ, ಶ್ರೀ ವೀರಭದ್ರ ದೇವಸ್ಥಾನ, ಜಾತ್ರಾಪ್ರಸಂಗ, ಜನ ಜೀವನದ ಪರಿ, ಸಂಸ್ಕಾರ, ನಂಬಿಕೆಗಳನ್ನು ಹಾಗೂ ವಿವಿಧ ಧರ್ಮ, ಭಾಷೆ, ಜನಾಂಗಗಳ ಪರಿಚಯ, ಸಾಹಿತ್ಯಿಕ, ಹಾಗೂ ಕಲಾತ್ಮಕ ವಿವರಣೆಗಳನ್ನು ನೀಡಿ ಗಮನ ಸೆಳೆಯುತ್ತದೆ. ಯಾಳವಾರರ ಆಳವಾದ ಅಧ್ಯಯನವನ್ನು, ಹಾಗೂ ಪರಿಸರವನ್ನು ಅವರ ಕಂಡ ರೀತಿಯನ್ನು ಈ ಲೇಖನವು ಸ್ಪಷ್ಟಪಡಿಸುತ್ತದೆ.

೫.೩ 'ಆದಯ್ಯ' ಶರಣನನ್ನು ಕುರಿತು ಆಳವಾದ ಅಧ್ಯಯನ ಕೈಕೊಂಡಿರುವ ಯಾಳವಾರರು ಜನಪದ ಸಾಹತ್ಯದಲ್ಲಿ ಆದಯ್ಯ ಹೀಗೆ ಅಭಿವ್ಯಕ್ತಗೊಂಡಿದ್ದಾನೆಂಬುದನ್ನು ಕುರಿತು 'ದುಂದುಮೆ ಪದದಲ್ಲಿ ಆದಯ್ಯ' ಎಂಬ ಲೇಖನ ಬರೆದಿರುವರು. ಜನಪದರ ದೃಷ್ಟಿಯಲ್ಲಿ ಆದಯ್ಯ ಹೀಗಿದ್ದನೆಂಬ ನಿಲುವನ್ನು ಈ ಲೇಖನವು ವಿವರಿಸುತ್ತದೆ. ಆದಯ್ಯನನ್ನು ಭಿನ್ನ ನೆಲೆಯಿಂದ ನೋಡುವ ಒಂದು ನೋಟ ಇಲ್ಲಿರುವುದನ್ನು ಕಾಣಬಹುದು.

---

೬೩. ಡಾ. ಗವಿಸಿದ್ದಪ್ಪ ಪಾಟೀಲ, ಜಯದೇವಿ ಗಾಯಕವಾಡ – ಕಲ್ಯಾಣ ಬೆಳಕು ಪುಟ ೪೮ ೨೦೦೯

೫.೪ ೨೦೦೩ ರಲ್ಲಿ ಪ್ರಸಾರಾಂಗ ಸ್ನಾತಕೋತ್ತರ ಕನ್ನಡ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಕರ್ನಾಟಕ ಕಾಲೇಜ ಬೀದರದಿಂದ ಪ್ರಕಟಗೊಂಡ 'ಅಕ್ಷರ ಪ್ರೀತಿ' ವೈಚಾರಿಕ ಲೇಖನಗಳ ಸಂಗ್ರಹಕ್ಕೆ ಸೋಮನಾಥ ಯಾಳವಾರ ಬರೆದ ಲೇಖನವೆಂದರೆ – 'ತೌಲನಿಕ ಕಾವ್ಯ ತತ್ವ ಮೀಮಾಂಸೆ ಒಂದು ಸಮೀಕ್ಷೆ'[೬೪]

ಇದೊಂದು ವಿಮರ್ಶಾತ್ಮಕ ದೃಷ್ಟಿಯುಳ್ಳ ಲೇಖನವಾಗಿದ್ದು. ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ. ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆಗಳಲ್ಲಿ ಹಲವು ತತ್ವ, ವಿವರಣೆ ಅಭಿಪ್ರಾಯಗಳಲ್ಲಿ ಸಾಮ್ಯ ವೈಶಮ್ಯಗಳೆರಡೂ ಉಂಟು ಬಹಳ ಕಡೆ ವ್ಯತ್ಯಾಸ ಕಾಣುವುದು ತತ್ವದಲ್ಲಲ್ಲ, ಅದರ ಮೇಲೆ ಒತ್ತು ಕೊಡುವ ದೃಷ್ಟಿಯಲ್ಲಿ ಎನ್ನುವುದನ್ನು ಯಳವಾರರು ಈ ಲೇಖನದಲ್ಲಿ ಅರ್ಥವತ್ತಾಗಿ ಕಾಣಿಸಿದ್ದಾರೆ.

ಭಾರತೀಯರಲ್ಲಿ ವ್ಯವಸ್ಥಿತ ತತ್ವವಾಗಿ, ಸಿದ್ಧಾಂತವಾಗಿ ಪ್ರತಿಪಾದಿತವಾಗಿರುವ ಸಂಗತಿಗಳು ಪಾಶ್ಚಾತ್ಯರಲ್ಲಿ ಪ್ರಾಸಂಗಿಕ ಹೇಳಿಕೆಗಳಾಗಿ, ಕೆಲವೊಮ್ಮೆ ವ್ಯಾಖ್ಯಾನ್ನವಾಗಿ ನಿರೂಪಿತವಾಗಿರಬಹುದು. ಆದರೂ ಅವುಗಳ ಪರಿಣಾಮದಲ್ಲಿ ಚಿಂತನೆಗಳಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯರ ನಿಲುವುಗಳು ಒಂದೇ ಆಗಿರುವ ಸಂದರ್ಭಗಳು ಆಶ್ಚರ್ಯ ಮೂಡಿಸುತ್ತವೆ. ಕೆಲವೆಡೆ ಭಿನ್ನತೆಯ ತಾಣಗಳನ್ನು ಗುರುತಿಸಬಹುದೆಂದು ಹೇಳಿರುವಲ್ಲಿ ಲೇಖಕರ ಅಧ್ಯಾಯನ ಶೀಲತೆ ಹಾಗೂ ತೌಲನಿಕ ದೃಷ್ಟಿ ಗಮನಾರ್ಹವಾಗುತ್ತದೆ.

'ರಸ–ಧ್ವನಿ–ಔಚಿತ್ಯ'ಗಳು ಭಾರತೀಯ ಕಾವ್ಯ ಚಿಂತನೆಯ ಅತ್ಯಂತ ಶ್ರೇಷ್ಠ ಫಲಗಳು. 'ರಸ'ಕ್ಕೆ ಸಮಾನವಾದ ತತ್ವಗಳಾಗಲಿ ಸಂವಾದಿ ಪರಭಾಷೆಯಾಗಲಿ ಪಾಶ್ಚಾತ್ಯರಲಿಲ್ಲ. ಭಾರತೀಯರ ಸಹೃದಯ ತತ್ವವು ಇನ್ನೊಂದು ವಿಶಿಷ್ಟ ಚಿಂತನೆ, ರಸ ತತ್ವಕ್ಕೆ ತಳಹದಿಯಗಿರುವ 'ಸಾಧಾರಣೀಕರಣ ತತ್ವ' 'ಭಾವಾನುಕೀರ್ತನಂ' ಎಂಬವುಗಳು ಕಲೆಯ ರಹಸ್ಯದ ಮಾರ್ಗ ಸೂಚಿಕೆಗಳು. ಭಾರತೀಯ ಕಾವ್ಯ ಚಿಂತನೆ ಸಿದ್ಧಾಂತ ಪ್ರಧಾನವಾಗಿದ್ದರೆ, ಪಾಶ್ಚಾತ್ಯರದು ವಿಮರ್ಶಾ ಮಾರ್ಗ ಹೀಗಾಗಿ

---

೬೪. ಡಾ.ಜಗನ್ನಾಥ ಹೆಬ್ಬಾಳೆ (ಸಂ) ಅಕ್ಷರ ಪ್ರೀತಿ – ಪುಟ ೩ ರಿಂದ ೨೬ ೨೦೦೩

ಇಲ್ಲಿ ಇವುಗಳ ವಿವೇಚನೆಯು ಭಿನ್ನವೆನಿಸಿದರೂ ಸಹ ಭಾರತೀಯ ಸಿದ್ಧಾಂತಗಳ, ಕೆಲವು ತತ್ವಗಳ ಪಕ್ಕದಲ್ಲಿ, ಅದನ್ನು ಕುರಿತಿರುವ ಪಾಶ್ಚಾತ್ಯ ಪ್ರತಿಪಾದನೆಗಳನ್ನಿಟ್ಟು ನೋಡಲು ಪ್ರಯತ್ನಸುವುದು ಲೇಖನದ ಉದ್ದೇಶವಾಗಿದ್ದು, ಕಾವ್ಯದ ಸೃಷ್ಟಿಗೆ ಕಾರಣವಾಗಿರುವ ಪ್ರತಿಭೆ (Imagination) - ಭಾವಾನುಕೀರ್ತನಂ (Imitation) (ಅನುಕರಣೆ), ಸಾಧಾರಣೀಕರಣ (Psychicol Distance) (ಮಾನಸಿಕ ದೂರ) ರೀತಿ (Style) (ಶೈಲಿ) ಸ್ವರೂಪಗಳನ್ನು ಮಾತ್ರ ಇಲ್ಲಿ ಸ್ಥೂಲವಾಗಿ ವಿವೇಚಿಸಲು ಪ್ರಯತ್ನಿಸುವುದಾಗಿ ಯಾಳವಾರರು ಹೇಳಿದ್ದನ್ನು[೬೫] ಇಲ್ಲಿ ಕಾಣಬಹುದು.

ಸಾಹಿತ್ಯದಲ್ಲಿ ಅಂತರ್ ಶಿಸ್ತೀಯ ಅಧ್ಯಯನಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇಂತಹ ಚಿಂತನೆ ಲೇಖನಗಳಿಗೆ ಹೆಚ್ಚಿನ ಮನ್ನಣೆ ದೊರೆಯುತ್ತದೆ. ಈ ನಿಟ್ಟಿನಲ್ಲಿ ಯಾಳವಾರರ ಈ ತೌಲನಿಕ ಚಿಂತನೆ ಲೇಖನ ಗಮನಾರ್ಹವಾಗುತ್ತದೆ.

೫.೫ 'ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ನಿರ್ಲಕ್ಷಿತ ಪಾತ್ರಗಳು':- ಎಂಬ ವೈಚಾರಿಕ ಲೇಖನದಲ್ಲಿ ಹಳೆಗನ್ನಡ ಕಾವ್ಯಗಳ ಕುರಿತ ಪ್ರಮುಖ ಚಿಂತನೆಯೊಂದಿಗೆ, ಚಂಪೂ ಕವಿಗಳ ಕೃತಿಗಳ ವಸ್ತು ಪೌರಾಣಿಕ, ಅವುಗಳಿಗೆ ಆಶ್ರಮ ರಾಜಾಸ್ಥಾನ. ಈ ಎರಡೂ ಪ್ರಸಂಗಗಳು ಹಳೆಗನ್ನಡ ಕವಿಗಳ ಕೃತಿಗಳ ಸ್ವರೂಪವನ್ನು ಸಾಧ್ಯವಾದಷ್ಟು ನಿಯಂತ್ರಿಸದೆವೆಂಬುದನ್ನು ಎತ್ತಿ ತೋರಿಸಿರುವ ಲೇಖಕರು, "ರಾಜತ್ವವನ್ನು ಒಪ್ಪಿಕೊಂಡವರ ಕಾವ್ಯ ವಸ್ತುಗಳೆಲ್ಲ ಬಹುತೇಕ ರಾಜರಾಣಿಯರಿಗೆ ಸಂಬಂಧ ಪಟ್ಟವು. ತೀರ್ಥಂಕರಂಥ ಮಹಾವೈರಾಗ್ಯಪರರೂ ಪೂರ್ವ ಪುಣ್ಯದ ಫಲವಾಗಿ ರಾಜರಾಗಿಯೇ ಹುಟ್ಟಿ ಮುಂದೆ ಸಿದ್ದಿ ಪಡೆದರು. ಪೌರಾಣಿಕ ಕಥಾವಸ್ತು, ರಾಜತ್ವದ ಜೀವನ ದೃಷ್ಟಿ, ಮತ ಧರ್ಮಗಳ ಪ್ರಭಾವ, ಆಕರ ಕೃತಿಗಳ ಋಣ, ಆಶ್ರಯದಾತರ ಹಣಕ್ಕೆ ಸದಾ ಋಣಿಯಾಗಿರುವ ಈ ಕಾವ್ಯದಲ್ಲಿ ಅಭಿವ್ಯಕ್ತಗೊಂಡಿರುವ ಪಾತ್ರಗಳಲ್ಲಿ ಕೆಲವು ಮೂಲ ಕೃತಿಗಳಿಂದ ನೇರವಾಗಿ ಅಚ್ಚುಗೊಂಡಂತೆ ಇಳಿದವುಗಳೋ, ಕೆಲವು ಮತ ಧರ್ಮಗಳ ಪಡಿಯಚ್ಚಿನಲ್ಲಿ ಆಮದು ಮಾಡಿಕೊಂಡಂಥವುಗಳೋ,

---

೬೫. ಡಾ. ಜಗನ್ನಾಥ ಹೆಬ್ಬಾಳೆ – ಸಂ. ಅಕ್ಷರ ಪ್ರೀತಿ ಪುಟ ೩-೪ ೨೦೦೩

ಇನ್ನು ಕೆಲವು ಸಮಸ್ತಕಾಲದ ವೇಷತೊಟ್ಟು, ಬಣ್ಣ ಹಚ್ಚಿಕೊಂಡು ಹೊಸಭಾವ ಮೂಡಿಸಲು ಬಂದು ಆಗಾಗ ಹಳೆಯದನ್ನೆ ಮೆಲುಕು ಹಾಕುವಂತಹುಗಳೋ, ಆಗಿವೆ. ಯುಗಧರ್ಮದ ಪ್ರೇರಣೆ ಹಾಗೂ ಕವಿಯ ಮನೋಧರ್ಮದ ಧೋರಣೆಯ ಸೆಳವಿನಿಂದ ತಳ್ಳಿಕೊಂಡು ನಿಂತಿರುವ ಕೆಲವು ಪಾತ್ರಗಳು ನಿರ್ಲಕ್ಷಗೊಂಡಿರುವುದನ್ನು ಯಾಳವಾರ ಅತ್ಯಂತ ವೈಚಾರಿಕವಾಗಿ ಬಿಡಿಸಿದ್ದಾರೆ ಈ ಲೇಖನದಲ್ಲಿ. [೬೬]

'ಚನ್ನಬಸವೇಶ್ವರ ಹಿರೇಮಠ ಹಾರಕೂಡ':– ಎಂಬ ಲೇಖನವು ೨೦೦೭ ರಲ್ಲಿ ರುದ್ರಾಕ್ಷಿಮಠ ನಾಗನುರು, ಬೆಳಗಾಂವಿಯವರ ಪ್ರಕಾಶನದಲ್ಲಿಯೆ 'ದಾಸೋಹ' ವಿದ್ಯಾರ್ಥಿ ಪ್ರಸಾದ ನಿಲಯದ ಅಮೃತ ಮಹೋತ್ಸವ ಸಂಸ್ಮರಣ ಸಂಪುಟ'ದಲ್ಲಿ ಪ್ರಕಟವಾಗಿದೆ.[೬೭] ಆಧುನಿಕ ಕರ್ನಾಟಕದ ನಿರ್ಮಾಣದಲ್ಲಿ ಲಿಂಗಾಯತ ದಾಸೋಹ ಮಠಗಳು ನಿರ್ವಹಿಸಿದ ಪಾತ್ರ ಅತ್ಯಂತ ಮಹತ್ವವಾದುದು. ಭಾರತದ ಸಂದರ್ಭದಲ್ಲಿಯೇ ಇತರ ಪ್ರದೇಶಗಳಿಗೆ ಹೋಲಿಸಿದರೆ ಲಿಂಗಾಯತ ಮಠಗಳ ಅನ್ನದಾಸೋಹ, ಜ್ಞಾನದಾಸೋಹ ಸೇವೆಯು ಕರ್ನಾಟಕದಲ್ಲಿಯೇ ವಿಶೇಷವೆನ್ನಬಹುದು. ಇದಕ್ಕೆ ಮುಖ್ಯ ಕಾರಣ ಹನ್ನೆರಡನೆಯ ಶತಮಾನದ ಶಿವಶರಣರು. ಅಂದು ಬಸವಣ್ಣನವರು ಕಂಡ ಜನಕಲ್ಯಾಣದ ಕನಸನ್ನು ಆರೋಗ್ಯಪೂರ್ಣ ಸಮಾಜದ ಕಲ್ಪನೆಯನ್ನು ಸಾಕಾರಗೊಳಿಸುವ ಉದ್ದೇಶದಿಂದಲೇ ಇಪ್ಪತ್ತನೆಯ ಶತಮಾನದಲ್ಲಿ ಈ ಮಠಗಳು ದಾಸೋಹ ಧರ್ಮವನ್ನು ಆಚರಣೆಗೆ ತಂದವು.[೬೮]

'ಶಿಕ್ಷಣದ ಮೂಲಕ ಮಾತ್ರ ಸಮಾಜದ ಸರ್ವಾಂಗೀನ ಅಭಿವೃದ್ಧಿ ಸಾಧ್ಯ' ಎಂಬುದನ್ನು ಅರಿತ ಹಲವು ಮಠಗಳು ಹಾಗೂ ಅಲ್ಲಿರುವ ಪ್ರಗತಿಪರ ಮನೋಧರ್ಮದ ಸ್ವಾಮಿಗಳು ಬಡವಿದ್ಯಾರ್ಥಿಗಳ ಸಲುವಾಗಿ ಉಚಿತ ಪ್ರಸಾದ ನಿಲಯ ಮತ್ತು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು., ಅಂಥ ಮಠಗಳಲ್ಲಿ ಬೀದರ ಜಿಲ್ಲೆಯ ಹಾರಕೂಡ ಮಠವು ಒಂದೆಂಬುದನ್ನು ಲೇಖಕರು ತೋರಿಸಿದ್ದಾರೆ.

---

೬೬. ಡಾ. ಜಗನ್ನಾಥ ಹೆಬ್ಬಾಳೆ – ಬೆಳಕಿಂಡಿ ಮಟ ೨೨-೨೩ ೨೦೦೯

೬೭. ಸಂ. ರಾಮಕೃಷ್ಣ ಮರಾಠೆ – ದಾಸೋಹ ಮಟ ೨೨೦-೨೪ ೨೦೦೭

೬೮. ಸಂ. ರಾಮಕೃಷ್ಣ ಮರಾಠೆ – ದಾಸೋಹ ಸಂಪಾದಕೀಯ ಮಟ viii ೨೦೦೭

ಬಸವಕಲ್ಯಾಣದಿಂದ ನೈರುತ್ಯ ದಿಕ್ಕಿನಲ್ಲಿ ಸುಮಾರು ೨೦ಕಿ.ಮೀ ದೂರದಲ್ಲಿರುವ ಪುಟ್ಟಹಳ್ಳಿ ಹಾರಕೂಡ ಬಸವಾದಿ ಶರಣರ ಆದರ್ಶ ಪರಂಪರೆಯಲ್ಲಿ ಮುನ್ನಡೆದಿರುವ 'ಹಾರಕೂಡ ತಪಸ್ವಿಗಳ ತಾಣ ಹಾಗೂ ಚನ್ನಬಸವ ಶಿವಯೋಗಿಗಳಿದ್ದ ಪುಣ್ಯಕ್ಷೇತ್ರ. ಈ ಮಠದ ಚಾರಿತ್ರಿಕ ಹಿನ್ನೆಲೆ, ಬೃಹನ್ಮಠವಾಗಿದ್ದ ಅದು ಸಂಗನ ಬಸವ ಶಿವಯೋಗಿಗಳಿಂದ 'ದಾಸೋಹ' ಮಠವಾಗಿ ಆರಂಭಗೊಂಡ ಬಗೆಯನ್ನು ಅದರ ಸ್ವರೂಪ, ಸಂಪನ್ಮೂಲಗಳನ್ನು, ದಾಸೋಹ ಪರಂಪರೆಯನ್ನು ತಿಳಿಸುತ್ತ ಚನ್ನಬಸವ ಶಿವಯೋಗಿಗಳ ಮಹಾತ್ಮೆ ಹಾಗೂ ಈಗಿರುವ ಪೀಠಾಧಿಪತಿಗಳಾದ ಶ್ರೀ ಚನ್ನವೀರ ಶಿವಾಚಾರ್ಯರ' ದಿವ್ಯ ಕೃಪೆಯಿಂದ 'ದಾಸೋಹ' ಮಠವಾಗಿ ಬೆಳೆದಿರುವುದನ್ನು ಯಾಳವರರು ವಿವರವಾಗಿ ಬರೆದಿರುವುದನ್ನು ಕಾಣಬಹುದು. ೨೦೦೨ ರಿಂದ ಈ ಮಠದಲ್ಲಿ 'ಉಚಿತ ವಸತಿ ನಿಲಯ' ಹಾಗೂ ಶಿಕ್ಷಣ ಸಂಸ್ಥೆ ಸಂಸ್ಥಾನಗೊಂಡು ಪ್ರಗತಿಪಥದಲ್ಲಿ ಮುನ್ನಡೆದಿರುವುದನ್ನು ಯಥಾರ್ಥವಾಗಿ ಹೇಳಿವುದನ್ನು ಮೆಚ್ಚಿಕೊಳ್ಳಬೇಕು.

ಶ್ರೀ ಮಠದ ದಾಸೋಹಕ್ಕೆ ಭಕ್ತರೇ ಆಸ್ತಿಯಾಗಿರುವುದನ್ನು ಹೇಳುತ್ತ, ಅಲ್ಲಿ ಪ್ರಸಾದ ದಾಸೋದೊಂದಿಗೆ, ಜ್ಞಾನದಾಸೋಹ ಬೆಳೆದು ಬಂದಿರುವುದನ್ನು ವಿವರಿಸಿದ್ದಾರೆ. ಆ ಮಠದಲ್ಲಿದ್ದು, ಓದಿ ಪ್ರಸಿದ್ಧರಾದವರ, ವಿಶೇಷ ಘಟನೆಗಳನ್ನು, ಮಠದ ಮುಂದಿನ ಯೋಜನೆಗಳ ಸಾರ ರೂಪವನ್ನು ನೀಡಿರುವುದು ಲೇಖನಕ್ಕೆ ವಾಸ್ತವಿಕತೆಯ ಆವರಣವನ್ನು ನೀಡಿದೆ ಎನ್ನಬಹುದು.

'ವಚನಗಳಲ್ಲಿ ಕೃಷಿಚಿಂತನೆ' ಎಂಬ ಲೇಖನವು ಸಂಶೋಧನ ಲೇಖನವಾಗಿದ್ದು ಸೋಮನಾಥ ಯಾಳವಾರರ 'ವಚನ ಸಾಹಿತ್ಯ'ದ ಅಧ್ಯಯನದ ವ್ಯಾಪ್ತಿಯನ್ನು ಸೂಚಿಸುತ್ತದೆ. ಇದು ಕಲ್ಯಾಣ ನಾಡಿನ ಶರಣ ಪರಿಷತ್ತು ಪ್ರಕಾಶಿಸಿರುವ 'ಹಸಿರು ಜಂಗಮ' ಅಭಿನಂದನ ಗ್ರಂಥದಲ್ಲಿ[೬೯] ೨೦೦೮ ರಲ್ಲಿ ಪ್ರಕಟಗೊಂಡಿದೆ 'ಹಲವು ನೆಲೆಗಳಲ್ಲಿ ಹೊಸದನ್ನು ಕಾಣಿಸುವ ವಚನ ಸಾಹಿತ್ಯ ಯುಗದ ಅದ್ವಿತೀಯ ಕೊಡುಗೆಯಾಗಿದೆ ಎಂಬುದನ್ನು ತಿಳಿಸುವ ಲೇಖಕರು 'ಸಕಲ

---

೬೯. ಸಂಪಾದನೆ ರಂಜಾನ ದರ್ಗಾ – ಹಸಿರು ಜಂಗಮ ಪುಟ ೨೧೭-೨೨೭ ೨೦೦೮

ಜೀವಾತ್ಮರಿಗೆ ಲೇಸನ್ನೇಬಯಸುವ ಶರಣರು, ಆ ಸೃಷ್ಟಿಯಲ್ಲಿ ದಂದಣ ದತ್ರಣವೆಂಬುದನ್ನು ಹೇಳಿರುವುದರಿಂದ ವಚನಗಳಲ್ಲಿ ಆದರ್ಶ ಜೀವನಕ್ಕೆ ಸಂಬಂಧಿಸಿದ ಏನೆಲ್ಲ ವಿಷಯಗಳಿರುವುದನ್ನು ಕಾಣಬಹುದಾಗಿದೆ ಎಂದು ತಿಳಿಸುತ್ತಾರೆ.

ಈ ವಚನಗಳ ರಚನೆಯಾದ್ದದೇ ಸಮಷ್ಟಿ ಕಲ್ಯಾಣಕ್ಕಾಗಿ ಎಂದೆನಿಸುತ್ತಿದ್ದುದರಿಂದ ಈಗ ಕಾಲಸರಿದಂತೆ ಶರಣರ ಬದುಕು ಬರಹಗಳು ಹೆಚ್ಚು ಮೌಲಿಕವಾಗುತ್ತಿವೆ. ವಚನ ಸಂಸ್ಕೃತಿಯಲ್ಲಿ 'ಕೃಷಿ'ಕಾಯಕವು ಒಂದು ಧರ್ಮವೇ ಎನಿಸಿತ್ತು ಎಂಬುದರತ್ತ ನಮ್ಮೆಲ್ಲರ ಗಮನ ಸೆಳೆಯುತ್ತಾರೆ. 'ಕೃಷಿಗೆ ಶರಣರು ಗುರುಪೂಜೆಯ ಸ್ಥಾನಮಾನ ಕಲ್ಪಿಸಿದ್ದನ್ನು ತಿಳಿಸುತ್ತಾ, ಆ 'ಆರಂಭ'ವ ಮಾಡುವ ಸಂಸಾರದ ಸ್ಥಿತಿ, ಆಗ ಹೇಗಿತ್ತು, ಈಗ ಹೇಗಿದೆ? ಎಂಬುದನ್ನು ತೌಲನಿಕವಾಗಿ ಗುರುತಿಸುತ್ತ, ಆ ಕಾಲದ ಕೃಷಿ ಜೀವನವನ್ನು ನಮ್ಮ ಕಣ್ಮುಂದೆ ನಿಲ್ಲಿಸಿದ್ದಾರೆ.

ಸೋಮನಾಥ ಯಾಳವಾರರು, ೫೦ ಕ್ಕಿಂತ ಹೆಚ್ಚು ಬಿಡಿ ಲೇಖನಗಳನ್ನು ಹಲವು ಸಂಚಿಕೆಗಳಲ್ಲಿ, ರಜತಮಹೋತ್ಸವ ಸ್ಮರಣ ಗ್ರಂಥಗಳಲ್ಲಿ, ಅಭಿನಂದನಾ ಕೃತಿಗಳಲ್ಲಿ, ವಾರ್ಷಿಕಗಳಲ್ಲಿ, ಮಾಸಿಕ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅವು ಒಂದಿಲ್ಲೊಂದು ಹೊಸ ದೃಷ್ಟಿಯ ಲೇಖನಗಳಾಗಿ ಗಮನಸೆಳೆಯುತ್ತವೆ ಎಂಬುವುದನ್ನು ಗುರುತಿಸಬಹುದಾಗಿದೆ.

ಬ). ಕಾವ್ಯ ಸಾಹಿತ್ಯದ ಒಳನೋಟಗಳು :-

೨೦ನೆಯ ಶತಮಾನ ಕಾವ್ಯ ಸಾಹಿತ್ಯದಲ್ಲಿ ಹೊಸತನವನ್ನು ತಂದ ಕಾಲ. ಪಾಶ್ಚಾತ್ಯ ಪ್ರೇರಣೆ ಪ್ರಭಾವಗಳಿಗೊಳಗಾದ ಕನ್ನಡಕಾವ್ಯ ತನ್ನ ಸಾಧ್ಯತೆಯ ಪರಧಿಯನ್ನು ಹಿಗ್ಗಿಸಿಕೊಂಡಿತು. ನವೋದಯ ಪ್ರಗತಿಶೀಲ, ನವ್ಯ, ಬಂಡಾಯ, ದಲಿತ, ನವೋತ್ತರ ಹೀಗೆ ಅನೇಕ ಘಟ್ಟಗಳಲ್ಲಿ ಮುನ್ನುಗಿ ಪ್ರವಹಿಸಿತು. ಈ ಹಿನ್ನೆಲೆಯಲ್ಲಿ ಬೀದರ ಜಿಲ್ಲೆಯಲ್ಲಿ ಬಂಡೆಪ್ಪ ಖೂಬಾ, ದೇಶಾಂತ ಹುಡಗಿ, ಕಾಶೀನಾಥ ಅಂಬಲಗೆ, ಪ್ರೇಮಾ ಸಿರ್ಸೆ, ವಿಕ್ರಮ ವಿಸಾಜಿ ಮೊದಲಾದವರು

ಪ್ರಮುಖರೆನಿಸದವರು. ಆ ನಿಟ್ಟಿನಲ್ಲಿ ಸೋಮನಾಥ ಯಾಳವಾರರ 'ಬಯಲೊಳಗಣಬಿಸಿ' ಕವನ ಸಂಕಲನವು ಮುಖ್ಯವಾದುದೆನಿಸುತ್ತದೆ.

ಸೋಮನಾಥ ಯಾಳವಾರರು ಪ್ರಮುಖವಾಗಿ ಸಂಶೋಧಕರು, ವಿಮರ್ಶಕರು ಎನಿಸಿದ್ದರೂ ಸಹ ಅವರೊಬ್ಬ ಕವಿ ಎನ್ನುವುದು ಬಹುಮುಖ್ಯ ಸಂಗತಿ ಎನ್ನಬಹುದು. ನವೋದಯದ ಸಂದರ್ಭದಲ್ಲಿಯೇ ಯಾಳವಾರರು ಕವಿತೆಗಳನ್ನು ಬರೆಯಲು ಆರಂಭಿಸಿದ್ದರು. ೧೯೭೫ ರ ಸುಮಾರಿನಲ್ಲಿಯೇ ಅವರು ಕವನಗಳನ್ನು ಬರೆದು ಓದಿದ್ದು ಉಂಟು. ಆದರೆ ಅವುಗಳೊಂದಿಗೆ ಇತ್ತೀನ ಹಲವು ಕವನಗಳು ಸೇರಿಕೊಂಡು ಅವು ಪ್ರಕಟಗೊಂಡದ್ದು ೨೦೧೧ ರಲ್ಲಿ ಇದಕ್ಕೆ ಹಲವು ಕವಿಗಳ ಗೆಳೆಯರ ಪ್ರೇರಣೆ – ಪ್ರೋತ್ಸಾಹಗಳೇ ಕಾರಣವೆನ್ನುತ್ತಾರೆ.

ಯಾಳವಾರರು ಬಿಡಿ ಬಿಡಿಯಾಗಿ ಹಲವು 'ವಚನಗಳನ್ನು ಪ್ರಕಟಿಸಿದ್ದರೂ, ಅವರದು ಒಂದೇ ಒಂದು ಕವನ ಸಂಕಲನ ಪ್ರಟವಾಗಿದೆ. ಅದು – 'ಬಯಲೊಳಗಣ ಬಿಸಿ' ಈ ಕವನ ಇಲ್ಲಿಯ ಕವಿತೆಗಳ ವಸ್ತು ವೈವಿಧ್ಯತೆಯನ್ನು ಗಮನಿಸಿ ಅವುಗಳ ಅರ್ಥೈಸುವಿಕೆಗಾಗಿ ಈ ಕೆಳಗಿನಂತೆ ವಿಷಯವಾರು ವಿಭಜನೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

೧. ಸಾಮಾಜಿಕ ಚಿಂತನೆಗಳು:–

ಸಾಹಿತ್ಯ ರಂಗದಲ್ಲಿ ಸಾಮಾಜಿಕ ಚಿಂತನೆಯು ಅತ್ಯಂತ ಪ್ರಮುಖವಾದ ಅಂಶ. ಸಮಾಜದ ಸಮಗ್ರ ಅಭಿವೃದ್ಧಿಗೆ ಈ ಚಿಂತನೆಯ ಅರಿವು ಅವಶ್ಯಕ ಎಂಬ ಜಾಗೃತಿ ಇಂದು ಸಹಜವಾಗಿದೆ. ಹಿಂದೊಮ್ಮೆ ವ್ಯಕ್ತಿ ಕೇಂದ್ರಿತವಾಗಿದ್ದ ಕಾವ್ಯವು ಇಂದು ಸಮಾಜ ಕೇಂದ್ರಿತವಾಗುತ್ತ ಮುನ್ನಡೆದುದು ಪ್ರಮುಖ ಬದಲಾವಣೆ ಎನ್ನಬಹುದು. ಇಂದು ಕಾವ್ಯವನ್ನು ಸಮಾಜಕ್ಕಾಗಿ ಅಥವಾ ಬದುಕಿಗಾಗಿ ಎಂಬ ದೃಷ್ಟಿಯಿಂದ ನೋಡಲಾಗುತ್ತಿದೆ ಇಂತಹ ಸಂದರ್ಭದಲ್ಲಿ ಸಮಕಾಲೀನ ಕಾವ್ಯವನ್ನು ಸಾಮಾಜಿಕ ಚಿಂತನೆಯ ದೃಷ್ಟಿಯಿಂದ ಅಭ್ಯಾಸಿಸಬೇಕೆಂಬುದು ಅವಶ್ಯವೆನ್ನಬಹುದು ಯಾಕೆಂದರೆ ಸಮಾಜವೆಂಬುದು ಪ್ರಜ್ಞಾವಂತ ಜನರು ಸೃಷ್ಟಿಸಿದ ಸಂಘಟಿತ ವ್ಯವಸ್ಥೆ,ಅದು ಸಮಸ್ತ ಮಾನವ ಜನಾಂಗದ ಎಲ್ಲ ಸಾಮಾಜಿಕ ಸಂಬಂಧ ಮತ್ತು

ಸಮೂಹಕ್ಕೆ ಅನ್ವಯಿಸಿ ಹೇಳುವ ಮಾತಾಗಿದೆ. ಸಮಾಜ ಸಾಮಾನ್ಯವಾಗಿ ಸಾಮಾಜಿಕ ಸಂಬಂಧಗಳ ತೊಡಕಾಟದ ಸುತ್ತ ಗುಟ್ಟಾಗಿದೆ ಮತ್ತು ಇದರ ಮೂಲಕ ಪ್ರತಿಯೊಬ್ಬ ವ್ಯಕ್ತಿಯು ತನ್ನ ಇತರ ಸಹವಾಸಿಗಳೊಂದಿಗೆ ಪರಸ್ಪರ ಸಂಬಂಧಗಳನ್ನು ಹೊಂದಿದ್ದಾನೆ ಎಂದು ಗಿಸ್‌ಬರ್ಟ್ ಹೇಳಿರುವುದು[೨೦] ಗಮನಾರ್ಹ ಅಂಶವಾಗುತ್ತದೆ. ಮಾನವ ಸಮಾಜ ಜೀವಿಯಾಗಿರುವುದರಿಂದ ವ್ಯಕ್ತಿಯ ಜೀವನದ ವಿಕಾಸದಲ್ಲಿ ಸಮಾಜದ ಪಾಲಿರುತ್ತದೆ. ಹೀಗಾಗಿ ವ್ಯಕ್ತಿಯ ಮಾತಿನಲ್ಲಾಗಲಿ, ಕೃತಿಯಲ್ಲಾಗಲಿ ಸಮಾಜದ ಬಗ್ಗೆ ಬೇಕಾದಷ್ಟು ಮಾಹಿತಿಗಳು ಸಿಗುತ್ತವೆ. ಅದರಲ್ಲೂ ಕವಿ ಹೃದಯದ ವ್ಯಕ್ತಿಗಳಲ್ಲಿ ತೀವ್ರ ಸಂವೇದನಾಶೀಲತೆಯಿರುವುದರಿಂದ ಈ ಸ್ಪಂದನ ಅವರ ಕೃತಿಗಳ ಮೂಲಕ ಪ್ರಕಟಗೊಳ್ಳುತ್ತದೆ. ಇಂಥವರ ಸಾಲಿನಲ್ಲಿ ಯಾಳವಾರ ಅವರನ್ನು ನಾವು ಗುರುತಿಸಬಹುದು. ಅವರ ಕಾವ್ಯದಲ್ಲಿ ಸಾಮಾಜಿಕ ಬದುಕನ್ನು ಬಿಡಿಸಿ ತೋರಿಸುವ ಅನೇಕ ಘಟನೆಗಳಿರುವುದರಿಂದ ಅವುಗಳನ್ನು ಸಾಮಾಜಿಕ ಚಿಂತನೆಗಳೆನ್ನಬಹುದು.

ಸೋಮನಾಥ ಯಾಳವಾರ ೩೦ ಕವನಗಳಲ್ಲಿ ೨೦ ಕವನಗಳು ಸಮಕಾಲೀನ ಸಾಮಾಜಿಕ ವ್ಯವಸ್ಥೆಯ ಅಸ್ತವ್ಯಸ್ತತೆಗಳಿಗೆ ಕನ್ನಡಿ ಹಿಡಿಯುತ್ತವೆ. ಇಂದಿನ ಬದುಕಿನಲ್ಲಿಯ ಅಸಮಾನತೆಯನ್ನು ಕಾವ್ಯದ ಮೂಲಕ ಯಾಳವಾರರ ಕವಿ ಹೃದಯ ನಮ್ಮ ಮುಂದೆ ತೆರೆದಿಡುತ್ತದೆ. ಬಡವರನ್ನು ನಿರಂತರವಾಗಿ ಶೋಷಣೆಗೆ ಗುರಿಪಡಿಸುವ ಶ್ರೀಮಂತರು ಹಾಗೂ ರಾಜಕಾರಣಿಗಳು ಎಲ್ಲೆಲ್ಲೂ ಕಾಣಸಿಗುತ್ತಾರೆ. ಬಡವರು ಆ ಶೋಷಣೆಗೆ ಬಲಿಯಾಗಿ ಒಂದೇ ಸಮನೆ ನರಳುವ ದೃಶ್ಯ ಕವಿಗೆ ಸಹಜವಾಗಿ ಕಂಡಿದೆ.

ಬೆನ್ನಿಗಂಟಿದ ಹೊಟ್ಟೆ
ಮೈಮೇಲೆ ಚಿಂದಿ ಬಟ್ಟೆ
ಬರಿಗೈ
ಕೆಲಸಕಾಗಿ ಸೋತಕಾಲು
ಕಣ್ಮುಂದೆ ಗೂಡು ಕಟ್ಟಿದೆ.
ಆಸೆಯ ಸಾಲು ಸಾಲು[೨೧]

೨೦. ಸಮಾಜ ಶಾಸ್ತ್ರದ ಮೂಲ ತತ್ವಗಳು ೨೦೦೦- ಬ್ಲಾಕ್ ೨ ಪುಟ ೪ ಮೈಸೂರು.
೨೧. ಡಾ. ಸೋಮನಾಥ ಯಾಳವಾರರ - ಬಯಲೊಳಗಣಬಿಸಿ ಪುಟ ೧

ಎನ್ನುವಲ್ಲಿ ಬಡವರ ಸ್ಥಿತಿಗತಿಯ ಚಿತ್ರ ಕಣ್ಕಟ್ಟುತ್ತದೆ. ಗಗನಕ್ಕಡರಿದ ಬೆಲೆಗಳ ಕಡೆ ಕಣ್ಣು ಮಿಟುಕಿಸುತ ಮಲಗಿರುವ ತಣ್ಣನೆಯ ಒಲೆ, ಎಂಬಲ್ಲಿ ಅವರು ತುತ್ತು ಅನ್ನಕ್ಕಾಗಿ, ಹೊಟ್ಟೆಗಿಲ್ಲದೆ ಪರದಾಡುವ ರೀತಿ ದುತ್ತನೆ ನಿಲ್ಲುತ್ತದೆ. ಇಂದಿನ ಸಮಾಜದಲ್ಲಿ ಉಳ್ಳವರ ಅಟ್ಟಹಾಸದ ಮುಂದೆ ಬಡವರ ಬವಣೆಗೆ ಕೊನೆಯಿಲ್ಲ. ತಮ್ಮ ಬಯಕೆಗಳನ್ನೆಲ್ಲ ಬಸಿರಿನಲ್ಲಿ ಬಚಿಟ್ಟು ಮಕ್ಕಳ ಹಸಿದ ಹೊಟ್ಟೆಗೆ ತಣ್ಣೀರು ಕುಡಿಸುತ್ತ ನಿಟ್ಟುಸಿರು ಬಿಡುವ, ನೆಲ ಹಾಸಿ ಮುಗಿಲು ಹೊದ್ದು, ಕಣ್ತೆರೆದು ನಿದ್ದೆ ಮಾಡುವ ಇವರು ಕವಿಯ ವಿಶಾಲ ದೃಷ್ಟಿಯಲ್ಲಿ 'ನೆಲದೊಡೆಯರು' ಕಾರಣ ನೂರಾರು ನೋವುಗಳು ಅವರನ್ನು ಕಾಡಿದರೂ ಅವರು ಬದುಕುವ ಆಸೆ ಕಮರಿಲ್ಲ ಆದ್ದರಿಂದ–

'ಪುಟ್ ಪಾತ್ ಪಕ್ಕ
ಹರಳುಗಟ್ಟಿದೆ ಪ್ರೀತಿ'

ಎಂದು ಕವಿ ಹೇಳುತ್ತಾರೆ ಎನ್ನುವ ಪ್ರೇಮಾ ಸಿರ್ಸೆಯವರ ಅಭಿಪ್ರಾಯ[೭೨] ಸೂಕ್ತವಾದುದು ಎನಿಸುತ್ತದೆ. ಭರವಶೆ ಹೊತ್ತು ಬರಿಗಾಲಲಿ ನಡೆದು ಬಟ್ಟ ಬಯಲ್ಲಿ ಹಸಿರು ಹುಡುಕುವರು, ಆಸೆಯ ಬೀಜವ ಬಿತ್ತಿ ಹೆಮ್ಮರವಾಗಿ ಬೆಳೆಸಿ ಅದರಡಿಯಲ್ಲಿ ನೂರು ಕನಸು ಕಂಡವರು ಜೊತೆಗೆ ಬಡತನವನ್ನು ಮೆಟ್ಟಿ ನಿಂತು, ತಮ್ಮದೇ ಆದ ಸಂತಸ ಪಡುವಂತವರು ಅದನ್ನು ಕವಿಯು –

ದುಡಿತದ ಹಣತಂದು
ಸಾರಾಯಿ ಅಂಗಡಿಗಿಟ್ಟು
ನಿಶೆಯಲಿ ನಗುತ ನಿಂತವರು
ಎತ್ತರದ ಕಟ್ಟಡಗಳಡಿ
ತಮ್ಮ ನೆಲ ಕಳಕೊಂಡು
ತೊತ್ತಾಗಿ ಸವೆದವರು

---

೭೨. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಆತ್ಮೀಯ ನುಡಿಯಲ್ಲಿ ೨೦೧೧

ಎಂದು ಹೇಳುವಲ್ಲಿ ಕಾರ್ಮಿಕರ ಜೀವನದ ಯಥಾರ್ಥತೆಯನ್ನು ಬಿಚ್ಚಿಡುತ್ತಾರೆ. ಇಂದಿನ ನಮ್ಮ ಸಮಾಜದಲ್ಲಿ ಅನೇಕರಿಗೆ ಪ್ರಾಥಮಿಕ ಅವಶ್ಯಕತೆಗಳಾದ ಅನ್ನ ಬಟ್ಟೆ, ಸೂರು ಸಿಕ್ಕಿಲ್ಲ, ಕೆಲವರಿಗೆ ಮನೆ ಎನ್ನುವ ಸೂರಿದ್ದರೂ ಬೆಳಕಿಲ್ಲ. ರಸ್ತೆಗಳ ಮಿಣುಕು ದೀಪಗಳು ಇಲ್ಲದೆ ಕತ್ತಲೆಯಲ್ಲಿಯೇ ಅವರ ಬದುಕು ಸಾಗಿದೆ ಅದರ ಸ್ವರೂಪವನ್ನು ತುಂಬಾ ವಾಸ್ತವವಾಗಿ ಒಡಮೂಡಿಸಿರುವ ಯಾಳವಾರರ ಒಂದು ಕವನ ಹೀಗಿದೆ.-

ನಮ್ಮ ಕೇರಿಯಲ್ಲಿ
ಅಮವಾಸೆ ಎಲ್ಲೆಲ್ಲ
ಹುಣ್ಣಿಮೆ ಬಂದಿಲ್ಲ
ಬೆಳದಿಂಗಳು ಬಿದ್ದಿಲ್ಲ
ಕಣ್ಣಿಗೆ ರಾಚುವ ಬರಿ ಕತ್ತಲು
ರಾತ್ರಿಯೆಲ್ಲ
ಗೂಬೆಗಳು 'ಘೂಕ್' ಎನುತಿವೆ
ನಾಯಿಗಳೂ ನರಳುತ್ತಿವೆ
ಒಡಲ ತುಂಬ ಗೋಳು
ಗೂಡು ಕಟ್ಟಿವೆ ೧.೧.[೭೩]

ಇಂಥ ಪರಿಸ್ಥಿತಿಯು ನಮ್ಮ ನಾಯಕರಿಗೆ ಗೊತಿದ್ದರೂ ಅವರಾರೂ ಈ ಕಡೆ ಗಮನ ಹರಿಸುತ್ತಿಲ್ಲವೆಂಬ ನೋವು ಕವಿಗಿದೆ. ಚುನಾವಣೆ ಬಂದಾಗ ನಾಯಕರು ಭರವಶೆ ಕೊಡುತ್ತಾರೆ. ಇಲ್ಲಿಯ ಜನ ಕೇಳಾತ್ತಾರಷ್ಟೇ. ಆದರೂ ಬರಲಿಲ್ಲ ಭಾಗ್ಯಜ್ಯೋತಿ ಮನೆಯ ಬಾಗಿಲಿಗೆ – ಎಂದು ತಮ್ಮವರ ಗೋಳು ಕಂಡು ಅತ್ಯಂತ ಸಹಜವಾಗಿ, ಅಷ್ಟೇ ಪರಿಣಾಮಕಾರಿಯಾಗಿ ಕವಿಯು ತಮ್ಮ 'ಭಾಗ್ಯಜ್ಯೋತಿ' ಕವನದಲ್ಲಿ ವ್ಯಕ್ತಪಡಿಸಿದ್ದು ಗಮನಾರ್ಹವಾಗುತ್ತದೆ.

---

೭೩. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ೨೦೧೧

ತಮ್ಮ ಹೊಟ್ಟೆಯ ಹಸಿವು ಹಿಂಗಿಸಿಕೊಳ್ಳಲು ನಾಯಿಗಳೊಂದಿಗೆ ತುತ್ತು ಅನ್ನಕ್ಕಾಗಿ ಶ್ರೀಮಂತರು ಚೆಲ್ಲಿದ ಎಂಜಲೆಲೆಗಳನ್ನು ತಡಕಾಡುವ ಈ ನಿರ್ಗತಿಕರ ಮುಂದೆ ನಮ್ಮ ನಾಯಕರೆನಿಸಿಕೊಂಡವರು ಮಾಡುವ ಭಾಷಣ ಹೇಗಿದೆ ಗಮನಿಸಬೇಕು –

ರಾಮರಾಜ್ಯದ ಕನಸು
ನಮ್ಮದು
ಗ್ರಾಮೋದ್ಧಾರಕೆ ಮನಸು
ನಿಮ್ಮದು
ಸುಧಾರಿಸಬೇಕಲ್ಲ
ನಿಮ್ಮ ಬಡಾವಣೆ
ಅಂತೆ ಬಂದಿದೆ
ಮತ್ತೆ ಚುನಾವಣೆ [೨೪]

ನರಿಬುದ್ದಿಯ ಜನನಾಯಕರ ವ್ಯವಹಾರ ಚತುರತೆ ಹಾಗೂ ಓಟಬ್ಯಾಂಕನ್ನು ಭರ್ತಿಮಾಡಿಕೊಳ್ಳಬಯಸುವ ಸ್ವಭಾವ ಚಿತ್ರಣವನ್ನು ತುಂಬಾ ವಸ್ತುನಿಷ್ಠವಾಗಿ ಮಾಡಿರುವುದನ್ನು ಇಲ್ಲಿ ಅರಿಯಬಹುದು. ನೂರಾರು ಸಮಸ್ಯೆಗಳ ಆಗರದಲ್ಲಿ ಸಿಲುಕಿಕೊಂಡಿರುವ ಬದುಕಿನ ಚಿತ್ರಣವನ್ನು ಹಿಡಿದಿಡಲು ಕವಿಹೃದಯ ಅಸಮರ್ಥವಾಗಿರುವುದರ ಯಥಾರ್ಥತೆಯನ್ನು 'ಯಾವ ಹಾಡು ಹಾಡಲಿ' ಎಂಬ ಕವನ ಸೊಗಸಾಗಿ ವ್ಯಕ್ತಗೊಳಿಸುತ್ತದೆ.

'ದೀನ ದಲಿತರ ಶೋಷಿಸಿ
ಕೈಗೆ ಸಿಕ್ಕವರ ವಂಚಿಸಿ
ಕ್ಷಣಕ್ಕೊಮ್ಮೆ ಬಣ್ಣಬದಲಿಸುವ
ಗೋಸುಂಬೆಗಳ ಮುಂದೆ
ಯಾವ ಹಾಡು ಹಾಡಲಿ' [೨೫]

---

೨೪. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ೨೦೧೧

೨೫. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಯಾವ ಹಾಡು ಹಾಡಲಿ ೨೦೧೧

ಎಂದು ಸಮಾಜದಲ್ಲಿ ತುಂಬಿರುವ ಮೋಸ, ವಂಚನೆ, ಸುಲಿಗೆ, ನಾಟಕತನ, ಕುಹಕತನ, ತಾರತಮ್ಯಭಾವ, ಜಗಳಹಚ್ಚುವರೀತಿ, ಹುಸಿಬಾಷಣ, ಸುಳ್ಳುಭರವಶೆ, ಅಂಧಾನು ಕರಣೆಗ್ಗಚ್ಚುವ, ಭೂಮಿ-ಬೇಸಾಯ ಬಿಟ್ಟು ಬೀದಿಸುತ್ತವ ಹಳ್ಳಿಗರ ಚಿತ್ರ ಜಾತಿ ಜಾತಿಗಳಲ್ಲಿ ಜಗಳ ಹಚ್ಚಿ ಮಾನವತೆಯನ್ನು ಮರೆತಿರುವಂತಿರುವ ಈ ಕದೀಮ-ಕಳ್ಳರ ಸಮಾಜಕುರಿತು ನಾನು ಏನು ಹೇಳಲಿ ಹೇಗೆ ಹೇಳಲಿ, ಎಂದು ಒದ್ದಾಡುವ ಕವಿ ಹೃದಯ ವಾಸ್ತವಿಕ ಬದುಕಿನ ಚಿತ್ರವನ್ನು ಇಲ್ಲಿ ಸೆರೆ ಹಿಡಿದು ನಿಲ್ಲಿಸಿದೆ.

ಸಮಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲಿ ಇಂಥ ಅನೇಕ ಸಮಸ್ಯೆಗಳು ಕವಿ ಮನಸ್ಸನ್ನು ಕೆಣಕಿವೆ. ಇಂದಿನ ಬದುಕಿನ ವೈವಿಧ್ಯತೆಯು ಯಾಳವಾರರ ಕಾವ್ಯದಲ್ಲಿ ಅನುಪಮವಾಗಿ ಮೂಡಿನಿಂತಿದೆ. ಭಾರತವು ಜಾತ್ಯತೀತ ರಾಷ್ಟ್ರ ಎಂಬುದನ್ನು ಮೇಲಿಂದ ಮೇಲೆ ಕೇಳುತ್ತೇವೆ. ಭಾಷಣ ಮಾಡಿ ಹೇಳುತ್ತೇವೆ. ನಾವೆಲ್ಲ 'ಸೆಕ್ಯುಲರ್' ಎಂದು ಹಣೆ ಪಟ್ಟಿಕಟ್ಟಿಕೊಂಡು ತಿರುಗಲು ಬಯಸುತ್ತೇವೆ. ಆದರೆ ವಾಸ್ತವಿಕ ಬದುಕಿನಲ್ಲಿ ನಾವಿರುವುದನ್ನು ರೀತಿಯಲ್ಲಿ ಬೇರೆ ಕವಿಯು ಕಂಡಿರಿಸಿದ್ದು ಹೀಗಿದೆ.

ಕಾಣುತ್ತಿಲ್ಲವೆ
ನಿಮಗೆ
ನಾವು
ಮನುಷ್ಯರೆಂದು
ಮನೆತನದ ಹೆಸರಿನಲಿ
ಜಾತಿ ತಿಳಿವ ಆಶೆಯೆ
ಹಣೆಯ ಲಾಂಛನದಿಂದ
ಧರ್ಮ ತಿಳಿದ ಚಪಲವೇ?[೭೬]

---

೭೬. ಡಾ. ಸೋಮನಾಥ ಯಾಳವಾರರ - ಬಯಲೊಳಗಣಬಿಸಿ ಮನುಷ್ಯರಂತ ತಿಳಿದರೆ ಸಾಕು ೨೦೧೧

ಎಂದು ಪ್ರತಿಭಟಿಸುವ ಕವಿ ಮನೋಧರ್ಮ ಸಹಜ ಬದುಕಿನ ಎಲ್ಲ ವ್ಯವಹಾರಗಳಲ್ಲಿ ಜಾತಿ, ಧರ್ಮಗಳೇ ಪ್ರಮುಖವಾಗಿರುವುದನ್ನು ಖಂಡಿಸುತ್ತಾರೆ. ಇಂದು ಜಾತಿ, ಧರ್ಮದ ಹೆಸರನ್ನು ಮುಂದೆ ಮಾಡಿ, ಮುಗ್ಧ ಜನರ ಅಮೂಲ್ಯ ಮತವನ್ನು ಗಿಟಿಸಿಕೊಂಡು ಅಧಿಕಾರದ ಗದ್ದುಗೆಯನ್ನೇರುವುದಲ್ಲದೆ, ಸಮಾಜದಲ್ಲಿ ಜಾತಿಜಾತಿಗಳಲ್ಲಿ ಭೇದ ಭಾವ ಹುಟ್ಟಿಸಿ ಕಲಹಕ್ಕೆ ದಾರಿ ಮಾಡಿಕೊಡುವುದನ್ನು ಕಂಡಿದ್ದೇವೆ. ಹೀಗಾಗಿ ನಮ್ಮ ದೇಶದಲ್ಲಿರುವ ಹಲವು ಭಾಷೆ, ಹಲವು ಧರ್ಮ, ಹಲವು ಪಂಗಡಗಳಲ್ಲಿ ಒಡಕುಂಟಾಗುತ್ತದೆ ಎಂಬ ದುಗುಡ ಕವಿಯ ಮನದಲ್ಲಿದೆ. ಏಕತೆಯಲ್ಲಿ ಅನೇಕತೆಯನ್ನುಂಟು ಮಾಡುವ ಜಾತಿ ಭೇದದ ಬೀಜವನ್ನೇ ಬಿತ್ತಬಾರದೆನ್ನುತ್ತಾನೆ ಕವಿ ಇಲ್ಲಿ ಅಂತೆಯೇ ಅವರು

ಉದ್ದ ಅಗಲ ನಾಮ
ಹಾಕಿ
ಭಸ್ಮ ಬಳಿದು
ಆವರ್ಣ ಈವರ್ಗವೆಂದು
ಮಾರಾಟಕ್ಕಿಡಬೇಡಿ
ಹಾರುವ ಹದ್ದಾದರೂ ಸರಿ
ಪಂಜರದ ಗಿಳಿಯಾಗಲಾರೆವು,[೭೭]

ಎನ್ನುವಲ್ಲಿ ಕವಿಯ ಧೋರಣೆಯನ್ನು ಅರ್ಥಮಾಡಿಕೊಳ್ಳಬಹುದು. ಕವಿಯು ತಾನು ಸಮಾಜದಲ್ಲಿ ಕಂಡುಂಡ ಭಾವನೆಗಳನ್ನು ಇಲ್ಲೆಲ್ಲ ತುಂಬ ಕಳಕಳಿಯ ಹಿನ್ನೆಲೆಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ಕುಟುಂಬವು ಒಂದು ಸಾರ್ವತ್ರಿಕವಾದ ಸಾಮಾಜಿಕ ಸಂಸ್ಥೆ ಅಲ್ಲದೆ ಇದು ಸಾಮಾಜಿಕ ಜೀವನಕ್ಕೆ ತಳಪಾಯವೂ ಹೌದು, ಕುಟುಂಬವಿಲ್ಲದೆ ಸಮಾಜವಿಲ್ಲ ಸಾಮಾಜಿಕ ನೆಲೆಗೆ ಕುಟುಂಬ ಬೇಕು. ಕೌಟುಂಬಿಕ ಪ್ರೀತಿ, ಸಾಮಾಜಿಕ ಪ್ರೀತಿಗೆ ನಾಂದಿ. ಸಂಸಾರ ಸುಖದಿಂದ ಸಾಗಬೇಕಾದರೆ ಜೀವನದ ಮೂಲ ಮಂತ್ರವಾದ ಹೊಂದಾಣಿಕೆಗೆ ಕವಿಯು ಮಹತ್ವ ನೀಡುತ್ತಾರೆ.

---

೭೪. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಮನುಷ್ಯರಂತೆ ತಿಳಿದರೆ ಸಾಕು ೨೦೧೧

ಆ ಕೌಟುಂಬಿಕ ಪ್ರೀತಿ ಯಾಳವಾರರ ಹಲವು ಕವನಗಳಲ್ಲಿ ತುಂಬಾ ಸುಂದರವಾಗಿ ವ್ಯಕ್ತವಾಗಿರುವುದನ್ನು ಕಾಣಬಹುದು.

ಸುಖ ಸಂಸಾರದ ಹೆಗ್ಗುರುತು ಗಂಡಹೆಂಡಿರ ಮಧ್ಯದ ಹೊಂದಾಣಿಕೆ ಪ್ರೀತಿ-ಪ್ರೇಮದ ಗುಟ್ಟೇ ಒಂದರ್ಥದಲ್ಲಿ ಹೊಂದಾಣಿಕೆ. ಇದು ಸಮಾನತೆಯ ಸಂಕೇತವೂ ಹೌದು. ಹೆಂಡತಿಯನ್ನು ಗಂಡ, ಗಂಡನನ್ನು ಹೆಂಡತಿ ಅರ್ಥಮಾಡಿಕೊಂಡು ನಡೆದಾಗ ಮಾತ್ರ ಸೌಖ್ಯ ಜೀವನದ ದರ್ಶನವಾಗುತ್ತದೆ. ಆ ಸಂದರ್ಭವೊಂದನ್ನು ಕವಿಯು ಮನಬಿಚ್ಚಿ ಹೇಳುತ್ತಾನೆ. 'ಸಂಗಾತಿ' ಕವನ ಹೆಂಡತಿಯ ಹೊಂದಾಣಿಕೆ ಹಾಗೂ ಸುಗುಣಗಳ ಪಟ್ಟಿಯನ್ನೆ ಕೊಡುವುದನ್ನಿಲ್ಲಿ ಕಾಣಬಹುದು.

'ನನ್ನ ಬಾಳ ರಾಗಕೆ
ನೀ ತಂಬೂರಿ
ಬಣ್ಣಿಸಲು ಪದವಿಲ
ನಿನ್ನ ಚಕೋರಿ' [೭೮]

ಎಂದು ದಾಪಂತ್ಯ ಜೀವನದ ಜೊತೆಗಾರ್ತಿಯನ್ನು 'ಏಕತಾರಿ' ವಾದ್ಯಗಳೊಂದಿಗೆ ಅಭೇದ ಕಲ್ಪಿಸುವ ಕವಿ ಹಾಡುಗಾರನ ಶುಶ್ರಾವ್ಯತೆಗೆ ಅದರ ಜೊತೆಯ ಮಹತ್ವವನ್ನು ಸಾರುವ ಮೂಲಕ ದಾಪಂತ್ಯದ ಸುಖ ಜೀವನಕ್ಕೆ ಸಂಗಾತಿ'ಯ ಮಹತ್ವವನ್ನು ಎತ್ತಿ ಹೇಳುತ್ತಾನೆ. 'ವಾದಿಸುವ ಹಟವಿಲ್ಲದ' ಸರಳೆ, ಸಜ್ಜನೆ, ಸ್ನೇಹದ ಮೂರ್ತಿ, ಗಂಡನಡೆದಂತೆ ನಡೆವ, ನುಡಿದಂತೆ ನುಡಿವ, ಒಡವೆ ಒಡೆತನಕೆ ಎಂದೂ ಆಸೆ ಪಡದ ಅವಳೇ ನೆರಮನೆಯವರ ಬದುಕಿಗೂ ಸ್ಫೂರ್ತಿಯಂತೆ. ಎಂಥ ಕಷ್ಟ-ಕಾರ್ಪಣ್ಯಗಳಿಗೂ ಹೆದರದೆ, ಹೆದರಿಸದೆ ಸದಾ ಜೊತೆಯಾಗಿರುವ ಅವಳಿಂದ ಮನೆ-ಮನ ನಗುತಿರುವುದನ್ನು ಕವಿ ಹೃದಯತುಂಬಿ ವರ್ಣಿಸಿದ್ದಾನೆ.

---

೭೮. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಸಂಗಾತಿ ೨೦೧೧

ಕವಿ ಮೊದಲು ಕುಟುಂಬ ಜೀವಿ. ಅನಂತರ ಅವನೊಬ್ಬ ಸಮಾಜಜೀವಯೆಂಬುದು ಅಪ್ಷೇಸತ್ಯ. ಅಂತೆಯೇ ಕವಿಭಾವ ಕುಟುಂಬ ಪ್ರೀತಿಯಲ್ಲಿ ತೇಲಾಡಿದ ಮಧುರ ಕ್ಷಣಗಳ ನೆನಪು ಯಾಳವಾರರ– 'ಆ ನಿನ್ನ ನೆನಪು' 'ಟೂಬ್ ಲೈಟ್' ನಿರೀಕ್ಷೆ, 'ಕನಸು' ಬಡವರ ಮಗಳು ಮುಂತಾದ ಕವನಗಳಲ್ಲಿ ಹಲವು ಬಗೆಗಳಲ್ಲಿ ಮಿಡಿದಿದೆ ಎಂದು ಡಾ. ಪ್ರೇಮಾ ಸಿರ್ಸೆಯವರು ಹೇಳಿದ ಮಾತು[೭೯] ಇಲ್ಲಿ ಗಮನಾರ್ಹವಾಗುತ್ತದೆ. ಅವರ 'ಆ ನಿನ್ನ ನೆನಪು' ಕವನದ ಈ ಸಾಲುಗಳು ಸಾಹಿತ್ಯದ ಸೊಗಸುಳ್ಳ ಮೂಲಿಕೆಗಳಾಗಿವೆ. –

ಸೌಗಂಧದಲಿ ದುಂಬಿ
ಕುಳಿತು ಪಿಸುಗುಡುವಾಗ
ಪುಲಕದಲಿ ಹೂನಾಚಿ
ತಲೆ ತೆಗ್ಗಿಸಿರುವಾಗ
ಪ್ರಿಯಕರನ ಕೋಗಿಲೆಯು
ಮಾಮರಕೆ ಕರೆವಾಗ
ಬೆರಗಾಗಿ ಕಾಡುವುದು
ಆ ನಿನ್ನ ನೆನಪು [೮೦]

ಇಲ್ಲಿಯ ಭಾವ–ಭಾಷೆ–ಲಯಗಳು ಮನಸ್ಸನ್ನು ಹಿಡಿದು ಕಾಡುತ್ತವೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅಂತೆಯೇ 'ನಿರೀಕ್ಷೆ' ಕವನ 'ದಾಂಪತ್ಯ' ಬದುಕಿನಲ್ಲಿ ಹೆಪ್ಪುಗಟ್ಟಿನಿಂತ ಪ್ರೀತಿಯ ಭಾವನೆಯೊಂದನ್ನು ಸಮರ್ಥವಾಗಿ ತಿಳಿಸುತ್ತದೆ.

'ನಿನ್ನ ನನ್ನ
ಮನದ ನಡುವೆ
ಮುಗುಳು ನಗೆಯ
ಸಿಂಚನ

---

೭೯. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಮುನ್ನುಡಿಯಲ್ಲಿ ೨೦೧೧

೮೦. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ನಾ ನಿನ್ನ ನೆನಪು ಕವನ ೨೦೧೧

ಮತ್ತೆ ಮತ್ತೆ
ಇಣುಕು ನೋಟ
ಮೌನವೇ ಸಂಭಾಷಣ,[೮೧]

ಎನ್ನುವಲ್ಲಿಯ ಪ್ರೇಮ ಪರದೆಯ ಒಳಗಡೆಯೇ ಮಿಸುಕಾಡುವ ಸಂದರ್ಭದ ಚಿತ್ರ ಮನಮೋಹಕವಾಗುತ್ತದೆ. 'ಏನೊಭಾವ' ಎನೋರಾಗ ತಾಳತಪ್ಪುವ ಆರೋಹಣ. ಸ್ವರ ಹಿಡಿದರೂ ಲಯಗೆಡೆವ ಉಸಿರುನಿಲ್ಲುವ ಕಾರಣ, 'ಎದೆ ತುಂಬಿ ತುಳುಕಿದರು ತುಟಿಯ ಒಳಗಿನ ಸ್ಪಂದನ ಹೃದಯದನುರಾಗಕೆ ಜೇನಾಗುವ ಸಂವೇದನ' ಎನ್ನುವಂಥಹ ಅನೇಕ ಸಾಲುಗಳು ಬೇಂದ್ರೆ ಕವಿಯನ್ನು ನೆನಪಿಸುತ್ತವೆ. ಅಂತೆಯೇ ಯಾಳವಾರರ ಕೌಟುಂಬಿಕ ಕವನಗಳು ಓದುಗರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿ ನಿಲ್ಲುತ್ತವೆ ಎಂದು ಹೇಳಬಹುದು.

ಉತ್ತರ ಕರ್ನಾಟಕದ ಈ ಬಯಲುನಾಡಿನಲ್ಲಿ ಇಲ್ಲಿಯ ಜನರಿಗೆ 'ಬೇಸಿಗೆ'ಯೂ ಒಂದು ಸಮಸ್ಯೆ'ಯಾಗಿ ಕಾಡುತ್ತಿದೆ. ಅದರಲ್ಲೂ ಕಲ್ಯಾಣ ಕರ್ನಾಟಕದ ಗುಲಬರ್ಗಾ, ರಾಯಚೂರ, ಬಿಜಾಪುರ ಜಿಲ್ಲೆಗಳಲ್ಲಿ 'ಬಿಸಿಲಿ'ನ ತಾಪ ಅನುಪಮ, ಅದನ್ನು ಶಾಬ್ದಿಕವಾಗಿ ಹಿಡಿದಿಡುವುದು ಕಷ್ಟಸಾಧ್ಯ. ಅದು ಸಹ ಇಲ್ಲಿಯ ಜನರಿಗೆ ಒಂದು ಸಾಮಾಜಿಕ ಸಮಸ್ಯೆಯಾಗಿ ಕಾಡುತ್ತಿರುವುದನ್ನು ಕವಿ ಹೃದಯ ಗುರುತಿಸಿರುವ ರೀತಿಯನ್ನು ನೋಡಬಹುದು.

ಎದೆ ತೆರೆದು ನಿಂತ
ಎರಿ ಹೊಲ ನೋಡು
ಈ ಬಯಲು ಸೀಮ್ಯಾಗ
ದನ್ನಕಿಲ್ಲ ಮೇವು
ಜನಕೆಲ್ಲ ನೋವು
ಇಲ್ಲಿ ಬ್ಯಾಸಿಗಿ ದಿನದಾಗ[೮೨]

೮೧. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ನಿರೀಕ್ಷೆ ಕವನ
೮೨. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಬ್ಯಾಸಿಗಿ ಕವನ

ಎಂದು ಇಲ್ಲಿಯ ಬದುಕನ್ನು ಎರಿಹೊಲಗಳ ಬಿರಿಯುವಿಕೆಯ ಮೂಲಕ ತೆರೆದಿಡುವ ಕವಿ, ಜನ ಹಾಗೂ ದನಗಳ ಸಮಸ್ಯೆಗಳನ್ನು ಬಿಚ್ಚಿಟ್ಟಿದ್ದಾರೆ. 'ಭರದ ಭವಣೆ, ನೀರಿರದ ತಾಣ, ದಣಿದ ದೇಹ, ತಣಿಯದ ದಾಹ, ಸುಡುವ ದಿನದಾಗ'ಎಂದು ಬೇಸಿಗೆಯಲ್ಲಿಯ ಘೋರತೆಯನ್ನು ವಿವರಿಸುತ್ತಾನೆ. ಬೆಳೆಯಚಿಂತೆ ಹಾಗೂ ಮುಂದಿನ ಮಳೆಯ ಚಿಂತೆ ಇಲ್ಲಿಯ ಜನರನ್ನು ಹಗಲಿರುಳು ಕಾಡುವ ಸಮಸ್ಯೆ. ಇಂಥ ಸಮಸ್ಯೆ ಹೊತ್ತು ತಿರುಗುವ ಜನರ ತಲೆಯ ಮೇಲೆ ಉರಿವ ಸೂರ್ಯ ಎಂದು ಹೇಳುವಲ್ಲಿ, ಇಲ್ಲಿಯ ಬದುಕಿನ ಚಿತ್ರಣ ಭಯ ಹುಟ್ಟಿಸುವಂತಿರುವುದನ್ನು ಅರಿಯಬಹುದು.

ಹಬ್ಬಗಳು ಪ್ರತಿ ತಿಂಗಳು ಎರಡು ಮೂರರಂತೆ ಬರುತ್ತವೆ. ಆದರೆ ಇಲ್ಲಿಯ ಜನರಿಗೆ ಹಬ್ಬ ಬರುವುದು ಕುಷಿಕೊಡಲು ಅಲ್ಲ; ಇನ್ನಷ್ಟು ಚಿಂತೆ ತರಲು' ಎಂಬುದನ್ನು ಕವಿ ತಿಳಿಸುತ್ತಾರೆ. 'ದೀಪಾವಳಿ'ಯ ಆಗಮನ ಹೇಗಿರುತ್ತದೆ ಎಂದರೆ –

'ಮರೆಯದೆ
ಬರುತಿದೆ ದೀಪಾವಳಿ
ಪ್ರತಿವರುಷ
ಮದುವೆಯಾದ
ಹೊಸ ಅಳಿಯನಂತೆ
ಆರತಿ ತಟ್ಟೆಗೆ ಪುಡಿಗಾಸು ಹಾಕಿಸಿ
ಖಾಲಿ ಕಿಸೆಯನ್ನು
ತಡಕಾಡಿಸಿ
ಮಾವಂದಿರ ಅವಮಾನ
ಹೆಚ್ಚಿಸಲು'[೮೩]

ಎನ್ನುವಲ್ಲಿ ಅದರ ಸ್ವರೂಪವನ್ನು ತಿಳಿಯಬಹುದು. ಇಲ್ಲಿಯ ಬಡವರ ಮನೆ–ಮನಗಳಿಗೆ ಸಿಡಿಮದ್ದು ಇರಿಸಿ, ಬಾಣ ಬಿರುಸುಗಳ ರೂಪದಲಿ ಅವರ ಗುಡಿಸಲುಗಳನ್ನು ಉರಿಸುತ್ತದೆ ಬಡವರ ಕನಸು ಮುರಿದು ನಿದ್ದೆಗೆಡಿಸುವ ಈ ಬಿಂಕ

೮೩. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ದೀಪಾವಳಿ ಕವನ

ಬಡಿವಾದ ಹಬ್ಬ, ಅವರ ಹೊಲಗದ್ದೆ, ದನ ಕರುಗಳನ್ನು ಮಾರಿಸುತ್ತದೆ ಎಂದು ತಿಳಿಸುತ್ತಾರೆ. 'ಸಂಕ್ರಾಂತಿ'ಯು ಸಹ ಈ ಜನರಬದುಕಿನಲ್ಲಿ -ಬಿಳಿಮೋಡ ಮುಗಿಲಾಗ ಹೊತ್ತು, ಹುಸಿ ನೆರಳು ನೆಲದಾಗ ಬಿಟ್ಟು ಶುಭಾಶಯದ ಮಾತು ಬಾಯ್ಯಾಗ ಹೇಳುತ್ತದೆ ಎಂದು ವಿಡಂಬನಾತ್ಮಕವಾಗಿ ಇದನ್ನು ತಿಳಿಸುವ ಪರಿ ತುಂಬಾ ಸೊಗಸಾಗಿ ಕಾಣುತ್ತದೆ.

ಹೀಗೆ ಹಲವು ನೆಲೆಗಳಲ್ಲಿ 'ಸಾಮಾಜಿಕ ಕಳಕಳಿಯನ್ನು ವ್ಯಕ್ತಗೊಳಿಸುವ ಯಾಳವಾರರು ತಮ್ಮ ಪ್ರತಿಯೊಂದು ಕವನಗಳಲ್ಲಿ 'ಪರೋಕ್ಷವಾಗಿ' ಹಲವು ಸಂದರ್ಭಗಳಲ್ಲಿ ಪ್ರತ್ಯಕ್ಷವಾಗಿ ಸಾಮಾಜಿಕ ಜೀವನವನ್ನು ಕುರಿತು ಚಿಂತನೆ ಮಾಡಿರುವುದನ್ನು ಗುರುತಿಸಬಹುದು.

೨. ಧಾರ್ಮಿಕ ಸಂದರ್ಭಗಳು :-

"ಸಾಹಿತ್ಯವೆಂಬುದು ಲೇಖಕನೊಬ್ಬನ ವ್ಯಯಕ್ತಿಕ ಅನುಭವವನ್ನು ಮತ್ತು ಜೀವನ ದೃಷ್ಟಿಯನ್ನು ಶಾಬ್ದಿಕ ಭಾಷೆಯಲ್ಲಿ ಒಡಮೂಡಿಸುವ ಮಾಧ್ಯಮವಾದರೂ ಅದು ಸಮಕಾಲೀನ ಸಾಮಾಜಿಕ ವಾಸ್ತವತೆಗಳನ್ನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಒಳಗೊಂಡೇ ಇರುತ್ತದೆ. ಲೇಖಕನಲ್ಲಿ ಅರಿವಿದ್ದೊ ಅರಿವಿಲ್ಲದೆಯೋ ಅವನ ಕಾಲದ ಸಾಮಾಜಿಕ ವಾಸ್ತವತೆಗಳು ಅವನ ಕೃತಿಯ ಸ್ವರೂಪವನ್ನು ಸೂಕ್ಷ್ಮವಾಗಿ ನಿಯಂತ್ರಿಸುವ ಅಂಶಗಳು ಆಗಿರುತ್ತವೆ. ಈ ವಾಸ್ತವತೆಗಳಲ್ಲಿ ಲೇಖಕ ಎಷ್ಟರ ಮಟ್ಟಿಗೆ ಮುಳುಗಿ ಹೋಗಿರುತ್ತಾನೆ ಮತ್ತು ಎಷ್ಟನ್ನು ಪ್ರಜ್ಞಾಪೂರ್ವಕವಾಗಿ ಮೀರಲು ಪ್ರಯತ್ನಿಸುತ್ತಾನೆ ಎಂಬುದು ಸಾಹಿತ್ಯ ವಿಮರ್ಶೆಯ ಮೂಲಭೂತ ಪರಿಶೀಲನೆಗಳಲ್ಲಿ ಒಂದಾಗಿರುತ್ತದೆ.[೭೪] ಈ ಹಿನ್ನೆಲೆಯಲ್ಲಿ ಯಾಳವಾರರ 'ಕಾವ್ಯ'ವನ್ನು ಗಮನಿಸಿದರೆ ಸಮಕಾಲೀನ ಸಮಾಜದಲ್ಲಿಯ ಧಾರ್ಮಿಕ ಸಂದರ್ಭಗಳು ಬಿಚ್ಚಿಕೊಂಡು ನಿಂತಿರುವುದನ್ನು ಅರಿಯಬಹುದು.

"ಆಧ್ಯಾತ್ಮ ಪರಿಸರದೊಂದಿಗೆ ಡಾ ಸೋಮನಾಥ ಯಾಳವಾರ ಅವರ ನಂಟು ಗಾಢವಾಗಿರುವುದರಿಂದ 'ಲಿಂಗಾಯತ ಧರ್ಮ' ಸಿದ್ಧಾಂತ ಕುರಿತ ಚಿಂತನೆ ಅವರ ಕವನಗಳಲ್ಲಿ ಎದ್ದು ಕಾಣುತ್ತದೆ. 'ಅರಿವೇ ಗುರು' 'ಪಟ್ಟದ್ದೇವರು' 'ವಚನಗಳು'

---

೭೪. ಟಿ.ಟಿ.ಅಶೋಕ ಸಾಹಿತ್ಯ ಸಂಧರ್ಭ ೧೯೯೧

'ಅಕ್ಕನ ಜವಾಬು' 'ಜಗಜ್ಯೋತಿ' 'ಎಲ್ಲಿರುವೆ' ಮುಂತಾದ ಕವನಗಳು ಇದಕ್ಕೆ ನಿದರ್ಶನವಾಗಿದೆ ಎಂದಿದ್ದಾರೆ ಪ್ರೇಮಾ ಸಿರ್ಸೆಯವರು.[೮೫] ಅನೇಕ ರೀತಿಯಲ್ಲಿ 'ದೇವರನ್ನು' ಹುಡಿಕಿದರೂ ಆತನು ಎಲ್ಲಿಯೂ ಕಾಣುತ್ತಿಲ್ಲ ಅದನ್ನು ಕವಿಯ ಮಾತಿನಲಿಯೇ ಕೇಳಿ –

'ಗಂಟೆಗಟ್ಟಲೆ ರುದ್ರ ಓದಿಸಿ
ಎಂಟು ನಗಾರಿ ಬಾರಿಸಿ
ನೂರೆಂಟು ನಾಮ ಹೇಳಿಸಿ
ಮಂತ್ರ ಜಪಿಸುತ
ಮತ್ತೆ ಮತ್ತೆ ಹುಡುಕಿದೆ ನಾನು
ಎಲ್ಲಿಯೂ ಕಾಣಲಿಲ್ಲ ನೀನು' [೮೬]

ಎಂದು ಪೂಜೆ, ನೈವೇದ್ಯ ಮಾಡಲಾದ ವಿವರಗಳನ್ನು ನೀಡಿ ಪರಿತಪ್ಪಿಸುವ ಕವಿ "ಎಲ್ಲಿರುವೆ" ಎಂದು ಕೇಳುತ್ತಾ ನೀನಂತೂ ಇಲ್ಲಿ. "ಇದ್ದರೆ ಮರೆಯೇಕೆ? ಒಮ್ಮೆಯಾದರು ಹೊರಗೆ ಬಂದು ಮೊಗದೋರು" ಎಂದು ಕಳವಳಿಸಿ ಕರೆಯುತ್ತಾರೆ.

ಜೀವನ ಮೌಢ್ಯ ಆಚರಣೆಗಳ ವಿಧಾನವಲ್ಲ ವೈಚಾರಿಕತೆ ಜೀವನದ ಬೆಳಕು. ಪ್ರತಿಯೊಂದು ಜೀವನದ ಆಚರಣೆಗಳು ವೈಚಾರಿಕತನದಿಂದಲೇ ಮುಂದುವರೆಯಬೇಕೆನ್ನುವ ಕವಿ 'ಅರಿವೇ ಗುರು' ಎನ್ನುವ ಕವನದಲ್ಲಿ ತುಂಬಾ ಅನುಭಾವದ ಅವತರಣಿಕೆ ಮೂಡಿಸಿದ್ದಾರೆ. 'ಲಿಂಗಾಯತ ಧರ್ಮ'ದ ಅಷ್ಟಾವರಣಗಳು ಕೇವಲ ಬಾಹ್ಯದಲ್ಲಿ ಅಳವಡಬಾರದು ಅವು ಆಂತರಂಗಿಕ ಅನುಸಂಧಾನವಾಗಬೇಕೆನ್ನುತ್ತಾರೆ. ಅದನ್ನು ಅವರು –

'ಅರಿವೇ ಗುರು
ಆತ್ಮ ಲಿಂಗ
ಜಗವು ತಾನೇ ಜಂಗಮ
ತನುವು ಮಂದಿರ

---

೮೫. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಮುನ್ನುಡಿಯಲ್ಲಿ ೨೦೧೧

೮೬. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಎಲ್ಲಿರುವೇ ೨೦೧೧

ಮನವು ಮಂದಾರ

ಮನೆಯೆ' ಶರಣ ಸಂಗಮ' [೮೭]

ಎಂದು ಹೇಳುವ ರೀತಿಯನ್ನು ಗಮನಿಸಬಹುದು. ಸಹನೆ, ಪುಷ್ಪ, ಸಹಾಯ ಭಸ್ಮ, ಸಹಬಾಳ್ವೆಚಂದನವೆನ್ನುವ ಕವಿ, ವಚನ ಮಂತ್ರ, ಪ್ರವಚನ ರುದ್ರಾಕ್ಷಿ, ಕ್ರಿಯಾಚರಣೆಯೇ ಪೂಜೆ, ಎಂದು ತಿಳಿಸುತ್ತಾರೆ. ಪೂಜಾ ಪರಿಕರಗಳಾದ ಚಂದನ ಸಹವಾಳ್ವೆ, ದೀಪ ಸಮತೆ, ಧೂಪ ಸಂಕಲ್ಪ, ಜ್ಯೋತಿಯು ನಿರ್ಮಲಮನವೇ ಹೌದು, ಹಾಗಾದಾಗ ಒಮ್ಮನ ಪತ್ರಿ, ಸುಮ್ಮನ ಅಕ್ಷತೆ, ಸಮನ್ವಯ ಭಾವ ನೈವೇಧ್ಯವಾಗಿ ನಿಲ್ಲುತ್ತದೆ. ಇಂಥ ಭಾವವನ್ನು ಒಡಮೂಡಿಸಿಕೊಂಡಿರುವ ಜೀವನ ವಿಧಾನ, ಪರಮ ಪೂಜೆ ಅಂಥವ ನುಡಿ ನಮನ, ನಡೆ ತಪನವಾಗಿ, ಪಡೆದ ಅನುಭಾವ ಪ್ರಸಾದವೆನಿಸುವ ಪರಿಯನ್ನು ತುಂಬಾ ಅರ್ಥವತ್ತಾಗಿ ಅಷ್ಟೇ ವೈಚಾರಿಕವಾಗಿ ನಿರೂಪಿಸಿರುವುದನ್ನು ಮನಗಾಣಬಹುದು.

ಆಧ್ಯಾತ್ಮದ ತುತ್ತತುದಿಯೇರುವ, ಅದರೊಂದಿಗೆ ವಾಸ್ತವಿಕ ಜೀವನವನ್ನು ಬೆಸೆದು ತೋರಿರುವ, ಮಹಾಮಾನವತಾವಾದಿ, ಸಮಾಜ ಸುಧಾರಕ, ಲಿಂಗಾಯತ ಧರ್ಮ ಸಂಸ್ಥಾಪಕರಾದ 'ಬಸವಣ್ಣ'ನವರು ಈ ಜಗತ್ತು ಕಂಡಿರುವ ಅಪರೂಪದ ವ್ಯಕ್ತಿ. ಅವರನ್ನು ಕುರಿತು ಸಾಹಿತ್ಯ ರಚನೆಯಾದಷ್ಟು ಬೇರಾವ ಮಹಾಪುರುಷನನ್ನು ಕುರಿತು ರಚನೆಯಾಗಿದ್ದ ಕಾವ್ಯ, ಕಥೆ, ಕಾದಂಬರಿ, ಪುರಾಣ, ಜೀವನ ಚರಿತ್ರೆ, ನಾಟಕ, ಸಿನಿಮಾಗಳಲ್ಲಿ ನಿರೂಪಿತಗೊಂಡಿರುವ ಬಸವಣ್ಣನವರ ವ್ಯಕ್ತಿತ್ವ ಅಪರೂಪದ್ದು ಆ ಮಹಾಪುರುಷನ ಹಾಗೂ ಧಾರ್ಮಿಕ ಸಾಧನೆಯನ್ನು ಕುರಿತು ಕವಿ ಕಂಡ ಅನುಭವ ಹೀಗೆ ಅಭಿವ್ಯತಕ್ತಗೊಂಡಿದೆ. 'ಜಗಜ್ಯೋತಿ' ಕವನದಲ್ಲಿ –

'ಗಂಡು ಹೆಣ್ಣಿನಲ್ಲಿ

ಭೇದವನೆಣಿಸದೆ

ಹುಟ್ಟಿಗೆ ಹೊಲೆತನವಿಲ್ಲೆಂದು

ಮನು ಪರಂಪರೆಗೆ

---

೮೭. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಅರಿವೇ ಗುರು ೨೦೧೧

ಸವಾಲ್ಹಾಕಿ

ಜಾತಿ ಗೋಡೆಗೆ ಮದ್ದಿಟ್ಟು

ಸ್ಫೋಟಿಸಿ ನಿಂತೆ ನೀನು[೮೮]

ಎನ್ನುವಲ್ಲಿ 'ಬಸವಣ್ಣ'ನವರು ಸಮಾನತೆಗಾಗಿ ಹೋರಾಡಿದ ಸಂದರ್ಭಗಳು ವ್ಯಕ್ತವಾಗಿವೆ 'ಎದೆ ತುಂಬಭಕ್ತಿ ಮನತುಂಬಪ್ರೀತಿ ಹೊತ್ತು ನಡೆದ ಬಸವಣ್ಣ, ಬಿಜ್ಜಳನ ಅಧಿಕಾರ ಪದವಿಗೆ ತಿಲಾಂಜಲಿಯಿತ್ತು ನಡೆದವನು. ಮಾನವತೆಯ ಎದೆ ತಟ್ಟ ಕಲ್ಯಾಣ ರಾಜ್ಯ ಕಟ್ಟಲು ಶ್ರಮಿಸಿದವನು. 'ಶರಣ ತತ್ವ'ದ ಶ್ರೇಷ್ಠತೆಯನ್ನು ಸಾರುತ್ತ ಅನುಭಾವದಲ್ಲಿ ವಚನಕಟ್ಟಿ ತಾನು ಒಲಿದಂತೆ ಹಾಡಿದವನು. ಜ್ಞಾನ, ಆಚಾರ, ವಿಚಾರಗಳನ್ನು ಆಧ್ಯಾತ್ಮದ ಅವತರಣಿಕೆಯಲ್ಲಿಟ್ಟು ತೂಗಿ, ಉಭಯ ಶುದ್ಧಿಗೆ ಸಾಕಾರರೂಪದಂತಿದ್ದನು.

'ಕಾಣದ ಸಂಗನನು

ಜಂಗಮಲಿಂಗದಲಿ

ಸಂಗಮಿಸಿ

ಅಂಗೈಯಲಿ ನಿಜವ

ನಿಲಿಸಿ

ಜಗಕೆ ತೋರಿದ

ಕ್ರಾಂತಿ ಪುರುಷ, ಜಗಜ್ಯೋತಿ[೮೯]

ಬಸವಣ್ಣ ಒಂದು ಸ್ವರೂಪವನ್ನು ಸುಸ್ಪಷ್ಟವಾಗಿ ತೋರಿಸುವ ಈ ಕವನ ಯಾಳವಾರರ ಅತ್ಯುತ್ತಮ ಕವನಗಳಲಿ ಒಂದಾಗಿದೆ.

ಧಾರ್ಮಿಕ ಬದುಕಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವ ಅಕ್ಕಮಹಾದೇವಿ ಅಪೂರ್ವವಾದ ಶರಣೆ. ಚನ್ನಮಲ್ಲಕಾರ್ಜುನನೆ ಗಂಡನಲ್ಲದೆ

---

೮೮. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಜಗ ಜ್ಯೋತಿ ೨೦೧೧

೮೯. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಜಗ ಜ್ಯೋತಿ ೨೦೧೧

ಮಿಕ್ಕವರು ತನಗೆ ಸಂಬಂಧವಿಲ್ಲೆಂದು ಸಾಧಿಸಿ ತೋರಿಸಿದವಳು. ಅವಳ ಆಧ್ಯಾತ್ಮಿಕ ಬದುಕಿನ ಎತ್ತರವನ್ನು ತೋರಿಸುವ ನಿಟ್ಟಿನಲ್ಲಿ ಸೋಮನಾಥ ಯಾಳವಾರರ 'ಅಕ್ಕನ ಜವಾಬು' ಕವನ ಮಹತ್ವದ್ದಾಗುತ್ತದೆ.

'ಬಯಸಿ ಬೇಡುವವನು
ನೀನು
ಬಯಸದವನ
ಬೆನ್ನು ಹತ್ತಿದವಳು
ನಾನು
ತೃಣಕೆ ಸಮಾನ
ನಿನ್ನರಮನೆ
ಮಹಾದೇವನ ಮಸಣ
ನನ್ನ ಮಹಾಮನೆ'[೯೦]

ಎನ್ನುವ ಕವನದಲ್ಲಿ 'ಅಕ್ಕನ' ಒಳಮನದ ಉತ್ತರ ಸ್ಫೋಟಗೊಂಡಂತೆ ಬಂದಿರುವುದನ್ನು ಕಾಣುತ್ತೇವೆ. ಇಡೀ ಕವನದಲ್ಲಿ ಅಕ್ಕ ಕೌಶಿಕನನ್ನು ಎದುರಿಗೆ ನಿಲ್ಲಿಸಿಕೊಂಡು ಅವನಿಗೆ ತಿಳಿಹೇಳುತ್ತ ಉತ್ತರ ಕೊಡುತ್ತಿದ್ದಾಳೆಂಬ ಭಾವನೆ ಬಂದು ನಿಲ್ಲುವಂತೆ ಕವನ ನಿರೂಪಿತವಾಗಿದೆ ಎನ್ನಬಹುದು. ತಾನು ಆ ದೇವನಿಗೆ ಒಲಿದದ್ದು ಅವನು ಕಾಡಿದ್ದು ಆದರೂ ತಾನು ಆತನ್ನನ್ನು ಮೆಚ್ಚಿಕೊಂಡದ್ದನ್ನೆಲ್ಲ ಹೇಳಿ, ತನ್ನ ನಿರ್ಧಾರ ತಿಳಿಸುವಲ್ಲಿ ಕವನದ ಅಂತ್ಯವಾದರೂ, ಅದು ಅವಳ ಉತ್ತರವಾಗಿ ಮನದಲ್ಲಿ ಉಳಿದು ನಿಲ್ಲುತ್ತದೆ.

ಗೊಡ್ಡು ಧಾರ್ಮಿಕ ನಂಬಿಕೆಗಳಿಗಿಂತ, ಮನುಷ್ಯತ್ವ ಮುಖ್ಯ ಎನ್ನುವ ಕವಿ ಹಲವು ಧಾರ್ಮಿಕ ಆಚರಣೆಗಳ ಹಿನ್ನೆಲೆಯಲ್ಲಿ ಮನುಷ್ಯರನ್ನು ತಿಳಿಯುವುದನ್ನು ಖಂಡಿಸುತ್ತಾರೆ.

---

೯೦. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಅಕ್ಕನ ಜವಾಬು ೨೦೧೧

'ಉದ್ದ ಅಗಲ ನಾಮ
ಹಾಕಿ ಭಸ್ಮ ಬಳಿದು
ಆ ವರ್ಣ ಈ ವರ್ಗವೆಂದು
ಮಾರಾಟಕ್ಕಿಡಬೇಕಡಿ'[೯೧]

ಎನ್ನುವಲ್ಲಿ ಇದನು ಗುರುತಿಸಬಹುದು. ಹಾಗೆಯೆ 'ವಚನಗ'ಗಳು ಕವಿಯ ಪಾಲಿಗೆ 'ಬಾಳದಾರಿಯ ತುಂಬ ಹಚ್ಚಿಟ್ಟ ದೀಪಗಳು, ವಿಶ್ವಶಾಂತಿಯ ಕಾಪಾಡುವ ಬೆಳ್ಳಿರೇಖೆಗಳು ಆಗಿರುವುದು ತುಂಬಾ ಮಹತ್ವದ ಸಂಗತಿ ಎನ್ನಬಹುದು.

'ವಚನ ಸಾಹಿತ್ಯ'ವನ್ನು ಆಳವಾಗಿ ಅಧ್ಯಯನ ಮಾಡಿರುವ ಯಾಳವಾರರು ತಮ್ಮ ಕವನಗಳಲ್ಲಿ ಆ ನೆಲೆಯ ಚಿಂತನೆಗಳನ್ನೇ ಹೆಚ್ಚಿಗೆ ಮಾಡಿರುವುದು ಕಂಡು ಬರುತ್ತದೆ. ವಚನಕಾರರ ದಟ್ಟವಾದ ಪ್ರಭಾವ, ಹಾಗೂ ವಚನಗಳ ಓದು, ಅವರಲ್ಲಿ ಬೆಳೆಸಿದ ವೈಚಾರಿಕ ಪ್ರಜ್ಞೆಯ ಹಿನ್ನೆಲೆಯಲ್ಲಿಯೇ ಅವರ ಧಾರ್ಮಿಕ ಚಿಂತನೆ ಮೂಡಿ ನಿಂತಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

೩. ನಾಡು – ನುಡಿಯ ಚಿಂತನೆ:–

ಸಾಹಿತ್ಯವೆಂಬುದು ಹಲವು ಚಿಂತನೆಗಳ ಸಂಗಮ 'ಜೀವನದ' ಬದಲಾಗವಣೆಗಳನ್ನು ಸದಾ ಒಳಗುಮಾಡಿಕೊಂಡು ಮುನ್ನಡೆಯುವ ಸಾಹಿತ್ಯದಲ್ಲಿ ಇಹಲವು ಬದಲಾವಣೆಗಳು ಕಾಣಸಿಗುತ್ತವೆ. ಹೀಗಾಗಿ ಇದರಲ್ಲಿ ಸಾಮಾಜಿಕ ರಾಜಕೀಯ, ಆರ್ಥಿಕ ಸಾಂಸ್ಕೃತಿಕ ಚಿಂತನೆಗಳು ಬಗೆಬಗೆಯಲ್ಲಿ ಕಾಣುವಂತೆ ನಾಡುನುಡಿಯ ಚಿಂತನೆಯಲ್ಲಿಯೂ ಹಲವು ಸಂದರ್ಭಗಳು ಕಾಣಸಿಗುತ್ತವೆ.

ಇಂದಿನ ಯುವಕರಲ್ಲಿ ಬತ್ತಿ ಹೋಗುತ್ತಿರುವ ರಾಷ್ಟ್ರಪ್ರೇಮ ಹಾಗೂ ನಾಡು–ನುಡಿ'ಯ ಪ್ರಜ್ಞೆ ಪುನಃ ಜಾಗೃತಗೊಳಿಸಿಬೇಕಾದ ಸನ್ನಿವೇಶಗಳು ಮೂಡತೊಡಗಿವೆ ಈ ದಿಸೆಯಲ್ಲಿ ಸೋಮನಾಥ ಯಾಳವಾರರು ತಮ್ಮ ಕವನಗಳ ಮೂಲಕ ಚಿಂತನೆಗೆ ತೊಡಗಿದ್ದು ಪ್ರಮುಖವೆನಿಸುತ್ತದೆ. ಅವರ ಈ ಕವನ

---

೯೧. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ಮನುಷ್ಯರೆಂದು ತಿಳಿದರೆ ಸಾಕು ೨೦೧೧

'ಬೇಡ
ಸೌದಿ ಅಮೇರಿಕಾ
ಭಾರತ ದೇಶವೆ
ನಮಗಿರಲಿ
ಬಂದರೂ ಇಂಗ್ಲೀಷ ಮರಾಠಿ
ಕನ್ನಡ
ಉಸಿರಾಗಿರಲಿ'

ಎನ್ನುವಲ್ಲಿ ದೇಶ ಪ್ರೇಮ, ನಾಡು-ನುಡಿ ಪ್ರೀತಿ ಹೊರಹೊಮ್ಮಿಸಿದ್ದಾರೆ. ಇಲ್ಲಿ ಕವಿಯ ವಿಶಾಲ ಮನೋಧರ್ಮ ಕಾಣಬೇಕು. ನಮಗೆ ಎಷ್ಟೇ ಭಾಷೆಗಳನ್ನು ಕಲಿಯುವ ಸ್ವಾಂತಂತ್ರ್ಯವಿದೆ ಆದರೆ 'ಕನ್ನಡ' ಉಸಿರಾಗಿರಲಿ ಎಂಬುದು ಸಂದೇಶ ಕನ್ನಡ ಅಭಿಮಾನಿಯಾಗಿರುವ ಯಾಳವಾರರು 'ಕನ್ನಡದ ಹಲವು ಸಂದರ್ಭಗಳಲ್ಲಿ' ಹೋರಾಟ ಕೈಗೊಂಡಿದ್ದಾರೆ. ಕನ್ನಡವನ್ನು ತುಂಬಾ ಪ್ರೀತಿಸುತ್ತಾರೆ. ಇದರೊಂದಿಗೆ ನಾಡಿನ ರೆಂಟೆ-ಕುಂಟೆ, ಒಲೆ, ಬಿದ್ರಿಕಲೆ, ಕೋಲಾರದಬುಗುಡಿ, ಮಂಗಳೂರಸೀಗಡಿಗಳನ್ನು ಎತ್ತಿ ಹೇಳಿ, ಅನ್ಯದೇಶದಿಂದ ಬರುವ ರೋಗಗಳು ಮಾತ್ರ ಈ ದೇಶಕ್ಕೆ ಕಾಡಲಿಡದಿರಲಿ' ಎನ್ನುವಲ್ಲಿ ಅವರ ಕಾಳಜಿಯನ್ನು ಅರ್ಥ ಮಾಡಿಕೊಳ್ಳಬೇಕು. ಸದಾ ನ್ಮಮ ದೇಶ ಹಾಗೂ ರಾಜ್ಯ ಆರೋಗ್ಯ ಪೂರ್ಣವಾಗಿರಲಿ ಎಂದು ಹಾರೈಸುತ್ತಿದ್ದಾರೆ ಈ ಕವನದಲ್ಲಿ.

ಬೀದರ ಜಿಲ್ಲೆಯ ಸಾಂಸ್ಕೃತಿಕ ಹಿರಿಮೆಯನ್ನು ಪ್ರತಿಬಿಂಬಿಸುವ ಕವನ 'ಧರಿನಾಡು' ಬೀದರ ಜಿಲ್ಲೆಯ ತುಂಬ 'ಸ್ವಾಗತಗೀತೆ' ಯಾಗಿ ಜನಪ್ರಿಯಗೊಂಡಿರುವ ಈ ಕವಿತೆಯು ತುಂಬಾ ಸುಂದರವಾಗಿದೆ. 'ಕನ್ನಡಾಂಬೆಯ ಮುಕುಟವೆನಿಸಿದ ಧರಿನಾಡಾದ ಬೀದರ ಜಿಲ್ಲೆಯ ಕಬ್ಬಿನ ತೋಟ, ನವಿಲುಗಳಾಟ ತೋಲ್‌ಚಂದ, ಕಳಚೂರಿ ಮೊಮ್ಮದಶಾ ಆಳಿದ ಈ ನಾಡಿನ ಇತಹಾಸಕ್ಕೆ ಭಲ್ಲುಂಕಿ, ಕಲ್ಯಾಣ ಅನುಭಾವ ಮಂಟಪ, ಮದರಸಾ, ನಾನಕಝುರಾ, ಗುಡಿ, ಕೋಟೆ, ಕೊತ್ತಳ ಮುಂತಾದ ಐತಿಹಾಸಿಕ ಧಾರ್ಮಿಕ ಸ್ಥಳಗಳು ಈ ನೆಲ ಹಲವು ಸಂಸ್ಕೃತಿಗಳ ಸಂಗಮವೆಂಬುದನ್ನು ದಾಖಲಿಸುತ್ತವೆ "ಶಿವ ಶರಣರ ಸಂತರ ತವರು ನೂರಾರು

ಜಾತಿಯ ಜನರು ಒಂದಾಗಿ ಬಾಳುಲಿಹರು" ಎಂದು ನಾಡಿನ ಸಿರಿಯನ್ನು ಡಾ. ಸೋಮನಾಥ ಯಾಳವಾರರು ತಮ್ಮ 'ಧರಿನಾಡು' ಕವನದಲ್ಲಿ ಸೊಗಸಾಗಿ ಬಣ್ಣಿಸಿದ್ದಾರೆ ಎಂದಿರುವುದನ್ನು[೯೨] ಅರೆಯಬಹುದು.

ಕನ್ನಡ ಸಾಹಿತ್ಯದ ಕೀರ್ತಿಯ ಪತಾಕೆಗಳಂತಿರುವ 'ವಚನಗಳು' ನಮ್ಮ ಹೆಮ್ಮೆಯ ಕಾಣ್ಕೆಗಳು. ಅವು ಕನ್ನಡ ಸಾಹಿತ್ಯ ಜಗತ್ತಿನ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳು. ಅವುಗಳನ್ನು ವಿಶ್ವದ ಬೆಳ್ಳಿ ಕಿರಣಗಳೆಂದು ಕರೆಯುವ ಯಾಳವಾರರು ಅವುಗಳನ್ನು ಕುರಿತು ಬರೆಯುತ್ತ- ಪ್ರಕೃತಿ ವ್ಯಾಪಾರದ ಸೂಕ್ಷ್ಮನುಭಾವಗಳು ಕಲ್ಯಾಣ ಕ್ರಾಂತಿಯ ಬೀಜಗಳು, ವೈಚಾರಿಕ ಬಾಳಿನ ಹೆಜ್ಜೇನುಗಳು ಎಂದು ಕರೆಯುತ್ತಾರೆ. ಸಮಷ್ಟಿ ಸುಖದ ಬೆರಗುಳ ವಚನಗಳು –

'ಆಧ್ಯಾತ್ಮಿಕ ತವನಿಧಿ
ಮಾನವತೆಯ ತಳಹದಿ
ಅನುಭಾವದ ಹೊನ್ನುಡಿ
ದೇವ ಪಥಕೆ ಮುನ್ನುಡಿ'[೯೩]

ಎಂದು ವರ್ಣಿಸುವಲ್ಲಿ ವಚನಗಳ ಮಹತ್ವವನ್ನು ನಾವು ಅರಿಯಬಹುದಾಗಿದೆ. ಕನ್ನಡ ನುಡಿಯ ಹಿರಿಮೆ – ಗರಿಮೆಗಳನ್ನು ಸಾರುವ ವ್ಯಕ್ತಿಯ ಆತ್ಮವಿಕಾಸಕ್ಕೆ ಬೆನ್ನುಡಿಯಾಗಿರುತ್ತವೆ ಎಂದು ಹೇಳಿರುವುದು ಯಥೋಚಿತವಾದ ಮಾತೆನಿಸುತ್ತದೆ.

೪. ರಾಜಕೀಯ ಚಿಂತನೆಗಳು :-

ಸರಳತೆ, ಸಜ್ಜನಿಕೆಗೆ ಹೆಸರಾಗಿರುವ ಸೋಮನಾಥ ಯಾಳವಾರ ಅವರು ಅಪ್ಪಟ ಕವಿ ಹೃದಯದ ವ್ಯಕ್ತಿ, ಸಮಾಜವನ್ನು ಹಾಗೂ ಇಂದಿನ ರಾಜಕೀಯ ವಾತಾವರಣವನ್ನು ತುಂಬಾ ಹತ್ತಿರದಿಂದ ಬಲ್ಲವರು. ರಾಜಕೀಯ ಜೀವನದ

---

೯೨. ಡಾ. ಪ್ರೇಮಾಸಿರ್ಸೆ 'ಬಾಹತ್ತರ, ಸಂ ಜಗನ್ನಾಥ ಹೆಬ್ಬಾಳೆ ಮುನ್ನುಡಿ viii

೯೩. ಡಾ. ಸೋಮನಾಥ ಯಾಳವಾರರ – ವಚನಗಳು ೨೦೧೧

ಸ್ವರೂಪಕುರೂಪಗಳನ್ನು ಅರ್ಥಮಾಡಿಕೊಂಡ ಬುದ್ಧಿಜೀವಿಗಳು. ಅಷ್ಟೇ ಅಲ್ಲ ಎಷ್ಟೋ ಸಂರ್ಭಗಳಲ್ಲಿ ರಾಜಕೀಯ ಶಕ್ತಿಯುಳ್ಳವರ ಸಾಮಿಪ್ಯದಲ್ಲಿದ್ದುಕೊಂಡು, ಅದರ ಪ್ರಭಾವಗಳಿಗೆ ಒಳಗಾದವರು. ರಾಜಕೀಯ ಶಕ್ತಿಯ ಆಳ ಅರಿತುಕೊಂಡು ಒಮ್ಮೊಮ್ಮೆ ಬೇಸರಪಟ್ಟುಕೊಂಡಿದ್ದಾರೆ. ತಾವು ಕಂಡ ನೈಜ ರಾಜಕಾರಣದ ಸಂದರ್ಭಗಳನ್ನು ತಮ್ಮ 'ಅಪರಿಚಿತರು' ಕವನದಲ್ಲಿ ಮನಂಬುಗುವಂತೆ ಹಿಡಿದಿಟ್ಟಿದ್ದಾರೆ.

'ಯಾರಿವರೆಂದು
ಹುಬ್ಬುಗಂಟಿಕ್ಕಿ
ನೆನಪನ್ನೇಕೆ
ಕೈ ಹಾಕಿ ಕೆದಕುತ್ತಿರುವೆ
ಓ ಪ್ರಥಮ ಪ್ರಜೆಯೇ'[೯೪]

ಎಂಬುವಲ್ಲಿಯ ವ್ಯಂಗ್ಯ ರಾಜಕಾರಣದ ವಾಸ್ತವಿಕತೆಗೆ ಕನ್ನಡಿ ಹಿಡಿಯುತ್ತದೆ. ಸಮಕಾಲೀನ ರಾಜಕೀಯ ವ್ಯವಸ್ಥೆಯಲ್ಲಿನ ಸೋಗಲಾಡಿತನ ಇಲ್ಲಿ ಸುವ್ಯಕ್ತ. "ಬೆಳೆದು ನಿಂತ ನಿನ್ನ ಬೊಜ್ಜಿನ ಕೆಳಗೆ ಕಳೆದವರನೆಂತು ಅರಸುವೆ ಕಾಣಲಾರದು ಈಗ ನೀ ನಿಂತ ನೇಲ ನಿನಗೆ ಸೆರೆ ಸಿಂದಿಗೆ, ಹಸಿರುನೋಟಿಗೆ ವೋಟುಕೊಟ್ಟವರ ನೀ ಗುರುತಿಸಬಹುದೇ ?" ಎಂಬಲ್ಲಿಯ ವ್ಯಾಖ್ಯಗಳು ಅವಿವೇಕಿಗಳಾದ ಸ್ವಾರ್ಥ ರಾಜಕಾರಣಿಗಳನ್ನು ಎದುರುಗಡೆ ನಿಲ್ಲಿಸುತ್ತವೆ. ದಲಿತರನ್ನು ಬಲವಿಲ್ಲದವರನ್ನು ಕಾರ್ಮಿಕರನ್ನು ತಮ್ಮ ಓಟಿಗಾಗಿ ಬಳಸಿಕೊಳ್ಳುವ ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಳ್ಳುವ ಈ ಕವನ, ಈ ಮೂಲಕ ಬಡವರ ಸ್ಥಿತಿ ಗತಿಯನ್ನು ಕುರಿತು ಹೇಳುತ್ತ ಚಿಂತಿಸುತ್ತಾರೆ.

'ನೀ ತುಳಿದು ಹೋದ
ಮಣ್ಣಲ್ಲಿ ಮಲಗಿದವರು
ಹೊಟ್ಟೆ ತುಂಬ ಬೆಂಕಿನುಂಗಿ
ನಕ್ಕವರು'

---

೯೪. ಡಾ. ಸೋಮನಾಥ ಯಾಳವಾರರ – ಅಪರೀಚಿತರು ೨೦೧೧

ಎಂದು ಅವರ ನೈಜತೆಯನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ. ರಾಜಕೀಯ ಪುಂಗಿಗೆ ತಲೆದೂಗುವ ಅವರು ಕಾಳಿಂಗರು' ಅವರು ತಿರುಗಿಬಿದ್ದರೆ ಈ ನಿನ್ನ ರಾಜಕೀಯದಕತೆ ಮುಗಿಯುತ್ತದೆ ಎಂಬ ಎಚ್ಚರಿಕೆಯನ್ನು ಇಲ್ಲಿ ಕೊಟ್ಟಿರುವುದನ್ನು ಕಾಣಬಹುದು.

ರಾಜಕೀಯ ಜೀವನದಲ್ಲಿ ಮನುಷ್ಯ ತನ್ನ ಮಾನವೀಯತೆಯನ್ನು ಮರೆತು ಕೇವಲ ಬೂಟಾಟಿಕೆ ತೋರುವುದು ಇಂದು ಎಲ್ಲೇಡೆ ಕಾಣುವ ದೃಷ್ಯ ಕೇವಲ ವೋಟು ವ್ಯವಹಾರ ರಾಜಕರಣಿಗಳ ದೊಡ್ಡ ಹಿಂಡೇ ಇಂದು ರಚಿತವಾಗಿದೆ. ಅಧಿಕಾರಶಾಹಿ ರಾಜಕಾರಣವು ಅತಿಯಾಗಿರುವ ಇಂದಿನ ಸಂದರ್ಭದಲ್ಲಿ ಯಾವ ರಾಜಕಾರಣಿಯನ್ನು ನಂಬದ ಸ್ಥಿತಿಯುಂಟಾಗಿರುವುದನ್ನು ಕಾಣಬಹುದು.

'ಚುನಾವಣೆಗೊಮ್ಮೆ
ಬರುವ ನಾಯಕರು
ಭರವಶೆ ಕೊಡುವರು
ಜನ ಕೇಳುವರು
ಬೆಳಕು ತರುವರೆಂಬ
ನಂಬಿಕೆ ಈಗ ಮಾಯ'(ಭಾಗ್ಯ ಜ್ಯೋತಿ)

ಈ ಸಾಲುಗಳಲ್ಲಿ ವ್ಯಕ್ತಗೊಂಡಿರುವ ಚುನಾವಣೆ ರಾಜಕೀಯದ ನಮೂನೆಯನ್ನು ಕಾಣಬಹುದು. ಇಂದಿನ ರಾಜಕೀಯ ಕುತಂತ್ರದಿಂದ ರೈತರು ಕಂಗಾಲಾಗಿರುವರು. ಸ್ವಾರ್ಥ ರಾಜಕಾರಣಗಳಿಂದ ಏನೆಲ್ಲ ಅನಾಹುತಗಳು ನಡೆಯುತ್ತವೆ ಎಂಬ ಚಿತ್ರವನ್ನು ಇಲ್ಲಿ ಗುರುತಿಸಹಬಹುದು.

'ರೈತರ ಬೆವರಿನ ಫಲ
ದಲ್ಲಾಳಿಗಳ ಬಕಾಸುರ
ಹೊಟ್ಟೆಗೆ ಆಹಾರ

ರಾಜಕೀಯ ತಂತ್ರಗಳ ನಡುವೆ
ಅತಂತ್ರವಾಗಿರುವ
ಇವರ ಬರದಾದ ಬದುಕು [೯೫]
(ದನಿಯಾಗಬೇಕೆನಿಸಿತು)

ಉತ್ತಿ ಬಿತ್ತಿ ಬೆಳೆವ ರೈತನ ಬೆಳೆಗೆ ಬೆಲೆ ಸಿಗದಂತೆ ರಾಜಕಾರಣ ನಡೆಯುತ್ತಿರುವುದು ಗಮನಾರ್ಹ. ಅಂತೆಯೇ 'ನಾಯಕರ ಭಾಷಣ' ಎಂಬ ಕವನ 'ಸಮಯ ಸಾಧಕನ' ರಾಜಕೀಯ ಸ್ಥಿತಿಯನ್ನು ವಾಸ್ತವಿಕ ನೆಲೆಯಲ್ಲಿ ಹಿಡಿದಿಡುತ್ತದೆ. ಇಂದಿನ ಪಕ್ಷಾಂತರ ರಾಜಕಾರಣ ಜನರಿಗೆ ಬೇಸರ ತಂದಿರುವುದನ್ನು, ಮತ್ತೆ ಮತ್ತೆ ಚುನಾವಣೆಗಳು ನಡೆತುತ್ತಿರುವುದನ್ನು ಈ ಕವನವು ಅರ್ಥಪೂರ್ಣವಾಗಿ ನಿರೂಪಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಯಾಳವಾರರ ಕವನಗಳಲ್ಲಿ ಮೂಡಿ ಬಂದಿರುವ ರಾಜಕೀಯ ವಿಚಾರಗಳು ವಾಸ್ತವಿಕ ಸಂಗತಿಗಳಾಗಿದ್ದು ಇಂದಿನ ರಾಜಕೀಯ ವಾತಾವರಣವನ್ನು ದಿಗ್ದರ್ಶಿಸುತ್ತವೆ ಆ ಮೂಲಕ ಜನಸಾಮಾನ್ಯರ ಸ್ಥಿತಿಗತಿಗಳಿಗೆ ಕನ್ನಡಿ ಹಿಡಿದು ತೋರುತ್ತವೆ. ಎನ್ನಬಹುದು.

೫. ವ್ಯಕ್ತಿ ಚಿತ್ರಗಳು : –

ಸೋಮನಾಥ ಯಾಳವಾರರ ಕಾವ್ಯದಲ್ಲಿ ವ್ಯಕ್ತವಾಗಿರುವ ವ್ಯಕ್ತಿ ಚಿತ್ರಗಳು ಗಮನಸೆಳೆಯುತ್ತವೆ. ಈ ವಿಭಾಗದಲ್ಲಿ ಕಂಡುಬರುವ ಕವನಗಳೆಂದರೆ, 'ಜಗಜ್ಯೋತಿ' 'ಅಕ್ಕನ ಜವಾಬು' 'ಪಟ್ಟದ್ದೇವರು' 'ಮಹಾಬೋಧಿ' ಮತ್ತು 'ನಾಯಕ' ಈ ಕವನಗಳಲಿ ಕ್ರಮವಾಗಿ ಬಸವಣ್ಣ, ಅಕ್ಕಮಹಾದೇವಿ, ಭಾಲ್ಕಿ ಚನ್ನಬಸವ ಪಟ್ಟದ್ದೇವರ, ಬುದ್ಧ ಹಾಗೂ ಗಾಂಧೀಜಿ ಯವರ ವ್ಯಕ್ತಿತ್ವದ ಸಂಗತಿಗಳನ್ನು ಗುರುತಿಸಬಹುದಾಗಿದೆ.

ಬಸವಣ್ಣನನ್ನು ಕ್ರಾಂತಿ ಪುರುಷ, ಜಗಜ್ಯೋತಿ, ಲಿಂಗ-ಜಂಗಮದಲಿ ದೇವರನ್ನು ಸಮೀಕರಿಸಿ ಕೊಟ್ಟಿರುವ ಧರ್ಮಗುರು ಎಂಬುದನ್ನು ಕಂಡಿರಿಸಲಾಗಿದ್ದು, ಆತನ ಕ್ರಾಂತಿಕಾರಿ ಗುಣವನ್ನು ಬಾಲ್ಯದ ಬದುಕಿನಲ್ಲಿಯೇ ಕವಿ ಕಂಡಿದ್ದಾರೆ.

---

೯೫. ಡಾ. ಸೋಮನಾಥ ಯಾಳವಾರರ – ಬಯಲೊಳಗಣಬಿಸಿ ದನಿಯಾಗಬೇಕೆನಿಸಿತು ೨೦೧೧

ಸಮಾನತೆ ತರಲು ಹೋರಾಡಿದ ಆ ಮಾನವತಾವಾದಿಯನ್ನು ಅರ್ಥಪೂರ್ಣವಾಗಿ ಶಬ್ದಗಳಲ್ಲಿ ಹಿಡಿದಿಡಲಾಗಿದೆ.

ಅಕ್ಕಮಹಾದೇವಿಯ ಬದುಕಿನಲ್ಲಿ ನಡೆದು ಹೋಗಿದೆಯನ್ನಲಾದ 'ಅವಳ ಮತ್ತು ಕೌಶಿಕ' ಮಹಾರಾಜನ ಪ್ರಸಂಗವನ್ನು ಎತ್ತಿಕೊಂಡ ಕವಿ ಚಿಂತನೆ ಅವಳು ಎಂದಿಗೂ ಕೌಶಿಕನನ್ನು ಮೆಚ್ಚಲಿಲ್ಲ ತನ್ನ ಪ್ರೀತಿ ಚನ್ನಮಲ್ಲಿಕಾರ್ಜುನನಿಗೆ ಮೀಸಲಿರುವುದನು ತಿಳಿಸಿದಳು ಎಂಬುದಾಗಿ ತೋರಿಸಿದ್ದಾರೆ, ಅಕ್ಕನ ಮನಸ್ಸಿನಲಿಯ ತುಮಲವನ್ನು ಸೊಗಸಾಗಿ, ಅಷ್ಟೇ ದಿಟ್ಟತನದಲಿ ಅವಳು ಉತ್ತರಿಸಿದಳೆಂಬಂತೆ ಹೇಳಿರುವುದು ಇಂದಿನ ಸ್ತ್ರೀವಾದಿಗಳಿಗೆ ತುಂಬಾ ಹಿಡಿಸುವ ಕವನವೆನಿಸುತ್ತದೆ.

೧೦೯ ವರ್ಷ ಬಾಳಿ ಹೋಗಿರುವ ಭಾಲ್ಕಿ ಹಿರೇಮಠದ ಚನ್ನಬಸವ ಪಟ್ಟದೇವರ ಮಹಾಸಾಧನೆಗಳನ್ನು ನೆನಪಿಸಿಕೊಳ್ಳುವ ಕವನವಿದು. 'ಚನ್ನಬಸವಪಟ್ಟದ್ದೇವರನ್ನು ಶಾಬ್ದಿಕವಾಗಿ ಮತ್ತು ಅಷ್ಟೇ ಸುಂದರವಾಗಿ ಹಿಡಿದು ತೋರಿಸಿದೆ ಏನು ಬರೆಯಲಿ ಚೆನ್ನ, ಹೇಗೆ ತೋರಲಿ ನಿನ್ನ ಸದ್ಗುಣ ಸಂಪನ್ನ ಪೂರ್ಣರೂಪ' ಎಂದು ಆರಂಭಗೊಳ್ಳುವ ಕವಿತೆ ಅವರ ಬಸವಾನು ಯಾಯಿತ್ವ, ಕಾಯಕ ತತ್ವ, ಭಕ್ತಿಯ ಹಸಿವು, ಕನ್ನಡ ಕಟ್ಟಿದ ರೀತಿ, ಗುರುವಾಗಿ ನಡೆದು ಕೊಂಡು ಹೋದ ದಾರಿ ಅನುಭಾವ ಮಂಟಪ ಕಟ್ಟಿ ಶರಣಸಿರಿ ಉಳಿಸಿದ ಅವರ 'ಮಸ್ತಕ ಬಸವನ ಮಹಾಪುಸ್ತಕ'ವೆಂದು ಹೇಳಿರುವುದು ಅವರ ವ್ಯಕ್ತಿತ್ವವನ್ನು ದಿಗ್ದರ್ಶಿಸುತ್ತದೆ.

'ಮಹಾಭೋಧಿ' ಬುದ್ಧನ ದಿವ್ಯ ವ್ಯಕ್ತಿತ್ವವನ್ನು ಕುರಿತ ಕವನ. ಆತನ ಧ್ಯಾನ ಮಹಾ ಮೌನ ಮಾನವತೆಯ ಗುಣ ಮಾನವ ಜನಾಂಗಕ್ಕೆ ಎಂದೆಂದೂ ಮಾರ್ಗದರ್ಶಿ, ಆತನು ಲೋಕ ಕಲ್ಯಾಣಕ್ಕಾಗಿ ಹೆಂಡತಿ ಮಗು ರಾಜ್ಯಬಿಟ್ಟು ಅರಣ್ಯಕ್ಕೆ ಹೋಗಿ ತಪಸ್ಸು ಮಾಡಿದ ರೀತಿಯನ್ನು ಕಂಡಿರಿಸುವ ಇದು ಸಿದ್ಧಾರ್ಥ ಗೌತಮ ಬುದ್ಧನಾದ ಕತೆಯನ್ನೆಲ್ಲ ನೆನಪಿಗೆ ತರುತ್ತದೆ. ಮಾರನ ಅಡ್ಡಿ ಆತಂಕಗಳನ್ನು ಎದುರಿಸಿ ನಿಲ್ಲುವ ಬುದ್ಧನನ್ನು ಕವಿ – 'ಅಲ್ಲಾಡದ ಗುಡ್ಡ' ಎಂದಿರುವುದು ಬುದ್ಧನ ಮಹೋನ್ನತ ಗುಣವನ್ನು ಹೇಳುತ್ತದೆ ಬೌದ್ಧ ಸಂಘ ಕಟ್ಟಿ, ಬಿಕ್ಕುಗಳನ್ನಿಟ್ಟು ತನ್ನ ಬೌದ್ಧ ಧರ್ಮ ಪ್ರಚಾರ ಮಾಡಿದ್ದು ಸಣ್ಣ ಸಂಗತಿಯಲ್ಲ ಆತನ ಧರ್ಮ ತತ್ವಗಳು

ಇಂದಿಗೂ ಪ್ರಸ್ತುತವಾಗಿವೆ. ಆದರೂ ಜನತೆ ಅಧಮದಿಂದ ದೂರ ಉಳಿದಿರುವ ಸಂಗತಿ ಕವಿಗೆ ನೋವು ಉಂಟುಮಾಡಿರುವುದನ್ನು ಮರೆಯಲಾಗದು.

'ನಾಯಕ' ಗಾಂಧೀಜಿಯ ಸ್ವಾತಂತ್ರ್ಯದ ಸಂದರ್ಭದ ಜೀವನದ ಕೆಲವು ಪ್ರಸಂಗಗಳನ್ನು ಹಿಡಿದಿಟ್ಟಿದೆ ಆತನ ವ್ಯಕ್ತಿತ್ವ ಜಗತ್ತಿಗೆ ಮಾದರಿ. ತಾನು ಮೈಮೇಲೆ ಬಟ್ಟೆ ಧರಿಸದೆ ಗಾಂಧೀಜಿ ಹೋರ ವಲಯ ಸುಡದಂತೆ ಶಾಂತಿ ಸತ್ಯಗ್ರಹ ಕಾವಲಿಟ್ಟವನು ಅಸಹಕಾರ ಚಳುವಳಿ ಮೂಲಕ ಬ್ರಿಟೀಷರಿಗೆ ಹೆದರಿಕೆ ಹುಟ್ಟಿಸಿದವನು. ಆತನು ದೇಶದ ಸ್ವಾತಂತ್ರ್ಯ ಪಡೆದ ರೀತಿ ಜಗತ್ತಿಗೆ ಮಾರ್ಗದರ್ಶಿ. ಅಂತೆಯೇ ಆತನಿಗೆ 'ರಾಷ್ಟ್ರಪಿತ'ನೆಂಬ ಅಂಕಿತ ವೆಂದು ಕವಿಯು ಆತನ ವ್ಯಕ್ತಿತ್ವವನ್ನು ತೋರಿದ್ದಾರೆ.

ಒಟ್ಟಿನಲ್ಲಿ ಸೋಮನಾಥ ಯಾಳವಾರರು ತಮ್ಮ ಕವನಗಳ ಮೂಲಕ ಈ ಎಲ್ಲ ಮಹಾಪುರುಷರ ವ್ಯಕ್ತಿತ್ವವನ್ನು ತುಂಬಾ ಸಮರ್ಥವಾಗಿ ಮಾಡಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

ಒಟ್ಟಾರೆ ಹೇಳುವುದಾದರೆ ಸೋಮನಾಥ ಯಾಳವಾರ ಅವರ 'ಬಯಲೊಳಗಣಬಿಸಿ' ಕವನ ಸಂಕಲನದಲ್ಲಿ ಕುಟುಂಬ ಪ್ರೀತಿಯಿಂದ ಹಿಡಿದು ದೇಶಭಕ್ತಿವರೆಗಿನ ಎಲ್ಲ ಮಜಲುಗಳಿಗೆ ಕವಿಮನ ಮಿಡಿದುದು ಕಂಡು ಬರುತ್ತದೆ. ರೈತರ, ದಲಿತರ ಸ್ಥಿತಿ ಕಂಡು ಮರುಗಿದ ಅವರು 'ಧರಿನಾಡ ಸಿರಿ' ಕಂಡು ಸಂತೋಷದಿಂದ ಕುಣಿದು ಕುಪ್ಪಳಿಸಿದ್ದು ಇಲ್ಲಿ ಕಾಣುತ್ತೇವೆ. ಬಸವ ಬುದ್ಧ ಗಾಂಧೀಜಿ ಪಟ್ಟದ್ದೇವರಂತಹ ವಿಭೂತಿ ಪುರುಷರು ಅವರು ಬದುಕಿನ ಆದರ್ಶ ವಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಎಂದು ಅಭಪ್ರಾಯ ಪಟ್ಟಿರುವ ಡಾ.ಪ್ರೇಮಾ ಸಿರ್ಸೇಯವರ ಮಾತು[೯೬] ಒಪ್ಪುವಂತಹದ್ದು

೫. ಸೋಮನಾಥ ಯಾಳವಾರರ ಭಾಷೆ ಮತ್ತು ಶೈಲಿ :-

ಸಾಹಿತ್ಯಾಭಿವ್ಯಕ್ತಿಗೆ ಭಾಷೆಯೇ ವಾಹಕ. ಸಾಮಾಜಿಕ ಮಾಧ್ಯಮವಾಗಿರುವ ಭಾಷೆಯು ನಿತ್ಯೋಪಯೋಗಿ, ಶಾಸ್ತ್ರೋಪಯೋಗಿ ಹಾಗೂ ಭಾವೋಪಯೋಗಿ ಎಂದು ೩ ವಿಧದಲ್ಲಿ ಬಳಕೆಯಾಗುವುದು. ಇದರಲ್ಲಿ ಭಾವೋಪಯೋಗಿ ಭಾಷೆ ಕವಿಯು ಬಳಸುವಂತಹದ್ದು.

೯೬. ಡಾ. ಸೋಮನಾಥ ಯಾಳವಾರರ - ಬಯಲೊಳಗಣಬಿಸಿ ಮುನ್ನುಡಿಯಲ್ಲಿ ೨೦೧೧

ಕವಿ ಬಳಸುವ ಭಾಷೆಗೆ ತನ್ನದೇ ಆದ ಒಂದು ಸ್ವರೂಪವಿರುತ್ತದೆ. ಪದಗಳು ಪದ ಪುಂಜಗಳು ವ್ಯಾಖ್ಯೆಗಳು ಯಾವ ಅರ್ಥವಂತಿಕೆ ಪಡೆಯುತ್ತವೆ ಎಂಬುದನ್ನು ಕವಿಯು ತಿಳಿದಿರುತ್ತಾನೆ. ಭಾಷೆಯನ್ನು ಯಾವ ವಿನ್ಯಾಸದಲ್ಲಿರಿಸಿದ್ದರೆ ಏನೇನು ಪರಿಣಾಮ ರಮಣೀಯತೆಗಳು ಹುಟ್ಟುತ್ತದೆಂದು ಕವಿ ಅರ್ಥಮಾಡಿಕೊಂಡಿರುತ್ತಾನೆ. ಈ ಹಿನ್ನೆಲೆಯಲ್ಲಿ ಸೊಮನಾಥ ಯಾಳವಾರರು ಬೀದರ ಜಿಲ್ಲೆಯ ಸಾಹಿತಿ ಎಂದೇ ಜನಪ್ರಿಯರಾಗಿದ್ದಾರೆ ಆದರೂ ಯಾಳವಾರರ ಕಾವ್ಯದಲ್ಲಿ ಬೀದರ ಜಿಲ್ಲೆಯ ಕನ್ನಡ ಅಪರೂಪಕ್ಕೊಮ್ಮೆ ಮಾತ್ರ ಸಿಗುವುದು ಗಮನೀಯ ಅಂಶ.

ಒಂದು ಭಾಷೆಯ ಸಂಸ್ಕಾರ ಬಾಲ್ಯದಿಂದಲೇ ಆಗುವುದರಿಂದ ಯಾಳವಾರರ ಕಾವ್ಯದ ಭಾಷೆ, ಶೈಲಿ ಅಭಿವ್ಯಕ್ತಿಗಳಲ್ಲಿ ಧಾರವಾಡದ ಭಾಷಾ ಶಿಷ್ಠತೆಯನ್ನು ಕಾಣುತ್ತೇವೆ. ಗ್ರಾಮದ ಪರಿಚಯವು ಇವರಿಗಿರುವುದರಿಂದ ಕೆಲವು ಕವನಗಳಲ್ಲಿ ಜಾನಪದೀಯ ಅಂಶಗಳು ಸಿಗುತ್ತವೆ. 'ಬ್ಯಾಸಗಿ' ಕವನದಲ್ಲಿ ಇದನ್ನು ಕಾಣಬಹುದು. ಜಗಜ್ಯೋತಿ, ಮಹಾಬೋಧಿ, ಅರಿವೇಗುರು, ಸಂಗಾತಿ, ಟ್ಯೂಬ್‌ಲೈಟ್, ಮುಂತಾದ ಕವನಗಳ್ಲಲಿ ರೂಪಕ, ಉಪಮೆ, ದೃಷ್ಟಾಂತಗಳು ಬಳಕೆಯಾಗಿದ್ದು, ಅಲ್ಲಲ್ಲಿ ಪ್ರತೀಕಗಳು ಪುಟಿದೆದ್ದಿವೆ. ಆ ನಿನ್ನ ನೆನಪು ಕವನದಲ್ಲಿ ಅಭಿವ್ಯಕ್ತಗೊಂಡಿರುವ ಪ್ರಕೃತಿರಮ್ಯತೆಯ ಚಿತ್ರ ಧ್ವನಿಪೂರ್ಣವಾಗಿ ವ್ಯಕ್ತವಾಗಿನಿಂತಿದೆ. ಗದ್ಯವಾಗಲಿ, ಪದ್ಯವಾಗಲಿ ಶೈಲಿಯ ಮುಖ್ಯ ತುಡಿತವೆಂದರೆ ಅನುಭವವನ್ನು ಹರಳುಗಟ್ಟಿಸುವ ಪ್ರಯತ್ನ. ಇಂತಹ ಪ್ರಯತ್ನವನ್ನು ಸೋಮನಾಥ ಯಾಳವಾರರು ತಮ್ಮ 'ನಿರೀಕ್ಷೆ' ಅರಿವೇ ಗುರು, ಪಟ್ಟದೇವರು, ಯಾರೀಕೆ, ಆ ನಿನ್ನ ನೆನಪ. ಭಾಗ್ಯಜ್ಯೋತಿ ಮೊದಲಾದ ಕವಿತೆಗಳಲ್ಲಿ ಮೂಡಿರುವುದನ್ನು ಕಾಣಬಹದು. 'ಶೀಲಸ್ಯ ಇಯಂ ಶೈಲಿ' ಎಂಬಂತೆ ಕವಿ ಯಾಳವಾರರ ಕಾವ್ಯಧರ್ಮ ಮತ್ತು ಮನೋಧರ್ಮಗಳು 'ವಚನಾಧ್ಯಯನ'ದ ಪ್ರಭಾವದಿಂದ ಉಂಟಾಗಿರುವುದನ್ನು ಅರಿಯಬಹುದು.

ಒಟ್ಟಿನಲ್ಲಿ ಹೇಳುವುದಾದರೆ ಕವಿಯ ಭಾವಲೋಕದಿಂದ, ಅನುಭಾವ ಕೋಶದಿಂದ, ಅಭಿವ್ಯಕ್ತಿ ಪಡೆದ ಭಾಷೆ, ಅತನದೇ ಆದ ಶೈಲಿಯಿಂದ ಹೊರಹೊಮ್ಮುತ್ತದೆ. ಅದರಂತೆ ಗದ್ಯ - ಪದ್ಯಗಳೆರಡರಲ್ಲಿಯೂ ಸೋಮನಾಥ ಅವರಿಗೆ ತನ್ನದೇ ಆದ ಭಾಷಾ ಶೈಲಿ ವಿಶಿಷ್ಟವಾಗಿ ದಕ್ಕಿದೆ ಎನ್ನಬಹುದು.

ಅಧ್ಯಾಯ – ೫
ಸಮಕಾಲೀನ ಸಾಹಿತಿಗಳಲ್ಲಿ ಸೋಮನಾಥ ಯಾಳವಾರರ ಸ್ಥಾನಮಾನ

ಬೀದರ ಜಿಲ್ಲೆಯ ಆಧುನಿಕ ಲೇಖಕರಲ್ಲಿ ಪ್ರಮುಖರಾಗಿರುವ ಡಾ. ಸೋಮನಾಥ ಯಾಳವಾರರು ಸೃಜನಶೀಲ ಬರಹಗಾರರು. ಈ ಭಾಗದ ಸಾಹಿತ್ಯದಲ್ಲಿ ಸಂಶೋಧನೆ, ವಿಮರ್ಶೆ, ಜೀವನ ಚರಿತ್ರೆಗಳಂತಹ ಸಾಹಿತ್ಯ ತುಂಬಾ ಕಡಿಮೆ ಎಂಬಂತಹ ಸ್ಥಿತಿಯಲ್ಲಿದ್ದಾಗ ಇವರು ಸಾಧ್ಯವಾದಷ್ಟು ತಮ್ಮ ಕೃತಿಗಳ ಮೂಲಕ ಆ ಕೊರಗನ್ನು ನೀಗಿಸಿದರು ಎಂದು ಹೇಳಬಹುದು. ಕನ್ನಡದಲ್ಲಿ ವಚನಸಾಹಿತ್ಯ ಸಂಶೋಧನೆಯಲ್ಲ ತೊಡಗಿರುವ ಎಂ.ಎಂ.ಕಲಬುರ್ಗಿ, ಎಂ.ಎಸ್.ಲಠ್ಠೆ, ಬಸವರಾಜ ಸಬರದ ಮೊದಲಾದವರ ಶೈಲಿಗೆ ಹೊಂದಿಕೊಂಡಿರುವ ಇವರ 'ಪುಲಿಗೆರೆಯ ಆದಯ್ಯ' 'ಶರಣಸಿರಿ' 'ಬೀದರ ಜಿಲ್ಲೆಯ ಶರಣ ಸ್ಮಾರಕಗಳು' ಓದುಗರಿಗೆ ಹೊಸ ಅನುಭವವನ್ನು ನೀಡುತ್ತವೆ.

ವಚನಗಳಲ್ಲಿಯ ಹೊಸ ವಿಷಯಗಳನ್ನು ಕೆದಕುತ, ಆ ಕಡೆಗೆ ಸಂಶೋಧಕರ ಗಮನ ಸೇಳೆಯುವಲ್ಲಿ ಯಶಸ್ವಿಯಾಗಿರುವ ಯಾಳವಾರರು ಅವುಗಳನ್ನು ಹೊಸ ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸಿರುವುದು ಎದ್ದು ಕಾಣುತ್ತದೆ. ಯಾಳವಾರರ ವಿಮರ್ಶಾ ಕೃತಿಗಳಲ್ಲಿಯೂ ಸಂಶೋಧನೆಯ ದಟ್ಟವಾದ ದಾರಿ ಕಾಣುತ್ತಿತ್ತು. ಓದುಗರಿಗೆ ಹೊಸ ದೃಷ್ಟಿಯ ಅನುಭವವನ್ನು ನೀಡುವಲ್ಲಿ ಅವು ಮುಂದಾಗುತ್ತಿವೆ.

ಸೋಮನಾಥರ 'ಬಯಲೊಳಗಣ ಬಿಸಿ' ಕವನ ಸಂಕಲನವು ಒಳ್ಳೆಯ ಪ್ರತಿಕ್ರಿಯೆಗೆ ಒಳಗಾಗಿರುವ ಕಾವ್ಯ. ಇಂದಿನ ಬದುಕಿನಲ್ಲಿಯ ಅಸ್ತವ್ಯಸ್ತತೆಗಳನ್ನು ಹೂಸಕಿ ಹಾಕಿ ಆದರ್ಶದ ನೆಲೆಯಲ್ಲಿ ಅದ್ನನು ಕಾಣಲು ಪ್ರಯತ್ನಸಿರುವುದು, ಅದಕ್ಕೆ ತಕ್ಕ ಕಾವ್ಯ ಶೈಲಿಯನ್ನು ತರಲು ಪ್ರಯತ್ನಿಸಿರುವುದು ಸುಪ್ರಸಿದ್ದವಾಗಿರುತ್ತದೆ. ಬದುಕನ್ನು ಹಲವು ಸ್ಥಿತಿಗಳಿಂದ ಅಳೆಯಲು ಪ್ರಯತ್ನಸಿರುವ ಇವರ ಕವನಗಳಲ್ಲಿ ಹಲವು ರೀತಿಯ ಚಿಂತನೆಗಳಿವೆ. ಅವುಗಳನ್ನು ಸಾಮಾಜಿಕ, ರಾಜಕೀಯ, ಧಾರ್ಮಿಕ, ನಾಡು–ನುಡಿ, ವ್ಯಕ್ತಿ ಚಿತ್ರಗಳೆಂಬ ಚಿಂತನೆಗಳ ಹಿನ್ನೆಲೆಯಲ್ಲಿ ಗುರುತಿಸಬಹುದು. ಪ್ರಗತಿಶೀಲ ಬರಹಗಾರರಾಗಿ, ಸಂಶೋಧಕರಾಗಿ, ಕವಿಯಾಗಿ, ವಿಮರ್ಶಕರಾಗಿ,

ಉತ್ತಮ ಸಂಪಾದಕರಾಗಿ, ಶ್ರೇಷ್ಠ ಪ್ರಾಧ್ಯಾಪಕರಾಗಿ, ಸಂಘಟಕರಾಗಿ, ಕನ್ನಡ ಪ್ರೇಮಿಯಾಗಿ ಕಾಣಿಸುವ ಇವರ ಸಾಹಿತ್ಯ ನಾನಾ ದೃಷ್ಟಿಯಲ್ಲಿ ಶ್ರೇಷ್ಠವಾಗಿದೆ.

ಇಂದಿನ ಕನ್ನಡದ ಲೇಖಕರ ಸಾಲಿನಲ್ಲಿ ನಿಲ್ಲಬಲ್ಲ ಪ್ರತಿಭೆಯಿರುವ ಈ ವ್ಯಕ್ತಿಯು ಈ ಭಾಗದ ವಿಮರ್ಶಕರ ಕೊರತೆಯಿಂದಾಗಿ 'ಎಲೆಮರೆಯ ಕಾಯಿಯಂತೆ' ಉಳಿದು ಕೊಂಡಿರುವರು. ಹೀಗಾಗಿ ಸೋಮನಾಥ ಯಾಳವಾರರನ್ನು ಕುರಿತು ಅಧ್ಯಯನ ಮಾಡುವುದರೊಂದಿಗೆ ಅವರ ಸಾಹಿತ್ಯದ ಶ್ರೇಷ್ಠತೆಯನ್ನು ವಿಶ್ಲೇಷಿಸಿ ನೋಡಿ, ಹಲವು ದೃಷ್ಟಿಗಳಲ್ಲಿ ಅಧ್ಯನ ಮಾಡಿ ಅಲ್ಲಿರುವ ವಿಷಯ ಹಾಗು ಚಿಂತನೆಗಳನ್ನು ಗುರುತಿಸಲಾಗಿದೆ.

ಡಾ.ಎಂ.ಎಂ.ಕಲಬುರ್ಗಿ, ಡಾ.ಎಂ.ಎಸ್.ಲಠ್ಠೆ, ಡಾ.ಪಿ.ವ್ಹಿ.ನಾರಾಯಣರ ಸಂಶೋಧನೆ ಗಳಿಂದ ಪ್ರಭಾವಿತರಾಗಿರುವ ಇವರು ಆ ನೆಲೆಯಲ್ಲಿ ಸಂಶೊಧನೆಗಳನ್ನು ಕೈಗೊಂಡಿರುವುದು ಎದ್ದು ಕಾಣುತ್ತದೆ. ಜಿ.ಎಸ್.ಶಿವರುದ್ರಪ್ಪ ಹಾಗೂ ಡಾ.ಎಚ್.ತಿಪ್ಪೇರುದ್ರಸ್ವಾಮಿಯವರು ಇವರ ಮೆಚ್ಚಿನ ವಿಮರ್ಶಕರು. ಇವರ ವಿಮರ್ಶಾ ಶೈಲಿಯು ಈ ವಿದ್ವಾಂಸರ ಪ್ರಭಾವದ ದಾರಿಯಲ್ಲಿ ಸಾಗಿರುವಂತಿದೆ ಕವನ ರಚನೆಯಲ್ಲಿ ಇವರು ದ.ರಾ.ಬೇಂದ್ರೇ ಸಿದ್ಧಯ್ಯ ಪುರಾಣಿಕ, ಜಿ.ಎಸ್.ಶಿವರುದ್ರಪ್ಪನವರನ್ನು ಅನುಸರಿಸಿರುವುದು ಗಮನಾರ್ಹ 'ಸಿದ್ದಯ್ಯ ಪುರಾಣಿಕರ 'ಜಗವೇ ಕೂಡಲಸಂಗಮ'ದ ಲಯ, ಶೈಲಿಯು ಯಾಳವಾರರ 'ಅರಿವೇ ಗುರು' ಕವನದಲ್ಲಿ ಕಂಡು ಬರುತ್ತದೆ. ದ.ರಾ.ಬೇಂದ್ರೆಯವರ ಹಲವು ಹಾಡುಗಳ ರೀತಿ ಇವರ 'ಬ್ಯಾಸಗಿ' 'ಯಾರೀಕೆ' 'ಸಂಕ್ರಾಂತಿ'ಗಳ ಮೇಲೆ ಪ್ರಭಾವ ಬೀರಿದ್ದನ್ನು ಗುರುತಿಸಬಹುದು. ಅಂತೆಯೇ ಅನೇಕ ನವ್ಯ ಕವಿಗಳಾದ ಚನ್ನಣ್ಣ ವಾಲಿಕಾರ, ಸಿದ್ಧಲಿಂಗಯ್ಯ ಚಂಪಾರ ಪ್ರಭಾವವನ್ನು ಯಾಳವಾರರು ದಕ್ಕಸಿಕೊಂಡು ಹೊಸ ನೆಲೆಯಲ್ಲಿ ಅವುಗಳನ್ನು ರಚಿಸಿರುವುದು ಸುಸ್ಪಷ್ಟವಾಗುತ್ತದೆ.

ಹಲವು ಆದುನಿಕ ವಚನಗಳನ್ನು ಅಲ್ಲಲ್ಲಿ ಪ್ರಕಟಿಸಿರುವ ಸೋಮನಾಥ ಯಾಳವಾರರು, 'ವಚನಕಾರ'ರಾಗಿಯೂ ಗಮನ ಸೆಳೆದಿದ್ದಾರೆ. ಆಧುನಿಕ ಬದುಕನ್ನು ವಚನ ಸಾಹಿತ್ಯದಲ್ಲಿ ಹಿಡಿದಿಡಲು ಪ್ರಯತ್ನಿಸುತ್ತಿರುವ ಇವರ ಅನೇಕ ವಚನಗಳು

ಇನ್ನೂ ಪ್ರಕಟಗೊಳ್ಳಬೇಕಾಗಿದೆ. ಬಡತನ, ಶೋಷಣೆ, ಶಿಕ್ಷಣ, ಸಾಹಿತ್ಯ ಸಮಾಜ, ಜಾತಿ ಪದ್ದತಿ, ನಾಡು-ನುಡಿ ಚಿಂತನೆ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿರುವ ಇಲ್ಲಿಯ ವಚನಗಳು ಆತ್ಮ ನಿವೇದನೆಯ ರೂಪದಲ್ಲಿವೆ.

ಒಟ್ಟಿನಲ್ಲಿ ಈ ಅಧ್ಯಯನದಿಂದ ಗುರುತಿಸುವದೇನಂದರೆ ಸೋಮನಾಥ ಯಾಳವಾರರು ಶ್ರೇಷ್ಠ ಸಾಹಿತಿಗಳು, ಕವಿಗಳಾಗಿ, ಸಂಶೋಧಕರಾಗಿ, ಸಮಾಜ ಚಿಂತಕರಾಗಿ, ಜೀವನ ಚರಿತ್ರೆಕಾರರಾಗಿ, ಉತ್ತಮ ವಾಗ್ಮಿಗಾಳಾಗಿ ಸೃಜನಶೀಲ ವ್ಯಕ್ತಿಯಾಗಿ ಎಲ್ಲಕ್ಕಿಂತ ಹೆಚ್ಚಾಗಿ ಆಧ್ಯಾತ್ಮಿಕ ಜೀವಿಯಾಗಿ ಗಮನಾರ್ಹವಾಗುತ್ತಾರೆಂದು ಹೇಳಬಹುದು. ಕಲ್ಯಾಣ ಕರ್ನಾಟಕದ ಪ್ರಮುಖ ಬರಹಗಾರರಲ್ಲಿ ಇವರು ನಿಲ್ಲಬಲ್ಲಂಥ ವ್ಯಕ್ತಿತ್ವ ಹಾಗೂ ಬರಹವನ್ನು ಹೊಂದಿದ್ದಾರೆಂದು ಹೇಳಬಹುದು.

ಅನುಬಂಧ

ಭಾವಚಿತ್ರಗಳು

ಗ್ರಂಥಋಣ



ಡಾ. ಯಾಳವಾರ ದಂಪತಿಗಳು



ಭಾಲ್ಕಿ ಶ್ರೀಗಳಿಂದ ಸನ್ಮಾನಗೊಳ್ಳುತ್ತಿರುವುದು



[illegible]



[illegible]



ಬೀದರ ಜಿಲ್ಲೆಯ ರಾಜೋತ್ಸವ ಪ್ರಶಸ್ತಿಯನ್ನು
ಜಿಲ್ಲಾ ಉಸ್ತುವಾರಿ ಸಚಿವ ಮಾನ್ಯ ಶ್ರೀ ಬಸವರಾಜ ಪಾಟೀಲ ಇವರಿಂದ ಪಡೆಯುತ್ತಿರುವುದು



ಗುಲಬರ್ಗಾ ವಿಶ್ವ ವಿದ್ಯಾಲಯದಿಂದ ಡಾಕ್ಟರೇಟ ಪದವಿ ಸ್ವೀಕರಿಸುತ್ತಿರುವುದು (೧೯೯೫)







ಕರ್ನಾಟಕ ಜಾನಪದ ಅಕಾಡೇಮಿ ಬೆಂಗಳೂರು ಮತ್ತು ಗುಲಬರ್ಗಾ ವಿಶ್ವ ವಿದ್ಯಾಲಯಸ್ನಾತಕೋತರ
ಕೇಂದ್ರ ಬೀದರ ಗ್ರಾಮೀಣ ಕರಕುಶಲ ವಿಚಾರ ಸಂಕಿರ್ಣದಲ್ಲಿ ಉಪನ್ಯಾಸ ಮಂಡಿಸುತ್ತಿರುವುದು



ಕರ್ನಾಟಕ ಜಾನಪದ ಅಕಾಡೇಮಿ ಬೆಂಗಳೂರು ಜಾನಪದ ಸಂರಕ್ಷಣೆ ಕಾರ್ಯಕ್ರಮದಲ್ಲಿ
ಡಾ. ಎಂ.ಎಂ. ಕಲಬುರ್ಗಿ, ಡಾ. ಹೆದ್ಬಾಳೆ ಅವರೊಂದಿಗೆ







ಗುಲಬರ್ಗಾ ಬಸವ ಸಮಿತಿ ಉಪನ್ಯಾಸ ಮಂಡಿಸುತ್ತಿರುವುದು



ಎರಡು ದಿನ ರಾಷ್ಟ್ರೀಯ ಸೆಮಿನಾರನಲ್ಲಿ ಭಾಗವಹಿಸಿರುವುದು





ಆಕರ ಗ್ರಂಥಗಳು

ಕ್ರ.ಸಂ	ಪುಸ್ತಕದ ಹೆಸರು	ಲೇಖಕರು/ಸಂಪಾದಕರು	ವರ್ಷ
೧	'ಬೀದರ ಜಿಲ್ಲಾ ದರ್ಶನ'	ಡಾ.ಸೋಮನಾಥ ಯಾಳವಾರ ಡಾ.ಪ್ರೇಮಾಸಿರ್ಸೆ	೨೦೦೫
೨	'ಬೀದರ ಜಿಲ್ಲಾ ದರ್ಶನ'	ಸಂ.ಜಗನ್ನಾಥ ಹೆಬ್ಬಾಳೆ	೧೯೯೭
೩	'ಸಾಹಿತ್ಯ ವಿಮರ್ಶೆ'	ಆರ್.ಸಿ. ಹಿರೇಮಠ	೧೯೯೬
೪	'ನಮ್ಮ ಅನುವಾದಿತ'	ಡಾ.ಎಂ.ಎಸ್.ಲಠ್ಠೆ	೨೦೦೩
೫	'ಬೀದರ ಜಿಲ್ಲೆಯ ಹಿರಿಯ ಸಾಹಿತಿಗಳು'	ಸಂ.ಹಂಸಕವಿ	೨೦೧೦
೬	'ಕಾವ್ಯ ಸಂವಾದ'	ಜಿ.ಎಸ್. ಶಿವಪುರದ್ರಪ್ಪಾ	೨೦೦೫
೭	ಪುಲಿಗೆರಿ ಆದಯ್ಯಾ	ಶ್ರೀ ಸಿದ್ಧರಾಮ ಸ್ವಾಮಿಗಳು ರುದ್ರಾಕ್ಷಿಮಠ ಬೆಳಗಾಂ	೨೦೦೫
೮	'ಪುಲಗೆರೆ ಆದಯ್ಯಾ'	ಡಾ. ಸೋಮನಾಥ ಯಾಳವಾರ	೨೦೦೫
೯	'ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭು'	ಎಸ್.ಎಮ್. ವೃಷಬೇಂದ್ರ ಸ್ವಾಮಿ	
೧೦	'ಸೋಮನಾಥ ಚಾರಿತ್ರ್ಯ'	ಆರ್.ಸಿ. ಹಿರೇಮಠ	೧೯೯೭
೧೧	'ಬೀದರ ಜಿಲ್ಲಾ ಶರಣ ಸ್ಮಾರಕಗಳು'	ಡಾ. ಸೋಮನಾಥ ಯಾಳವಾರ	೨೦೦೬
೧೨	'ಹುಮನಾಬಾದ ಶ್ರೀ ವೀರಭದ್ರೇಶ್ವರ'	ಡಾ. ಸೋಮನಾಥ ಯಾಳವಾರ	
೧೩	'ಸಾಹಿತ್ಯ ವಿಮರ್ಶೆ'	ಡಾ. ಸಿ.ಎನ್.ರಾಮಚಂದ್ರನ್	೨೦೧೦
೧೪	'ಕನ್ನಡ ಸಾಹಿತ್ಯ ಚರಿತ್ರೆ'	ರಂ.ಶ್ರೀ ಮುಗುಳಿ.	
೧೫	'ಹರಿಶ್ಚಂದ್ರ ಕಾವ್ಯ ಮತ್ತು ಮೌಲ್ಯಗಳು'	ಸೋಮನಾಥ ಯಾಳವಾರ	
೧೬	'ಸಾಹಿತ್ಯ ಮತ್ತು ಮೌಲ್ಯಗಳು'	ಡಾ.ಎಚ್.ತಿಪ್ಪೇರುದ್ರಸ್ವಾಮಿ	೨೦೦೬
೧೭	ಸಂ.ಗೀರಿಜಾ ಕಲ್ಯಾಣ	ಸೋಮನಾಥ ಯಾಳವಾರ	೧೯೯೬
೧೮	ಗೀರಿಜಾ ಕಲ್ಯಾಣ	ಎಂ.ಎಂ.ಹುಡೇದ	
೧೯	ಶರಣಸಿರಿ	ಡಾ. ಸೋಮನಾಥ ಯಾಳವಾರ	೨೦೦೭
೨೦	ಕಾವ್ಯಾರ್ಥ ಚಿಂತನ	ಡಾ.ಜಿ.ಎಸ್. ಶಿವರುದ್ರಪ್ಪಾ	೧೯೮೮

೨೧	ಕರಕನಳ್ಳಿ ಬಕ್ಕಪ್ರಭು	ಡಾ. ಸೋಮನಾಥ ಯಾಳವಾರ	೨೦೦೬
೨೨	ಉರಿಲಿಂಗ ಪೆದ್ದಿ	ಡಾ. ಸೋಮನಾಥ ಯಾಳವಾರ	೨೦೦೪
೨೩	ಕುಂಬಾರ ಗುಂಡಯ್ಯ	ಡಾ. ಸೋಮನಾಥ ಯಾಳವಾರ	೨೦೦೬
೨೪	ಕಾವ್ಯ ಸಂಗಮ ಭಾಗ ೨	ಡಾ. ಸೋಮನಾಥ ಯಳವಾರ ಡಾ. ವಾಸುದೇವ ಅಗ್ನಿ ಹೋತ್ರಿ	೧೯೯೫
೨೫	ಹೊಸಗನ್ನಡ ಕಾವ್ಯ ಸಂಗ್ರಹ	ಡಾ. ಬಸವರಾಜ ಸಬರದ	
೨೬	ಹೊಸಗನ್ನಡ ಕಾವ್ಯ ಸಂಗ್ರಹ	ಡಾ. ಸೋಮನಾಥ ಯಾಳವಾರ	೨೦೦೯
೨೭	ಕಲ್ಯಾಣ ಬೆಳಕು	ಡಾ. ಗವಿಸಿದ್ದಪ್ಪ ಪಾಟೀಲ ಜಯದೇವಿ ಗಾಯಕವಾಡ	೨೦೦೯
೨೮	ಸಂ. ಅಕ್ಷರ ಪ್ರೀತಿ	ಡಾ.ಜಗನ್ನಾಥ ಹೆಬ್ಬಾಳೆ	೨೦೦೩
೨೯	ಬೆಳಕಿಂಡಿ	ಡಾ. ಜಗನ್ನಾಥ ಹೆಬ್ಬಾಳ	೨೦೦೯
೩೦	ದಾಸೋಹ	ಸಂ. ರಾಮಕೃಷ್ಣ ಮರಾಠೆ	೨೦೦೭
೩೧	ಹಸಿರು ಜಂಗಮ	ಸಂ. ರಂಜಾನ ದರ್ಗಾ	೨೦೦೮
೩೨	ಬಯಲೊಳಗಣಬಿಸಿ	ಡಾ. ಸೋಮನಾಥ ಯಾಳವಾರ	೨೦೧೧
೩೩	ಅಪರೀಚಿತರು	ಡಾ. ಸೋಮನಾಥ ಯಾಳವಾರ	೨೦೧೧
೩೪	ಕಲ್ಯಾಣ ನಾಡಿನ ಕೆಂಪು ಕವಿತೆಗಳು	ಚೆನ್ನಣ್ಣ ವಾಲಿಕಾರ ಬಸವರಾಜ ಸಬರದ	೧೯೯೦
೩೫	ಬೀದರ ಜಿಲ್ಲಾ ಸಾಹಿತ್ಯಾವಲೋಕನ	ಡಾ. ಜಗನ್ನಾಥ ಹೆಬ್ಬಾಳೆ	೧೯೯೮

AKSHARA GRANTHALAYA
ACC.NO. 048713

048713